ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಮೇ 08, 2013 ಪುಟ 20 ರೂ. 14/-


ಗೆಲ್ಲಲೇಬೇಕಾದ



ಕಿಮ್ಮನೆ




ಸದ್ದಿಲ್ಲದೆ ಸಿದ್ದು ಅಲೆ




ದಾವಣಗೆರೆ ದಕ್ಷಿಣ
ಸೌಹಾರ್ದತೆಗಾಗಿ
ಶಾಮನೂರು ಗೆಲುವು



ಚಿಕ್ಕಮಗಳೂರು
ಚೋರ ರವಿಯ
ಲೂಟಿ ವೃತ್ತಾಂತ



ಬೆಂಗಳೂರು: ಯಶವಂತಪುರ-ಬಿಟಿಎಂಲೇಔಟ್-ಚಿಕ್ಕಪೇಟೆ-
ವಿಜಯನಗರ-ಗೋವಿಂದರಾಜನಗರ ಕಾಂಗ್ರೆಸ್ ಮುಂದೆ



ರವಾಡ ಜಿಲ್ಲೆ:
' ಮುಂದೆ



ಚುನಾವಣೆ ಸಮೀಕ್ಷೆ



ಬಾಗಲಕೋಟೆ:
ಬಿಜೆಪಿಗೆ 3ನೇ ಸ್ಥಾನ



ಕುಂದಗೋಳ ಜೆಡಿಎಸ್ ಅಕ್ಕಿ ಮುಂದೆ
ಕೈ-ಕಮಲ-ತೆಂಗಿನಕಾಯಿ ಠುಸ್!

ಹಾನಗಲ್:
ತೆನೆಹೊತ್ತವಳ ಆರ್ಭಟ!



ಗ: ಎಚ್ಕೆ ಪಾಟೀಲ್ ವಿರುದ್ಧ
ರಾಮುಲು ಶಿಷ್ಯ ಮಕಾಡೆ





ಮಂಡ್ಯ: ಶ್ರೀನಿವಾಸ್
ಸೋಲಿಸಲು ಹರಕೆಯ ಕುರಿ
ಅಶೋಕ್ ಜಯರಾಂ



ಕರಾವಳಿ
ಕಳೆಗಟ್ಟಿದೆ ಕಾಂಗ್ರೆಸ್
ಬಳಲುತ್ತಿದೆ ಬಿಜೆಪಿ



ಮದ್ದೂರು:ತಮ್ಮಣ್ಣನ ದುಡ್ಡಿನ ದರ್ಬಾರು

ಬಿಜಾಪುರ: ಕಮರುತ್ತಿರುವ ಕಮಲ

ನಾಗಮಂಗಲದಲ್ಲಿ ಬಿಗ್ ಫೈಟ್

ಸ್ವದೇಶಿ ಮತ್ತು ವಿದೇಶಿ ಸುಲಿಗೆಕೋರರ ಕೂಡಿಕೆಗೆ ಸಂಶೋಧನೆಯೆಂಬ ಕಿರೀಟ

ಜಾತಿ ಎನ್ನುವುದು ಭಾರತದಲ್ಲಿರಲಿಲ್ಲ, ಅಲ್ಲದೇ ಈ ದೇಶದ ಸಂವಿಧಾನದ ರೂವಾರಿ ಅಂಬೇಡ್ಕರ್ ಮೊದಲ್ಗೊಂಡು ಎಲ್ಲರೂ ಹೇಗೆ ಇಲ್ಲದ ಜಾತಿಯನ್ನು ಸಂಶೋಧನೆ ಮಾಡಿ ನಮಗೆಲ್ಲ ದಿಕ್ಕು ತಪ್ಪಿಸಿರುವರೆಂದು ಇವರು 'ರೀಸರ್ಚ್' ಮಾಡಿ ನಮಗೆ ಬುದ್ಧಿವಾದ ಹೇಳುತ್ತಾರೆ. ವಚನ ಚಳವಳಿ ವೈದಿಕ ಅಥವಾ ಜಾತಿವಿರೋಧಿ ಇದೆಯೋ ಇಲ್ಲವೋ ಎಂದು ನಾವು ಚರ್ಚಿಸುವದಕ್ಕಿಂತ ಮೊದಲು ಇವರ ಸಂಶೋಧನೆಯ ಮೂಲ ಉದ್ದೇಶಗಳನ್ನು ತಿಳಿಯುವುದು ಹೆಚ್ಚು ಸೂಕ್ತವೆನಿಸುತ್ತದೆ.


ಡಂಕಿನ್ ಝುಳಕಿ ಮತ್ತು ಅವರ ಅನುಯಾಯಿಗಳು ಮಂಡಿಸಿದ ಮಹಾನ್ ಸಂಶೋಧನೆಯು ಅಜ್ಞರಾದ ನಮಗೆ ಅರ್ಥವಾಗಬೇಕೆಂದರೆ ಅದಕ್ಕೆ ಪೂರಕವಾಗಿರುವ ಸಾಮಾಜಿಕಾರ್ಥಿಕ ಸಂಗತಿಗಳು ಭಾರತದಲ್ಲೂ ಜಾಗತಿಕ ಮಟ್ಟದಲ್ಲೂ ಹೇಗೆ ಒಂದಕ್ಕೊಂದು ಸಮರ್ಥಿಸುತ್ತವೆ ಎನ್ನುವುದನ್ನು ಸಂಕ್ಷಿಪ್ತವಾಗಿಯಾದರೂ ವಿವರಿಸಿಕೊಳ್ಳಬೇಕು. ಆಗ ಮಾತ್ರ ಅದರ ಸೂತ್ರಧಾರಿಗಳು ಯಾರು ಎನ್ನುವುದು ಗೊತ್ತಾಗಬಹುದು.

ಅಧಿಕಾರ ಮತ್ತು ಸಂಪತ್ತನ್ನು ಕೆಲವರು ಮಾತ್ರ ಅನುಭವಿಸಬೇಕೆಂದು ಹುಟ್ಟಿಕೊಂಡ ಜಾತಿವ್ಯವಸ್ಥೆಗೂ ಇಂದಿನ ಬಂಡವಾಳಶಾಹಿ ಮತ್ತು ಅದರ ಮುಂದುವರಿದ ಭಾಗವಾದ ಉದಾರವಾದಿ ಆರ್ಥಿಕ ಚಿಂತನೆಗಳಿಗೂ ವ್ಯತ್ಯಾಸವಿರುವುದು ಪದಬಳಕೆಯಲ್ಲಿ ಮಾತ್ರ. ಅನುಭೋಗದ ಸ್ವರೂಪ ಮಾತ್ರ ಎರಡರಲ್ಲೂ ಅಸಮಾನ ರೀತಿಯಲ್ಲಿಯೇ ಇದೆ. ದಮನಿತ ಸಮುದಾಯಗಳು ತಮ್ಮ ಹಸಿವು ಮತ್ತು ಅವಮಾನಗಳನ್ನು ನಿರಂತರವಾಗಿಟ್ಟುಕೊಂಡು ಸದಾ ತಮ್ಮ ಸೇವೆಗೆ ಸಿದ್ಧರಾಗಿರಬೇಕೆಂಬ ನೀತಿ ಇವೆರಡರದೂ ಆಗಿದೆ. ಡಂಕಿನ್ ಅವರ ಗುಂಪು ಇದನ್ನು ಮರೆಮಾಚುವ ಸಲುವಾಗಿ ಹರಸಾಹಸ ಮಾಡಿ 'ಭಾರತದಲ್ಲಿ ಜಾತಿವ್ಯವಸ್ಥೆ ಇದೆಯೇ' ಎಂದು ಕೇಳಿ 'ಇಲ್ಲ' ಎಂದು ಸಾಬೀತುಮಾಡಲು ಹೆಣಗುತ್ತಿದ್ದಾರೆ. ವಿಪರ್ಯಾಸ ಎಂದರೆ ಕಳೆದ 18 ವಾರಗಳಿಂದ ಇದೇ 'ಪ್ರಜಾವಾಣಿ'ಯಲ್ಲಿ ಜಾತಿಸಂವಾದವನ್ನು ಕುರಿತು ಚರ್ಚೆ ನಡೆಯುತ್ತಿದೆ. ಜಾತಿಯೇ ಇಲ್ಲವೆಂದಾದರೆ ಚರ್ಚೆ ಏಕೆ ಬೇಕು. ಜಾತಿ ಎನ್ನುವುದು ಭಾರತದಲ್ಲಿರಲಿಲ್ಲ ಅಲ್ಲದೇ ಈ ದೇಶದ ಸಂವಿಧಾನದ ರೂವಾರಿ ಅಂಬೇಡ್ಕರ್ ಮೊದಲ್ಗೊಂಡು ಎಲ್ಲರೂ ಹೇಗೆ ಇಲ್ಲದ ಜಾತಿಯನ್ನು ಸಂಶೋಧನೆ ಮಾಡಿ ನಮಗೆಲ್ಲ ದಿಕ್ಕು ತಪ್ಪಿಸಿರುವರೆಂದು ಇವರು 'ರೀಸರ್ಚ್' ಮಾಡಿ ನಮಗೆ ಬುದ್ಧಿವಾದ ಹೇಳುತ್ತಾರೆ. ವಚನ ಚಳವಳಿ ವೈದಿಕ ಅಥವಾ ಜಾತಿವಿರೋಧಿ ಇದೆಯೋ ಇಲ್ಲವೋ ಎಂದು ನಾವು ಚರ್ಚಿಸುವದಕ್ಕಿಂತ ಮೊದಲು ಇವರ ಸಂಶೋಧನೆಯ ಮೂಲ ಉದ್ದೇಶಗಳನ್ನು ತಿಳಿಯುವುದು ಹೆಚ್ಚು ಸೂಕ್ತವೆನಿಸುತ್ತದೆ.

ಜಾತಿವ್ಯವಸ್ಥೆಯು ಈ ದೇಶದಲ್ಲಿ ಇಲ್ಲದೇ ಇರುವ 'ಹಿಪಕಪಿ' ಎಂಬ ಊಹಾತ್ಮಕ ಜೀವಿಯಂತೆ (ಭಾರತದಲ್ಲಿ ಜಾತಿವ್ಯವಸ್ಥೆ ಇದೆಯೆ? ಡಂಕಿನ್ ಝುಳಕಿ ಪು. 109) ಅದು ಎಂದೂ ಇರಲಿಲ್ಲ ಎಂದು ಸಾಧಿಸುತ್ತಾರೆ. ಅಷ್ಟೇ ಅಲ್ಲ ಭಾರತದಲ್ಲಿ ಇರುವ ಎಲ್ಲ ಅವೈದಿಕ ವಿಚಾರಧಾರೆಗಳು ಸಾಮಾಜಿಕ ಚಳವಳಿಗಳೆಂಬ ಸುಳ್ಳನ್ನು ಆರೋಪಿಸಿಕೊಂಡು ನಮ್ಮನ್ನೆಲ್ಲ ದಿಕ್ಕುತಪ್ಪಿಸಿವೆ ಎನ್ನುತ್ತಾರೆ. ಈ ಕೆಳಗಿನ ಕೆಲವು ಉಲ್ಲೇಖಗಳು ಹೀಗಿವೆ.

"ಅಂಬೇಡ್ಕರ್ ಮತ್ತು ಫುಲೆ ಮುಂತಾದವರು ತಮ್ಮ ಕಹಿ ಅನುಭವಗಳಿಂದ ಜಾತಿಯ ಬಗ್ಗೆ ನಕಾರಾತ್ಮಕ ಧೋರಣೆ ತಳೆದಿದ್ದರು (ಅದೇ ಪು. 87). ಕೆಲವು ಗುಂಪುಗಳ (ಮೇಲ್ಜಾತಿಗಳ) ವಿರುದ್ಧದ ಅನಿಯಂತ್ರಿತ ದ್ವೇಷವು ಸಾಮಾಜಿಕ ನ್ಯಾಯ ಕುರಿತ ಚಳವಳಿಗಳ ಚಾಲಕ ಶಕ್ತಿಯಾಯಿತು (ಪು. 88), ವೇದಗಳು ಭಗವದ್ಗೀತೆ ಮನುಸ್ಮೃತಿ ಮುಂತಾದವುಗಳನ್ನು ನೋಡುವಂತೆ ಅಂಬೇಡ್ಕರ್ ಮತ್ತು ಫುಲೆಯುವರನ್ನು ಏಕೆ ನೋಡಬಾರದು. (ಪು.91), ಅಂಬೇಡ್ಕರರು ದ್ವೇಷದ ಕಾರಣಕ್ಕಾಗಿ ಮನುಸ್ಮೃತಿಯನ್ನು ಸುಟ್ಟರು (ಪು.97), ಋಗ್ವೇದದ ಹತ್ತನೆಯ ಮಂಡಲದ ಪುರುಷ ಸೂಕ್ತವನ್ನು ಮ್ಯಾಕ್ಸ್ ಮುಲ್ಲರ್ ಮತ್ತು ಅಂಬೇಡ್ಕರ್ ಅಂತಹವರು ತಪ್ಪಾಗಿ ಅರ್ಥೈಸಿದ್ದಾರೆ (ಪು. 92.93), ಜಾತಿವ್ಯವಸ್ಥೆಯನ್ನು ಹೇಳುವ ಈ ಪುರುಷನು ನಿಂತುಕೊಂಡಂತೆ ಎಂದು ತಿಳಿದುಕೊಂಡರೆ ಅದು (ವರ್ಟಿಕಲ್) ಶ್ರೇಣೀಕರಣವಾಗುತ್ತದೆ. ಆದರೆ ಅದು ಹಾಗಲ್ಲ ಏಕೆಂದರೆ ಅಗ್ನಿಯಲ್ಲಿ ಆಹುತನಾದ ಆದಿ ಪುರುಷನು ನೆಟ್ಟಗೆ ನಿಂತುಕೊಂಡಿದ್ದ ಎಂಬ ಪ್ರಸ್ತಾಪ ಪುರುಷ ಸೂಕ್ತದಲ್ಲೆಲ್ಲೂ ಕಂಡುಬರುವುದಿಲ್ಲ, ಇದೊಂದು ಕ್ಷುಲ್ಲಕ ಸಂಗತಿಯೇನಲ್ಲ, ಏಕೆಂದರೆ ಆಹುತಿಗೆ ಮಲಗಿರುವ ಭಂಗಿಯೆ ಹೆಚ್ಚು ಸೂಕ್ತ, ಮಲಗಿದ ಭಂಗಿಯಲ್ಲಿರುವ ದೇಹದಲ್ಲಿ ಮೇಲು ಕೀಳಿನ ಪ್ರಶ್ನೆಯೇ ಬರುವುದಿಲ್ಲ, ಅಂದಮೇಲೆ ಲಂಬಶ್ರೇಣಿಯ ಪ್ರಶ್ನೆಯೂ ಇರುವುದಿಲ್ಲ, ಇಲ್ಲಿರುವುದು ಆ ಪುರುಷನ ದೇಹದ ಬೇರೆ ಬೇರೆ ಅಂಗಗಳ ಅಡ್ಡಡ್ಡ (ಹಾರಿಜಂಟಲ್) ವಿಭಜನೆ ಆದ್ದರಿಂದ. ಇದು ಶ್ರೇಣೀಕರಣ ಜಾತಿವ್ಯವಸ್ಥೆ ಅಲ್ಲ (ಪು. 96,97), (ವಾಸ್ತವವಾಗಿ ಜಾತಿ ವ್ಯವಸ್ಥೆಯ ಈ ಕರಾಳಮುಖವನ್ನು ಹೇಳುತ್ತ ದೇವನೂರರು ತಮ್ಮ 'ಎದೆಗೆ ಬಿದ್ದ ಅಕ್ಷರ'ದಲ್ಲಿ ಪುರುಷ ಸೂಕ್ತದ ಪುರುಷನನ್ನು ಹೀಗೆ ಮಲಗಿಸಿ ಸಮಾನತೆ ತರಬೇಕೆನ್ನುತ್ತಾರೆ.) ಪುಸ್ತಕದಲ್ಲಿನ ವಿರಾಟ್ ಪುರುಷನನ್ನು ಮಲಗಿಸುವದರಿಂದ ಅಥವಾ ನಿಲ್ಲಿಸುವದರಿಂದ ವ್ಯವಸ್ಥೆ ಬದಲಾಗುತ್ತದೆಯೆ?

ಮನುಸಂಹಿತೆಯನ್ನು ಮನುಸ್ಮೃತಿ ಎಂದು ಕರೆಯುವುದೇ ವಿಕೃತಿ (ಪು. 99), ಬುದ್ಧಿಸಂ ಮತ್ತು ವಚನ ಚಳವಳಿಗಳು ಭಾರತೀಯ ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಡುತ್ತ ಹಳ್ಳಹಳಿಸುತ್ತಾರೆ. ಅದೆಂದರೆ ಭಾರತದ ಯಾವ ಯಾವ ಧಾರೆಗಳು ಯಜ್ಞವಿರೋಧಿ ನಿಲುವನ್ನು ತಳೆದವೋ ಅವುಗಳನ್ನೆಲ್ಲ ಆಧ್ಯಾತ್ಮದ ಹೆಸರಿನಲ್ಲಿ ಇವರ ಪೂರ್ವಜರು ಹೈಜಾಕ್ ಮಾಡಿದರು. ಸೋಮರಸ ಕುಡಿಯುವುದಾಗಲಿ, ಪ್ರಾಣಿಯಜ್ಞ ಮಾಡುವುದಾಗಲಿ, ಅಗ್ನಿಯ ಎದುರು ಮೈಥುನ ನಡೆಸುವುದಾಗಲಿ ನಿಜವಾದ ಆನಂದವಲ್ಲ, ಅದು ಭೌತಿಕವಾದದ್ದು ಎಂದು ವೇದಗಳನ್ನು ವಿರೋಧಿಸಿದ ಉಪನಿಷತ್ತುಗಳನ್ನು ವೈದಿಕೀಕರಿಸಿದರು. ನಂತರ ಸಾಂಖ್ಯರನ್ನು, ಬುದ್ಧನನ್ನು ಮುಗಿಸಿದರು. ಇವರು ಯಾವುದನ್ನು ಆಧ್ಯಾತ್ಮ (ಆತ್ಮ ಮತ್ತು ಪರಮಾತ್ಮ ಕುರಿತು ಚಿಂತನೆ) ಎನ್ನುತ್ತಾರೋ ಅದನ್ನು ಬುದ್ಧ ನಿರಾಕರಿಸಿದ. ಅದಕ್ಕಾಗಿಯೇ ದೇಹದಂಡನೆಯಿಂದಾಗಲಿ ತಪಸ್ಸಿನಿಂದಾಗಲಿ ಈ ಜಗತ್ತಿನ ದುಃಖಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದವನು ಬುದ್ಧ. ದುಡಿಯದೇ ಬರುವ ಅಮರ ಗಳಿಕೆಗೆ ಬುದ್ಧನು ಹೇಳಿದ ಮನುಷ್ಯರ 'ಗುಣಕರ್ಮ' ಗಳು ದೊಡ್ಡ ಅಡ್ಡಿಯಾದವು. ಅದಕ್ಕಾಗಿಯೇ ಅವನ ನಂತರ ಬಂದ ಗೀತೆಯು ಎಲ್ಲ ಸಿದ್ಧಾಂತಗಳನ್ನು ಒಪ್ಪಿಕೊಂಡಂತೆ ಕಾಣಿಸುವ ಜೊತೆಗೆ ಸಹೋದರರು ಪರಸ್ಪರ ಬಡಿದಾಡಿ ಸಾಯುವ ಸಿದ್ಧಾಂತವನ್ನೂ ಗುಣಕರ್ಮದ ಹೆಸರಿನಲ್ಲಿಯೇ ಚಾಲ್ತಿಗೆ ತಂದಿತು. ಇದರ ಮುಂದುವರಿಕೆಯ ಭಾಗವಾಗಿ ಈ



ಬಂದಿವೆ ಎನ್ನುವುದು ಜನಪ್ರಿಯ ಅಂಬೋಣ (ಪು.101). ಕೆಳಜಾತಿಯುವರು ಎನಿಸಿಕೊಂಡವರಲ್ಲೇ ಮೂಲತಃ ತರತಮದ ಸ್ಪಷ್ಟ ಕಲ್ಪನೆಯಿರುವುದು ಹಾಗೆ ಹೇಳಬೇಕೆಂದರೆ ಜಾತಿ ಶ್ರೇಣೀಕರಣವು 'ಬಹುತೇಕ ಅವರಲ್ಲಿ ಮಾತ್ರವೇ ಇರುವಂಥದ್ದು ಈ ಗುಂಪುಗಳೇ ಇಸ್ಲಾಮಿಗೆ, ಕ್ರಿಶ್ಚಿಯಾನಿಟಿಗೆ ವೀರಶೈವ ಸಂಪ್ರದಾಯಕ್ಕೆ ಸೇರಿಕೊಂಡಿವೆ. (ಪು. 22.3) ಹೀಗೆ ಭಾರತದಲ್ಲಿ ಜಾತಿಯೇ ಇಲ್ಲವೆನ್ನುವುದಕ್ಕೆ ಅವರು ಕೊಡುವ ಸಾವಿರಾರು ಉದಾಹರಣೆಗಳಾಗಿವೆ. ಹೀಗೆ ಭಾರತದ ಸಾಮಾಜಿಕ ಹಿನ್ನೆಲೆಯನ್ನು ಏಕರೂಪಿ ಸಿದ್ಧಾಂತಕ್ಕೊಗ್ಗಿಸಿಬಿಟ್ಟರೆ ಮುಂದಿನ ಕೆಲಸ ಅವರಿಗೆ ಹೆಚ್ಚು ಹಗುರವಾಗುತ್ತದೆ. ಅವರಂತೆಯೇ ಏಕರೂಪಿ ಮಾದರಿಗಳನ್ನು ಸೃಷ್ಟಿಸುವಲ್ಲಿ ಮಗ್ನರಾಗಿರುವ ಬಂಡವಾಳಶಾಹಿ ಪ್ರಭುತ್ವವು ಇವರ ಜೊತೆಗೂಡಿ ಎಲ್ಲರೂ ಒಂದೇರೀತಿ ಉಣ್ಣುವ, ತಿನ್ನುವ, ಪ್ರೀತಿಸುವ, ಮಲಗುವ, ಚಿಕಿತ್ಸೆ ಪಡೆಯುವ ನೂರಾರು ಸಂಗತಿಗಳನ್ನು ಪ್ರಚುರಪಡಿಸಿದಾಗ ಅವರಿಗೆ ವ್ಯಾಪಾರವಾಯಿತು, ಇವರಿಗೆ ಬಿಟ್ಟಿ ಆದಾಯವಾಯಿತು. ಹೀಗಿದೆ ಅವರ ಅನೈತಿಕ ಕೂಡಿಕೆ.

ಅದಕ್ಕಾಗಿಯೇ ಅವರು "ವಚನಗಳ ಸಿದ್ಧಾಂತವನ್ನು ಜಾತಿವಿರೋಧದ ನೆಲೆಯಿಂದ ತೆಗೆದು ಅಧ್ಯಾತ್ಮಿಕತೆಯ ನೆಲೆಯಲ್ಲಿ ಇಡಿರಿ. ಈ ಮೇಲಿನ ಸಮಸ್ಯೆಗಳೆಲ್ಲ ಪರಿಹಾರವಾಗಿ ಬಿಡುತ್ತವೆ. ನಮ್ಮ ಆಧ್ಯಾತ್ಮಿಕ ಮಾರ್ಗಗಳನ್ನೆಲ್ಲ ನಾವು ಸಾಮಾಜಿಕ ಚಳವಳಿಗಳನ್ನಾಗಿ ಮಾಡಿಬಿಟ್ಟದ್ದು ನಮ್ಮ ಸಾಂಸ್ಕೃತಿಕ ವಿಸ್ಮೃತಿಗಳಲ್ಲೊಂದು" (ಪ್ರಜಾವಾಣಿ 01.04.2013 ರಾಜಾರಾಮ ಹೆಗಡೆ) ಎಂದು ಜಗತ್ತನ್ನು ಶಂಕರರು ಮಾಯೆಯೆಂದು ಕರೆದರು. ನಂತರ ಬಂದ ಬಸವಾದಿಗಳು ಬುದ್ಧನ ನಂತರದಲ್ಲಿ ಗಟ್ಟಿಗೊಂಡ ಜಾತಿಯನ್ನು ಮಣಿಸಲು ಅಧ್ಯಾತ್ಮವನ್ನು ತಿರಸ್ಕರಿಸಿ ಅನುಭವಕ್ಕೆ ಒತ್ತುಕೊಟ್ಟರು. ಸಂಸಾರ ಮತ್ತು ಬದುಕು ಎರಡೂ ಸತ್ಯ, ಅದನ್ನು ಎದುರಿಸಬೇಕು, ಸುಂದರಗೊಳಿಸಬೇಕೆಂದು ಸಕಲ ಜಾತಿಗಳವರಲ್ಲಿಯೂ ಬದುಕುವ ಛಾತಿ ತುಂಬಿದರು (ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು ಮುಂದೆ ಬಂದು ಕಾಡುವವು ಪಂಚೇಂದ್ರಿಯಗಳು- ಬಸವಣ್ಣ, ಭಕ್ತನ ಮನಸ್ಸು ಹೆಣ್ಣಿನೊಳಗಾಡದೆ ವಿವಾಹವಾಗಿ ಕೊಡುವುದು, ಭಕ್ತನ ಮನಸ್ಸು ಮಣ್ಣಿನೊಳಗಾದಡೆ ಬಳಲಿ ದೊರಕಿಸುವುದು- ಸಿದ್ಧರಾಮ) ಹೀಗೆ ವೈದಿಕತೆಯಿಂದ ಬಿಡುಗಡೆಗೊಂಡವರಿಗೆ ಜಾತಿ ಮನೆಯ ಬದಲಿಗೆ ಮಹಾಮನೆಯಲ್ಲಿ ಬದುಕು ನಿರಾಳವಾಯಿತು. ಇದನ್ನು ಮುಂದೆ ಅಂಬೇಡ್ಕರರು ಸಂವಿಧಾನದ ರೂಪದಲ್ಲಿ ನಮ್ಮೆದುರಿಗಿಟ್ಟರು. ಹೀಗಾಗಿ ಕರ್ನಾಟಕದಲ್ಲಿ ಅವರಿಗೆ ಜಾತಿಯನ್ನು ಪುನಃ ಸ್ಥಾಪಿಸಬೇಕಾದರೆ ವಚನ ಚಳವಳಿಯ ಬೇರುಗಳನ್ನು ಮೊದಲು ಕತ್ತರಿಸಬೇಕಾಗಿದೆ. ಅದಕ್ಕಾಗಿಯೇ ಈ ಎರಡು ದಶಕಗಳಿಂದಲೂ ನಮ್ಮ ಅನೇಕ ಬುದ್ಧಿಜೀವಿಗಳು ಅಂಬೇಡ್ಕರ್ ವರ್ಸಸ್ ಗಾಂಧಿ, ಅಂಬೇಡ್ಕರ್ ವರ್ಸಸ್ ಬಸವಣ್ಣ ಅಂಬೇಡ್ಕರ್ ವರ್ಸಸ್ ಮಾರ್ಕ್ಸ್, ಅಂಬೇಡ್ಕರ್ ವರ್ಸಸ್ ಲೋಹಿಯಾ ಇತ್ಯಾದಿ ಚಿಂತನೆಗಳ ಮಹಾಪೂರ ತಂದರು. ಈಗ ಇದು ಡಂಕಿನ್ ತರದವರು ತಾವು ಉದ್ದೇಶಿಸಿದ ಜಾತಿಯ ಪುನರ್ ಪ್ರತಿಷ್ಠಾಪನೆಗೆ ನೆಲವನ್ನು ಹದಮಾಡಿಕೊಟ್ಟಿದೆ. ಇದುವರೆಗೂ ಕಲೆ ಮತ್ತು ಸಾಹಿ[ತ್ಯ] ಮುಖಾಂತರ ಒಳಗೊಳಗೆ ವಿಜೃಂಭಿಸುತ್ತಿದ್ದ ಜಾತಿವಾ[ದ] (ಹಿಂದುತ್ವ) ಈ ಸಂಶೋಧನೆಯ ಮುಖಾಂತರ ನ[...] ಹಣಾಹಣಿಗೆ ಶಸ್ತ್ರಾಸ್ತ್ರಗಳನ್ನು ತಯಾರು ಮಾಡಿಕೊಂ[...] ಬಲಿಷ್ಠವಾಗಿರುವುದಕ್ಕೆ ಇದು ಸೂಚನೆಯಾಗಿದೆ. ವಿ[...] ಆಯಾಮಗಳಿಂದ ಸಮಾನತೆಯ ಆಶಯಗಳನ್ನು ಪೋಷಿ[...] ಮನಸ್ಸುಗಳು ಬೇರೆಬೇರೆಯಾದ ದಿನವೇ ಜಾತ್ಯತೀತತೆ[ಯ] ಕನಸು ಮುರಿಯಬಹುದೆಂದು ಅವರಿಗೆ ಚೆನ್ನಾಗಿ ಗೊತ್ತಿ[...]

ಇದು ನಮ್ಮೊಳಗಿನ ಸಂಗತಿಯಾದರೆ ಇ[...] ಜೊತೆಯಾಗಿ ಹೊರಗಿನ ಸಾಮ್ರಾಜ್ಯಶಾಹಿಯು ಮ[...] ಮಾರುಕಟ್ಟೆ ಮತ್ತು ಖಾಸಗೀಕರಣದ ಹೆಸರಿನಲ್ಲಿ ತೃತೀ[ಯ] ಜಗತ್ತಿನ ನಮ್ಮಂತಹವರನ್ನು ಸುಲಿಯಲು ನಮ್ಮ[...] ಮುಖಾಂತರವೇ ಲಾಭಮಾಡಿಕೊಳ್ಳಲು ಮುಂದಾಗಿವೆ. ತ[...] ವರ್ಗ ಪ್ರಜ್ಞೆಯನ್ನು ಕಳೆದುಕೊಂಡು ಹಣದ ವಸ್ತು[...] ಹಿಂದೆ ಹೋಗುವಂತೆ ಮಾಡಿರುವ ಈ ನೀತಿಯು [...] ದೇಶದಲ್ಲಿ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದೆ. ನ[...] ಜಿ.ಡಿ.ಪಿ ದರಕ್ಕೂ, ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳಿಗ[ೂ] ಮಹಿಳೆಯರ ಮೇಲಿನ ಬಲಾತ್ಕಾರಗಳಿಗೂ, ಲಕ್ಷವ[...] ಬಿಟ್ಟು ಕೋಟಿ ಲೆಕ್ಕಗಳಲ್ಲಿ ವರದಿಯಾಗುತ್ತಿರುವ ಭ್ರಷ್ಟಾಚ[ಾರ] ಪ್ರಕರಣಗಳಿಗೂ, ಮನುಷ್ಯರನ್ನು ಹರಾಜು ಹಾಕು[ವ] ಐ.ಪಿ.ಎಲ್ ಕ್ರಿಕೆಟ್‌ಗಳಿಗೂ, ಭಯೋತ್ಪಾದನಾ ದಾಳಿಗಳಿಗ[ೂ] ಹೆಚ್ಚುತ್ತಿರುವ ಪರಿಸರ ಮಾಲಿನ್ಯಕ್ಕೂ, ಹವಾಮಾ[ನ] ವೈಪರೀತ್ಯಕ್ಕೂ, ದಿನೇದಿನೇ ಹೆಚ್ಚಾಗುತ್ತಿರುವ ದೇವಾಲ[ಯ]ಗಳಿಗೂ ಅಂತರ್ ಸಂಬಂಧವಿದೆ. ಇವೆಲ್ಲ ನಮ್ಮ ಆರ್ಥಿ[ಕ] ನೀತಿಯ ಕೊಡುಗೆಗಳಾದರೆ ಅದೇ ನೀತಿಯ ಸಾಹಿ[...] ಮುಖ ಈ ಸಂಶೋಧನೆಯಾಗಿದೆ. ಎಲ್ಲವೂ ಸರಕಾದ[...] ಸಂಶೋಧನೆಯೂ ಕೂಡ ಅದರ ಭಾಗವಾಗಿಯೇ ಬರುತ್ತ[...] ನಮ್ಮಂತಹ ದೇಶದ ಥಿಂಕ್ ಟ್ಯಾಂಕ್‌ಗಳಾದ ವಿಶ್ವವಿದ್ಯಾ[ಲ]ಯಗಳು ಎಂತಹ ಸಂಶೋಧನೆ ಮಾಡಬೇಕು ಮಾಡಬಾರ[ದು] ಎಂದು ತಮ್ಮ ಫಂಡಿಂಗ್ ಮುಖಾಂತರ ನಿರ್ದೇಶಿಸು[...] ಇವರ ನೀತಿಯ ಹಿಂದೆ ಈ ಚಿದಂಬರ ರಹಸ್ಯ ಇ[...] ಇಲ್ಲದಿದ್ದರೆ ವಿಶ್ವವಿದ್ಯಾಲಯ ಮತ್ತು ಕಾಲೇಜು, ಶಿಕ್ಷಕರ[ಿಗೆ] ಲಕ್ಷಗಟ್ಟಲೆ ಸಂಬಳಕೊಟ್ಟು ಬೇರೆ ಕಡೆಗಳಲ್ಲಿ (ಶಿಕ್ಷ[ಣ] ಆರೋಗ್ಯ, ಪಡಿತರ) ಸಾರ್ವಜನಿಕ ವೆಚ್ಚವನ್ನು (ಪಬ್ಲಿ[ಕ್] ಫೈನಾನ್ಸ್) ಕಡಿತಗೊಳಿಸುವ ಪ್ರಸ್ತಾವನೆಯನ್ನು ನಮ್ಮಂತ[ಹ] ದೇಶಗಳಿಗೆ ವಿಶ್ವಬ್ಯಾಂಕ್ ಏಕೆ ಇಡುತ್ತದೆ? ಇಂತಹ ಅನ[ೇಕ] ಕಾರಣಗಳಿಗಾಗಿ. ಒಂದು ಸಲ ಜಾತಿ ಇಲ್ಲ ಎಂ[ದು] ಪ್ರತಿಷ್ಠಾಪಿಸಿದರೆ ಅವರ ಕೆಲಸ ಸುಲಭವಾಗಿ ಎಲ್ಲರ[ೂ] ಒಂದೆಂದು ಪರಿಭಾವಿಸಿ ಮೀಸಲಾತಿಯನ್ನು ಮೊದ[ಲು] ತೆಗೆಯುವುದು, ನಂತರ ಸಂವಿಧಾನವನ್ನೇ ಕಟಕಟೆಯ[ಲ್ಲಿ] ನಿಲ್ಲಿಸಿ ತಮಗೆ ಬೇಕಾದ ರೀತಿಯಲ್ಲಿ ಅದನ್ನು ಮುರಿ[ದು] ಕಟ್ಟಲು ಸುಲಭವಾಗಿಸಿಕೊಳ್ಳುವುದು, ಆಗ ಎಲ್ಲರ[...] ಅಸುರಕ್ಷತೆ-ಅಧೈರ್ಯದಿಂದ ಬಳಲಿದಾಗ ಹೇಳದೇಕೇಳ[ದೆ] ಪೂಜೆಪುನಸ್ಕಾರ, ದೈವ, ತಿಥಿ, ವಾರ, ವಾಸ್ತು, ಜ್ಯೋತಿ[ಷ] ಸ್ವರ್ಗ, ನರಕ, ಪಾಪ, ಪುಣ್ಯಗಳೆಂದು ಪಲಾಯನವಾದಿಗಳ[ಾಗಿ] ಅವರ ಮೇಲಿನ ಅವಲಂಬನೆಯನ್ನು ಹೆಚ್ಚಿಸಿಕೊಳ್ಳತ್ತೇ[...] ಅವರ ಉತ್ಪಾದನೆಗಳಿಗೆ ಮಾರುಕಟ್ಟೆ ಮತ್ತು ಸೇವ[...] ಗುಲಾಮರು ಏಕಕಾಲಕ್ಕೆ ಸಿಗುತ್ತಿರಬೇಕಾದರೆ ಬಹುಪಯೋ[ಗಿ] ಆಧ್ಯಾತ್ಮವನ್ನು ಅವರು ಹೇಗೆ ಪ್ರಾಯೋಜಿಸುವುದಿ[...] ಅದಕ್ಕಾಗಿಯೇ ವಚನ ಚಳವಳಿಯನ್ನು ಕುರಿತು ಅವ[ರು] ಮತ್ತೆ ಮತ್ತೆ ಹೇಳುವುದು ಅದು ಶಿವಸಂಸ್ಕೃತಿ ಆಧ್ಯಾತ್ಮ ಹಾದಿಯಲ್ಲಿದೆ ಎಂದು. ಅದನ್ನು ವೈದಿಕೀಕರಣಗೊಳಿಸ[...] ರಾಜಾರಾಮ ಹೆಗಡೆ (ದಿನಾಂಕ 01.04.2013) ಜಾತಿವಿರೋಧದ ಸಿದ್ಧಾಂತವು ಭಾರತೀಯ ಆಧ್ಯಾತ್ಮಿ[ಕ] ಪರಂಪರೆಯನ್ನು ಬ್ರಾಹ್ಮಣ ಬ್ರಾಹ್ಮಣೇತರ ಎಂಬುದ[...] ಜಾತಿಯನ್ನು ಆಧಾರವಾಗಿಟ್ಟುಕೊಂಡು ವಿಭಾಗಿಸುವುದ[ರ] ಮೂಲಕ ಅದನ್ನು ತಿಳಿವಳಿಕೆಗೆ ದಕ್ಕದಂತೆ ಮಾಡುತ್ತ[...] ವಚನ ಚಳವಳಿ ಇದಕ್ಕೊಂದು ಜ್ವಲಂತ ಉದಾಹರಣೆ ಎನ್ನುತ್ತಾರೆ. ಅಂದರೆ ವಚನ ಚಳವಳಿ ಜಾತಿ ವಿರೋಧವ[ನ್ನು] ಮಾಡಿದೆಯೆಂದು ಅವರೇ ಸ್ವತಃ ಒಪ್ಪಿಕೊಂಡಂತಾಯಿತ[ು] ಜಾಗತಿಕ ಮಟ್ಟದಲ್ಲಿ ಈ ವರ್ಗ ಹೋರಾಟದ ಸ್ವರೂಪವ[ನ್ನು] ತಿಳಿಸಿದ ಮಾರ್ಕ್ಸ್‌ನನ್ನು ಮುಗಿಸುವದಕ್ಕಾಗಿ ಡೆರಿ[ಡ] ನಿರಚನವಾದವನ್ನು ಮಂಡಿಸಿದರೆ, ಕರ್ನಾಟಕ ಮತ್ತು ಭಾರತ ಮಟ್ಟದಲ್ಲಿ ಬುದ್ಧ ಬಸವ, ಅಂಬೇಡ್ಕರನ್ನು ಮೂಲೆಗೊತ್ತ[ಲು] ಈ ಜಾತಿವ್ಯವಸ್ಥೆಯೇ ಇಲ್ಲ ಎನ್ನುವ ಸಿದ್ಧಾಂ[ತ] ಜಾರಿಯಾಗುತ್ತಿದೆ. ದುರಂತವೆಂದರೆ ಈ ಸ್ವದೇಶಿ ಮ[ತ್ತು] ವಿದೇಶಿ ಸುಲಿಗೆಕೋರರು ಒಂದಾದಂತೆ ಸುಲಿಗೆ[ಗೆ] ಒಳಗಾಗದವರೇಕೆ ಲಿಂಗಾಯತ ವರ್ಸಸ್ ಒಕ್ಕಲಿಗ, ಒಕ್ಕಲಿ[ಗ] ವರ್ಸಸ್ ದಲಿತ, ಲಿಂಗಾಯತ ವರ್ಸಸ್ ದಲಿತ ಇಂತ[ಹ] ನೂರಾರು ವಿಭಜಕಗಳನ್ನು ಕುರಿತು ಪರಸ್ಪರ ಕೆಸರೆರಚುತ್ತಿದ್ದಾ[ರೆ] ಈಗ ಒಂದಾಗುವ ಅವಶ್ಯಕತೆ ಅವರೆದುರಿಗಿದೆ. ತೀರ್ಮಾ[ನ] ಅವರದೆ.

ತಮ್ಮ ಬುಡಕ್ಕೆ ಕೊಡಲಿ ಪೆಟ್ಟು ಬೀಳುತ್ತಿರುವಾಗಲ[ೂ] 'ಮಹಾಚೈತ್ರ'ಕ್ಕಾಗಿ, 'ಅನುದೇವಾ ಹೊರಗಣವನು' ಹಾಗ[ೂ] 'ಮಾರ್ಗ'ಕ್ಕಾಗಿ ಬೀದಿಗಿಳಿದ ಲಿಂಗಾಯತರು, ಮೂತಿ[...] ಸ್ಥಳಾಂತರಿಸಲು ಕೂಡ ಬಿಡದ ದಲಿತರು ಈಗ ಏನ[ು] ಮಾಡುತ್ತಿದ್ದಾರೆ?

● ಡಾ.ಶಿವಗಂಗಾ ರುಮ್ಮ
ಮುಖ್ಯಸ್ಥರು ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ

...ಹಿಳೆಯರಿಗೆ ಪಾತ್ರವಿಲ್ಲದ ರಾಜ್ಯ ರಾಜಕೀಯ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

...ಗ ಎಲ್ಲೆಲ್ಲೂ ಚುನಾವಣೆಗಳದ್ದೇ ಸದ್ದು, ಸುದ್ದಿ. ...ಗೆಲ್ಲಬೇಕು, ಯಾರು ಗೆಲ್ಲುತ್ತಾರೆ, ಯಾವ ಪಕ್ಷಕ್ಕೆ ...ಟು ಬರಬಹುದು ಎಂದೆಲ್ಲಾ ಎಲ್ಲೆಡೆ ಚರ್ಚೆ ...ತ್ತಿರುವಾಗಲೇ ಮಿತ್ರ ಶಿವಸುಂದರ್ ಒಂದಿಷ್ಟು ...ಶಗಳನ್ನು ಈ ಮೇಲ್ ಮಾಡಿದರು. ಅವು ಈ ಚುನಾವಣೆಯಲ್ಲಿ ಎಷ್ಟು ಜನ ಮಹಿಳೆಯರು ...ತ್ತಿದ್ದಾರೆ ಎಂಬುದನ್ನು ಕುರಿತದ್ದಾಗಿತ್ತು. ಎಲ್ಲರಿಗೂ ...ವಂತೆ ಪ್ರಮುಖ ರಾಜಕೀಯ ಪಕ್ಷಗಳು ಈ ...ೂ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ...ನ್ನು ಕೊಟ್ಟಿಲ್ಲ. ಸ್ವತಃ ಮಹಿಳಾ ಅಧ್ಯಕ್ಷೆಯನ್ನು ...ುವ ಕಾಂಗ್ರೆಸ್ ಕೂಡ ಹನ್ನೊಂದು ಜನ ...ರಿಗೆ ಟಿಕೆಟ್ ನೀಡಿದೆ. ಇನ್ನು ಮಹಿಳೆಯರನ್ನು ...ನ್ನುತ್ತಾ ಅವರಿಗೆ ಲಾತಾ ಕೊಡುವ ಬಿಜೆಪಿ ಕೇವಲ ಏಳು ಮಹಿಳೆಯರನ್ನು ಚುನಾವಣಾ ...ದೆ. ಜೆಡಿಎಸ್ ಪಕ್ಷದಲ್ಲಿ ಕುಮಾರಸ್ವಾಮಿ ಅವರ ...ತಾ ಸೇರಿದಂತೆ ಆ ಪಕ್ಷದ ಟಿಕೆಟ್ ಗಿಟ್ಟಿಸಿರುವ ...ರ ಸಂಖ್ಯೆ ಎಂಟು.

...ಹಿಂದೆ ರಾಜ್ಯ ರಾಜಕೀಯದಲ್ಲಿ ಮಹಿಳೆಯರ ...ಷ್ಟು ಕೆಳಮುಖವಾಗಿರಲಿಲ್ಲ. 1957ರಲ್ಲಿ ನಡೆದ ...ಯಲ್ಲಿ 24 ಮಹಿಳೆಯರು ಸ್ಪರ್ಧಿಸಿದ್ದರೆ ಅವರಲ್ಲಿ ...ಗೆದ್ದಿದ್ದರು. ಹಾಗೆಯೇ 1962ರ ಚುನಾವಣೆಯಲ್ಲಿ 30 ಮಹಿಳೆಯರು ಸ್ಪರ್ಧಿಸಿ 18 ಜನ ಗೆದ್ದಿದ್ದರು. ಆದರೆ ಆನಂತರದ ಚುನಾವಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸ್ಪರ್ಧಿಸಿದರೂ ಗೆದ್ದವರ ಸಂಖ್ಯೆ ಮಾತ್ರ ಕಡಿಮೆ ಆಗುತ್ತಾ ಹೋಯಿತು. ಕಳೆದ ಬಾರಿ ಎರಡಂಕಿಯಲ್ಲಿ ಮಹಿಳೆಯರು ಗೆದ್ದದ್ದು 1989ರಲ್ಲಿ, ಆಗ 10 ಜನ ವಿಧಾನಸಭೆಗೆ ಪ್ರವೇಶ ಪಡೆದಿದ್ದರು. 2008ರ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳೂ ಸೇರಿದಂತೆ ಕಣದಲ್ಲಿ 107 ಮಹಿಳೆಯರಿದ್ದರೂ ಗೆದ್ದದ್ದು ಮಾತ್ರ ಮೂವರು.

ಕಾಂಗ್ರೆಸ್ ಪಕ್ಷ ಸ್ವಾತಂತ್ರ ಬಂದನಂತರ ನಡೆದ ಚುನಾವಣೆಗಳಲ್ಲಿ ಶೇ.15ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಿದ್ದರೂ ಇತ್ತೀಚಿನ ವರ್ಷಗಳಲ್ಲಿ ಅದು ಶೇ.5 ದಾಟಿಲ್ಲ. ಇನ್ನು ಆರೆಸ್ಸೆಸ್ಸಿನ ಚೆಡ್ಡಿಗಳ ಕೈಗೊಂಬೆ ಆಗಿರುವ ಬಿಜೆಪಿ 1983ರ ತನಕ ಒಂದೇ ಒಂದು ಟಿಕೆಟನ್ನೂ ಮಹಿಳೆಯರಿಗೆ ನೀಡಿರಲಿಲ್ಲ. ಇತ್ತೀಚೆಗೆ ಆ ಪಕ್ಷ ಕೊಟ್ಟಿರುವ ಟಿಕೆಟ್‌ಗಳಲ್ಲಿ ಶೇ.5ಕ್ಕಿಂತ ಹೆಚ್ಚನ್ನು ತನ್ನ ಮಹಿಳಾಮಣಿಗಳಿಗೆ ಕೊಟ್ಟಿಲ್ಲ.

ರಾಮಕೃಷ್ಣ ಹೆಗಡೆ ಅವರ ಸರ್ಕಾರ 1985ರಲ್ಲಿ ಜಾರಿಗೆ ತಂದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಶೇ. 25 ಸೀಟುಗಳನ್ನು ಮಹಿಳೆಯರಿಗೆ ಮೀಸಲಿಟ್ಟಿತು ನಿಜ. ಆದರೆ ವಿಧಾನಸಭಾ ಚುನಾವಣೆಗಳಿಗೆ ಅದೇ ಮಾನದಂಡವನ್ನು ಹೆಗಡೆ ಅವರ ಅಂದಿನ ಜನತಾ ಪಕ್ಷವೇ ಅನುಸರಿಸಲಿಲ್ಲ. ಅದು ಎಂದೂ ಶೇ. 4 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡಲಿಲ್ಲ.

ವಿಧಾನಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಪ್ರಾತಿನಿಧ್ಯ ಇರಬೇಕೆಂದು ಬಾಯಿಬಾಯಿ ಬಡಿದುಕೊಳ್ಳುತ್ತಿರುವ ಎಡಪಕ್ಷಗಳೂ ಈ ವಿಷಯದಲ್ಲಿ ಇತರೆ ಪಕ್ಷಗಳಿಗಿಂತ ಭಿನ್ನವಾಗಿಲ್ಲ. ಬಹಳ ವರ್ಷಗಳ ಹಿಂದೆ ಸಿಪಿಐ ಓರ್ವ ಮಹಿಳೆಗೆ ಟಿಕೆಟ್ ನೀಡಿದ್ದರೆ ಸಿಪಿಎಂ ಕಳೆದ ಚುನಾವಣೆಯ ಸಂದರ್ಭದವರೆಗೂ ಯಾವ ಮಹಿಳೆಯನ್ನೂ ಚುನಾವಣಾ ಕಣಕ್ಕೆ ಇಳಿಸಿರಲೇ ಇಲ್ಲ!

50 ಮತ್ತು 60ರ ದಶಕದಲ್ಲಿ ಕರ್ನಾಟಕದಲ್ಲೇ ಅತಿಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಶಾಸಕಿಯರಿದ್ದರು. ಇವತ್ತು ಇತರೆ ರಾಜ್ಯಗಳ ಒಟ್ಟು ವಿಧಾನಸಭೆಗಳಲ್ಲಿ ಶೇ.6.94 ಮಹಿಳಾ ಶಾಸಕಿಯರಿದ್ದಾರೆ. ಅದರಲ್ಲೂ ಪುರುಷ ಪ್ರಧಾನ ಖಾಪ್ ಪಂಚಾಯತಿಗಳಿಗೆ ಕುಖ್ಯಾತಿ ಪಡೆದಿರುವ ಹರ್ಯಾಣ ತರಹದ ರಾಜ್ಯದ ವಿಧಾನಸಭೆಯಲ್ಲೂ ಇವತ್ತು ಶೇ. 14.44 ಶಾಸಕಿಯರಿದ್ದಾರೆ. ಆದರೆ ಕರ್ನಾಟಕದಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಮಹಿಳಾ ಜನಪ್ರತಿನಿಧಿಗಳಿದ್ದಾರೆ (ಶೇ. 1.34)!

ಈ ಬಾರಿಯ ಚುನಾವಣೆಯಲ್ಲಿ ಪಕ್ಷೇತರರೂ ಸೇರಿದಂತೆ ಒಟ್ಟು 170 ಮಹಿಳೆಯರು ಸ್ಪರ್ಧಿಸುತ್ತಿದ್ದಾರೆ. ಆದರೆ ಅವರಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಗೆದ್ದು ಬರುವ ಸಾಧ್ಯತೆ ಇದೆ.

ಕರ್ನಾಟಕ ರಾಜಕೀಯ ಪುರುಷ ಪ್ರಧಾನವಾಗಿದೆ. ಈ ಕಾರಣಕ್ಕೇ ಈ ರಾಜ್ಯದ ರಾಜಕೀಯ ಇಷ್ಟು ಕುಲಗೆಟ್ಟುಹೋಗಿರಬಹುದೇ?! ○



ವಿಜಯನಗರ-ಗೋವಿಂದರಾಜನಗರ

ಗುರು-ಶಿಷ್ಯನ ವಿರುದ್ಧ ತಂದೆ-ಮಗನ ಮೋಡಿ

...ಗಳೂರಿನ ವಿಜಯನಗರ ಮತ್ತು ಗೋವಿಂದ ... ಅಸೆಂಬ್ಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಅಪ್ಪ-ಮಗ ... ಎದುರು ಬಿಜೆಪಿಯ ಗುರು-ಶಿಷ್ಯ ಜೋಡಿ ...ುತ್ತಿದೆ.

...ಯನಗರ ಅಸೆಂಬ್ಲಿ ಕ್ಷೇತ್ರದಲ್ಲಿ ಅಪ್ಪ ಎ.ಕೃಷ್ಣಪ್ಪ ...ವಿ.ಸೋಮಣ್ಣನನ್ನೂ, ಗೋವಿಂದರಾಜನಗರದಲ್ಲಿ ...ರ ಪುತ್ರ ಪ್ರಿಯಾಕೃಷ್ಣ ಸೋಮಣ್ಣನ ಶಿಷ್ಯ ...ನನ್ನೂ ಎದುರಿಸುತ್ತಿದ್ದಾರೆ. ಸದ್ಯಕ್ಕೆ ಇವೆರಡೂ ಕಾಂಗ್ರೆ ವಶದಲ್ಲಿವೆ. ವಿಜಯನಗರದಲ್ಲಿ ಅಪ್ಪ ...ರೆ ಪಕ್ಕದ ಗೋವಿಂದ ರಾಜನಗರದಲ್ಲಿ ಮಗ ...ಷ್ಣ ಶಾಸಕರಾಗಿದ್ದಾರೆ.

...ಹಿಂದೆ ವಿಜಯನಗರ ಕ್ಷೇತ್ರದ ಮತದಾರರು ... ಅವರನ್ನು 'ವಿಜಯನಗರದ ವೀರಪುತ್ರ' ಎಂದು ...ದ್ದರು. ಅದಕ್ಕೆ ಕಾರಣ ಅವರು ಇಲ್ಲಿಂದ ...ಬಾರಿ ಬೆಂಗಳೂರು ಮಹಾನಗರಪಾಲಿಕೆಯ ...ಗಿಯೂ, ನಾಲ್ಕು ಬಾರಿ ವಿಧಾನ ಸಭೆಯ ...ಗಿಯೂ ಆಯ್ಕೆಯಾಗಿದ್ದರು.

...ೆ ಬಹಳ ದೊಡ್ಡ ವಿಸ್ತಾರದ ವಿಜಯನಗರ ...ಕ್ಷೇತ್ರವನ್ನು 2008ರಲ್ಲಿ ಎರಡು ಭಾಗ ಮಾಡಿದಾಗ ...ವರಾಜನಗರ ಅಸೆಂಬ್ಲಿ ಕ್ಷೇತ್ರ ಹುಟ್ಟುಕೊಂಡಿತು. ...ದರ್ಭದಲ್ಲಿ ವಿಜಯನಗರ ಕ್ಷೇತ್ರದ ಟಿಕೆಟ್ ...ಕೃಷ್ಣ ಅವರ ಅನುಯಾಯಿ ಆದ ಕೃಷ್ಣಪ್ಪ ಅವರಿಗೆ ...ಗೋವಿಂದರಾಜನಗರ ಕ್ಷೇತ್ರ ಸೋಮಣ್ಣನವರ ...ತು. ಆಗ ಇಬ್ಬರೂ ಕಾಂಗ್ರೆಸ್ ಪಕ್ಷದಲ್ಲಿ ...ರಿಂದ ಅವರ ನಡುವೆ ಯಾವುದೇ ವೈರತ್ವ ... ಅಂದಿನ ಚುನಾವಣೆಯಲ್ಲಿ ಕೃಷ್ಣಪ್ಪನವರು 38 ...ಮತಗಳ ಅಂತರದಿಂದ ಗೆದ್ದರೆ ಸೋಮಣ್ಣ 26 ...ಮತಗಳ ಅಂತದಿಂದ ಗೆದ್ದಿದ್ದರು.

...ಿ ಕಾಂಗ್ರೆಸ್ ಸೋತು ಬಿಜೆಪಿ ಅಧಿಕಾರಕ್ಕೆ ಬಂತು. ...ೂರಪ್ಪನ ಭ್ರಷ್ಟ, ಜಾತಿವಾದಿ ಮತ್ತು ಕೋಮುವಾದಿ ...ರಾಜ್ಯದಲ್ಲಿ ಪ್ರಾರಂಭವಾಯಿತು. ಅದನ್ನು ಕಂಡು ...ನಲ್ಲಿ ಅಪಾರ ಸಂಕಟ ಶುರುವಾಯಿತು. ಹಲವಾರು ...ಂದ ಅಧಿಕಾರ ಅನುಭವಿಸಿದ್ದ ಸೋಮಣ್ಣನ ...ಿ ಅಧಿಕಾರ ಇಲ್ಲದೆ ಅವರ ಸ್ಥಿತಿ ...ಕವಾಯಿತು. ಆಗ ಅವರಿಗೆ ಚಿಕಿತ್ಸೆ ವ್ಯವಸ್ಥೆ ...ದ್ದು ಯಡಿಯೂರಪ್ಪ ಸೋಮಣ್ಣನಿಗೆ 'ಆಪರೇಷನ್ ... ಮಾಡಿ ಬಿಜೆಪಿಗೆ ಸೇರಿಸಿಕೊಂಡರು. ಆಗ ...ವರಾಜನಗರ ಕ್ಷೇತ್ರಕ್ಕೆ ರಾಜೀನಾಮೆ. ಸೋಮಣ್ಣ ...ಮೆ ನೀಡಿದ್ದರಿಂದ ಉಪ ಚುನಾವಣೆಗಳು ...ಯಿತು. ಆಗ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ...ನ ವಿರುದ್ಧ ಕಣಕ್ಕೆ ಇಳಿದದ್ದೇ ಕೃಷ್ಣಪ್ಪನವರ ...ಯಾಕೃಷ್ಣ. ಬಿಜೆಪಿಯ ಅಧಿಕಾರದ ಬಲ, ಯಡ್ಡಿಯ ...ರ್, ತನ್ನ ವೈಯಕ್ತಿಕ ಶಕ್ತಿ, ರೆಡ್ಡಿಗಳ ದುಡ್ಡು ...ತಾನು ಸುಲಭವಾಗಿ ಗೆಲ್ಲಬಹುದೆಂದು ಭ್ರಮಿಸಿದ್ದ ... ಅವರಿಗೆ ಮಣ್ಣು ಮುಕ್ಕಿಸಿದ್ದು ಇದೇ ಪ್ರಿಯಾಕೃಷ್ಣ. ...ನಿಗೆ ಆಗ ಅದು ದೊಡ್ಡ ಅವಮಾನ.

...ರ ಸೋಮಣ್ಣನನಿಗೆ 'ಸಮಾಜ ಸೇವಕ' ಎಂಬ ...ಅಂಟಿಸಿ ವಿಧಾನ ಪರಿಷತ್ತಿಗೆ ಸೇರಿಸಲು ಯಡ್ಡಿಯ ... ಪ್ರಯತ್ನಕ್ಕೆ ರಾಜ್ಯಪಾಲ ಭಾರದ್ವಾಜ್ ...ದರು. ಯಡ್ಡಿ ಎರಡನೆ ಪ್ರಯತ್ನದಲ್ಲಿ ಯಶಸ್ವಿಯಾದ ...ೋಮಣ್ಣನಿಗೆ ಮಂತ್ರಿಗಿರಿಯೂ, ಜೊತೆಗೊಂದು ...ಕಾರೂ ಸಿಕ್ಕಿತು. ಅಲ್ಲಿಗೆ ಅವರ ಅವಕಾಶವಾದಿ ... ಸಫಲವಾಯಿತು.

...ಮಣ್ಣನವರಿಗೆ ಅಧಿಕಾರ ಸಿಕ್ಕಿತು ಆದರೆ ...ರ್ಕಾರ ಎಂಬುದೆಲ್ಲಾ ನೀರುಪಾಲಾಯಿತು. ಜೊತೆಗೆ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ ಎಂಬುದೂ ಸ್ಪಷ್ಟವಾಯಿತು. ವಿಜಯನಗರದಲ್ಲಿ ಕೃಷ್ಣಪ್ಪನವರನ್ನಾಗಲಿ, ಗೋವಿಂದರಾಜನಗರದಲ್ಲಿ ಪ್ರಿಯಾಕೃಷ್ಣರನ್ನಾಗಲಿ ತಾನು ಸೋಲಿಸಲಾಗುವುದಿಲ್ಲ ಎಂಬುದೂ ದೃಢವಾಯಿತು. ಅದಕ್ಕೆ ಅವರು ಬಿಜೆಪಿ ಬಿಟ್ಟು ಯಡ್ಡಿಯ ಕೆಜೆಪಿ ಸೇರುತ್ತೇನೆಂದೂ, ಬೆಂಗಳೂರಿನ ಬದಲಾಗಿ ಹನೂರಿನಿಂದ ಸ್ಪರ್ಧಿಸುತ್ತೇನೆಂದೂ ಹೇಳಲಾರಂಭಿಸಿದರು. ಒಂದೆರಡು ಬಾರಿ ಹನೂರಿಗೂ ಹೋಗಿ ಅಲ್ಲಿನ ಸ್ಥಿತಿಗತಿ ನೋಡಿಕೊಂಡು ಬಂದದ್ದೂ ಆಯಿತು. ಬಿಜೆಪಿಯಲ್ಲಿದ್ದರೂ, ಕೆಜೆಪಿಗೆ ಹೋದರೂ, ವಿಜಯನಗರಕ್ಕೆ ಬಂದರೂ, ಹನೂರಿಗೆ ಓಡಿಹೋದರೂ ಸೋಲು ಕಟ್ಟಿಟ್ಟ ಬುತ್ತಿ ಎಂದರಿತ ಸೋಮಣ್ಣ ಮತ್ತೆ ತಮ್ಮ ಎರಡನೆ ಪಕ್ಷ ಕಾಂಗ್ರೆಸ್ ಬಾಗಿಲನ್ನು ತಟ್ಟಿದರು (ಅವರು ಮೊದಲು ಇದ್ದದ್ದು ಜನತಾ ಪರಿವಾರದಲ್ಲಿ). ಆದರೆ ಆಪರೇಷನ್ ಕಮಲಕ್ಕೆ ಒಳಗಾದರಿಗೆ 'ನೋ ಎಂಟ್ರಿ' ಎಂದು ರಾಹುಲ್ ಗಾಂಧಿ ಹೇಳಿದ್ದರಿಂದ ಸೋಮಣ್ಣ ವಿಧಿ ಇಲ್ಲದೆ ಬಿಜೆಪಿಯಲ್ಲೇ ಉಳಿದುಕೊಳ್ಳುವಂತಾಯಿತು.

ಈಗ ಅವರನ್ನೇ ಬಿಜೆಪಿ ವಿಜಯನಗರದಲ್ಲಿ ನಿಲ್ಲಿಸಿದೆ. ಆದರೆ ಸೋಮಣ್ಣನವರಿಗೆ ಈ 'ಚುನಾವಣಾ ಯುದ್ಧ'ವೇ ಈಗ ಬೇಡವಾಗಿದೆ. ಅವರ ಆತ್ಮೀಯರೇ ಹೇಳುವ ಪ್ರಕಾರ ಸ್ವತಃ ಸೋಮಣ್ಣನವರಿಗೆ ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸುವ ಉತ್ಸಾಹವೇ ಇಲ್ಲವಂತೆ. ಇದಕ್ಕೆ ಕಾರಣ ಅವರು ಇನ್ನೂ ಮೂರೂವರೆ ವರ್ಷಗಳ ಕಾಲ ವಿಧಾನಪರಿಷತ್‌ನ ಸದಸ್ಯರಾಗಿ ಮುಂದುವರೆಯಲಿರುವುದು. ಈ ಮೂರೂವರೆ ವರ್ಷಗಳ ನಂತರ ಅಂದಿನ ರಾಜಕೀಯ ಪರಿಸ್ಥಿತಿಯನ್ನು ನೋಡಿ ಮುಂದಿನ ಹೆಜ್ಜೆ ಇಟ್ಟರಾಯಿತು 'ಎಂಬ ಯೋಚನೆಯಲ್ಲಿ ಅವರಿದ್ದರು. ಆದರೀಗ ವಿಧಿ ಇಲ್ಲದೆ, ತಯಾರಿಯೂ ಇಲ್ಲದೆ ಕೃಷ್ಣಪ್ಪನವರನ್ನು ಎದುರಿಸುವ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ ಸೋಮಣ್ಣ.

ಅವರ ಎದುರಾಳಿ ಕೃಷ್ಣಪ್ಪ ಹೇಳಿಕೇಳಿ 'ಲಕ್ಷ್ಮಿಪುತ್ರ'. ತಮ್ಮ ಬಳಿ ಸುಮಾರು 800 ಕೋಟಿಯಷ್ಟು ಆಸ್ತಿಯಿದೆ ಎಂಬ ಮಾಹಿತಿಯನ್ನು ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸುವಾಗ ಕೃಷ್ಣಪ್ಪರವರು ತಿಳಿಸಿದ್ದಾರೆ. ಇದರರ್ಥ ಕೃಷ್ಣಪ್ಪರವರು ರಾಜಕೀಯಕ್ಕೆ ಬಂದು ಹಣ ಮಾಡುವ ಅಗತ್ಯವಿಲ್ಲ ಎಂಬುದು ಸ್ಪಷ್ಟ. ಹಾಗೆಯೇ ಕೃಷ್ಣಪ್ಪನವರು ಕಳೆದ ಒಂದು ವರ್ಷದಿಂದ ಅಸೆಂಬ್ಲಿ ಕ್ಷೇತ್ರದ ಉದ್ದಗಲಕ್ಕೂ ಪ್ರವಾಸ ಮಾಡಿ ಕಾರ್ಯಕರ್ತರನ್ನು ಹುರಿದುಂಬಿಸಿ ಚುನಾವಣಾ ಅಖಾಡವನ್ನು ರೆಡಿ ಮಾಡಿಟ್ಟಿದ್ದರು. ಆದರೆ ಸೋಮಣ್ಣ ಈ ಕ್ಷೇತ್ರವನ್ನೇ ಮರೆತುಬಿಟ್ಟಿದ್ದರು.

ಇನ್ನು ಜಾತಿ ಲೆಕ್ಕಾಚಾರದಲ್ಲಿ ಹೇಳುವುದಾದರೆ ಎಸ್.ಎಂ.ಕೃಷ್ಣ ಮತ್ತು ದೇವೇಗೌಡರ ಜೊತೆಗೆ ಏಕಪ್ರಕಾರವಾದ ಸಂಬಂಧವನ್ನು ಕೃಷ್ಣಪ್ಪ ಹೊಂದಿರುವುದರಿಂದ ಈ ಕ್ಷೇತ್ರದಲ್ಲಿರುವ ಒಕ್ಕಲಿಗರ ಓಟುಗಳು ವಿಭಜನೆಯಾಗುವುದಿಲ್ಲ. ಆದರೆ ಯಡಿಯೂರಪ್ಪನವರಿಗೆ ಕೊನೆಯ ಕ್ಷಣದಲ್ಲಿ ಸೋಮಣ್ಣ ಕೈಕೊಟ್ಟಿರುವುದರಿಂದ ಲಿಂಗಾಯತ ಮತದಾರರಲ್ಲಿ ಸೋಮಣ್ಣನ ಬಗ್ಗೆ ಅಸಮಾಧಾನ ಇದೆ. ಲಿಂಗಾಯತರು ಸೋಮಣ್ಣನವರಿಗೆ ಮತ ಹಾಕದಿದ್ದರೆ ಸೋಮಣ್ಣನಿಗೆ ಸೋಲು ಖಚಿತ.

ಈ ಎಲ್ಲ ಹಿನ್ನೆಲೆಯಲ್ಲಿ ವಿಜಯನಗರ ಕ್ಷೇತ್ರದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದರೆ ಕೃಷ್ಣಪ್ಪನವರಿಗೆ ಅನುಕೂಲಕರವಾದ ಪರಿಸ್ಥಿತಿ ಎದ್ದುಕಾಣುತ್ತದೆ.

ವಿಜಯನಗರ ಕ್ಷೇತ್ರದ ಕಥೆ ಹೀಗಾದರೆ ಪಕ್ಕದ ಗೋವಿಂದರಾಜನಗರ ಅಸೆಂಬ್ಲಿ ಕ್ಷೇತ್ರದಲ್ಲೂ ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ ತನ್ನ ಹತ್ತಿರದ ಅಭ್ಯರ್ಥಿ ಬಿಜೆಪಿಯ ರವೀಂದ್ರ ಅವರಿಗಿಂತ ಮುನ್ನಡೆ ಸಾಧಿಸಿದ್ದಾರೆ. ಇದಕ್ಕೆ ಕಾರಣವಿಷ್ಟೆ. ಕಾರ್ಪೊರೇಟರ್ ಆಗಿರುವ ರವೀಂದ್ರರವರು ವಿಜಯನಗರ ಅಸೆಂಬ್ಲಿ ಕ್ಷೇತ್ರದಿಂದ ಸ್ಪರ್ಧಿಸುವ ಉದ್ದೇಶದಿಂದ ಕಳೆದ ಒಂದೂವರೆ ವರ್ಷದಿಂದ ಆ ಕ್ಷೇತ್ರದ ಮೇಲೆ ತಮ್ಮ ಗಮನವನ್ನು ಇಟ್ಟಿದ್ದರು. ಆದರೆ ರವೀಂದ್ರರ ಗುರು ಸೋಮಣ್ಣನವರೇ ವಿಜಯನಗರಕ್ಕೆ ಒಕ್ಕರಿಸಿದರು. ಇದು ಗೊತ್ತಾಗುತ್ತಿದ್ದಂತೆ ರವೀಂದ್ರ ಮತ್ತು ಅವರ ಅಭಿಮಾನಿಗಳು ಸೋಮಣ್ಣನ ವಿರುದ್ಧ ಘೋಷಣೆಯನ್ನು ಹಾಕಿ ತಮ್ಮ ಅಸಮಾಧಾನವನ್ನು ಪ್ರದರ್ಶಿಸಿದ್ದರು. ಆದರೆ ಅವರಿಬ್ಬರ ನಡುವೆ ರಾಜಿ ಸಂಧಾನ ನಡೆದು ರವೀಂದ್ರ ಈಗ ಮನಸ್ಸಿಲ್ಲದ ಮನಸ್ಸಿನಿಂದ ಗೋವಿಂದರಾಜನಗರದಿಂದ ಸ್ಪರ್ಧಿಸುತ್ತಿದ್ದಾರೆ. ಅಂದರೆ ಒಂದು ರೀತಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಮೊದಲೇ ರವೀಂದ್ರ ಪರೋಕ್ಷವಾಗಿ ತನ್ನ ಸೋಲನ್ನು ಒಪ್ಪಿಕೊಂಡಿದ್ದಾರೆ.

ಗೋವಿಂದರಾಜನಗರದಲ್ಲಿ ರಾಜಕೀಯವಾಗಿ ಒಕ್ಕಲಿಗರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗೋವಿಂದರಾಜನಗರದಲ್ಲಿ ಒಕ್ಕಲಿಗರ ತರಹವೇ 55,000 ಸಂಖ್ಯೆ ಇರುವ ಕುರುಬರು ಕೂಡ ನಿರ್ಣಯಕ ಪಾತ್ರ ವಹಿಸಲಿದ್ದಾರೆ. ಪ್ರಿಯಾಕೃಷ್ಣ ಮತ್ತು ರವೀಂದ್ರ ಇಬ್ಬರೂ ಅದೇ ಒಕ್ಕಲಿಗ ಸಮುದಾಯದವರು. ಜನತಾದಳದ ಅಭ್ಯರ್ಥಿ ರಂಗೇಗೌಡರೂ ಒಕ್ಕಲಿಗರೆ. ಹಾಗಾಗಿ ಒಕ್ಕಲಿಗ ಸಮುದಾಯದ ಮತಗಳೂ ಮೂವರು ಅಭ್ಯರ್ಥಿಗಳಿಗೆ ಹಂಚಿಹೋದರೂ, ಬಿಜೆಪಿ ಮತ್ತು ಆರೆಸ್ಸೆಸ್ ಕಾರ್ಯಕರ್ತರು ತನಗೆ ಓಟು ಹಾಕುವುದರಿಂದ ತಾನು ಗೆಲ್ಲುತ್ತೇನೆ ಎಂಬ ಲೆಕ್ಕಾಚಾರ ರವೀಂದ್ರರದ್ದು. ಅದು ಅಷ್ಟು ಸುಲಭವಲ್ಲ. ಯಾಕೆಂದರೆ ಯುವ ಶಾಸಕ ಪ್ರಿಯಾಕೃಷ್ಣ ತನ್ನ ಉತ್ತಮ ಆಡಳಿತದಿಂದ ಈಗಾಗಲೇ ಯುವಕರ ಮತ್ತು ಕಾರ್ಯಕರ್ತರ ಮನಸ್ಸನ್ನು ಗೆದ್ದಿದ್ದಾರೆ. ಕಳೆದ ಬಾರಿ ರಾಜಕೀಯದಲ್ಲಿ ಪಳಗಿದ ಹುಲಿ ಸೋಮಣ್ಣನವರನ್ನು ಸೋಲಿಸಿದ್ದರೂ ಪ್ರಿಯಾಕೃಷ್ಣ ಹಮ್ಮು ಬಿಮ್ಮು ತೋರಿಸಿಲ್ಲ. ಅಷ್ಟೇ ಅಲ್ಲ, ರಾಜಕೀಯ ಕ್ಷೇತ್ರಕ್ಕೆ ಬಂದ ದಿನದಿಂದ ಪ್ರಿಯಾಕೃಷ್ಣ ವಿರುದ್ಧ ಯಾವುದೇ ಒಂದು ದೂರು ಕೇಳಿಬಂದಿಲ್ಲ. ಜೊತೆಗೆ ತನ್ನ ಸಜ್ಜನಿಕೆ ಮತ್ತು ಸೌಮ್ಯ ಸ್ವಭಾವದಿಂದ ಪ್ರಿಯಾಕೃಷ್ಣ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.

ಹೀಗಾಗಿ ಅಪ್ಪ-ಮಗ ಜೋಡಿ ಈ ಬಾರಿಯೂ ವಿಜಯನಗರ ಮತ್ತು ಗೋವಿಂದರಾಜನಗರದಲ್ಲಿ ಮತದಾರರನ್ನು ತಮ್ಮದೇ ಆದ ನಯ-ವಿನಯದ ಶೈಲಿಯಲ್ಲಿ ಮೋಡಿ ಮಾಡಿ ಮತ್ತೆ ಅಧಿಕಾರದ ಗದ್ದುಗೆಯನ್ನು ಅಲಂಕರಿಸುವ ಸಾಧ್ಯತೆಯಿದೆ.


• ಶೆಣೈ

ಕರಾವಳಿ: ಕಳೆಗಟ್ಟಿದೆ ಕಾಂಗ್ರೆಸ್; ಬಳಲುತ್ತಿದೆ ಬಿಜೆಪಿ


ಕರ್ನಾಟಕದ ದಕ್ಷಿಣ ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿಧಾನಸಭೆ ಚುನಾವಣೆ ಅಖಾಡ ಧರ್ಮ-ಜಾತಿ-ಹಣದ ಹಣಾಹಣಿಯಿಂದ ಹದಗೊಂಡಿದೆ! ಕಳೆದೊಂದು ದಶಕದಿಂದ ಹಿಂದುತ್ವದ ಅನಾಹುತಕಾರಿ ಅಲೆಯೆಬ್ಬಿಸಿ ಸವಾರಿ ಮಾಡುತ್ತ ಬಂದಿದ್ದ ಬಿಜೆಪಿ ಈ ಬಾರಿ ಅದೇ ಧರ್ಮ ಸಿಕ್ಕುಗಳಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದೆ. ಟಿಕೆಟ್ ಹಂಚಿಕೆಯಲ್ಲಿ ಎಡವಿ ಬಿದ್ದರೂ ಕಾಂಗ್ರೆಸ್‌ಗೆ ಬುರ್ನಾಸ್ ಬಿಜೆಪಿ ಬಗ್ಗೆ ಮತದಾರರಲ್ಲಿ ಮಡುಗಟ್ಟಿರುವ ಅಸಹ್ಯವೇ ವರವಾಗಿದೆ. ಭಯಗೊಂಡಿರುವ ಬಿಜೆಪಿ ಮತ್ತು ಬಲಗೊಂಡಿರುವ ಕಾಂಗ್ರೆಸ್‌ನ ಸಮಬಲದ ಸಮರದಲ್ಲಿ ಜೆಡಿಎಸ್-ಎಸ್‌ಡಿಪಿಐ-ಕೆಜೆಪಿ ಆಟಕ್ಕಷ್ಟೇ!

ಮೀನು-ಅಡಿಕೆ-ಬ್ಯಾಂಕಿಂಗ್-ಶಿಕ್ಷಣ ವ್ಯಾಪಾರದ ಕರಾವಳಿಯಿದೆಯಲ್ಲ ಅದು ಜಾತಿ-ಧರ್ಮ-ಮೂಢನಂಬಿಕೆ-ಮೂರ್ಖತನಗಳ ಒಂಥರಾ ಕಲಸುಮೇಲೋಗರ. 'ಬುದ್ಧಿವಂತರ' ಈ ನೆಲದಲ್ಲಿ ಹಿಂದುತ್ವ ಮಾಡಿದ ಒಂದೊಂದು ಛಾನ್ಗಡಿಯೂ ಬರ್ಬರ-ಘೋರ-ಅಮಾನುಷ. ಧರ್ಮದ ಹೆಸರಲ್ಲಿ ಹಿಂದೂ ಹುಡುಗಿಯರನ್ನೇ ಬೆತ್ತಲೆ ಮಾಡಿ ಹಿಂಡಿ-ಹಿಸುಕಿ-ಬಡಿದ ಪೊಲಿಟಿಕಲ್ ಮೈಲೇಜ್ ಪಡೆವ ಸಂಘಪರಿವಾರದ ಪ್ರಹಸನಕ್ಕೆಲ್ಲ ಅಂತಿಮ ತೆರೆಯೆಳೆಯಲು ಮತದಾರ ಮನಸ್ಸು ಮಾಡಿದಂತಿದೆ.


ಆದರೆ ಸಂಚು-ಪಿತೂರಿ-ಹುಸಿ ವದಂತಿ ವ್ಯವಸ್ಥಿತವಾಗಿ ಹೆಣೆದು ಮತದಾರರನ್ನು ದಿಕ್ಕೆಡಿಸುವ ನೆಟ್‌ವರ್ಕ್ ಹೊಂದಿರುವ ಖತರ್‌ನಾಕ್ ಚೆಡ್ಡಿ-ಕಾವಿ 'ಪಡೆ ಅಷ್ಟು ಸುಲಭಕ್ಕೆ ಸೋಲೊಪ್ಪಿಕೊಳ್ಳಲು ತಯಾರಿಲ್ಲ. ಏನೇ ಮಾಡಿದರೂ ಹಿಂದಿನ ರಣ ಕೇಕೆ ಬಿಜೆಪಿ ಪಾಳೆಯದಲ್ಲಿ ಈ ಬಾರಿ ಇಲ್ಲವಾಗಿದೆ; ಬದಲಿಗೆ ಬಸವಳಿದಿದ್ದ ಕಾಂಗ್ರೆಸ್ ಕಳೆಗಟ್ಟಿದೆ. ಉಡುಪಿ ಮತ್ತು ದಕ್ಷಿಣ ಕನ್ನಡದ ಒಟ್ಟು 13 ಕ್ಷೇತ್ರಗಳಲ್ಲಿನ ಸಮರಾಂಗಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಕತ್ತುಕತ್ತಿನ ಕದನದಲ್ಲಿ ಕಾಂಗ್ರೆಸ್ಸೇ ಮುಂದಿರುವುದು ಕಾಣಿಸುತ್ತದೆ; ಹಳೆಯ ಮತಾಂಧ ಶಸ್ತ್ರಾಸ್ತ್ರಕ್ಕೆ ತುಕ್ಕು ಹಿಡಿದಿರುವುದರಿಂದ ಆರೆಸ್ಸೆಸ್‌ನ ಡಾನ್-ಡಾಕೂಗಳು-ಸ್ವಾಮಿ-ಕಾಮಿಗಳು ಚಡಪಡಿಸುತ್ತಿರುವುದು ಗೋಚರಿಸುತ್ತದೆ.




ಮೊಹಿದ್ದೀನ್ ಬಾವ



ಕೃಷ್ಣಪಾಲೇಮಾರ್




ಯೋಗೇಶ್ ಭಟ್




ಜೆ.ಆರ್.ಲೋಬೋ




ಯು.ಟಿ.ಖಾದರ್




ಚಂದ್ರಹಾಸ್ ಉಳ್




ವಸಂತ್ ಬಂಗೇರಾ




ಅಭಯ್ ಚಂದ್ರ ಜೈನ್




ವಿನಯ್‌ಕುಮಾರ್ ಸೊರಕೆ



ಲಾಲಾಜಿ ಮೆಂಡನ್



ಗೋಪಾಲ್ ಭಂಡಾರಿ



ಸುನೀಲ್‌ಕುಮಾರ್

ಮಂಗಳೂರು(ಉ): ನೆಕ್ ಟು ನೆಕ್

ಕೋಮು ಮತ್ತು ರಾಜಕೀಯ ಸೂಕ್ಷ್ಮ ಕ್ಷೇತ್ರವಾದ ಮಂಗಳೂರು ಉತ್ತರದಲ್ಲಿ ಬಿಜೆಪಿ ಕ್ಯಾಂಡಿಡೇಟ್ ಬ್ಲೂ ಭಂಡ ಕೃಷ್ಣ ಪಾಲೇಮಾರ್. ಬರೋಬ್ಬರಿ ಒಂದು ವರ್ಷದಿಂದ ಹಡಬೆ ಹಣ ಹರಿಸುತ್ತ ಈ ಬಿಲ್ಡರ್-ರಿಯಲ್ ಎಸ್ಟೇಟರ್ ಎಲೆಕ್ಷನ್ ಸಿದ್ಧತೆ ಮಾಡಿಕೊಂಡಿದ್ದಾನೆ. ಒಂದು ಹಂತದಲ್ಲಿ ಈತನಿಗೆ ಟಿಕೆಟ್ ತಪ್ಪಿಸಿ ಹಿಂದೂ ರೌಡಿ ಸತ್ಯಜಿತ್‌ಗೆ ಛಾನ್ಸ್ ಕೊಡಲು ಕಲ್ಲಡ್ಕ ಹೈಕಮಾಂಡ್ ಯೋಚಿಸಿತ್ತು, ಆದರೆ ತಮ್ಮ ಬ್ಲೂಜೆಪಿಗೆ ಪಾಲೇಮಾರ್‌ನೆ ಸೂಕ್ತ ಅಭ್ಯರ್ಥಿ ಎಂದು ಟಿಕೆಟ್ ಕಮಿಟಿ ಡಾನ್ ಕಲ್ಲಡ್ಕ ಭಟ್ಟನಿಗೆ ಅನ್ನಿಸಿರಬೇಕು. ಚೆಡ್ಡಿ ಪರಿವಾರ ಏನೇ ಹೇಳಲಿ, ಈ ಪಾಲೇಮಾರ್ ಬಗ್ಗೆ ಮತದಾರರಿಗೆ ಆಕ್ರೋಶವಿದೆ. ಹಣವಂತರ ಫ್ಲಾಟ್-ಮಾಲ್‌ಗಳಿಗೆ ನೆರವಾಗಿ ಎರಡು ಸೆಂಟ್ಸ್ ಭೂಮಿಯ ಬಡವರನ್ನು ಸತಾಯಿಸಿದ ಪಾಪ ಪಾಲೆಮಾರ್‌ನನ್ನು ಕಾಡುತ್ತಿದೆ. ಈ ಐದು ವರ್ಷದಲ್ಲಿ ಪಾಲೇಮಾರ್ ಅಭಿವೃದ್ಧಿ ಮುಖವಾಡದಲ್ಲಿ ಅನಾಹುತ ಮಾಡಿದ್ದೇ ಜಾಸ್ತಿ.

ಇಂಥ ಪಾತಕಿ ಪಾಲೇಮಾರ್ ಎದುರು ಕಾಂಗ್ರೆಸ್‌ನ ಮಾಂಡಲೀಕ ಆಸ್ಕರ್ ಫರ್ನಾಂಡಿಸ್ ಸ್ಪರ್ಧೆಗೆ ಇಳಿಸಿರುವುದು ನಾಲಾಯಕ್ ಮೊಯಿದ್ದೀನ್ ಬಾವಾ ಎಂಬಾತನನ್ನು. ಈತ ಕಳೆದ ಬಾರಿ ದೊಡ್ಡ ಅಂತರದಲ್ಲಿ ಸೋತವನು. ಮಾಜಿ ಶಾಸಕ ಸರಳ-ಸಜ್ಜನ ವಿಜಯಕುಮಾರ್ ಶೆಟ್ಟಿಯೇ ಫಿಟ್ ಕ್ಯಾಂಡಿಡೇಟೆಂದು ಕಾರ್ಪೊರೇಟರ್‌ಗಳು-ಕಾರ್ಯಕರ್ತರು-ಮತದಾರರು ಹೇಳಿದ್ದರು. ಆದರೆ ತನ್ನ ಮಡದಿಯ ಪರಿಚಾರಕನಾದ ಬಾವಾನಿಗೆ ಆಸ್ಕರ್ ಹಠ ಹಿಡಿದು ಟಿಕೆಟ್ ಕೊಡಿಸಿದ್ದಾರೆ. ವಿಜಯ ಕುಮಾರ್ ಶೆಟ್ಟಿ ತನ್ನ ಬಾಸ್ ಜನಾರ್ದನ ಪೂಜಾರಿ ಮಾತಿಗೆ ಕಟ್ಟುಬಿದ್ದು ಬಂಡಾಯ ಬಾವುಟ ಕೆಳಗಿಳಿಸಿದ್ದಾರೆ. ಬಾವಾ ದುರ್ಬಲ ಕ್ಯಾಂಡಿಡೇಟಾದರೂ ಪಾಲೇಮಾರ್ ಮೇಲಿನ ಮತದಾರರ ಸಿಟ್ಟು ಕಾಂಗ್ರೆಸನ್ನು ಬಲಗೊಳಿಸಿದೆ. ಹಾಗಾಗಿ ನೆಕ್-ಟು-ನೆಕ್ ಫೈಟಿಂಗ್ ಸುರತ್ಕಲ್‌ನಲ್ಲಿ ನಡೆದಿದೆ. ಕೆಜೆಪಿಯಿಂದ ನಿಂತಿರುವ ಮೀನುಗಾರ ಸಮುದಾಯದ ರಾಮಚಂದರ್ ಬೈಕಂಪಾಡಿ ಬಿಜೆಪಿಗೆ ಹಾನಿ ಮಾಡಲಿದ್ದಾರೆ. ಹೀಗಾಗಿ ಪಾಲೇಮಾರ್ ತನ್ನ ಕಳ್ಳ ಕಾಸು ಅದೆಷ್ಟೇ ಹರಿಸಿದರೂ ಗೆಲ್ಲುವುದು ಸುಲಭವೇನಲ್ಲ.

ಮಂಗಳೂರು (ದ): ಫಿಫ್ಟಿ ಫಿಫ್ಟಿ

ನಾಲ್ಕನೇ ಬಾರಿ ಶಾಸಕನಾಗುವ ಉಮೇದಿನಲ್ಲಿ ಬಿಜೆಪಿಯ ಹೋಪ್‌ಲೆಸ್ ಯೋಗೀಶ್ ಭಟ್ಟ ಕಣಕ್ಕಿಳಿದಿದ್ದಾರೆ. ಈತನಿಗೆ ಆರೆಸ್ಸೆಸ್ ಹೈಕಮಾಂಡ್ ಒಲ್ಲದ ಮನಸ್ಸಿನಿಂದ ಟಿಕೆಟ್ ಕೊಟ್ಟಿದೆ. ಪ್ರಯೋಜನಕ್ಕೆ ಬಾರದ ಭಟ್ಟನ ಬಗ್ಗೆ ಬಿಜೆಪಿಗರಿಗಷ್ಟೇ ಅಲ್ಲ, ಮತದಾರರಿಗೂ ಬೇಸರ ತಂದಿದೆ. ಆದರೆ ಅದನ್ನು ಸರಿಯಾಗಿ ಎನ್‌ಕ್ಯಾಶ್ ಮಾಡಿಕೊಳ್ಳಲು ಕಾಂಗ್ರೆಸ್ ದಿಗ್ಗಜರಾದ ಪೂಜಾರಿ-ಆಸ್ಕರ್ ವಗ್ಗೈರೆಗಳು ವಿಫಲರಾಗಿದ್ದಾರೆ. ಬಿಜೆಪಿಗರಲ್ಲಿ- ಬಹುಸಂಖ್ಯಾತ ಮತದಾರರಲ್ಲಿ ಹಿಂದೂತ್ವ ಕೆರಳಿಸುವಂತಿದೆ ಕಾಂಗ್ರೆಸ್ ಕ್ಯಾಂಡಿಡೇಟ್ ಆಯ್ಕೆ.

ಕಳೆದ ನಾಲ್ಕು ಬಾರಿ ಸತತವಾಗಿ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೆ ಟಿಕೆಟ್ ಕೊಟ್ಟು ಕೈಸುಟ್ಟುಕೊಂಡರೂ ಕಾಂಗ್ರೆಸಿಗರು ಈ ಬಾರಿಯೂ ಹಿಂದಿನ ಗೊಡ್ಡು ತಂತ್ರ ಬಿಟ್ಟಿಲ್ಲ. ಮಾಜಿ ಕೆಎಎಸ್ ಅಧಿಕಾರಿ-ಕ್ಯಾಥೋಲಿಕ್ ಸಮುದಾಯದ ಜೆ.ಆರ್.ಲೋಬೋರನ್ನು ಕಾಂಗ್ರೆಸ್ ಅಖಾಡಕ್ಕೆ ಇಳಿಸಿದೆ. ಈತ ಸಜ್ಜನ, ಜನಪರ, ಕೆಲಸಗಾರ, ಅಭಿವೃದ್ಧಿ ಚಿಂತಕ ಎಲ್ಲ ನಿಜ; ಬಿಜೆಪಿ ಹುರಿಯಾಳಿಗಿಂತಲೂ ಬೆಟರ್ ಖರೆ. ಆದರೆ ಆತನ ಜಾತಿ ಮತಗಳಿರುವುದೇ 22 ಸಾವಿರ. ಮುಸ್ಲಿಮರ ಮತ 23 ಸಾವಿರವಿದೆ. ಉಳಿದೆಲ್ಲವೂ ಹಿಂದೂ ಓಟುಗಳು. ಇದು ಬಿಜೆಪಿಗರ ಕುತಂತ್ರಕ್ಕೆ ಪೂರಕವಾಗಿದೆ.

ಇಷ್ಟಾದರೂ ಬಿಜೆಪಿಯ ಭ್ರಷ್ಟಾಚಾರ, ಭಂಡಾಟ, ರಾಸಲೀಲೆ ಮತದಾರರಲ್ಲಿ ಅಸಹ್ಯ ಮೂಡಿಸಿರುವುದು ಕಾಂಗ್ರೆಸ್‌ಗೆ ಪ್ಲಸ್ ಆಗಿದೆ. 15 ವರ್ಷದಿಂದ ಶನಿಯಂತೆ ಗಂಟು ಬಿದ್ದಿರುವ ಭಟ್‌ನನ್ನು ಬದಲಾಯಿಸುವ ಮೂಡಲ್ಲೂ ಮತದಾರ ಇದ್ದಾನೆ. ಹೀಗಾಗಿ ಕಾಂಗ್ರೆಸ್‌ನ ಲೋಬೋ ಮತ್ತು ಬಿಜೆಪಿಯ ಕೊಂಕಣಿ ಬ್ರಾಹ್ಮಣ ಭಟ್ ಮಾಮರ ಮಧ್ಯೆ ಸಮಬಲದ ಸೆಣಸಾಟ ನಡೆದಿದೆ.

ಮಂಗಳೂರು: ಖಾದರ್ ಶೂರ್

ಮಂಗಳೂರು, ಅಂದರೆ ಹಿಂದಿನ ಉಳ್ಳಾಲ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡೈನಮಿಕ್ ಶಾಸಕ ಯು.ಟಿ. ಖಾದರ್ ಗೆಲ್ಲುವುದು ಗ್ಯಾರಂಟಿ. ಇದಕ್ಕೆ ಹಲವು ಕಾರಣಗಳಿವೆ. ಖಾದರ್‌ನ ಧರ್ಮದ ಬ್ಯಾರಿ ಮುಸ್ಲಿಮರು ಈ ಕ್ಷೇತ್ರದಲ್ಲಿ ಶೇಕಡಾ 56ರಷ್ಟಿದ್ದಾರೆ. ಹಾಗೆಯೇ ಖಾದರ್ ಸೆಕ್ಯುಲರ್, ಕೆಲಸಗಾರ. ಎರಡು ಬಾರಿ ಶಾಸಕನಾಗಿ ಜನಪರ ಕೆಲಸ ಮಾಡಿರುವ ಖಾದರ್ ಹಿಂದೂಗಳೊಂದಿಗೂ ನಿಷ್ಕಲ್ಮಷವಾಗಿ ಬೆರೆಯುವ ತರುಣ. ಗೆಲುವಿನತ್ತ ದಾಪುಗಾಲು ಹಾಕಿರುವ ಖಾದರ್‌ನ ಮತಕ್ಕೆ ಕನ್ನ ಹಾಕಲು ಮುಸ್ಲಿಮ್ ಸಮುದಾಯದ ಬರೋಬ್ಬರಿ 7 ಮಂದಿ ಪಕ್ಷೇತರರಾಗಿ ನಿಂತಿದ್ದಾರೆ. ಹಾಗೆಯೇ ಸಾಬರ ಪಕ್ಷ ಎನ್ನಲಾದ ಎಸ್‌ಡಿಪಿಐ ಕೂಡ ಕಣದಲ್ಲಿದೆ. ಇದು ಖಾದರ್‌ಗೆ ಕೊಂಚ ಖೋತಾ ಮಾಡಲಿದೆ.

ಬಿಜೆಪಿ ಎದುರಾಳಿ ಚಂದ್ರಹಾಸ ಉಳ್ಳಾಲ ಮಲೆಯಾಳಿ ಬಿಲ್ಲವ (ತಿಯಾಸ್). ಈತನ ಬಗ್ಗೆ ಕ್ಷೇತ್ರದ ಸ್ವಜಾತಿ ಜನಗಳಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಬಿಲ್ಲವರ ಭೂಮಿಯನ್ನೇ ಪರಭಾರೆ ಮಾಡಿದ ಆರೋಪ ಈತನ ಮೇಲಿದೆ. ಛಾನ್ಗಡಿ ಮನುಷ್ಯನಾದ ಚಂದ್ರಹಾಸ ಕಾಂಗ್ರೆಸ್‌ನ ಬಲಾಢ್ಯ ಖಾದರ್ ಎದುರು ಸೆಣಸಾಡುವ ತಾಕತ್ತು ಇರುವವನಲ್ಲ.

ಬಂಟ್ವಾಳ: ಗುತ್ತಿನ ಗತ್ತು!

ಬಂಟ್ವಾಳ ಅಸೆಂಬ್ಲಿ ಕ್ಷೇತ್ರದಲ್ಲಿ ಬಂಟ ಸಮುದಾಯದ ಗುತ್ತಿನ ಗತ್ತಿನ ಮೇಲಾಟ ನಡೆಯುತ್ತಿದೆ. 'ಗುತ್ತು' ಎಂದರೆ ಬಂಟರ ಒಂಥರಾ ಪಾಳೆಗಾರಿಕೆ-ಮನೆತನದ ಸಂಕೇತ. ಕಾಂಗ್ರೆಸ್‌ನ ಕ್ಯಾಂಡಿಡೇಟ್ ರಮಾನಾಥ ರೈ ಬೆಳ್ಳಿಪಾಡಿ ಗುತ್ತಿನ ಮನೆತನದ ಕುಡಿಯಾದರೆ, ಆತನಿಗೆ ಸೆಡ್ಡು ಹೊಡೆದು ಕಣಕ್ಕೆ ಹಾರಿರುವ ಎಳಸು ಹುಡುಗ ರಾಜೇಶ್ ನಾಯಕನದು ಉಳಿಪಾಡಿ ಗುತ್ತು. ಬೈಲು ಮೇಗಿನ ಮನೆ ಗುತ್ತಿನ ನಾಗರಾಜ ಶೆಟ್ಟಿ ಎಂಬ ಮುದಿ ರಸಿಕ ಬಿಜೆಪಿ ಬಿಟ್ಟುಹೋದ ನಂತರ ಕಲ್ಲಡ್ಕ ಭಟ್ಟನಿಗೆ ಶಕ್ತಿಶಾಲಿ ಬಂಟರ ಕ್ಯಾಂಡಿಡೇಟ್ ಸಿಗಲಿಲ್ಲ, ಆತ ಅನಿವಾರ್ಯವಾಗಿ ಅಪರಿಚಿತ ರಾಜೇಶ್ ನಾಯಕ್‌ಗೆ ಬಿಜೆಪಿ ಟಿಕೆಟ್ ಕೊಟ್ಟಿದ್ದಾನೆ.

ಕಾಂಗ್ರೆಸ್‌ನ ಹಳೆ ಹುಲಿ-ಐದು ಬಾರಿ ಈ ಕ್ಷೇತ್ರದಿಂದ ಗೆದ್ದು ಮಂತ್ರಿಯಾಗಿ ಮೆರೆದ ರಮಾನಾಥ ರೈ ಎದುರು ಸೆಣಸಾಡುವ ಶಕ್ತಿ ಬಿಜೆಪಿಯ ರಾಜೇಶ್‌ಗೆ ಇಲ್ಲ. ಈತ ಚೆಡ್ಡಿಯಾದರೂ ರಾಜಕೀಯಕ್ಕೆ ಹೊಸಬ. ಕಲ್ಲಡ್ಕ ಭಟ್‌ನ ಆರೆಸ್ಸೆಸ್ ಅಡ್ಡೆಯ ಹೆಡ್‌ಕ್ವಾಟರ್ಸ್ ಕಲ್ಲಡ್ಕ ಇದೇ ಬಂಟ್ವಾಳ ಕ್ಷೇತ್ರದಲ್ಲಿದೆ. ಹಾಗಾಗಿ ಭಟ್ಟನಿಗೆ ಗೆಲ್ಲುವುದು ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಆದರೆ ಗ್ರಾ.ಪಂ-ತಾ.ಪಂ-ಮುನ್ಸಿಪಾಲ್ಟಿಯಲ್ಲಿ ಸೋತಿರುವ ಬಿಜೆಪಿಗೆ ಸಾಂಪ್ರದಾಯಿಕ ಹಿಂದೂತ್ವದ ಮತ ಬಿಟ್ಟರೆ ಉಳಿದ ಓಟ್ಯಾವುದೂ ಸಿಗದು. ಮುಸ್ಲಿಮರ ಸುಮಾರು 46 ಸಾವಿರ ಮತ ಈ ಕ್ಷೇತ್ರದಲ್ಲಿದೆ. ಈ ಮುಸ್ಲಿಮರೊಂದಿಗೆ ರೈಗೆ ಅನ್ಯೋನ್ಯ ಸಂಬಂಧ ಇದೆ. ಕ್ರೈಸ್ತರು (20 ಸಾವಿರ), ಬಿಲ್ಲವರು (40 ಸಾವಿರ) ರಾಜೇಶ್ ನಾಯಕ್‌ಗಿಂತ ರಮಾನಾಥ್ ರೈ ಬೆಟರ್ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಬೆಳ್ಳಿಪಾಡಿ ಬೇಬಿಯಣ್ಣನೇ ಮತ್ತೆ ಗೆಲ್ಲುತ್ತಾರೆಂದು ಬಂಟ್ವಾಳದ ಜನರು ಲೆಕ್ಕ ಹಾಕಿದ್ದಾರೆ.

ಪುತ್ತೂರು: ಶಕುಗೆ ಶುಭ

ಪುತ್ತೂರು ದೊಡ್ಡ ಕುತೂಹಲದ ಕಣ; ಬಿಜೆಪಿ ಬಾಸ್‌ಗಳಾದ ಕಲ್ಲಡ್ಕ ಭಟ್, ಮಾಜಿ ಸಿಎಂ ಸದಾನಂದ ಗೌಡರ ಪ್ರತಿಷ್ಠೆಯ ಕ್ಷೇತ್ರ. ಡಿವಿ ಬಿಜೆಪಿಯ ಮುಂಚೂಣಿಗೆ ಬಂದಿದ್ದು ಈ ಸಮರಾಂಗಣದಲ್ಲಿ ಹಿಂದೆರಡು ಬಾರಿ ಗೆದ್ದನಂತರವೇ. ಹಾಗೆಯೇ ಕಲ್ಲಡ್ಕ ಭಟ್ಟನ ಚೆಡ್ಡಿ ಜಾಲದ ಗಂಡು ಮೆಟ್ಟಿನ ಸ್ಥಳವಿದು. ಇಲ್ಲಿಯ ಬಿಜೆಪಿ ಶಾಸಕಿಯಾಗಿದ್ದ ಶಕುಂತಲಾ ಶೆಟ್ಟಿಯನ್ನು ಕಲ್ಲಡ್ಕ ಭಟ್ಟ ತನ್ನ ಭ್ರಷ್ಟಾಚಾರ-ಅನಾಚಾರಕ್ಕೆ ತಕ್ಕಂತೆ ಪಳಗಿಸಿಕೊಳ್ಳಲು ವಿಫಲನಾದಾಗ ಆಕೆಗೆ ಕಿರುಕುಳ ಕೊಡಲಾರಂಭಿಸಿದ್ದ. ಆಗ ಸಿಡಿದೆದ್ದ ಶಕು ಕಳೆದ ಬಾರಿ ಬಂಡೆದ್ದು 'ಸ್ವಾಭಿಮಾನಿ'ಯಾಗಿ ಸ್ಪರ್ಧಿಸಿ ಬರೋಬ್ಬರಿ 25 ಸಾವಿರ ಮತ ಪಡೆದಿದ್ದರು. ಇಂಥ ಗಟ್ಟಿಗಿತ್ತಿ ಈಗ ಕಾಂಗ್ರೆಸ್ ಕ್ಯಾಂಡಿಡೇಟ್.

ಶಕು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ಕ್ಷಣದಲ್ಲೇ ಕಲ್ಲಡ್ಕ ಭಟ್ಟ, ಡಿವಿ ಪಡೆಯಲ್ಲಿ ನಡುಕ ಶುರುವಾಗಿದೆ. ಡಿವಿಯ ದಾಯಾದಿ ಭಾವ ಸಂಜೀವ್ ಮಠಂದೂರು ಬಿಜೆಪಿ ಹುರಿಯಾಳು. ಈತ ಲೋಪ್ರೊಫೈಲ್ ಪುಢಾರಿ. ತವರು ಗ್ರಾಮ ಹಿರೇ ಬಂಡಾಡಿಯ ಗ್ರಾಮ ಪಂಚಾಯತ್ ಬರ್ಖಾಸ್ತುಗೊಳಿಸಿದ ಈತನ ಕಿತಾಪತಿಗೆ ಇಡೀ ಊರೇ ಕಿಡಿಕಿಡಿಯಾಗಿದೆ. ಸಹಕಾರ ಸಂಘದ ಎಲೆಕ್ಷನ್ ಗೆಲ್ಲಲಾಗದ ಈ ಚೆಡ್ಡಿ ಜನಾನುರಾಗಿ ಶಕು ಎದುರು ಯಾವ ಲೆಕ್ಕವೂ ಅಲ್ಲ. ಆದರೆ ಕ್ಷೇತ್ರದಲ್ಲಿ ಸಂಘ ಪರಿವಾರ ನೆಟ್‌ವರ್ಕ್ ಬಲಾಢ್ಯವಾಗಿದೆ. ಡಿವಿ ಪ್ರಭಾವವಿದೆ. ಡಿವಿ ... ಅರೆಭಾಷೆ ಗೌಡರ ಸುಮಾರು 40 ಸಾವಿರ ಮ... ಆದರೆ ಈ ಗೌಡರ ಮತ ಒಡೆಯಲು ಡಿವಿಯ ... ಭಾವ ದಿನೇಶ್ ಎಂಬ ಹಣವಂತ ಉದ್ಯಮಿ ರೆ... ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಇದು ಕಾಂ... ಅನುಕೂಲಕರ.

ಶಕು ಬಗ್ಗೆ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಅನುಕ... ಜನ ಸಂಪರ್ಕದ- ಕೆಲಸ ಮಾಡುವ ಛಾತಿಯ ... ಬಿಜೆಪಿಯ ಚೆಡ್ಡಿ ಬ್ರಾಹ್ಮಣರು ಅನ್ಯಾಯ ಮಾಡಿ... ಅನುಕಂಪ ಕ್ಷೇತ್ರದಲ್ಲಿದೆ. ಆಕೆಯ ಜಾತಿಯ ... ಇಲ್ಲಿ ದ್ವಿತೀಯ ಬಹುಸಂಖ್ಯಾತರು. ಸಾಂಪ್ರದಾಯಿಕ ... ಮತದಾರರಾದ ಅಲ್ಪ ಸಂಖ್ಯಾತರು ದೊಡ್ಡ ಸಂಖ್ಯೆಯ... ಕಾಂಗ್ರೆಸ್‌ನಲ್ಲಿ ಭಿನ್ನಮತ ಕಡಿಮೆಯಾಗಿದೆ. ಇದೆಲ್ಲ... ಅಕ್ಕನ ಗೆಲುವನ್ನು ನಿಚ್ಚಳಗೊಳಿಸಿದೆ. ಕಲ್ಲಡ್ಕ ... ಷಡ್ಯಂತ್ರದಿಂದ ಕೆರಳಿರುವ ಪುತ್ತೂರಿಗರು ಬಿ... ಬುರ್ನಾಸ್ ಆಡಳಿತದಿಂದ ಬೇಸತ್ತಿದ್ದಾರೆ. ಒಟ್ಟಿನ... ಚಮತ್ಕಾರ ಏನೇ ನಡೆದರೂ ಬಣ್ಣಗೆಟ್ಟ ಬಿಜೆ... ಬಾರಿ ಪುತ್ತೂರಲ್ಲಿ ಗೆಲ್ಲಲಾರದು. ಕೆಜೆಪಿಯ ರಿ... ರಾಣಿ ಶೋಭಾ ಕರಂದ್ಲಾಜೆಯ ರಹಸ್ಯ ಸಪೋರ್ಟ್ ... ಒಟ್ಟಿನಲ್ಲಿ ಶಕು ಅಕ್ಕನಿಗೆ ಎಲ್ಲ ಕಡೆಯಿಂದ ಶುಭ ಸಂಕೇ... ಸಿಗುತ್ತಿದೆ.

ಸುಳ್ಯ: ಸಮಬಲದ ಸಮರ

ಸುಳ್ಯ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ. ಆದ... ಬಲಾಢ್ಯ ಅರೆಬಾಸೆ ಗೌಡರದೇ ದರ್ಬಾರು. ... ಇರಲಿ, ಬಿಜೆಪಿ ಇರಲಿ, ಜೆಡಿಎಸ್ಸೇ ಆಗಿರಲಿ ಸೂತ್ರ... ಗೌಡರ ಗೌಡರು! ಹಾಗೆಯೇ ಸಂಘ ಪರಿವಾರದ ... ನೆಟ್‌ವರ್ಕ್ ಸುಳ್ಯದ ಹಳ್ಳಿ-ಹಳ್ಳಿಗಳಲ್ಲಿ ವ್ಯಾಪಿಸಿದೆ... ಕಾವಿ ಸಂಘಟನೆ ಎಷ್ಟು ಪ್ರಬಲವಾಗಿದೆಯೋ ... ಬೇಸರ-ಬೇಗುದಿ ಬಿಜೆಪಿ ಮೇಲೆ ಮತದಾರರಿಗ...

ಹಾಗಾಗಿ ಸತತ ನಾಲ್ಕು ಬಾರಿ ಶಾಸಕನಾದ ಬಿ... ಎಸ್. ಅಂಗಾರ್‌ಗೆ ಈ ಬಾರಿ ಯುದ್ಧ ಗೆಲ್ಲುವುದು ... ಕಠಿಣವಾಗಿದೆ. ಆತ ಬಲಿತ ದಲಿತರಾಗಿದ್ದಾರೆ. ಎ... ಕಾರು, ಬಂಗಲೆ, ಅಡಿಕೆ ತೋಟ ಮಾಡಿಕ... ಹಾಯಾಗಿದ್ದಾರೆ. ಕಷ್ಟದಲ್ಲಿದ್ದ ಜನರಿಗೆ ಆತ ಸ್ಪಂದಿ... ಅಭಿವೃದ್ಧಿಗಾಗಿ ಚಿಂತಿಸಿದ್ದಿಲ್ಲ ಎಂಬ ಆರೋಪ ಅಂಗ... ಹೈರಾಣಾಗಿಸಿದೆ. ಆತ ವೈಯಕ್ತಿಕ ಚರಿಷ್ಮಾ ಇಲ್ಲ... ಗ್ಯಾಂಗ್‌ನ ಕುತಂತ್ರಗಾರಿಯನ್ನಷ್ಟೇ ನಂಬಿ ಕೂ... ಉಮೇದುವಾರ. ಆತನಿಗೆ ಸತತ ನಾಲ್ಕು ಗೆಲುವ... ಭಾರವಾಗಿದೆ.

ಅಂಗಾರಗೆ ಸೆಡ್ಡು ಹೊಡೆದಿರುವ ಕಾಂಗ್ರೆಸ್... ಬಿ.ರಘು ಶಾಸಕನಾಗುವ ಸಕಲ ಅರ್ಹತೆ ಇರುವ... ದಲಿತ. ಆತ ಕ್ಯಾನ್ಸರ್ ವೈದ್ಯನಾಗಿ ಸುಳ್ಯದಾದ್ಯಂತ ಜ... ಕಳೆದೆರಡು ಎಲೆಕ್ಷನ್‌ನಲ್ಲಿ ಸೋತಿರುವ ರಘು ಬಗ್ಗೆ ... ಅನುಕಂಪದ ಅಲೆ ಎದ್ದಿದೆ. ಒಳ್ಳೆಯವರು, ... ಕ್ಷೇತ್ರಕ್ಕೇನಾದರೂ ಒಳ್ಳೆಯದು ಮಾಡಬಹುದು, ... ದೂರದೃಷ್ಟಿಯ ಮನುಷ್ಯ ಎಂಬ ಭಾವನೆ ಮತದಾ... ಕಳೆದ ಬಾರಿ ಆತ ಕೇವಲ 4 ಸಾವಿರ ಮತದಂ... ಸೋತಿದ್ದರು. ಈ ಬಾರಿ ಆ್ಯಂಟಿ ಬಿಜೆಪಿ ಗಾ... ಅಂಗಾರ ಬಗ್ಗೆ ಜಿಗುಪ್ಸೆಯಿದೆ. ಜೆಡಿಎಸ್ ಕ್ಯಾಂ... ನಿವೃತ್ತ ಪೋಸ್ಟ್ ಮಾಸ್ಟರ್ ನಂದರಾಜ್ ಸಂಕೇಶ್... ಬುಟ್ಟಿಗೆ ಕೈಹಾಕಲಿದ್ದಾರೆ. ಇದೆಲ್ಲ ಕಾಂಗ್ರೆಸ್‌ಗೆ... ಆದರೂ ಬಿಜೆಪಿ ಸುಳ್ಯವನ್ನು ಕೋಮುವಾ... ಗೊಳಿಸಿಕೊಂಡಿರುವ ಧೈರ್ಯದಲ್ಲಿದೆ. ಮಾಜಿ ಸಿ... ತನ್ನ ತವರೂರಾದ ಸುಳ್ಯದಲ್ಲಿ ಬಿಜೆಪಿ ಗೆ... ಹಠದಲ್ಲಿದ್ದಾರೆ. ಹೀಗಾಗಿ ಇಲ್ಲಿ ಫೋಟೋ ... ಫಲಿತಾಂಶ ಬರಲಿದೆ.

ಬೆಳ್ತಂಗಡಿ: ಬಂಗೇರಾಗೆ ಭಾಗ...

ಬಿಜೆಪಿಯೂ ಸೇರಿದಂತೆ ವಿವಿಧ ಪಕ್ಷಗಳಿಂದ... ಬಾರಿ ಶಾಸಕನಾಗಿರುವ ವಸಂತ ಬಂಗೇರ ...

ಂಗಣದಲ್ಲಿ ಎಂದಿಗೂ ಗಟ್ಟಿ ಜಗಜಟ್ಟಿ! ಬಿಂದ ಮತ್ತೊಮ್ಮೆ ಅಖಾಡಕ್ಕೆ ಇಳಿದಿರುವ ಶಾಸಕ ಒರಟನಾದರೂ ಹೃದಯವಂತ, ಕೆಲಸಗಾರ, ಬಡವರಿಗೆ- ನೊಂದವರಿಗೆ ತಕ್ಷಣಕ್ಕೆ ಕೈಗೆ ಮ್ಮೆಲ್ಲೆ ಎಂಬ ಇಮೇಜು ಇರುವಾತ. ಕ್ಷೇತ್ರದಲ್ಲಿನ ಕ್ಟರ್ ಕೂಡ ಬಂಗೇರಾಗೆ ಅನುಕೂಲಕರವಾಗಿದೆ. ಲ್ಲವರೇ ಸುಮಾರು 45 ಸಾವಿರದಷ್ಟಿರುವುದರ ಅಲ್ಪಸಂಖ್ಯಾತ ಮುಸ್ಲಿಮ್-ಕ್ರಿಶ್ಚಿಯನ್ನರ ವಿಶ್ವಾಸ ವುದು ಬಂಗೇರರ ಗೆಲುವು ಸುಲಭಗೊಳಿಸಿದೆ. ಬಲಾಢ್ಯ ಬಂಗೇರ ಎದುರು ಕ್ಯಾಂಡಿಡೇಟ್‌ಗಾಗಿ ಕೊನೆಯ ಕ್ಷಣದ ತನಕ ತಡಕಾಡಿದ-ತಿಣುಕಾಡಿದ ಕಿಂಗ್ ಕಲ್ಲಡ್ಕ ಪ್ರಭಾಕರ ಭಟ್ಟನಿಗೆ ಕೊನೆಗೂ ರಂಜನ್ ಗೌಡ ಎಂಬ ಅಧಿಕಪ್ರಸಂಗಿ-ಅಡ್ನಾಡಿ ಈ ರಂಜನ್ ಮಾಜಿ ಮಂತ್ರಿ ಗಂಗಾಧರಗೌಡರ ಕ್ಷೇತ್ರದಲ್ಲಿ ಸುಮಾರು 38 ಸಾವಿರದಷ್ಟಿರುವ ತರುಣನೊಬ್ಬ ಕಾರಣಕ್ಕೆ ಕ್ಯಾಂಡಿಡೇಟಾಗಿ ನ್ನು ಆಯ್ಕೆ ಮಾಡಿರುವ ಭಟ್ಟರು ಆತನ ಬಳಿ ಾಸಿರುವುದನ್ನು ಕಂಡುಕೊಂಡಿದ್ದರು. ರಂಜನ್‌ನ

ಹೀಗಾಗಿ ಹಲವು ಎಲೆಕ್ಷನ್ ಪಟ್ಟು ಗೊತ್ತಿರುವ, ಕ್ಷೇತ್ರದ ಮೂಲೆ-ಮೂಲೆ ಅರಿತಿರುವ ಅಭಯನಿಗೆ ಗೆಲುವು ನಿರಾತಂಕ.


ಕಾಪು: ಸೊರಕೆಗೆ ಛಾನ್ಸ್!

ಕಾಪು ಹೇಳಿ-ಕೇಳಿ ಕಾಂಗ್ರೆಸ್ ಬಿಲ್ಲವರು, ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ಒಂದಾದರೆ ಸಾಕು, ಇಲ್ಲಿ ಬಿಜೆಪಿ ಬರುವ ಛಾನ್ಸೇ ಇಲ್ಲ. ಆದರೆ ಮೊಯ್ಲಿ ಮಹಾತ್ಮರ ಕಾಲದ ವಸಂತ ಸಾಲಿಯಾನ್ ಮೇಲೆ ಕ್ಷೇತ್ರದ ಬಿಲ್ಲವ ಮತ್ತು ಅಲ್ಪಸಂಖ್ಯಾತರಿಗೆ ಮಡುಗಟ್ಟಿದ್ದ ಸಿಟ್ಟು ಅನಾಯಾಸವಾಗಿ ಎರಡು ಬಾರಿ ಬಿಜೆಪಿಯ ಅಬ್ಬೇಪಾರಿ ಲಾಲಾಜಿ ಮೆಂಡನ್‌ನನ್ನು ಗೆಲ್ಲಿಸಿತ್ತು. ಹೊಲಸು ನಾಲಿಗೆಯ, ನಿದ್ದೆ ಬಡುಕ, ದಢೂತಿ ಸಾಲಿಯಾನ್ ಕಾಂಗ್ರೆಸ್‌ಗೆ ಕಂಟಕಕಾರಿ ಎಂದು ಈಗ ಆ ಪಾರ್ಟಿಯ ಹೈಕಮಾಂಡ್‌ಗೆ ತಡವಾಗಿ ಅರ್ಥವಾಗಿದೆ. ಹಾಗಾಗಿ ಡೈನಮಿಕ್ ವಿನಯಕುಮಾರ್ ಸೊರಕೆಗೆ ಕಾಂಗ್ರೆಸ್ ಟಿಕೆಟ್ ಕೊಟ್ಟು ಸಾಲಿಯಾನ್‌ಗೆ ಕಿಕ್ ಮಾಡಿದೆ!


ಸಾಲಿಯಾನ್ ಬಂಡಾಯವೆದ್ದು ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಹೋದ ಹೋದಲ್ಲಿ 'ಕಾಂಗ್ರೆನಿಂದ ಮೋಸ-

ಹೊಡೆಯುತ್ತಿದೆ. ಭಂಡಾರಿ ಅತೀ ಅಲ್ಪಸಂಖ್ಯಾತ ಕ್ಷೌರಿಕ ಕಮ್ಯುನಿಟಿಯ ವರು. ಆದರೆ ಕ್ಷೇತ್ರದ ಬಹುಸಂಖ್ಯಾತ ಬಿಲ್ಲವರು, ಬಂಟರು, ಕ್ರಿಶ್ಚಿಯನ್ ಮತ್ತು ಮುಸ್ಲಿಮರು ಭಂಡಾರಿಯನ್ನು ತಮ್ಮವನೆಂದು ಭಾವಿಸಿದ್ದಾರೆ. ಈತ ಸುನೀಲ್‌ನಂತ ಒರಟನಲ್ಲ, ಅನಾಹುತಕಾರಿ ಮತಾಂಧನಲ್ಲ, ಅಧಿಕಾರಿಗಳನ್ನು ಸುನೀಲ್‌ನಂತೆ ಬೆದರಿಸದೆ ಪ್ರೀತಿ, ಸೌಜನ್ಯದಿಂದ ಜನರ ಕೆಲಸ ಮಾಡಿಸುತ್ತಾರೆ. ಸುನೀಲ್ ಒಂದೇ ಬಾರಿ ಶಾಸಕನಾದರೂ ಭರ್ಜರಿ ಆಸ್ತಿ-ಲಾರಿ-ಬಂಗ್ಲೆ-ಕಾರು ಮಾಡಿಕೊಂಡಿದ್ದಾನೆ. ಭಂಡಾರಿ ಎರಡು ಸಲ ಶಾಸಕನಾದರೂ ಸರಳತೆಯಿಂದ ಜೀವಿಸುತ್ತಿದ್ದಾರೆ. ಯಾವ ಹಮ್ಮುಬಿಮ್ಮಿಲ್ಲದೆ ಜನರೊಂದಿಗೆ ಬೆರೆವ ಭಂಡಾರಿ ಮತ್ತು ಹುಂಬ ಸುನೀಲ್ ನಡುವಿನ ವ್ಯತ್ಯಾಸ ಮತದಾರರಿಗೆ ಗೊತ್ತಾಗಿದೆ. ಭಂಡಾರಿ ಕೆಲಸಗಾರ; ಸುನೀಲ್ ಕರ್ಮಗೇಡಿ.


ಬಿಜೆಪಿಗೆ ಕಟ್ಟಾ ಮತದಾರರಾದ ಕೊಂಕಣಿಗಳಿಗೇ ಸುನೀಲ್‌ನನ್ನು ಕಂಡರಾಗದು. ಒಡಹುಟ್ಟಿದ ಅಣ್ಣನಿಗೆ ಸುನೀಲ್ ಸ್ಟೈಲ್ ಸರಿ ಕಾಣಿಸದು. ಇಷ್ಟೆಲ್ಲ ಅನಾನುಕೂಲದ ನಡುವೆಯೂ ಬಿಜೆಪಿಗೆ ಮತಾಂಧ ಕಾರ್ಯಕರ್ತರ ಪಡೆ ಇದೆ. ಅದು ಹಳ್ಳಿಗಳಲ್ಲಿ ಭಂಡಾರಿ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಆದರೆ ಭಂಡಾರಿ ತನ್ನ ಸಜ್ಜನಿಕೆ-ಅಭಿವೃದ್ಧಿ




ಮಾನಾಥ್ ರೈ




ಶಕುಂತಲಾ ಶೆಟ್ಟಿ



ಸಂಜೀವ್ ಮಠಂದೂರ್




ಅಂಗಾರ




ಡಾ.ರಘು




ಮೋದ್ ಮಧ್ವರಾಜ್




ಸುಧಾಕರ್ ಶೆಟ್ಟಿ



ಹಾಲಾಡಿ ಶ್ರೀನಿವಾಸ್ ಶೆಟ್ಟಿ



ಸುಕುಮಾರ್ ಶೆಟ್ಟಿ



ಗೋಪಾಲ್ ಪೂಜಾರಿ

ಾಧರ ಗೌಡರಿಗಿಂತ ಮಗನೇ ಬೆಟರ್ ಎಂದು ಭಟ್ಟರು ಟಿಕೆಟ್ ಸೇಲ್ ಮಾಡಿರುವುದು ರಹಸ್ಯ.

ಂಟ್ ಸೀಟು ಪಡೆದಿರುವ ರಂಜನ್ ಗೌಡ ಉಂಡಾಡಿ ಗುಂಡಣ್ಣರನ್ನು ಕಟ್ಟಿಕೊಂಡು ್ ಮ್ಯಾಚ್ ನಡೆಸಿದ್ದು ಬಿಟ್ಟರೆ ಬೆಳ್ತಂಗಡಿಯ ಮತ್ತೇನೂ ಮಾಡಿಲ್ಲ. ಬೆಳ್ತಂಗಡಿಯ ರಾಜಕೀಯ-‑ಸಾಂಸ್ಕೃತಿಕ-ಧಾರ್ಮಿಕ ಕ್ಷೇತ್ರದಲ್ಲೆಲ್ಲೂ ಈತ ಂಡವನೂ ಅಲ್ಲ. ಈತ ಪಕ್ಕಾ ಲಾಭಕೋರ ಬಿಸಿನೆಸ್‌ಮನ್. ರಂಜನ್ ಮತ್ತವನ ಅಪ್ಪ ನಡೆಸುವ ಸಂಸ್ಥೆಗಳಲ್ಲಿ ಆರೆಸ್ಸೆಸ್ ಛಾಟು ಜಾಸ್ತಿ. ಈತನ ಮೊನ್ನೆ ಚುನಾವಣಾ ಆಯೋಗಕ್ಕೆ ಅಫಿಡವಿಡ್ ತನಕವೂ ರಹಸ್ಯವಾಗಿದ್ದದ್ದು ಈಗ ಅನೇಕಾನೇಕ ನಗಳನ್ನು ಮೂಡಿಸಿದೆ. ಈತ ಗೆದ್ದರೆ ರೌಡಿಸಂ ಬಡವರಿಗೆ ಈತ ಕೈಗೆ ಸಿಗದ ಹೈ-ಪೈ ಪುಢಾರಿ ಭಿಪ್ರಾಯವಿದೆ. ಹಿರಿಯ ರಾಜಕಾರಣಿ ಬಂಗೇರ ನಿಲ್ಲುವ ಕ್ಯಾಂಡಿಡೇಟಾ ಇದು? ಎಂದು ಜನ ಕೊಳ್ಳುತ್ತಿದ್ದಾರೆ. ಕ್ಷೇತ್ರದಲ್ಲಿನ ಸ್ಥಿತಿ-ಗತಿ ಗಮನಿಸಿದರೆ ಂಗೇರಾ ಭಾಗ್ಯ ಖುಲಾಯಿಸುವ ಸೂಚನೆಗಳು ಸುತ್ತವೆ.

ೂಡಬಿದರೆ: 'ಅಭಯ' ಜೈನ್

ಮೂರು ಸಲ ಮೂಲ್ಕಿ-ಮೂಡಬಿದರೆ ಂದ ಶಾಸಕನಾಗಿರುವ ಅಲ್ಪಸಂಖ್ಯಾತ ದಾಯದ ಅಭಯಚಂದ್ರ ಜೈನ್ ನಾಲ್ಕನೇ ಅಣಿಯಾಗಿದ್ದಾರೆ. ಈತ ವೈಯಕ್ತಿಕ ಚರಿಷ್ಮಾ ಜಕಾರಣಿ. ಕ್ಷೇತ್ರದಲ್ಲಿ ಬಹುಸಂಖ್ಯಾತರು ಬಿಲ್ಲವರು ರು). ನಂತರದ ಸ್ಥಾನ ಕ್ರಿಶ್ಚಿಯನ್, ಮುಸ್ಲಿಮ್, . ಅಭಯನ ಜಾತಿ ಮತ ತೀರಾ ಕಡಿಮೆ. ಈತ ಬಹುಸಂಖ್ಯಾತ ಜಾತಿಯ ಹುರಿಯಾಳನ್ನು ಲ್ಲುತ್ತಾ ಬಂದಿದ್ದಾರೆ. ಇದಕ್ಕೆ ಆತನ ಜನ ಸ್ಪಂದನ, ಾಡುವ ಧಾಡಸಿತನ, ಕಂಬಳ ಕರಾಮತ್ತುಗಳೇ ರಣ.

ಕರಾವಳಿಯಲ್ಲಿ ಒಮ್ಮೆಯೂ ಬಿಜೆಪಿ ಗೆಲ್ಲದ ರೆ ಈ ಮೂಡಬಿದರೆ. ಈ ಬಾರಿ ಬಿಲ್ಲವರ ಥ ಕೋಟ್ಯಾನ್‌ಗೆ ಬಿಜೆಪಿ ಟಿಕೆಟ್ ಕೊಟ್ಟಿದೆ. ರಿಚಯವೇ ಕ್ಷೇತ್ರದ ಜನರಿಗಿಲ್ಲ, ತುಳು ಸಾಹಿತ್ಯ ಯ ಅಧ್ಯಕ್ಷನಾದ ಕೋಟ್ಯಾನ್‌ಗಿಂತ ಜೆಡಿಎಸ್‌ನ ಳ-ಮಾಜಿ ಮಂತ್ರಿ ಅಮರನಾಥ ಶೆಟ್ಟಿ ರು. ಆದರೆ ಆತನಿಗೆ ವಯಸ್ಸು-ಆರೋಗ್ಯ ತ್ತಿಲ್ಲ. ಮೂಡಬಿದರೆಯಲ್ಲಿ ಬಿಜೆಪಿ-ಜೆಡಿಎಸ್ ಕಾಂಗ್ರೆಸ್‌ಗೆ ಹೋಲಿಸಿದರೆ ತೀರಾ ವೀಕ್.

ಮೋಸ' ಎಂದು ಕೂಗುತ್ತಿದ್ದಾರೆ. 'ಎರಡು ಬಾರಿ ಮಂತ್ರಿ-ಮೂರು ಬಾರಿ ಶಾಸಕ ಕಾಂಗ್ರೆಸ್ ಅಲ್ಲವಾ ನಿಮ್ಮನ್ನು ಮಾಡಿದ್ದು' ಎಂದು ಕೇಳಿದರೆ ಕೆರಳುತ್ತಾರೆ. ಈತನಿಗೆ ಅರಳುಮರಳು ಎಂದು ಸ್ವಜಾತಿ ಬಿಲ್ಲವರೂ ದೂರವಾಗಿದ್ದಾರೆ. ಸೊರಕೆ ಉಡುಪಿಯ ಎಂಪಿಯಾಗಿದ್ದಾಗ ಆತನ ಕಾರ್ಯವೈಖರಿ ಕಂಡ ಕಾಪು ಜನರು ಆತನೇ ಶಾಸಕನಾಗಲಿ ಎಂದು ಭಾವಿಸಿದ್ದಾರೆ. ಸೊರಕೆಗೆ ಆತನ ನಯವಿನಯ-ಜನಸ್ಪಂದನೆ-ಅಭಿವೃದ್ಧಿ ಪರ ಕಾಳಜಿ ಪ್ಲಸ್ ಆಗಿದೆ. ಕ್ಷೇತ್ರದಲ್ಲಿನ ಜಾತಿ ಸಮೀಕರಣ ಕೂಡ ಕಾಂಗ್ರೆಸ್‌ಗೆ ನೆರವಾಗಿದೆ.

ಹಾಲಿ ಶಾಸಕ-ಬಿಜೆಪಿ ಕ್ಯಾಂಡಿಡೇಟ್ ಲಾಲಾಜಿ ಮೆಂಡನ್‌ನ ಮಸಲತ್ತುಗಳು ಜನರಲ್ಲಿ ಸಿಟ್ಟು ಮೂಡಿಸಿದೆ. ನಾಗಾರ್ಜುನ ಥರ್ಮಲ್ ಪ್ರಾಜೆಕ್ಟ್ ಪರ ನಿಂತು ಮೀನುಗಾರರಿಗೆ-ರೈತರಿಗೆ ಮೆಂಡನ್ ಅನ್ಯಾಯ ಮಾಡಿರುವುದು ಈಗಾತನಿಗೆ ಗಂಡಾಂತರ ತಂದಿಟ್ಟಿದೆ. ಹಾಗೆಯೇ ಸ್ವಜಾತಿ ಮೀನುಗಾರರಿಗೂ 2 ಲಕ್ಷದ ಪರಿಹಾರದ ಪೊಳ್ಳು ಭರವಸೆ ನೀಡಿ ಯಾಮಾರಿಸಿದ್ದು, ಉಚ್ಚಿಲ ರುದ್ರಭೂಮಿ ವಿವಾದ, ಕಳಪೆ ರಸ್ತೆ ಕಾಮಗಾರಿ, ಕೊಪ್ಪಲಂಗಡಿ ಮಸೀದಿ ವಿವಾದ, ಹೊಯ್ಗೆ ಸ್ವಾಹಾ, ಭ್ರಷ್ಟಾಚಾರಗಳು ಲಾಲಾಜಿಯನ್ನು ಮಾಜಿ ಮಾಡಲು ಮತದಾರರನ್ನು ಪ್ರಚೋದಿಸುತ್ತಿವೆ. ಜೊತೆಗೆ ಬಿಜೆಪಿಯ ದುರಾಡಳಿತ-ಭಂಡಾಟ ಆ ಪಾರ್ಟಿಗೆ ಡ್ಯಾಮೇಜ್ ಮಾಡಿದೆ. ಅಧಿಕ ಪ್ರಸಂಗಿ ಲಾಲಾಜಿಗಿಂತ ಜನರೊಂದಿಗೆ ಸರಳವಾಗಿ ಬೆರೆವ, ಅವರ ಕಷ್ಟ-ಸುಖಕ್ಕೆ ಸ್ಪಂದಿಸುವ ಸೊರಕೆಯೇ ಬೆಟರ್ ಎಂದು ಮತದಾರರು ನಿರ್ಧರಿಸಿದ್ದಾರೆ. ಇಲ್ಲಿ ಬಿಜೆಪಿ-ಕಾಂಗ್ರೆಸ್ ನೇರಾನೇರ ಕಾಳಗದಲ್ಲಿ ಜೆಡಿಎಸ್‌ನ ಸಾಲಿಯಾನ್ ಠೇವಣಿ ಉಳಿಸಿಕೊಳ್ಳೋದೆ ಕಷ್ಟ. ಗೆಲುವಂತೂ ಜನಾಕರ್ಷಕ ವ್ಯಕ್ತಿತ್ವದ ವಿನಯಕುಮಾರ್ ಸೊರಕೆಗೆ ಗ್ಯಾರಂಟಿ.

ಕಾರ್ಕಳ: ಸಜ್ಜನ V/s ಸೋಗಲಾಡಿ

ಕಾರ್ಕಳದಲ್ಲಿ ಕಾಂಗ್ರೆಸ್‌ನ ಸಜ್ಜನ-ಸರಳ ಶಾಸಕ ಎಚ್.ಗೋಪಾಲ ಭಂಡಾರಿ ಮತ್ತು ಬಿಜೆಪಿಯ ಭಯಾನಕ ಭಜರಂಗಿ ವಿ. ಸುನೀಲ್‌ಕುಮಾರ್ ಮುಖಾ-ಮುಖಿಯಾಗಿ ನಿಂತಿದ್ದಾರೆ. ಈ ಸಮ ಶಕ್ತಿ-ಸಾಮರ್ಥ್ಯದ ಕಾಳಗದಲ್ಲಿ ಜಾತಿ ಸಮೀಕರಣಗಳು ದಿನಕ್ಕೊಂದು ಆಯಾಮ ಪಡೆಯುತ್ತಿದೆ. 2004ರಲ್ಲಿ ತಾನು ಬಿಲ್ಲವ ಭೂಪನೆಂದು ಪೋಸು ಕೊಡುತ್ತ ಒಂದು ಕ್ಷೇತ್ರದ ಬಹುಸಂಖ್ಯಾತ ಬಿಲ್ಲವರ ದಾರಿ ತಪ್ಪಿಸಿದ್ದ 'ಅರೆ ಬಿಲ್ಲವ' ಸುನೀಲ್‌ನ ಬಣ್ಣ 2008ರ ಚುನಾವಣೆಯಲ್ಲಿ ಬಯಲಾಗಿತ್ತು, ಈ ಮತದ್ವೇ ಬಿಲ್ಲವ ಟ್ರಾಂಪ್ ಕಾರ್ಡ್ ಎಸೆಯುತ್ತಿರುವ ಸುನೀಲ್ ಎದುರಾಳಿ ಗೋಪಾಲ ಭಂಡಾರಿಯ ಜನಪ್ರಿಯತೆ ಸುನೀಲನಲ್ಲಿ ನಡುಕ ಮೂಡಿಸಿದೆ. ಸುನೀಲ್‌ಗೆ ಜಾತಿ ಲೆಕ್ಕಾಚಾರ ಉಲ್ಟಾ

ಈಶ್ಯೂಗಳನ್ನಿಟ್ಟು ಮತ ಕೇಳುತ್ತಿದ್ದಾರೆ. ಗೆಲ್ಲುವ ಅವಕಾಶ ಒಂಚೂರು ಭಂಡಾರಿಗೇ ಹೆಚ್ಚಿದೆ.

ಉಡುಪಿ: ಗೆಲ್ಲುವ ಪ್ರಮೋದ್ ಮಧ್ವರಾಜ್

ಉಡುಪಿ ಕ್ಷೇತ್ರದಲ್ಲಿ ಎತ್ತಿಂದೆತ್ತ ಲೆಕ್ಕಹಾಕಿದರೂ ಕಾಂಗ್ರೆಸ್‌ನ ಜನಾನುರಾಗಿ ತರುಣ ಪ್ರಮೋದ್ ಮಧ್ವರಾಜ್ ಗೆಲ್ಲುವ ಸಾಧ್ಯತೆಗಳೇ ಕಾಣಿಸುತ್ತಿದೆ. ಕಳೆದ ಬಾರಿ ಬಿಜೆಪಿಯ ಬುರ್ನಾಸ್ ರಘುಪತಿ ಭಟ್ಟನ ವಿರುದ್ಧ ಆತ ಕೇವಲ ಎರಡೂವರೆ ಸಾವಿರ ಮತದಂತರದಿಂದ ಸೋತಿದ್ದರು. ಈ ಬಾರಿ ಭಟ್ಟನೆ ಬಿಜೆಪಿ ಕ್ಯಾಂಡಿಡೇಟಾಗಿದ್ದರೆ ಪ್ರಮೋದ್ ಪ್ರಚಾರ ಮಾಡುವುದೇ ಬೇಡಾಗಿತ್ತು, ಆದರೆ ಸೆಕ್ಸ್ ಸಿಡಿಯಲ್ಲಿ ಬೆತ್ತಲಾಗಿ ಸಿಕ್ಕಿಬಿದ್ದ ಭಟ್ಟನನ್ನು ಆರೆಸ್ಸೆಸ್ ಒದ್ದು ಓಡಿಸಿತು. ಹೋಟೆಲ್ ಉದ್ಯಮಿ ಸುಧಾಕರ್ ಶೆಟ್ಟಿಯನ್ನು ಬಿಜೆಪಿ ಅಖಾಡಕ್ಕೆ ತಳ್ಳಿದೆ. ತಾನು ಗೆಲ್ಲುವುದಿಲ್ಲ ಎಂದು ಗೊತ್ತಾಗಿರುವ ಶೆಟ್ಟಿ ಒಲ್ಲದ ಮನಸ್ಸಿಂದ ಪ್ರಚಾರ ಮಾಡುತ್ತಿದ್ದಾರೆ. ಜಿಪಂ-ತಾಪಂ-ನಗರಸಭೆ ಎಲೆಕ್ಷನ್‌ನಲ್ಲಿ ಬಿಜೆಪಿ ಉಡುಪಿ ಕ್ಷೇತ್ರದ ವ್ಯಾಪ್ತಿಯಲ್ಲಿ ಮಕಾಡೆ ಮಲಗಿದೆ. ಅನಾಹುತಕಾರಿ ಹಿಂದುತ್ವ, ಅತಿರೇಕದ ಅನೈತಿಕ ಪೊಲೀಸ್‌ಗಿರಿ, ಕಾವಿಗಳ ಕೊಳಕು ರಾಜಕಾರಣ, ರತಿರಂಗಿಳೆಯ ರಘುಪತಿ ಭಟ್ಟನ ಪರ ಪೇಜಾವರರು ಮಾಡಿದ ವಕಾಲತ್ತು, ಬಿಜೆಪಿಯ ಐದು ವರ್ಷ ದುರಾಡಳಿತ, ಆರೆಸ್ಸೆಸ್ ಡಾನ್‌ಗಳ ಸುಲಿಗೆಯಿಂದ ಉಡುಪಿ ಜನರಿಗೆ ಬಿಜೆಪಿ ಎಂದರೆ ವಾಕರಿಕೆ ಬರುವಂತಾಗಿದೆ. ಕಳೆದ ಬಾರಿ ಸೋತ ಪ್ರಮೋದ್ ಮಧ್ವರಾಜ್ ಕ್ಷೇತ್ರಕ್ಕೆ ಬೆನ್ನು ಹಾಕಿ ಹೋಗಲಿಲ್ಲ. ಬದಲಿಗೆ ಗೆದ್ದ ಭಟ್ಟನೇ ತೆವಲು ತೀರಿಕೆಯಲ್ಲಿ ತಲ್ಲೀನನಾಗಿ ಕ್ಷೇತ್ರ ಕಡೆಗಣಿಸಿದ್ದ, ರೇವ್ ಪಾರ್ಟಿ ಮಾಡಿದ, ಹೆಂಡತಿ ಸಾಯುವಂತೆ ಮಾಡಿದ, ಎದುರು ಸಿಕ್ಕಿದ್ದೆಲ್ಲ ಮುಕ್ಕಿದ.

ಇದಕ್ಕೆ ಸಮಾನಾಂತರವಾಗಿ ಪ್ರಮೋದ್ ತನ್ನ ಮೀನು ಉದ್ಯಮದಿಂದ ಬಂದ ಲಾಭವನ್ನು ಕ್ಷೇತ್ರದ ಬಡವರಿಗೆ-ನೊಂದವರಿಗೆ-ರೋಗಿಗಳಿಗೆ-ವಿದ್ಯಾರ್ಥಿಗಳಿಗೆ ಹಂಚುತ್ತ ಹೋದರು. ಉಡುಪಿ-ಬ್ರಹ್ಮಾವರ ಭಾಗದ ಶೇಕಡ 75 ಅಸಹಾಯಕರು ಪ್ರಮೋದ್‌ನ ಮಾನವೀಯತೆಯ ಪ್ರಯೋಜನ ಪಡೆದರು. ಇವೆಲ್ಲ ಈಗ ಆತನಿಗೆ ಓಟಾಗಿ ಎನ್‌ಕ್ಯಾಶ್ ಆಗುವ ಸಾಧ್ಯತೆಯಿದೆ. ಹಿಂದೆರಡು ಬಾರಿ ಸೋತಿರುವ ಪ್ರಮೋದ್ ಬಗ್ಗೆ ಜನರಲ್ಲಿ ಸಿಂಪಥಿ ಇದೆ. ಜಾತಿ ಲೆಕ್ಕಾಚಾರ ಮಾಡದೆ ಕ್ಷೇತ್ರದ ಎಲ್ಲಾ ಜಾತಿ-ಸಮುದಾಯದ ಪ್ರೀತಿ ಗಳಿಸಿದ್ದಾರೆ. ಬ್ರಹ್ಮಾವರ ಭಾಗದಲ್ಲಿ ಆತನಿಗೆ ಮುಕ್ಕಾಲು ಪಾಲು ಓಟು ಬರಲಿದೆ. ಉಡುಪಿ ನಗರದಲ್ಲಿ ಮೇಲ್ಕೈ ಕಾಂಗ್ರೆಸಿನದಾಗಲಿದೆ. ಇದೇ ಟ್ರೆಂಡ್ ಪ್ರಮೋದ್ ಮತ್ತವನ ಕಾಂಗ್ರೆಸ್ ಬಳಗ ಮತದಾನದ ದಿನದ ತನಕ ಕಾಯ್ದುಕೊಂಡರೆ 10-12 ಸಾವಿರ ಲೀಡ್‌ನಲ್ಲಿ ಗೆಲುವಾಗಲಿದೆ.

ಕುಂದಾಪುರ: ಹಾಲಾಡಿಗೆ ಹೆದರಿಕೆ

ಕುಂದಾಪುರ ಕುತೂಹಲದ ಕಣ. ಬಿಜೆಪಿಯಿಂದ ಹ್ಯಾಟ್ರಿಕ್ ವಿಜಯ ಸಾಧಿಸಿದ್ದ ಹಾಲಾಡಿ ಶ್ರೀನಿವಾಸ ಶೆಟ್ಟಿ ಕರಾವಳಿ ಬಿಜೆಪಿ-ಆರೆಸ್ಸೆಸ್ ಡಾನ್-ಡಾಕೂಗಳಿಗೆ ಸೆಡ್ಡು ಹೊಡೆದು ಹೊರಬಂದು ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ತನ್ನನ್ನು ಧಿಕ್ಕರಿಸಿ ಹೋದ ಹಾಲಾಡಿಯನ್ನು ಸೋಲಿಸಲು ಕರಾವಳಿ ಬಿಜೆಪಿಯ ಪ್ರಖ್ಯಾತೀತ 'ಡಾಕ್ಟರ್' ಕಲ್ಲಡ್ಕಜೀ ಕಟ್ಟುನಿಟ್ಟಿನ ಫರ್ಮಾನನ್ನು ಭಜರಂಗಿ-ಚೆಡ್ಡಿ-ಕಾವಿ ಪಡೆಗೆ ಹೊರಡಿಸಿದ್ದಾನೆ: 'ಕಾಂಗ್ರೆಸ್ ಗೆದ್ದರೂ ತೊಂದರೆಯಿಲ್ಲ... ಆ ಹಾಲಾಡಿ ಗೆಲ್ಲಬಾರ್ದು' ಎಂದು ಕಟ್ಟಪ್ಪಣೆ ಮಾಡಿರುವ ಕಲ್ಲಡ್ಕ ಕಾಂಗ್ರೆಸ್‌ಗೆ ನೆರವಾಗಲೆಂದೇ ದುರ್ಬಲ ಕಿಶೋರ್ ಕುಮಾರ್ ಎಂಬ ಕಡಿಮೆ ಮತದ ಗಾಣಿಗ ಜಾತಿಯವನನ್ನು ಅಖಾಡಕ್ಕೆ ಇಳಿಸಿದ್ದಾನೆ. ಆತ ಆಜ್ಞಾನುಧಾರಿ ಸೇವಕ-ಮಂತ್ರಿ ಶ್ರೀನಿವಾಸ್ ಪೂಜಾರಿಯ ಸ್ವ-ಜಾತಿ ಬಿಲ್ಲವರ ಒಂದು ಮತವಿರುವ ಮನೆಗೂ ಹೋಗಿ ಹಾಲಾಡಿ ವಿರುದ್ಧ ಪ್ರಚಾರ ಯುದ್ಧ ನಡೆಸುತ್ತಿದ್ದಾರೆ.

ಹಾಲಾಡಿ ಮೇಲಿನ ಹಳೆ ಸೇಡು ತೀರಿಸಿಕೊಳ್ಳಲು ಇದೇ ಸರಿಯಾದ ಸಮಯವೆಂದು ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿ ರಣರಂಗಕ್ಕೆ ಧುಮುಕಿದ್ದಾರೆ. 1999ರಲ್ಲಿ ಹಾಲಾಡಿ ಎದುರು ಸೋತ ನಂತರ ನಾಪತ್ತೆಯಾಗಿದ್ದ ಪ್ರತಾಪ್ ಈಗ ಕಾಂಗ್ರೆಸ್ ಕ್ಯಾಂಡಿಡೇಟ್ ಮಲ್ಯಾಡಿ ಶಿವರಾಮ ಶೆಟ್ಟಿಯನ್ನು ಗೆಲ್ಲಿಸಲು ಹಗಲಿರುಳು ಬೆವರಿಳಿಸುತ್ತಿದ್ದಾರೆ. ಬಿಜೆಪಿ ಹೆಚ್ಚು ಮತ ಪಡೆದರೆ ಪಕ್ಷೇತರ ಹುರಿಯಾಳು ಹಾಲಾಡಿ ವೀಕ್ ಆಗುತ್ತ ಹೋಗುತ್ತಾರೆ, ಕಾಂಗ್ರೆಸ್ ಬಲಗೊಳ್ಳುತ್ತ ಹೋಗುತ್ತದೆ. ಕುಂದಾಪುರದ ಇಡೀ ಬಿಜೆಪಿ ಘಟಕ ಹಾಲಾಡಿ ಪರ ನಿಂತಿದೆ. ತಾಪಂ, ಜಿಪಂ, ಪುರಸಭೆಯ ಬಿಜೆಪಿ ಸದಸ್ಯರೆಲ್ಲ ಹಾಲಾಡಿ ಪರ ಪ್ರಚಾರ ಮಾಡುತ್ತಿದ್ದಾರೆ. ಆತನಿಗೆ ಬಿಜೆಪಿ ಮೋಸ ಮಾಡಿದೆ ಎಂಬ ಸಣ್ಣ ಸಿಂಪಥಿಯೂ ಇದೆ. ಆದರೂ ಹಾಲಾಡಿಗೆ ಭಯ ಕಾಡುತ್ತಿದೆ.

ಹಾಲಾಡಿ ಗೆಲ್ಲುವಷ್ಟು ಓಟು ಈ ಬಾರಿ ಬರುವುದು ಅನುಮಾನ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆಯಿದೆ. ಹಾಲಾಡಿ ಸಜ್ಜನ-ಸರಳ ನಿಜ. ಆದರೆ ಕೆಲಸಗಾರನಲ್ಲ, ವಿಫಲ ಶಾಸಕ. ಅಭಿವೃದ್ಧಿ ಮಾಡಿಲ್ಲ, ಇವನ ಸಹವಾಸ ಸಾಕು- ಎಂಬ ಅಭಿಪ್ರಾಯ ನಿಧಾನಕ್ಕೆ ಮೂಡುತ್ತಿದೆ. ಕಾಂಗ್ರೆಸ್‌ನ ಶಿವರಾಮ ಶೆಟ್ಟಿಯತ್ತ ಬಂಟರು ವಾಲುತ್ತಿದ್ದಾರೆ. ಮುಸ್ಲಿಮರು ಮುಂತಾದ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳು ಕ್ರೋಢೀಕರಣ ಆಗುತ್ತಿವೆ. ಇದು ಹಾಲಾಡಿಗೆ ಗಂಡಾಂತರಕಾರಿಯಾಗಿ ಕಾಡುತ್ತಿದೆ. ಹಾಲಾಡಿ V/s ಮಲ್ಯಾಡಿ (ಕಾಂಗ್ರೆಸ್) ನೇರ ಕಾಳಗದಲ್ಲಿ ಬಿಜೆಪಿ ಸೆಳೆವ ಮತಗಳೇ ಕಿಂಗ್ ಮೇಕರ್ ಕೆಲಸ ಮಾಡಲಿವೆ. ಸದ್ಯಕ್ಕೆ ಮಾಜಿ ಬಿಜೆಪಿಗ ಹಾಲಾಡಿ ಕಾಂಗ್ರೆಸ್‌ನ ಮಲ್ಯಾಡಿಗಿಂತ ಎರಡು-ಮೂರು ಪರ್ಸೆಂಟೇಜ್‌ನಷ್ಟೇ ಮುಂದಿದ್ದಾರೆ. ಫಲಿತಾಂಶ ಫೋಟೋ ಫಿನಿಶ್ ಆಗುವ ಸಾಧ್ಯತೆಯಿದೆ.

ಬೈಂದೂರು: ಕತ್ತುಕತ್ತಿನ 'ಹಣಾ'ಹಣಿ!

ಹಣದ ಹಣಾಹಣಿಯ ಕುಖ್ಯಾತಿಯ ಬೈಂದೂರಲ್ಲಿ ಈ ಬಾರಿಯೂ ಕುರುಡು ಕಾಂಚಾಣದ್ದೇ ಆರ್ಭಟ. ಕಾಂಗ್ರೆಸ್‌ನ ಹುರಿಯಾಳು-ಮಾಜಿ ಶಾಸಕ ಗೋಪಾಲ ಪೂಜಾರಿ ಮತ್ತು ಬಿಜೆಪಿಯ ಸುಕುಮಾರ ಶೆಟ್ಟಿ ಎಂಬ ದಗಲುಬಾಜಿ ದುಡ್ಡಿನ ಕುಳಗಳು ಗೆಲ್ಲಲು ಧನಾಧಾರಿತ ಕಸರತ್ತು ನಡೆಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಮೊನ್ನೆಯಷ್ಟೇ ಬಿಟ್ಟು ಬಿಜೆಪಿ ಸೇರಿರುವ ಸುಕುಮಾರ ಶೆಟ್ಟಿಗೆ ಗೋಪಾಲ ಪೂಜಾರಿ ಕಂಡರಾಗದು. ಕೊಲ್ಲೂರು ದೇವಳದ ಮ್ಯಾನೇಜಿಂಗ್ ಟ್ರಸ್ಟಿಯಾಗಲು ತನಗೆ ಅಡ್ಡಗಾಲು ಹಾಕಿದ ಬಿಲ್ಲವರ ಭೂಪ ಪೂಜಾರಿಯನ್ನು ಹೆಡೆಮುರಿ ಕಟ್ಟಲು ಬಂಟರ ಭುಜಬಲ ಪರಾಕ್ರಮಿ ಸುಕುಮಾರ ಶೆಟ್ಟಿ ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ. ಇದಕ್ಕಾತನಿಗೆ ಕಾಂಗ್ರೆಸ್ ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿಯ ಬೆಂಬಲವೂ ಸಿಕ್ಕಿದೆ. ಹೀಗಾಗಿ ಬೈಂದೂರು ಬಿಲ್ಲವ V/s ಬಂಟರ ಬಡಿದಾಟದ ರಣರಂಗದಂತಾಗಿದೆ.

ಬಿಜೆಪಿಯಲ್ಲಿ ವಲಸಿಗ ಸುಕುಮಾರ ಶೆಟ್ಟಿ ಕಂಡರೆ ಹಲವರಿಗೆ ಆಗದು. ಆದರೆ ಆತನ ಹಣ ಭಿನ್ನಮತ ಅಡಗಿಸಿ ಒಂದಾಗಿಸಿದೆ. ಟಿಕೆಟ್ ಸಿಗದೆ ಕೆರಳಿದ್ದ ಹಾಲಿ ಶಾಸಕ ಲಕ್ಷ್ಮೀನಾರಾಯಣ ಶೇರೇಗಾರ್ ಸಾಹೇಬರೂ ಮೇಲ್ನೋಟಕ್ಕೆ ಬಿಜೆಪಿ ಪರ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಕೆಜೆಪಿಯಿಂದ ಸ್ಪರ್ಧಿಸಿರುವ ಮೀನುಗಾರ ತರುಣ ನವೀನ್ ಚಂದ್ರ ಬಿಜೆಪಿಗೆ ಡ್ಯಾಮೇಜ್ ಮಾಡುತ್ತಿದ್ದಾನೆ. ಹಾಗೆಯೇ ಬಿಜೆಪಿ ಬಗ್ಗೆ ಜನರಿಗೆ ಅಸಮಾಧಾನವೂ ಇದೆ.


ಕಾಂಗ್ರೆಸ್ ಕ್ಯಾಂಡಿಡೇಟ್ ಬೆನ್ನಿಗೆ ಆತನ ಬಿಲ್ಲವ ಜಾತಿ ನಿಂತಿದೆ. ಸಾಂಪ್ರದಾಯಿಕ ಕಾಂಗ್ರೆಸ್ ಮತದಾರರಾದ ಕ್ರಿಶ್ಚಿಯನ್-ಮುಸ್ಲಿಮ್ ಮತ ಬರಲಿದೆ. ಗೋಪಾಲ ಪೂಜಾರಿ ಸರಳ-ಸೌಮ್ಯ ಎಂಬ ಭಾವನೆ ಮತದಾರರಿಗಿದೆ. ಆತ ಕೆಲಸಗಾರ. ಬಡವರಿಗೆ ಕೈಗೆಟುಕುತ್ತಾರೆಂದೂ ಜನ ಹೇಳುತ್ತಾರೆ. ಬಿಜೆಪಿ ಅಭ್ಯರ್ಥಿ ಸುಕುಮಾರ್ ಬಗ್ಗೆ ಈ ಸದ್ಭಾವನೆ ಇಲ್ಲ. ಯಾರನ್ನು ಬೇಕಿದ್ದರೂ ಏಕವಚನದಿಂದ ಬೈದು ಮೋಕಳಿಕ್ ಆಗುವ ಸುಕುಮಾರ್ ಶೆಟ್ಟಿ ಬಾಯಿ ಬೊಂಬಾಯಿ. ಆತನ ಪರ ಬಿಲ್ಲವರ ಪರಂಪರಾಗತ ಎದುರಾಳಿಗಳಾದ ಬಂಟರು ನಿಂತಿದ್ದಾರೆ. ಬೈಂದೂರಲ್ಲಿ ತುರುಸಿನ ಬಿಗ್ ಫೈಟಿಂಗ್ ನಡೆದಿದೆ. ಈ ಕಾಳಗದಲ್ಲಿ ಅಂತಿಮವಾಗಿ ಕಾಂಗ್ರೆಸ್‌ನ ಗೋಪಾಲ ಪೂಜಾರಿ ಸಣ್ಣ ಅಂತರದಲ್ಲಿ ಗೆಲ್ಲುವ ಸಂಭವವೇ ಜಾಸ್ತಿ.

• ನಹುಷ

ನಾಗಮಂಗಲದಲ್ಲಿ ನಡೆಯುತ್ತಿದೆ ಬಿಗ್ ಫೈಟ್

ಮಂಡ್ಯ ಜಿಲ್ಲೆಯಲ್ಲಿ ಅತಿಹೆಚ್ಚು ಬರಪೀಡಿತ ಪ್ರದೇಶ ಎಂದು ಹೆಸರು ಪಡೆದಿರುವ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ದಿನ ಹತ್ತಿರವಾಗುತ್ತಿದ್ದಂತೆ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವಿನ ಕದನ ತಾರಕಕ್ಕೇರಿದೆ. ಹಾಲಿ ಕಾಂಗ್ರೆಸ್ ಶಾಸಕ ಸುರೇಶ್ ಗೌಡ ಹಾಗೂ ಜೆಡಿಎಸ್ ಸಂಸದ ಚಲುವರಾಯಸ್ವಾಮಿ ನಡುವೆ ನೇರಸ್ಪರ್ಧೆ ಏರ್ಪಟ್ಟಿದ್ದು ಜಿಲ್ಲೆಯ ಜನ ಈ ಕ್ಷೇತ್ರದ ಫಲಿತಾಂಶದ ಸುತ್ತ ಚರ್ಚೆ ನಡೆಸಿದ್ದಾರೆ. ಬಿಜೆಪಿ, ಕೆಜೆಪಿಗೆ ಇಲ್ಲಿ ಠೇವಣಿ ಹುಟ್ಟುವುದೂ ಕಷ್ಟವಿದೆ.

ವಿಧಾನಸಭಾ ಚುನಾವಣೆ ದಿನಾಂಕ ಪ್ರಕಟವಾಗುವುದಕ್ಕೆ ಮುನ್ನ ನಾಗಮಂಗಲದಿಂದ ಕಾಂಗ್ರೆಸ್‌ನ ಸುರೇಶ್‌ಗೌಡ ಈ ಬಾರಿಯೂ ಗೆಲ್ಲುತ್ತಾರೆಂಬ ಮಾತು ಚಾಲ್ತಿಯಲ್ಲಿತ್ತು, ಅಂತಹ ನಿರೀಕ್ಷೆಯಲ್ಲಿದ್ದ ಸುರೇಶ್ ಗೌಡ ಕೂಡ ಮೈಮರೆತಿದ್ದರು. ಆದರೆ ದಿನಕಳೆದಂತೆ ನಾಗಮಂಗಲದಲ್ಲಿ ಚಲುವರಾಯಸ್ವಾಮಿ ಹೆಸರು ಮುಂಚೂಣಿಗೆ ಬರುತ್ತಿದೆ. ಆದರೆ ಗಾಬರಿಗೊಂಡು ಸುರೇಶ್ ಗೌಡ ಚುರುಕಾಗಿದ್ದಾರೆ. ಈಗ ಕ್ಷೇತ್ರದಲ್ಲಿ ಇವರಿಬ್ಬರ ನಡುವೆ ಈಗ ಬಿಗ್‌ಫೈಟ್ ನಡೆಯುತ್ತಿದ್ದು ಯಾರೇ ಗೆದ್ದರೂ ಎರಡು ಅಥವಾ ಮೂರು ಸಾವಿರ ಮತಗಳ ಅಂತರದಿಂದ ಮಾತ್ರ ಎಂಬ ಮಾತು ಕೇಳಿಬರುತ್ತಿದೆ.



ಕೆ.ಸುರೇಶ್‌ಗೌಡ


ರಾಜ್ಯ ರಾಜಕಾರಣಕ್ಕೆ ವಾಪಸ್ಸು ಬರಬೇಕೆಂಬ ಏಕೈಕ ಗುರಿಯೊಂದಿಗೆ ಕಣಕ್ಕಿಳಿದಿರುವ ಚಲುವರಾಯಸ್ವಾಮಿ ಸುರೇಶ್ ಗೌಡರ ವಿರುದ್ಧ ಹತ್ತಾರು ಪಟ್ಟುಗಳನ್ನು ಕದನ ಕಣದಲ್ಲಿ ಹಾಕುತ್ತಿದ್ದಾರೆ. ಸುರೇಶ್ ಗೌಡ ಕೂಡ ಇದರಲ್ಲಿ ಹಿಂದೆ ಬೀಳದೆ ಚಲುವರಾಯಸ್ವಾಮಿಯನ್ನು ಸೋಲಿಸಲು ತಂತ್ರಗಾರಿಕೆ ನಡೆಸಿದ್ದಾರೆ.

ಚಲುವರಾಯಸ್ವಾಮಿ ಈ ಹಿಂದೆ ಇಲ್ಲಿಂದಲೇ ಎರಡು ಬಾರಿ ಶಾಸಕರಾಗಿ, ಎರಡೆರಡು ಸಮೃದ್ಧ ಖಾತೆಯ ಮಂತ್ರಿಯಾಗಿ ಮೆರೆದಿದ್ದರು. ಗೂಟದ ಕಾರು ಸಿಕ್ಕಿದ್ದರಿಂದ ನಾಗಮಂಗಲಕ್ಕೆ ಬರುವುದನ್ನೇ ಅವರು ಬಿಟ್ಟುಬಿಟ್ಟಿದ್ದರು. ಇದರ ಲಾಭ ಪಡೆದ ಅವರ ಬೆಂಬಲಿಗರು ತಾಲ್ಲೂಕಿನಲ್ಲಿ ಉಪಟಳ ಪ್ರಾರಂಭಿಸಿದ್ದರು. ಇದೆಲ್ಲದರ ಜೊತೆಗೆ ಚಲುವರಾಯಸ್ವಾಮಿಯ ಅಹಂ ಮತ್ತು ಒಣಪ್ರತಿಷ್ಠೆ ಸೇರಿದ್ದರಿಂದ ಜನ ಬೇಸತ್ತುಹೋಗಿದ್ದರು. ಚಲುವರಾಯಸ್ವಾಮಿಗೆ ಸರಿಯಾದ ಪಾಠ ಕಲಿಸಲು ಕಾಯುತ್ತಿದ್ದ ನಾಗಮಂಗಲದ ಮತದಾರರು ಆಗ ಸುರೇಶ್ ಗೌಡರಿಗೆ ಮಣೆ ಹಾಕುವ ಮೂಲಕ ಚಲುವರಾಯಸ್ವಾಮಿಗೆ ಬೆಂಗಳೂರಿನಲ್ಲೇ ಹಾಯಾಗಿರು ಎಂಬ ಸಂದೇಶ ನೀಡಿದ್ದರು.

ತಾನು ಗೆಲ್ಲದೆ ಮತ್ಯಾರು ಗೆಲ್ಲುತ್ತಾರೆಂಬ ಅತಿಯಾದ ಹುಂಬತನದಿಂದ ಸುರೇಶ್ ಗೌಡರ ಎದುರು ಮಕಾಡೆ ಮಲಗಿದ್ದನ್ನು ಚಲುವರಾಯಸ್ವಾಮಿ ಕೈಯಲ್ಲಿ ಇನ್ನೂ ಜೀರ್ಣಿಸಿಕೊಳ್ಳಲಾಗಿಲ್ಲ, ಕಳೆದ ಬಾರಿಯ ಸೋಲಿನಿಂದ ಪಾಠ ಕಲಿತಿರುವ ಚಲುವರಾಯಸ್ವಾಮಿ ಈ ಬಾರಿ ತನ್ನ ಅಹಂ, ಒಣ ಪ್ರತಿಷ್ಠೆಯನ್ನು ಬದಿಗಿಟ್ಟು ಕ್ಷೇತ್ರದ ಜನರೊಂದಿಗೆ ಬೆರೆಯುತ್ತಾ ದಿನೇದಿನೇ ಮುಂಚೂಣಿಗೆ ಬರುತ್ತಿದ್ದಾರೆ.

ಜೆಡಿಎಸ್‌ಗೆ ಘಟಾನುಘಟಿಗಳ ಸೇರ್ಪಡೆ

ನಾಗಮಂಗಲ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವವರ ಪಟ್ಟಿ ಸಾಕಷ್ಟು ದೊಡ್ಡದಿದೆ. ಅದರಲ್ಲಿ ಬಿಣಕೆರೆ ಹೋಬಳಿಯಲ್ಲಿ ಸ್ವಲ್ಪಮಟ್ಟಿಗೆ ಪ್ರಭಾವಿ ಎನಿಸಿರುವ ತಾ.ಪಂ. ಸದಸ್ಯ ಹನುಮಂತು ಹಾಗೂ ಪಟ್ಟಣದಲ್ಲಿ ಯುವಕರ ಪಡೆಯ ನಾಯಕನಾಗಿರುವ ಪಟ್ಟಣ ಪಂಚಾಯತಿ ಸದಸ್ಯ ಭಾಸ್ಕರ್ ಎಂಬುವವರು ಸುರೇಶ್ ಗೌಡರಿಗೆ ಕೈಕೊಟ್ಟು ಚಲುವರಾಯಸ್ವಾಮಿ ತೆಕ್ಕೆಗೆ ಬಂದಿರುವುದು ಅವರಿಗೆ ನೆರವಾಗಲಿದೆ.



ಚಲುವರಾಯಸ್ವಾಮಿ

ಕಳೆದ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಜೆಡಿಎಸ್ ಏಳು ಕ್ಷೇತ್ರಗಳಲ್ಲಿ ಮತ್ತು ಕಾಂಗ್ರೆಸ್ ಎಂಟು ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಕಾಂಗ್ರೆಸ್‌ನ ಅಭ್ಯರ್ಥಿಗಳಿಬ್ಬರೂ ಒಂದು ಮತ್ತು 20 ಮತಗಳ ಅಂತರದಿಂದ ಸೋತಿದ್ದರು. ಆದರೆ ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ, ಪಂಗಡದ ವಾರ್ಡ್‌ಗಳಲ್ಲಿ ಕಾಂಗ್ರೆಸ್ ಒಂದರಲ್ಲೂ ಗೆದ್ದಿಲ್ಲ, ಇದರಿಂದಾಗಿ ಅಹಿಂದ ಮತಗಳು ಜೆಡಿಎಸ್ ಮತ್ತು ಕಾಂಗ್ರೆಸ್ ಎರಡರ ತೆಕ್ಕೆಗೂ ಸಮನಾಗಿ ಹೋಗುವ ಸಾಧ್ಯತೆ ಕಂಡುಬರುತ್ತಿದೆ. ಹಾಗೆಯೇ ಮುಸಲ್ಮಾನರು ಈ ಬಾರಿ ಜೆಡಿಎಸ್ ಕಡೆಗೆ ತಮ್ಮ ನಿಷ್ಠೆ ಬದಲಾಯಿಸಿದ್ದಾರೆ. ಪಟ್ಟಣ ಪಂಚಾಯತಿಯಲ್ಲಿ ಮುಸ್ಲಿಂ ಜನರು ಹೆಚ್ಚಿರುವ ಐದು ವಾರ್ಡ್‌ಗಳಲ್ಲಿ ಜೆಡಿಎಸ್ ಗೆದ್ದಿರುವುದು ಇದಕ್ಕೆ ಸಾಕ್ಷಿಯಾಗಿದೆ. ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ಕಳೆದ ಬಾರಿ ಚಲುವರಾಯಸ್ವಾಮಿಗೆ 440 ಮತಗಳ ಲೀಡ್ ನೀಡಿತ್ತು, ಈ ಹೋಬಳಿಯಲ್ಲಿ ಮಾಜಿ ಶಾಸಕ ಡಿ.ಸಿ.ತಮ್ಮಣ್ಣನವರ ಪ್ರಭಾವ ಹೆಚ್ಚಾಗಿದೆ. ಈ ಕಾರಣಕ್ಕೇ ಇತ್ತೀಚೆಗೆ ತಮ್ಮಣ್ಣ ಜೆಡಿಎಸ್ ಸೇರುವ ಬಗ್ಗೆ ಚಲುವರಾಯಸ್ವಾಮಿ ಪ್ರಮುಖ ಪಾತ್ರ ವಹಿಸಿದ್ದು ಎಂಬುದು ಸ್ಪಷ್ಟವಾಗಿದೆ.

ಬರೆ ಹಾಕಲಿದೆಯೇ ಬರ

ಬರಪೀಡಿತ ನಾಗಮಂಗಲ ತಾಲ್ಲೂಕಿನಲ್ಲಿ ಮಳೆಯಾಶ್ರಿತ ವ್ಯವಸಾಯವೇ ಪ್ರಧಾನ. ಇಲ್ಲಿ ಕಳೆದ 2-3 ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಜನತೆ ತತ್ತರಿಸಿಹೋಗಿದ್ದಾರೆ. ತಾಲ್ಲೂಕಿನ ಸುಮಾರು 200 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರಿದೆ. ಕುಡಿಯುವ ನೀರಿನ ಅಭಾವ ನೀಗಿಸಲು ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಹೇಮಾವತಿ ನದಿಯಿಂದ ತಾಲ್ಲೂಕಿನ ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವಲ್ಲಿ ಶಾಸಕ ಸುರೇಶ್ ಗೌಡ ಸರಿಯಾಗಿ ಜವಾಬ್ದಾರಿ ನಿಭಾಯಿಸಿಲ್ಲ, ಇವು ಅವರಿಗೆ ಸ್ವಲ್ಪಮಟ್ಟಿನ ಹಿನ್ನಡೆಗೆ ಕಾರಣವಾಗಿದೆ.

ಸಿದ್ದು ಎಫೆಕ್ಟ್

ಕಳೆದಬಾರಿ ಸುರೇಶ್ ಗೌಡ ಶಾಸಕರ… ಕ್ಷೇತ್ರದಲ್ಲಿರುವ ಕುರುಬ ಸಮುದಾಯ ಸಾರಾಸ… 'ಕೈ' ಹಿಡಿದದ್ದು ಕಾರಣವಾಗಿತ್ತು, ಕ್ಷೇತ್ರದಲ… 13,000ಕ್ಕೂ ಹೆಚ್ಚು ಕುರುಬರು ಸಿದ್ದರಾಮಯ್ಯ ಮಾ… ಸುರೇಶ್ ಗೌಡರಿಗೆ ಮತ ನೀಡಿ 5000ಕ್ಕೂ … ಮತಗಳಿಂದ ಗೆಲ್ಲಿಸಿದ್ದರು. ಈ ಬಾರಿ ಸಿದ್ದರಾ… ಮುಖ್ಯಮಂತ್ರಿ ಆಗುತ್ತಾರೆಂಬ ವಾತಾವರಣ ನಿರ್ಮಾ… ರುವುದರಿಂದ ಕುರುಬ ಜನಾಂಗ ಸುರೇಶ್ ಗೌ… ಹಿಡಿಯಬಹುದು. ಈಗಾಗಲೇ ಸಿದ್ದರಾಮಯ್ಯ ಚ… ಕಾಂಗ್ರೆಸ್ ಸಮಾವೇಶ ನಡೆಸಿ "ರಾಜ್ಯದಲ್ಲಿ ಈ … ಕಾಂಗ್ರೆಸ್ ಸರ್ಕಾರ ರಚಿಸಲಿದ್ದು, ನನಗೂ ಮಹತ್ವದ… ದೊರೆಯುವುದರಿಂದ ಚಲುವರಾಯಸ್ವಾಮಿಯನ್ನು ಸೋಲಿಸಿ ಸುರೇಶ್ ಗೌ… ಗೆಲ್ಲಿಸಿ" ಎಂದು ಆದೇಶ ನೀಡಿಬಿಟ್ಟಿದ್ದಾರೆ. ಕ್ಷೇತ್ರದಲ್ಲಿರುವ 13,000 ಕುರ… 9 ಸಾವಿರದಷ್ಟಿರುವ ಮುಸಲ್ಮಾನರು 'ಕೈ' ಹಿಡಿದರೆ ಸುರೇಶ್ ಗೌ… ಮತ್ತೊಂದು ಚಾನ್ಸ್ ಸಿಗಬಹುದು.

ಕೃಷ್ಣಾಗಮನ

ನಾಗಮಂಗಲದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಪ್ರ… ಸ್ವಲ್ಪಮಟ್ಟಿಗೆ ಇದೆ. ಕಾಂಗ್ರೆಸ್ ಪಕ್ಷ ತನ್ನ ಬೆಂಬಲಿಗರಿಗೆ ಟಿಕೆಟ್ ನೀ… ಎಂದು ಪ್ರಚಾರಕ್ಕೆ ಬರದೆ ಮುನಿಸಿಕೊಂಡಿದ್ದ ಕೃಷ್ಣ ಈಗ ಪ್ರ… ಧುಮುಕಿರುವುದು ಒಕ್ಕಲಿಗ ಜನಾಂಗದ ಕೆಲವರಿಗೆ ಸಂತೋಷ ತ… ಕೊಪ್ಪ ಹೋಬಳಿ ಕೂಡ ನಾಗಮಂಗಲ ಕ್ಷೇತ್ರಕ್ಕೆ ಸೇರಿದ್ದು ಕೃಷ್ಣ ಬೆಂಬ… ಇಲ್ಲಿದ್ದಾರೆ. ಇದೇ 26ರಂದು ಕೃಷ್ಣ ನಾಗಮಂಗಲಕ್ಕೆ ಭೇಟಿ ನೀಡಿ ಸು… ಗೌಡರ ಪರ ಮತಯಾಚಿಸಲಿದ್ದು ಅದು ಕೂಡ ಅವರಿಗೆ ಪ್ಲಸ್ ಆ…

ಎಲ್‌ಆರ್‌ಎಸ್ ನಿರ್ಣಾಯಕ

ಚುನಾವಣೆಗೆ ಇನ್ನು 10 ದಿನಗಳು ಬಾಕಿ ಉಳಿದಿದೆ. ಕ್ಷೇತ್ರದಲ್ಲಿ … ಶಾಸಕ ಎಲ್.ಆರ್.ಶಿವರಾಮೇಗೌಡ ಇನ್ನೂ ತಮ್ಮ ಪ್ರಾಬಲ್ಯ ಉಳಿಸಿಕೊಂ… ಬೆಂಗಳೂರಿನ ಪದ್ಮನಾಭನಗರದಲ್ಲಿ ತಮ್ಮ ಪುತ್ರ ಚೇತನ್‌ನನ್ನು ಗೆ… ಪ್ರಚಾರದಲ್ಲಿ ಮುಳುಗಿರುವ ಶಿವರಾಮೇಗೌಡ ನಾಗಮಂಗಲದತ್ತ … ತಲೆಹಾಕಿಲ್ಲ, ಶಿವರಾಮೇಗೌಡ ಹಾಗೂ ಅವರ ಬೆಂಬಲಿಗರನ್ನು … ಸುರೇಶ್ ಗೌಡ ಸಮರ್ಪಕವಾಗಿ ಬಳಸಿಕೊಂಡರೆ ಅವರಿಗೆ ಅನುಕೂಲವಾ…

ಒಟ್ಟಾರೆ ನಾಗಮಂಗಲ ಕ್ಷೇತ್ರದಲ್ಲಿ ದಿನೇದಿನೇ ಪ್ರಚಾರ ರಂಗೇರು… ಶತಾಯಗತಾಯ ಗೆದ್ದು ರಾಜ್ಯ ರಾಜಕಾರಣಕ್ಕೆ ಎಂಟ್ರಿ ಪಡೆ… ಚಲುವರಾಯಸ್ವಾಮಿ ಪಟ್ಟು ಹಾಕುತ್ತಿದ್ದಾರೆ. ಚಲುವರಾಯಸ್ವಾಮಿ… ಮತ್ತೊಮ್ಮೆ ಸೋಲುಣಿಸಲು ಸುರೇಶ್ ಗೌಡ ಪ್ರತಿಪಟ್ಟು ಹಾ… ಸವಾಲೆಸೆದಿರುವುದು ಕುತೂಹಲ ಮೂಡಿಸಿದೆ.


ಮಂಡ್ಯ: ಶ್ರೀನಿವಾಸ್ ಸೋಲಿಸಲು ಹರಕೆಯ ಕುರಿಯಾದ ಅಶೋಕ್ ಜಯರಾ…

ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಮೂರನೇ ಬಾರಿಗೆ ಆಯ್ಕೆ ಬಯಸಿರುವ ಜೆಡಿಎಸ್‌ನ ಹಾಲಿ ಶಾಸಕ ಎಂ.ಶ್ರೀನಿವಾಸ್‌ರನ್ನು ಸೋಲಿಸಿ, ರೆಬೆಲ್ ಸ್ಟಾರ್ ಅಂಬರೀಶರನ್ನು ಗೆಲ್ಲಿಸಲು ಜೆಡಿಎಸ್‌ನಲ್ಲಿರುವ ಒಂದು ಗುಂಪು ಹಾಕಿರುವ ಸ್ಕೆಚ್ ಯಶಸ್ವಿಯಾಗಿದೆ. ಶಾಸಕ ಶ್ರೀನಿವಾಸ್ ವಿರುದ್ಧ ಟಿಕೆಟ್ ಸಿಗದೆ ಬೇಸರಗೊಂಡಿದ್ದ ಮಾಜಿ ಸಚಿವ ದಿವಂಗತ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ ಅವರ ತಲೆಕೆಡಿಸಿ ಅವರನ್ನು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದು ಶ್ರೀನಿವಾಸ್ ವಿರೋಧಿ ಗುಂಪಿನ ಸ್ಕೆಚ್ ಆಗಿತ್ತು, ಅದೀಗ ಜಾರಿಗೆ ಬಂದಿದೆ. ಅಂಬರೀಶ್ ವಿರುದ್ಧ ಗೆದ್ದು ಬರಲು ಕಣ ಸಿದ್ಧಪಡಿಸಿದ್ದ ಶ್ರೀನಿವಾಸ್ ಈಗ ಸಾಕಷ್ಟು ಬೆವರು ಹರಿಸಬೇಕಿದೆ.


ಅಶೋಕ್ ಜಯರಾಂ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ದಿನದಿಂದಲೇ ಬಂಡಾಯ ಶಮನಗೊಳಿಸಲು ಜೆಡಿಎಸ್ ವರಿಷ್ಠರು ಸರಿಯಾಗಿ ಪ್ರಯತ್ನಿಸಲಿಲ್ಲ, ಜೆಡಿಎಸ್ ವರಿಷ್ಠ ಕುಮಾರಸ್ವಾಮಿಯವರು ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು ಅವರ ಹೆಗಲಿಗೆ ಅಶೋಕ್ ಅವರು ನಾಮಪತ್ರ ವಾಪಸ್ ತೆಗೆಸುವ ಜವಾಬ್ದಾರಿ ವಹಿಸಿದ್ದರು. ನಾಮಪತ್ರ ವಾಪಸ್ ಪಡೆಯುವ ಕೊನೆಯ ದಿನದಂದು ಮಾಜಿ ಶಾಸಕ ಜಿ.ಬಿ.ಶಿವಕುಮಾರ್ ಮನೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ಪುಟ್ಟರಾಜು, ಹೆಚ್.ಬಿ.ರಾಮು, ಕೆ.ಟಿ.ಶ್ರೀಕಂಠೇಗೌಡ ಸೇರಿದಂತೆ ಹಲವರು ಪ್ರಯತ್ನ ನಡೆಸಿದರು.

"ನನ್ನದು ಇದು ಕೊನೆಯ ಚುನಾವಣೆ. ಮುಂದಿನ ಬಾರಿ ನಾನು ಸ್ಪರ್ಧಿಸುವುದಿಲ್ಲ, ನೀನೇ ಸ್ಪರ್ಧಿಸು" ಎಂದೂ ಶ್ರೀನಿವಾಸ್ ಅಶೋಕ್‌ಗೆ ಆ ಸಭೆಯಲ್ಲಿ ಹೇಳಿದರು. ಜೆಡಿಎಸ್ ವರಿಷ್ಠ ದೇವೇಗೌಡ ಕೂಡ ನಾಮಪತ್ರ ವಾಪಸ್ ಪಡೆಯುವಂತೆ ಪ್ರಭಾವತಿ ಜಯರಾಂ ಹಾಗೂ ಅವರ ಪುತ್ರ ಅಶೋಕ್ ಜಯರಾಂ ಇಬ್ಬರಿಗೂ ಪರಿಪರಿಯಾಗಿ ಹೇಳಿದ್ದರು. ಆದರೆ ಸಭೆಯಲ್ಲಿದ್ದ ಅಶೋಕ್ ಜಯರಾಂ ಅವರ ಭಾವ ಡಾ.ಪರಮೇಶ್ ಹಾಗೂ ಆತನ ತಂಗಿ ಅನುರಾಧ ಸಾಕಷ್ಟು ಅತ್ತುಗೋಳಾಡಿ ದೊಡ್ಡ ರಂಪಾಟ ಮಾಡಿಬಿಟ್ಟರು.

ಕೊನೆಗೂ ಎಲ್ಲರ ಒತ್ತಡಕ್ಕೆ ಒಪ್ಪಿದ ಅಶೋಕ್ ಜಯರಾಂ ಹಾಗೂ ಪ್ರಭಾವತಿ ಜಯರಾಂ ನಾಮಪತ್ರ ವಾಪಸ್ ಪಡೆಯಲು ಹೊರಟರು. ಆಗ ಅಲ್ಲಿಗೆ ಎಂಟ್ರಿ ಕೊಟ್ಟಿದ್ದೇ ಅಂಬುಜಮ್ಮ. ಈ ಅಂಬುಜಮ್ಮ ಮಂಡ್ಯ ನಗರಸಭೆ ಅಧ್ಯಕ್ಷೆಯಾಗಿದ್ದ ಸಂದರ್ಭದಲ್ಲಿ ಅವ್ಯವಹಾರ ನಡೆಸಿದ್ದಕ್ಕೆ ಸ್ವಪಕ್ಷೀಯರೇ ಆಕೆಯ ವಿರುದ್ಧ ಅವಿಶ್ವಾಸ ವ್ಯಕ್ತಪಡಿಸಿ ಅಧ್ಯಕ್ಷೆ ಸ್ಥಾನದಿಂದ ಕೆಳಗಿಳಿಸಿದ್ದರು.



ಅಂಬರೀಷ್



ಶ್ರೀನಿವಾಸ್


ಇಂತಹ ಅಂಬುಜಮ್ಮ ಎಂಬ ಡ್ರಾಮಾ ಆರ್ಟಿಸ್ಟ್ ಅಶೋಕರ ಬೆಂಬಲಿಗರನ್ನು ಪ್ರಚೋದಿಸಿದರು. ಈಕೆಯ ಮಾತಿಗೆ ಮರುಳಾಗಿ, ಅಶೋಕರ ತಂಗಿ ಅನುರಾಧರ ಗೋಳಾಟಕ್ಕೆ ಶರಣಾದ ಅಶೋಕರ ಬೆಂಬಲಿಗರು ಗೋಳಾಡುತ್ತ ದೊಡ್ಡ ರಂಪಾಟವನ್ನೇ ಎಬ್ಬಿಸಿದರು, ಅವರೆಲ್ಲ ಅಡ್ಡಗಟ್ಟಿದ್ದರಿಂದ ನಾಮಪತ್ರ ವಾಪಸ್ ಪಡೆಯುವ ವೇಳೆಯೂ ಮುಗಿದುಹೋಯಿತು. ಕೊನೆಗೂ ಅಶೋಕ್ ಜಯರಾಂ ಕಣದಲ್ಲಿ ಉಳಿಯುವಂತಾಯಿತು. ಆ ಮೂಲಕ ಶಾಸಕ ಶ್ರೀನಿವಾಸ್ ವಿರೋಧಿ ಗುಂಪಿನ ಕುತಂತ್ರದಂತೆ ಅಶೋಕ್ ಜಯರಾಂ ಹರಕೆಯ ಕುರಿಯಾಗಿ ಕಣದಲ್ಲಿದ್ದಾರೆ.

ಅಂಬಿ ಗೆಲ್ಲಿಸಲು ಮಸಲತ್ತು?

ಅಶೋಕ್ ಜಯರಾಂಗೀಗ ಕೇವಲ 30 ವರ್ಷ ವಯಸ್ಸು. ವಿದೇಶದಲ್ಲಿ ಉನ್ನತ ವ್ಯಾಸಾಂಗ ಮಾಡಿದ ನಂತರ ಒಂದೂವರೆ ವರ್ಷದ ಹಿಂದೆ ಮಂಡ್ಯಕ್ಕೆ ಅಶೋಕ್ ಹಿಂದಿರುಗಿದರು. ಅಶೋಕ್ ರಾಜಕಾರಣದಲ್ಲಿ ಪಳಗಿ ಇನ್ನೂ ಅನುಭವ ಪಡೆಯಬೇಕಿದೆ. ಕೇವಲ ಎಸ್.ಡಿ.ಜಯರಾಂ ಪುತ್ರನೆಂಬ ಮಾನದಂಡ ಬಿಟ್ಟರೆ ಅಶೋಕ್‌ಗೆ ರಾಜಕಾರಣದಲ್ಲಿ ಅಂತಹ ಅನುಭವವೇನೂ ಇಲ್ಲ.

ಇಂತಹ ಅಶೋಕ್ ತಲೆಯಲ್ಲಿ ಅದ್ಯಾರು ಶಾಸಕನಾಗುವ ಕನಸನ್ನು ಬಿತ್ತಿದರೋ ಗೊತ್ತಿಲ್ಲ. ಅಂದಿನಿಂದ ತನ್ನ ಅಪ್ಪನಂತೆ ರಾಜಕಾರಣಿಯಾಗುವ ಮಹತ್ವಾಕಾಂಕ್ಷೆಯಿಂದ ಮಂಡ್ಯ ಕ್ಷೇತ್ರದಲ್ಲಿ ಸುತ್ತಾಡಿಕೊಂಡಿದ್ದರು. ತನ್ನ ಸುತ್ತ ಇದ್ದ ಅವಕಾಶವಾದಿಗಳು ಹಾಗೂ ಶ್ರೀನಿವಾಸ್ ವಿರೋಧಿಗಳನ್ನು ನಂಬಿದ ಅಶೋಕ್ ಈಗ ಹರಕೆಯ ಕುರಿಯಂತೆ ಹಳ್ಳಕ್ಕೆ ಬಿದ್ದಿದ್ದಾರೆ.

ಅಂದು ಅವರ ಅಭಿಮಾನಿಗಳನ್ನು ಪ್ರಚೋದಿಸಿದ್ದ ಅಂಬುಜಮ್ಮ ಇವತ್ತು ಅಶೋಕ್ ಮನೆಯತ್ತ ಸುಳಿಯುತ್ತಿಲ್ಲ, ಅಷ್ಟೇ ಅಲ್ಲ, ಇವತ್ತು ಅಂಬುಜಮ್ಮನ ಮಗ ಹಾಗೂ ಆಕೆಯ ಅಳಿಯ ಅಂಬರೀಶ್ ಪಾಳಯದಲ್ಲಿದ್ದಾರೆ. ಅಶೋಕ್ ಚುನಾವಣೆಯಲ್ಲಿ ಹಣ ಖರ್ಚು ಮಾಡಲಾರ ಎಂಬುದು ತಿಳಿಯುತ್ತಿದ್ದಂತೆ ಅವರ ಸುತ್ತ ಇದ್ದ ಒಂದಷ್ಟು ಜನರೂ ಈಗ ಜಾಗ ಖಾಲಿ ಮಾಡಿದ್ದಾರೆ. ಅಶೋಕ್ ಒಬ್ಬಂಟಿಯಾಗಿ ಅಶೋಕ್ ಪ್ರಚಾರದಲ್ಲಿ ತೊಡಗಿದ್ದಾರೆ.



ಅಶೋಕ್ ಜಯರಾಂರನ್ನು ಕಣದಲ್ಲಿ ಉಳಿಸಿದ ಕುತಂತ್ರದಿಂದ ಜೆಡಿಎಸ್ ಮತಗಳು ಅಶೋಕ್ ಜಯರಾಂ ಹಾಗೂ ಶ್ರೀನಿವಾಸ್ ನಡುವೆ ಹಂಚಿಕೆಯಾಗಿ ಕಾಂ… ಅಂಬಿಯ ಹಾದಿ ಸುಗಮವಾಗಲಿದೆ. ಇಂತಹ ಕುತಂ… ಅರಿಯದ ಹರಕೆಯ ಕುರಿಯಾದ ಅಶೋಕ್ ಜಯ… ತಾವೂ ಸೋಲುವುದಲ್ಲದೆ ಜೆಡಿಎಸ್‌ನ ಅಧಿಕೃತ ಅ… ಶ್ರೀನಿವಾಸರ ಸೋಲಿಗೂ ಮುನ್ನುಡಿ ಬರೆದಿದ್ದಾರೆ…


ಅಂಬಿ ವಿರೋಧಿಗಳು ಶ್ರೀನಿವಾಸ್…

ಈ ಬೆಳವಣಿಗೆಯ ನಂತರ ಶ್ರೀನಿವಾಸ್ ಕಣ್ಣ… ಬಿಟ್ಟುಕೊಂಡು ಅಂಬಿ ವಿರೋಧಿಗಳನ್ನು ಸೆಳೆ… ಕಾರ್ಯದಲ್ಲಿ ನಿರತರಾಗಿದ್ದಾರೆ. ಆತ್ಮಾನಂದರಿಗೆ ಕಾ… ಟಿಕೆಟ್ ತಪ್ಪಿಸಿದ್ದರಿಂದ ಅಂಬಿ ವಿರುದ್ಧ ಕುದಿಯು… ಅವರ ಬೆಂಬಲಿಗರು, ಕೃಷ್ಣರ ಅನುಯಾಯಿಗಳು ಶ್ರೀ… ಸುತ್ತ ಈಗ ನೆರೆದಿದ್ದು ಅಂಬಿ ಸೋಲಿಗೆ ತಂತ್ರಗಾರಿ… ತೊಡಗಿದ್ದಾರೆ. ಚುನಾವಣೆಗೆ ಇನ್ನು ಹತ್ತು ದಿನ… ಅಷ್ಟರಲ್ಲಿ ಇನ್ನಷ್ಟು ಬದಲಾವಣೆಗಳು ನಡೆಯಲಿದ್ದು … ಕ್ಷೇತ್ರ ಯಾರ ಪಾಲಾಗುವುದೋ ಎಂಬ ಕುತ… ಮೂಡಿಸಿದೆ.

ಮದ್ದೂರು: ಡಿ.ಸಿ.ತಮ್ಮಣ್ಣನ ದುಡ್ಡಿನ ದರ್ಬಾರ್!

ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ...ಸಿ.ತಮ್ಮಣ್ಣನ ದುಡ್ಡಿನ ದರ್ಬಾರ್ ನಡೆಯು...ಿ. ದುಡ್ಡಿನ ಬಲದಿಂದಲೇ ಕಾಂಗ್ರೆಸ್ ಮತ್ತು ...ಲ್ಪನಾ ಸಿದ್ದರಾಜು ಅವರ ಬೆಂಬಲಿಗರನ್ನು ... ತೆಕ್ಕೆಗೆ ಎಳೆದುಕೊಳ್ಳುತ್ತಿರುವ ತಮ್ಮಣ್ಣ ...ಚಾರದಲ್ಲಿ ಮುಂದಿದ್ದು, ಈಗಾಗಲೇ ...ನಾವಣೆಯಲ್ಲಿ ಗೆದ್ದಿದ್ದೇನೆಂದು ಬೀಗುತ್ತಿದ್ದಾರೆ.


ರಾಜಕೀಯವಾಗಿ ಮುಗಿದುಹೋಗಿದ್ದ ...ಮ್ಮಣ್ಣನವರನ್ನು ಮತ್ತೆ ಚಲಾವಣೆಗೆ ತರುವ ...ಕ ಉದ್ದೇಶದಿಂದ ಅವರ ಬೀಗರಾದ ...ಜಿ ಪ್ರಧಾನಿ ದೇವೇಗೌಡರು ಅವರನ್ನು ...ಎಸ್‌ಗೆ ಸೇರಿಕೊಂಡರು. ಹಾಗೆ ಮಾಡುವ ...ಮೂಲಕ ತಮ್ಮ ಮನೆ ಮಗಳಂತಿದ್ದ ಕಲ್ಪನಾ ...ದ್ದರಾಜುಗೆ ಟಿಕೆಟ್ ನೀಡದೆ ದ್ರೋಹ ...ಗೆದರು.



ಡಿ.ಸಿ.ತಮ್ಮಣ್ಣ



ಕಲ್ಪನಾ ಸಿದ್ದರಾಜು



ಮಧು ಜಿ.ಗೌಡ

ದೇವೇಗೌಡ ಮತ್ತು ತಮ್ಮಣ್ಣ ಜೊತೆಗೂಡಿ ಕಲ್ಪನಾರಿಗೆ ...ಡಿದ ಈ ಮಹಾದ್ರೋಹ ಕ್ಷೇತ್ರದ ಮತದಾರರಲ್ಲಿ ...ದ ಗಾಯವಾಗಿದೆ. ಅದರಲ್ಲೂ ಸಿದ್ದರಾಜು ಬೆಂಬಲಿಗರು ...ವೇಗೌಡರು ಕುಟುಂಬ ರಾಜಕಾರಣದ ವಿರುದ್ಧ ...ಗೆದ್ದಿದ್ದಾರೆ. ಚುನಾವಣೆಯಲ್ಲಿ ತಮ್ಮಣ್ಣನವರನ್ನು ...ಲಿಸುವ ಮೂಲಕ ಅವರಿಗೆ ಸರಿಯಾದ ಪಾಠ ಕಲಿಸಲು ...ಟು ಕೊಡಿ, ಚುನಾವಣೆ ಖರ್ಚಿಗೆ ನೋಟು' ಎಂಬ ...ಚಾರದಲ್ಲಿ ತೊಡಗಿದ್ದಾರೆ. ಕಲ್ಪನಾ ಸಿದ್ದರಾಜು ಪರ ...ಹರಿದುಬರುತ್ತಿರುವ ಅನುಕಂಪದ ಪ್ರವಾಹ ಇದೇ ರೀತಿ ...ಮುಂದುವರೆದರೆ ಅಂತಿಮ ಫಲಿತಾಂಶ ತಮ್ಮಣ್ಣನವರಿಗೆ ...ಘಾತ ನೀಡಬಹುದು.

ಮದ್ದೂರಿನ ರಾಜಕಾರಣದ ಶೈಲಿಯೇ ವಿಶಿಷ್ಟವಾದುದು. ...ಲ್ಲಿಯ ಜನ ರಾಜಕೀಯವಾಗಿ ಪ್ರಜ್ಞಾವಂತರು, ...ಭಿಮಾನಿಗಳು. ಆ ಕಾರಣಕ್ಕೆ ಸಿದ್ದರಾಜು ನಿಧನರಾಗಿ ...ನು ವರ್ಷಗಳಾಗಿದ್ದರೂ ಅವರನ್ನು ಇನ್ನೂ ...ಜಕೀಯವಾಗಿ ಆದರ್ಶವಾಗಿಟ್ಟುಕೊಂಡ ಅನೇಕರು ಇಲ್ಲಿದ್ದಾರೆ. ಅಂತಹವರನ್ನೆಲ್ಲ ತಮ್ಮಣ್ಣ ತನ್ನ ದುಡ್ಡಿನ ಬಲದಿಂದ ಕೊಳ್ಳಲು ಮುಂದಾಗಿದ್ದಾರೆ. ಅವರಲ್ಲಿ ಹಲವರು ಪಕ್ಷದ ಕಾರಣಕ್ಕೆ ತಮ್ಮಣ್ಣ ಬಳಗ ಸೇರಿದ್ದರೂ ಒಳಗೊಳಗೆ ಕಲ್ಪನಾ ಪರವೂ ಇದ್ದಾರೆ.

ಕಾಂಗ್ರೆಸ್ ಟಿಕೆಟ್ ಸಿಕ್ಕಿದರೆ ಕಥೆನೇ ಬೇರೆ

ಜೆಡಿಎಸ್ ಟಿಕೆಟ್‌ಅನ್ನು ತಮ್ಮಣ್ಣ ಖರೀದಿಸಿದ ಕೂಡಲೇ ಕಾಂಗ್ರೆಸ್ ಪಕ್ಷದ ಟಿಕೆಟನ್ನು ಕಲ್ಪನಾರಿಗೆ ನೀಡಲು ಬಹುದೊಡ್ಡ ನಾಟಕವೇ ನಡೆದುಹೋಯಿತು. ಕಲ್ಪನಾರಿಗೆ ಟಿಕೆಟ್ ಕೊಡಿಸಲು ಎಸ್.ಎಂ.ಕೃಷ್ಣ ಒಲವು ತೋರಿದ್ದರೂ ಕಾಂಗ್ರೆಸ್‌ನ ಇತರ ನಾಯಕರು ಹಾಗೂ ಹೈಕಮಾಂಡ್ ಮಾತ್ರ ಮೂರನೇ ಸ್ಥಾನಕ್ಕೆ ಹೋಗುವ ಮಧು ಮಾದೇಗೌಡನಿಗೆ ಟಿಕೆಟ್ ನೀಡಿತು. ಹುಡುಕಿ ಹುಡುಕಿ ಸೋಲುವ ಮಧು ಮಾದೇಗೌಡನಿಗೆ ಕಾಂಗ್ರೆಸ್ ಟಿಕೆಟ್ ನೀಡುವ ಬದಲು ಕಲ್ಪನಾ ಸಿದ್ದರಾಜುಗೆ ಟಿಕೆಟ್ ನೀಡಿದ್ದರೆ ಈ ಕ್ಷೇತ್ರದ ಕಥೆಯೇ ಬೇರೆಯಾಗುತ್ತಿತ್ತು.

ಕಾಂಗ್ರೆಸ್ ಟಿಕೆಟ್ ಪಡೆಯಲು ಕಲ್ಪನಾ ಸಿದ್ದರಾಜು ಅವರು ಮಧು ತಂದೆ ಮಾಜಿ ಸಂಸದ ಮಾದೇಗೌಡರೊಂದಿಗೆ ಹಲವು ಸುತ್ತು ಮಾತುಕತೆಗಳನ್ನೂ ನಡೆಸಿದರು. ಆಗೆಲ್ಲ "ನನ್ನ ಬದ್ಧ ವೈರಿ ತಮ್ಮಣ್ಣನನ್ನು ಸೋಲಿಸಲು ನಾನು ಯಾವುದೇ ತ್ಯಾಗಕ್ಕೂ ಸಿದ್ಧ" ಎಂದು ಮಾದೇಗೌಡರು ಹೇಳಿದ್ದರಲ್ಲದೆ ಕಡೆತನಕ ಅದೇ ಡೈಲಾಗ್ ಹೊಡೆಯುತ್ತಿದ್ದರು. ಆದರೂ ತನ್ನ ಪುತ್ರನಿಗೆ ಟಿಕೆಟ್ ಕೊಡಿಸುವ ಮೂಲಕ ಈ ವಯಸ್ಸಿನಲ್ಲೂ ತನ್ನದು ಅವಕಾಶವಾದಿ ರಾಜಕಾರಣ ಎನ್ನುವುದನ್ನು ಮಾದೇಗೌಡ ತೋರಿಸಿಬಿಟ್ಟರು.

ತಮ್ಮಣ್ಣರನ್ನು ಹಣಿಯಲು ತಮ್ಮ ಮಗ ಮಧುಗಿಂತ ಕಲ್ಪನಾ ಸಿದ್ದರಾಜುನೇ ಸರಿ ಎಂದು ಮಾದೇಗೌಡರಿಗೆ ಸ್ಪಷ್ಟವಾಗಿ ಗೊತ್ತಿದ್ದರೂ 'ತಮ್ಮಣ್ಣ ಮತ್ತು ಕಲ್ಪನಾ ಸಿದ್ದರಾಜು ನಡುವಿನ ಕಾಳಗದಲ್ಲಿ ನನ್ನ ಮಗ ಮಧು ಮುನ್ನಡೆ ಸಾಧಿಸುತ್ತಾನೆ' ಎಂಬ ದುರಾಲೋಚನೆಯಲ್ಲಿ ವೃದ್ಧ ಮಾದೇಗೌಡ ಕಲ್ಪನಾ ಸಿದ್ದರಾಜುಗೆ ಸರಿಯಾಗಿ ಕೈಕೊಟ್ಟರು.

ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಕಲ್ಪನಾರಿಗೆ ಸಿಕ್ಕಿದ್ದರೆ, ದೇವೇಗೌಡರ ಕುಟುಂಬ ಎಸಗಿದ ಮಹಾದ್ರೋಹ, ಎಸ್.ಎಂ.ಕೃಷ್ಣರ ಬೆಂಬಲಿಗರ ಸಹಕಾರ, ಮಧು ಮಾದೇಗೌಡರ ಬೆಂಬಲ ಎಲ್ಲ ಕಲ್ಪನಾ ಅವರಿಗೆ ಸಿಕ್ಕು, ತಮ್ಮಣ್ಣರನ್ನು ಹಣ್ಣು ಗಾಯಿ-ನೀರುಗಾಯಿ ಮಾಡಬಹುದಿತ್ತು, ಅಂತಹ ಅವಕಾಶವನ್ನು ವೃದ್ಧ ಮಾದೇಗೌಡ ಒಂದೇ ಕ್ಷಣದಲ್ಲಿ ತಪ್ಪಿಸಿಬಿಟ್ಟರು.

ಇಷ್ಟಾದರೂ ಮದ್ದೂರು ಕ್ಷೇತ್ರದಲ್ಲಿ ಸಂಪೂರ್ಣ ತಮ್ಮಣ್ಣನವರ ಪರವಾಗಿ ಗಾಳಿ ಬೀಸುತ್ತಿಲ್ಲ. ಕಲ್ಪನಾರ ಪತಿ ಸಿದ್ದರಾಜು ಬೆಂಬಲಿಗರು ಕ್ಷೇತ್ರದಾದ್ಯಂತ ಗುಪ್ತಗಾಮಿನಿಯಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ತನ್ನ ಬೆಂಬಲಿಗರಿಗೆ, ಅದರಲ್ಲೂ ಕಲ್ಪನಾರಿಗೆ, ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನಿರಾಕರಿಸಿದ್ದರಿಂದ ಮುನಿಸಿಕೊಂಡಿದ್ದ ಕೃಷ್ಣ ಮತ್ತು ಅವರ ಬೆಂಬಲಿಗರು ಅಂತಿಮ ಕ್ಷಣಗಳಲ್ಲಿ ಮಧು ಮಾದೇಗೌಡರಿಗೆ ಕೈಕೊಟ್ಟು ಕಲ್ಪನಾರ ಕೈ ಹಿಡಿಯಲಿದ್ದಾರೆಂಬ ಮಾತುಗಳು ಕ್ಷೇತ್ರದಾದ್ಯಂತ ಹರಡಿದೆ.

ತಮ್ಮ ಸ್ವಾರ್ಥಕ್ಕಾಗಿ ದೇವೇಗೌಡ, ಕುಮಾರಸ್ವಾಮಿ ಮತ್ತು ತಮ್ಮಣ್ಣ ಕಲ್ಪನಾರನ್ನು ನಡೆಸಿಕೊಂಡ ರೀತಿಯಂತೂ ಕ್ಷೇತ್ರದ ಮಹಿಳೆಯರಲ್ಲಿ ಭಾರೀ ಅನುಕಂಪದ ಅಲೆಯನ್ನೇ ಸೃಷ್ಟಿಸಿದೆ. ಇದೆಲ್ಲಾ ಮತಗಳಾಗಿ ಪರಿವರ್ತನೆಗೊಂಡರೆ ತಮ್ಮಣ್ಣ ನಿಜಕ್ಕೂ ಏದುಸಿರು ಬಿಡಬೇಕಾಗಬಹುದು.


ಇಷ್ಟೆಲ್ಲಾ ಆದರೂ ಸದ್ಯ ತಮ್ಮಣ್ಣನವರೇ ಒಂದು ಹೆಜ್ಜೆ ಮುಂದಿದ್ದಾರೆ. ಕಳೆದ ಎರಡು ಚುನಾವಣೆಯಲ್ಲಿ ತಮ್ಮಣ್ಣನವರ ದುಡ್ಡಿನ ದರ್ಪಕ್ಕೆ ಕಡಿವಾಣ ಹಾಕಿದವರು ಮದ್ದೂರಿನ ಮತದಾರರು. ಚುನಾವಣೆಗೆ ಇನ್ನು 10 ದಿನಗಳು ಬಾಕಿ ಇವೆ. ಅಷ್ಟರಲ್ಲಿ ಏನಾದರೂ ಬದಲಾವಣೆಗಳು ನಡೆದಲ್ಲಿ ಕಲ್ಪನಾ ಸಿದ್ದರಾಜುಗೂ ಮತ್ತೊಂದು ಅವಕಾಶ ಸಿಗಬಹುದು. ○

ಚಿಕ್ಕಮಗಳೂರು: ಎಲ್ಲ ಸರಿಹೋದರೆ ಚೆಡ್ಡಿ ದರ್ಬಾರು ಅಂತ್ಯ


ಚಿಕ್ಕಮಗಳೂರಿನ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ...ದ ಬಾರಿ ಬಿಜೆಪಿ ಪ್ರಾಬಲ್ಯ ಸಾಧಿಸಿತ್ತು. ಒಂದು ...ಲದ ಕಾಂಗ್ರೆಸ್‌ನ ಅಬೇಧ್ಯ ಸಾಮ್ರಾಜ್ಯದಂತಿದ್ದ ಈ ...ಲ್ಲೆಯನ್ನು ಭೇದಿಸಲು ಚೆಡ್ಡಿಗಳು ಬಾಬಾಬುಡನ್‌ಗಿರಿಯ ...ವಾದವನ್ನು ಸೃಷ್ಟಿಸಿದ್ದರು. ಅದಕ್ಕೆ ...ಯಾಗಿ ಕಾಂಗ್ರೆಸ್ಸಿಗರಲ್ಲಿ ಬೇರೂರಿರುವ ...ಲೆಳೆಯುವ ತಂತ್ರಗಳು ಮತ್ತು ...ಡಿಎಸ್‌ನ ವಿಫಲ ಪ್ರಯತ್ನಗಳು ...ಜೆಪಿಯ ಏಳಿಗೆಗೆ ನೆರವಾಗಿದ್ದವು. ಬಾಬಾ ...ಡನ್‌ಗಿರಿ ವಿವಾದದ ಮೂಲಕವೇ ಗೆದ್ದು ...ದಿದ್ದ 'ಹಿಂದೂತ್ವವಾದಿ ವೀರ' ಬಿಜೆಪಿ ...ಸಕರಲ್ಲಿ ಡಿ.ಎನ್.ಜೀವರಾಜ್ ಮತ್ತು ...ಟಿ.ರವಿ ಭ್ರಷ್ಟಾಚಾರದ ಆರೋಪಗಳನ್ನು ...ೂತ್ತು ಈಗ ಲೋಕಾಯುಕ್ತ ...ಕಟೆಯನ್ನು ಹತ್ತಿದ್ದಾರೆ. ಚೆಡ್ಡಿಗಳ ಬಗ್ಗೆ ...ಲ್ಲೆಯ ಜನ ಎಷ್ಟು ರೋಸಿ ಹೋಗಿ ...ರೆಂದರೆ ಅಕಸ್ಮಾತ್ ಎಲ್ಲವೂ ಸರಿಯಾಗಿ ...ದರೆ ಇಲ್ಲಿನ ಐದೂ ಕ್ಷೇತ್ರಗಳಲ್ಲಿ ಬಿಜೆಪಿ ...ದನ್ನು ಗೆಲ್ಲುವುದೂ ಕಷ್ಟವಾಗಬಹುದು.

ದಲಿತ ಕುಮಾರಸ್ವಾಮಿ ನಾಯಕನಾಗಿ ಬೆಳೆದಿರುವುದನ್ನು ಚೆಡ್ಡಿಗಳಿಗೆ ಸಹಿಸಲಾಗುತ್ತಿಲ್ಲ. ಚೆಡ್ಡಿಗಳ ವಿರೋಧದ ನಡುವೆಯೂ ಕುಮಾರಸ್ವಾಮಿ ಟಿಕೆಟ್ ಪಡೆದಿದ್ದರೂ ಅವರನ್ನು ಸೋಲಿಸುವ ಇರಾದೆ ಚೆಡ್ಡಿ ಬಲಿಷ್ಠರದ್ದು.


ಹೊಸ ಮುಖ ಬೀರೂರು ದೇವರಾಜ್‌ಗೆ ಅವಕಾಶ ದೊರೆತಿದೆ. ಆದರೆ ಇಲ್ಲಿ ದೇವೇಗೌಡರ ಮಾನಸ ಪುತ್ರ ಜೆಡಿಎಸ್‌ನ ವೈ.ಎಸ್.ವಿ.ದತ್ತಾ ಪುಟಿದೇಳುವ ಹಂತದಲ್ಲಿದ್ದಾರೆ. ಕಾಂಗ್ರೆಸ್‌ನ ಲಿಂಗಾಯತ ಮುಖಂಡ ಕೆ.ಬಿ.ಮಲ್ಲಿಕಾರ್ಜುನ ಹೇಳಿಕೊಳ್ಳುವಂತೆ ಬಲಾಢ್ಯ ಶಕ್ತಿಯಲ್ಲ. ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗರಾಗಿದ್ದ ಕೆಎಂಕೆ ಸಹೋದರ ಕೆ.ಎಂ.ಕೆಂಪರಾಜು ಕಾಂಗ್ರೆಸ್ ತ್ಯಜಿಸಿ ಬಿಎಸ್‌ಆರ್ ಅಭ್ಯರ್ಥಿಯಾಗಿದ್ದಾರೆ. ಅತ್ಯಧಿಕ ಕುರುಬ ಮತ್ತು ಲಿಂಗಾಯತ ಮತಗಳಿರುವ ಈ ಕ್ಷೇತ್ರದಲ್ಲಿ ದತ್ತಾ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.



ಜೀವರಾಜ್



ಸಿ.ಟಿ.ರವಿ



ಎಂ.ಪಿ.ಕುಮಾರಸ್ವಾಮಿ

ಚಿಕ್ಕಮಗಳೂರು

ಚಿಕ್ಕಮಗಳೂರಿನಲ್ಲಿ ಬಿಜೆಪಿಯ ಅಭ್ಯರ್ಥಿ ಆಗಿರುವ ...ನ್ನತ ಶಿಕ್ಷಣ ಸಚಿವ ಸಿ.ಟಿ.ರವಿ ಮಾಡಿಕೊಂಡಿರುವ ...ಗರಣಗಳು ಮತ್ತು ಅಪಾರ ಸಂಪತ್ತೇ ಆತನನ್ನು ...ುಗ್ಗರಿಸುವ ಸಾಧ್ಯತೆಯಿದೆ. ಕಾಂಗ್ರೆಸ್‌ನ ಶಾಂತೇಗೌಡ ...ತ್ತು ಜೆಡಿಎಸ್‌ನ ಧರ್ಮೇಗೌಡ ರವಿಯನ್ನು ಸೋಲಿಸುವ ...ತ್ಸಾಹದಲ್ಲಿದ್ದಾರೆ.

ಲಿಂಗಾಯತರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ...ಡಿಯೂರಪ್ಪ ಗಟ್ಟಿ ಮನಸ್ಸು ಮಾಡಿದ್ದರೆ ರವಿಗೆ ಟಾಂಗು ...ನ್ನೂ ನಿಶ್ಚಿತವಾಗಿರುತ್ತಿತ್ತು. ಆದರೂ ಕೆಜೆಪಿಯ ...ದಮೂರ್ತಿ ಪಡೆಯುವ ಒಂದೊಂದು ಮತಗಳೂ ...ಯ ಕೋಟೆಯನ್ನು ಅಭದ್ರಗೊಳಿಸಲಿದೆ.

ಮೂಡಿಗೆರೆ

ಮೂಡಿಗೆರೆಯ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ...ುದ್ಧ ಆರೆಸ್ಸೆಸ್ಸಿನ ಚೆಡ್ಡಿಗಳೇ ಕುಟಿಲ ತಂತ್ರಗಾರಿಕೆ ...ಸಿದ್ದಾರೆ. ಬಿಜೆಪಿ ಸತತ ಎರಡು ಸಲ ಗೆದ್ದಿರುವ ಈ

ಜಿಲ್ಲೆಯಲ್ಲಿನ ಇತರೆ ಬಿಜೆಪಿ ಶಾಸಕರಿಗೆ ಹೋಲಿಸಿದರೆ ಮೂಡಿಗೆರೆ ಮೀಸಲು ಕ್ಷೇತ್ರದಲ್ಲಿ ಕುಮಾರಸ್ವಾಮಿ ಪರವಾಗಿಲ್ಲ. ಆದರೆ ಕ್ಷೇತ್ರದ ಸದ್ಯದ ಪರಿಸ್ಥಿತಿ ಇವರ ಪರವಾಗಿಲ್ಲ. ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಮೂಡಿಗೆರೆಗೆ ಪಾದವಿಟ್ಟರೂ ಕುಮಾರಸ್ವಾಮಿ ಪರ ಪ್ರಚಾರಕ್ಕಿಳಿಯದೇ ವಾಪಸಾಗಿದ್ದು ಸುದ್ದಿಯಾಗಿದೆ. ಜಿಲ್ಲಾಧ್ಯಕ್ಷ ಎಂ.ಕೆ. ಪ್ರಾಣೇಶ್ ಕುಮಾರಸ್ವಾಮಿ ಪರ ಕ್ಷೇತ್ರದಲ್ಲಿ ಪ್ರಚಾರಕ್ಕಿಳಿದಿಲ್ಲ.

ಬಿಜೆಪಿಯೊಳಗಿನ ಇಂಥ ಭಿನ್ನಮತೀಯರ ಲಾಭ ಗಿಟ್ಟಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಹೆಣಗುತ್ತಿವೆ. ಕಾಂಗ್ರೆಸ್‌ನ ಬಿ.ಎನ್.ಚಂದ್ರಪ್ಪ ಸೆದ್ದು ಹೊಡೆಯುವ ಚಾಣಾಕ್ಷ ಚದುರಂಗದಾಟದಲ್ಲಿ ಮುಂದಿದ್ದಾರೆ. ಕಾಂಗ್ರೆಸ್ ಟಿಕೆಟ್ ದಕ್ಕದಿದ್ದಕ್ಕೆ ಜೆಡಿಎಸ್ ಮಡಿಲು ಸೇರಿರುವ ಬಿ.ಬಿ.ನಿಂಗಯ್ಯ ಸದೃಢದ ಹಾದಿಯಲ್ಲಿದ್ದಾರೆ. ಛಲವುಳ್ಳ ಹೋರಾಟಗಾರ ಸಿಪಿಐನ ಸಾತಿ ಸುಂದರೇಶ್ ಗೆಲ್ಲಲೇಬೇಕಾದವರ ಸಾಲಿನಲ್ಲಿದ್ದಾರೆ. ಅವರಿಗೆ 'ಸೂರಿಗಾಗಿ ಸಮರ'ದ ಬಲವಿದೆ.

ಕಡೂರಿನಲ್ಲಿ ಬಿಜೆಪಿಯ ವೈ.ಸಿ.ವಿಶ್ವನಾಥ್ ಬದಲು ...

ಕೆಎಂಕೆ ನಿಧನದ ಬಳಿಕ ನಡೆದ ಉಪಚುನಾವಣೆಯಲ್ಲಿ ಕಡೂರು ಕ್ಷೇತ್ರದಲ್ಲಿ ವೈ.ಸಿ.ವಿಶ್ವನಾಥ್ ಗೆದ್ದಿದ್ದರು. ಅವತ್ತು ಭೀಕರ ಬರದಿಂದ ತತ್ತರಿಸಿದ್ದ ಈ ಕ್ಷೇತ್ರವನ್ನು ದತ್ತು ತೆಗೆದುಕೊಳ್ಳುವುದಾಗಿ ಯಡಿಯೂರಪ್ಪ ಭರವಸೆ ನೀಡಿದ್ದರು. ಆದರೆ ಅನಂತರ ಯಡ್ಡಿ ಈ ಕಡೆ ತಿರುಗಿಯೂ ನೋಡಲಿಲ್ಲ. ಇದರಿಂದ ಸಹಜವಾಗಿಯೇ ಜನರ ಕಣ್ಣುಗಳು ಯಡ್ಡಿ ವಿರುದ್ಧ ಕೆಂಡವಾಗಿದೆ.

ಇಲ್ಲಿ ದತ್ತ ಗೆಲುವು ಸರಳವಲ್ಲದಿದ್ದರೂ, ಭೀಕರ ಕಾಳಗ ಈ ಕ್ಷೇತ್ರದಲ್ಲಿ ನಡೆಯಲಿಕ್ಕಿಲ್ಲ. ಹುಟ್ಟುಗುಣ ಸುಟ್ಟರೂ ಹೋಗದಂತಿರುವ ಕಾಂಗ್ರೆಸ್ ಮುಖಂಡರ ಕಾಲೆಳೆಯುವ ದುರ್ಗುಣ ಈ ಕ್ಷೇತ್ರದಲ್ಲಿಯೂ ಯಥಾವತ್ತಾಗಿ ಮುಂದುವರಿದಿದೆ.

ಶೃಂಗೇರಿ

ಶೃಂಗೇರಿಯಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ಡಿ.ಎನ್.ಜೀವರಾಜ್ ಸೋಲಿಗೆ ಬ್ರಾಹ್ಮಣ ಸಮುದಾಯ ಮುನ್ನುಡಿ ಬರೆಯುವ ಧಾವಂತದಲ್ಲಿದೆ. ಈ ಕ್ಷೇತ್ರದ ಜನರಿಗೆ ಮೂಲಸೌಕರ್ಯಗಳೂ ಸಂಪೂರ್ಣವಾಗಿ ತಲುಪಿಲ್ಲ. ಸಂಘಪರಿವಾರದ ಮುಖಂಡರ ದರ್ಬಾರು ಸ್ಥಳೀಯರನ್ನು ಕೆರಳಿಸಿದೆ. ಈ ಹಿಂದೆ ಹಿಂದೂತ್ವದ ಅಮಲನ್ನು ಏರಿಸಿಕೊಂಡಿದ್ದ ಬ್ರಾಹ್ಮಣರಲ್ಲಿ ಮತ್ತು ಇತರರಲ್ಲಿ ಅದೀಗ ಇಳಿದಿದ್ದು ಅಭಿವೃದ್ಧಿ ಕಾಣದಿರುವ ರಸ್ತೆ, ಚರಂಡಿ, ಮೋರಿ ಅವರ ಕಣ್ಣುಗಳಿಗೆ ಬೀಳುತ್ತಿವೆ. ಜೊತೆಗೆ ಜೀವರಾಜ್ ಮಾಡಿಕೊಂಡಿರುವ ಅಪಾರ ಸಂಪತ್ತು ಕೂಡ ಜನರಿಗೆ ಕಾಣಿಸುತ್ತಿದೆ. ಈ ಎಲ್ಲ ಕಾರಣಗಳೀಗೆ ಜೀವರಾಜ್‌ಗೆ ತಕ್ಕ ಪಾಠವನ್ನು ಮತದಾರರು ಕಲಿಸಿದರೂ ಅಚ್ಚರಿ ಇಲ್ಲ.

ಜೆಡಿಎಸ್‌ನ ತಳವಾನೆ ರಾಜೇಂದ್ರ ಆಟಕ್ಕುಂಟು ಲೆಕ್ಕಕ್ಕಿಲ್ಲದ ಮನುಷ್ಯನಲ್ಲದಿದ್ದರೂ, ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡರಿಗೆ ಅಡ್ಡಿಯಾಗುವ ಲಕ್ಷಣ ತೀರ ಕಡಿಮೆಯಿದೆ. ಉಳಿದವರದು ಏನಿದ್ದರೂ ಸಂಖ್ಯಾಶಾಸ್ತ್ರ ಪೂರೈಸುವ ಕೆಲಸವಷ್ಟೇ.

ತರೀಕೆರೆ

ತರೀಕೆರೆ ಕ್ಷೇತ್ರದಲ್ಲಿ ಬರೋಬ್ಬರಿ ಹದಿನೇಳು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇಲ್ಲಿ ಸುರೇಶ್ ಹೆಸರು ಪ್ರವರ್ಧಮಾನವಾಗಿದೆ. ಐದು ವರ್ಷ ಬಿಜೆಪಿ ಶಾಸಕನಾಗಿದ್ದು ಕೆಜೆಪಿಯಿಂದ ಸ್ಪರ್ಧಿಸಿರುವ ಡಿ.ಎಸ್.ಸುರೇಶ್‌ನನ್ನು ಸೋಲಿಸಬೇಕೆನ್ನುವ ಉಮೇದಿನಲ್ಲಿ ಮೂವರು ಸುರೇಶ್ ಹೆಸರಿನ ಅಭ್ಯರ್ಥಿಗಳು ಅಖಾಡದಲ್ಲಿದ್ದಾರೆ.


ಬಿಜೆಪಿಯಿಂದ ಹೊಸಮುಖ ಅವಿನಾಶ್, ಸರ್ವೋದಯ ಕರ್ನಾಟಕದ ಡಿ.ಸುರೇಶ್ ಸ್ಪರ್ಧೆ ಎದುರಿಸುತ್ತಿದ್ದಾರೆ. ಕಾಂಗ್ರೆಸ್‌ನ ಶ್ರೀನಿವಾಸ್ ಗೆಲ್ಲುವ ಆತುರದಲ್ಲಿದ್ದಾರೆ. ಕಲ್ಲು ಗಣಿಗಾರಿಕೆ ಖ್ಯಾತಿಯ ಜೆಡಿಎಸ್‌ನ ನಾಗರಾಜ್ ಕಡಿಮೆ ಮಟ್ಟದ ಉದ್ಯಮಿಯೇನಲ್ಲ. ನಿರೀಕ್ಷೆ ಹುಸಿಗೊಳ್ಳದಿದ್ದರೆ ವರ್ಚಸ್ವಿಯಾಗಿ ಬೆಳೆದಿರುವ ಕೆಜೆಪಿಯ ಸುರೇಶ್ ಮಾತ್ರ ನಿರುಮ್ಮಳ.

• ವರದಿಗಾರ

ಜವರಾಯಿಗೌಡ ಗೆದ್ದರೆ ಯಶವಂತಪುರವನ್ನು ಕಾಪಾಡುವವರ್ಯಾರು?

ನಿನ್ನೆಮೊನ್ನೆಯ ತನಕ ಯಶವಂತಪುರವನ್ನು ಪ್ರತಿನಿಧಿಸುತ್ತಿದ್ದ ಶೋಭಾ ಕರಂದ್ಲಾಜೆ ಕೆಜೆಪಿ ನಾಯಕಿಯಾಗಿ ರಾಜಾಜಿನಗರಕ್ಕೆ ವಲಸೆ ಹೊರಟಿದ್ದೇ ತಡ, ದಿಕ್ಕು ದೆಸೆಯಿಲ್ಲದ ಯಶವಂತಪುರದ ಬಿಜೆಪಿ ಪದಾಧಿಕಾರಿಗಳು ಸಾರಾಸಗಟಾಗಿ ಕಾಂಗ್ರೆಸ್ಸಿಗೆ ವಲಸೆ ಹೊರಟಿದ್ದಾರೆ. ಕಳೆದ ಚುನಾವಣೆಯಲ್ಲಿ ಕರಂದ್ಲಾಜೆ ವಿರುದ್ಧ ಕೇವಲ 1052 ಮತಗಳ ಅಂತರದಿಂದ ಸೋತ ಕಾಂಗ್ರೆಸ್ ನಾಯಕ ಎಸ್.ಟಿ. ಸೋಮಶೇಖರ್ ಪರ ಅನುಕಂಪವೋ ಬಿಜೆಪಿ ವಿರುದ್ಧದ ಅಸಹ್ಯವೋ ಅಂತೂ ಈ ಬಾರಿ ಕಾಂಗ್ರೆಸ್ಸಿಗೊಂದು ಅವಕಾಶಕ್ಕೆ ಯಶವಂತಪುರ ಸಜ್ಜಾಗಿರುವಂತಿದೆ.

ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ವಿರುದ್ಧ ಜೆಡಿಎಸ್ ಕಣಕ್ಕಿಳಿಸಿರುವುದು ಜವರಾಯಿಗೌಡ ಎಂಬ ಪ್ರಳಯಾಂತಕನನ್ನು. ದೊಡ್ಡ ಬಿದರಕಲ್ ವಾರ್ಡ್‌ನ ಪಾಲಿಕೆ ಸದಸ್ಯೆ ಗಾಯಿತ್ರಿಯವರ ಪತಿ ಜವರಾಯಿಗೌಡನ ಇತಿಹಾಸ ಮತ್ತು ಜಾತಕ ಕೆದಕ ಹೊರಟರೆ ಅದೇ ನೂರಾರು ಎಕರೆ ಸರ್ಕಾರಿ ಭೂಮಿಯ ದಕಾಯಿತಿಯನ್ನು ಬಿಚ್ಚಿಡುತ್ತದೆ. ಈತನಿಂದಾಗಿ ಬೀದಿಪಾಲಾದ ಬಡ ನಿವೇಶನದಾರರ ಸಂಖ್ಯೆ ಕೂಡ ಸಣ್ಣದೇನಲ್ಲ.


ಜವರಾಯಿಗೌಡ

ಸದ್ಯ ಯಶವಂತಪುರದ ಉದ್ದಕ್ಕೂ ಹಣ, ಹೆಂಡದ ಹೊಳೆಯನ್ನೇ ಹರಿಸುತ್ತಿರುವ ಜವರಾಯಿಗೌಡನಿಗೆ ಕೋಟಿ ಕೋಟಿ ಸುರಿದಾದರೂ ಗೆದ್ದು ಶಾಸಕನಾಗಬೇಕಾದ ದರದು ಏಕೆ ಉದ್ಭವಿಸಿತೆಂಬುದೇ ಅಸಲಿ ಪ್ರಶ್ನೆ. ಇಲ್ಲಿಗೆ ಹತ್ತು ವರ್ಷದ ಹಿಂದೆ ಕಾಮಾಕ್ಷಿಪಾಳ್ಯದ ಸಮೀಪದ ಸಜ್ಜೇಪಾಳ್ಯದಲ್ಲಿ ಒಕ್ಕಲಿಗರ ಸಂಘಕ್ಕೆಂದು ದಾನಿಯೊಬ್ಬಾಕೆ ಬರೆದುಕೊಟ್ಟಿದ್ದ 92 ಎಕರೆಗಳ ಪೈಕಿ 44 ಎಕರೆಗೆ ರಿಯಲ್ ಎಸ್ಟೇಟ್ ಆಸಾಮಿಯೊಬ್ಬ ಒಕ್ಕರಿಸಿದ. ಇದರ ವಿರುದ್ಧ ಒಕ್ಕಲಿಗ ಜನಾಂಗದ ಹಿರಿಯ ನಾಯಕರನೇಕರು ನ್ಯಾಯಾಲಯದ ಮೆಟ್ಟಲೇರಿದರು. ಜನಾಂಗದ ಸೊತ್ತನ್ನು ನೆಲಗಳ್ಳರಿಂದ ಉಳಿಸಿಕೊಳ್ಳುವಲ್ಲಿ ಇನ್ನಿಲ್ಲದ ಪ್ರತಿಭಟನೆಯೂ ನಡೆಯಿತು. ಆದರೆ ಇವತ್ತಿಗೂ ಒಕ್ಕಲಿಗರ ಸಂಘಕ್ಕೆ ಸೇರಿದ ಆ 44 ಎಕರೆ ಭೂಮಿಗೆ ನೆಲಗಳ್ಳರಿಂದ ಮುಕ್ತಿ ಸಿಕ್ಕಿಲ್ಲ.

ಹೀಗೆ ತನ್ನದೇ ಜನಾಂಗದ ಸೊತ್ತನ್ನೂ ಬಿಡದೆ ನುಂಗಲು ಹೊಂಟವನೆ ಸದ್ಯ ಯಶವಂತಪುರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿರುವ ಜವರಾಯಿಗೌಡ!

ನಾಗರಬಾವಿಯಿಂದ ಹಿಡಿದು ಮಾಳಗಾಳ, ಕಾಮಾಕ್ಷಿಪಾಳ್ಯ, ಸುಂಕದ ಕಟ್ಟೆ, ಗೊಲ್ಲರಹಟ್ಟಿ, ತಾವರೆಕೆರೆ ತನಕ ವ್ಯಾಪಿಸಿರುವ ಜವರಾಯಿಗೌಡನ ಭೂ ದರೋಡೆಯ ಸಾಮ್ರಾಜ್ಯದಲ್ಲಿ ಪೊಲೀಸರು, ಬಿಡಿಎ ಅಧಿಕಾರಿಗಳು, ಬೆಂಗಳೂರು ಅಂಡರ್‌ವರ್ಲ್ಡ್‌ನ ಖತರ್‌ನಾಕ್ ರೌಡಿಗಳು ಎಲ್ಲರೂ ಇದ್ದಾರೆ. ಒಂದಾನೊಂದು ಕಾಲದಲ್ಲಿ ಆಟೋ ಓಡಿಸಿಕೊಂಡಿದ್ದು ಆನಂತರ ನಲ್ಲಿ ಕೊಳಾಯಿ ಕೆಲಸಕ್ಕಿಳಿದು, ಕ್ರಮೇಣ ಬ್ರೋಕರ್ ಕೆಲಸಕ್ಕೆ ನಿಂತವನು ಕಂಡೋರ ಸೈಟಿಗೆ ಬೇಲಿ ಸುತ್ತುವುದನ್ನೇ ಕಾಯಕ ಮಾಡಿಕೊಂಡ. ಅದೇ ಹೊತ್ತಿಗೆ ವೀರಭದ್ರಯ್ಯ ಎಂಬ ಐಎಎಸ್ ಅಧಿಕಾರಿ ಬಿಡಿಎ ಭೂಸ್ವಾಧೀನದ ಡಿಸಿಯಾಗಿದ್ದ. ಕೆಂಪೇಗೌಡ ಲೇಔಟ್ ನಿರ್ಮಾಣಕ್ಕೆಂದು ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ 30 ಎಕರೆಯನ್ನು ಜವರಾಯಿಗೌಡ ಕಬಳಿಸಿದ. ಮಾಚೋ ಹಳ್ಳಿಯ ಸೀಗೆಹಳ್ಳಿ ಬಳಿ ಕಸ ಹಾಕುವುದ ಕ್ಕೆಂದು ಬಿಬಿಎಂಪಿ ಕಾಯ್ದಿಟ್ಟುಕೊಂಡಿದ್ದ 33 ಎಕರೆಗೂ ಗತಿ ಕಾಣಿಸಿದ. ಇಷ್ಟೆಲ್ಲಕ್ಕೂ ಜವರಾಯಿಗೌಡನ ಜೊತೆ ಪಾಲುದಾರನಾಗಿ ದ್ದವನು ನೈಸ್ ಖೇಣಿಯ ಛೇಲಾ ರುದ್ರೇಶ!

ಮುಂದೆ ಇದೇ ರುದ್ರೇಶ ನೈಸ್ ಖೇಣಿಯ ಭೂಕಬಳಿಕೆಗೆ ಸಹಾಯಕನಾಗಿ ನಿಂತು ಖೇಣಿಯ ದುರಾಚಾರದ ವಿರುದ್ಧ ರೈತರ ಸಂಘಟನೆಯಲ್ಲಿ ತೊಡಗಿದ್ದ ರೈತನಾಯಕ ಪಂಚಲಿಂಗಯ್ಯನ ಬೆಂಬಲಿಗ ಸಿದ್ದಲಿಂಗ ಪ್ರಭುವನ್ನು ಸುಪಾರಿಕೊಟ್ಟು ಕೊಲ್ಲಿಸಿದಾಗ ಇದೇ ಜವರಾಯಿಗೌಡ ರುದ್ರೇಶನ ಬೆಂಬಲಕ್ಕೆ ನಿಂತಿದ್ದ!

ಅಷ್ಟಕ್ಕೂ ರೈತನಾಯಕ ಪಂಚಲಿಂಗಯ್ಯ ದೇವೇಗೌಡರ ಪಕ್ಕಾ ಅನುಯಾಯಿಯಾಗಿದ್ದ ಮತ್ತು ಇದೇ ಯಶವಂತಪುರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿ ಕರಂದ್ಲಾಜೆ ವಿರುದ್ಧ 35 ಸಾವಿರಕ್ಕೂ ಅಧಿಕ ಮತ ಗಳಿಸಿದ್ದ. ತನ್ನದೇ ಪಕ್ಷದ ನಾಯಕನಿಗಾಗಲಿ, ಪಕ್ಷದ ಹೋರಾಟಕ್ಕಾಗಲಿ ಬದ್ಧನಲ್ಲದ ಜವರಾಯಿಗೌಡನಿಗೆ ಭೂಕಬಳಿಕೆ ಬಿಟ್ಟರೆ ಬೇರೇನೂ ಮುಖ್ಯವಾಗಿರಲಿಲ್ಲ.

ಹೀಗೆ ಸಿಕ್ಕಸಿಕ್ಕಲ್ಲಿ ಕಂಡೋರ ಆಸ್ತಿಗೆ ವಕ್ಕರಿಸುತ್ತಲೇ ಬಂದ ಜವರಾಯಿ ಗೌಡನ ಅಸಂಖ್ಯ ಭೂಕಬಳಿಕೆಗಳಲ್ಲಿ ಪ್ರಮುಖವಾದದ್ದು ಮಾಗಡಿ ರಸ್ತೆ ಹೇರೋಹಳ್ಳಿಯ ಶ್ರೀನಿವಾಸನಗರವೆಂಬ ಇಡೀ ಬಡಾವಣೆಯನ್ನೇ ನುಂಗಲು ಹೊರಟಿರುವುದು. ಹೇರೋಹಳ್ಳಿಯಲ್ಲಿ ಸ.ನಂ. 165, 166 ಮತ್ತು 167ರಲ್ಲಿ ತಲೆ ಎತ್ತಿದ ಶ್ರೀನಿವಾಸ ನಗರ ಬಡಾವಣೆಯಲ್ಲಿ ಒಟ್ಟು 181 ನಿವೇಶನಗಳಿವೆ.

ಪಂಚಲಿಂಗಯ್ಯ ಮತ್ತು ಕೊಲೆಯಾದ ಸಿದ್ಲಿಂಗ ಪ್ರಭು


ಯಶವಂತಪುರಕ್ಕೆ ಬಿಜೆಪಿಯಿಂದ ನಿಂತಿದ್ದ ಶೋಭಾ ಕರಂದ್ಲಾಜೆ ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿ... ರೈತನಾಯಕ ಪಂಚಲಿಂಗಯ್ಯಗೆ ಕಳೆದ ಚುನಾವಣೆಯಲ್ಲಿ ಬಂದ 35 ಸಾವಿರ ಮತಗಳ ಪೈಕಿ ಕನಿಷ್ಠ ಸಾವಿ... ಮತಗಳಾದರೂ ಕಮ್ಮಿಯಾಗಿದ್ದರೆ ಸೋಮಶೇಖರ್ ಸಲೀಸಾಗಿ ಗೆದ್ದು ಬಿಡುತ್ತಿದ್ದರು. ಅನ್ಯಾಯವಾಗಿ ಸೋಮಶೇಖರ... ಸೋತಿದ್ದು ಒಂದೆಡೆಯಾದರೆ ಗೆದ್ದ ಬಿಜೆಪಿಯನ್ನು ಮುಂದಿಟ್ಟುಕೊಂಡೇ ನೈಸ್ ಖೇಣಿ ಮತ್ತು ರುದ್ರೇಶ ರೈ... ಹೋರಾಟಗಾರ ಸಿದ್ದಲಿಂಗ ಪ್ರಭುವನ್ನು ಕೊಲ್ಲಿಸಿಬಿಟ್ಟರು.

ಸಿದ್ದಲಿಂಗ ಪ್ರಭು ಹತ್ಯೆಯ ವಿರುದ್ಧ ಪಂಚಲಿಂಗಯ್ಯ ಇನ್ನಿಲ್ಲದಂತೆ ಹೋರಾಟಕ್ಕಿಳಿದರು. ಅದಕ್ಕೆ ಸೋಮಶೇಖರ... ಕೂಡ ಧ್ವನಿಗೂಡಿಸಿದ್ದರು. ದುರಂತವೆಂದರೆ ಸಿದ್ದಲಿಂಗಪ್ರಭು ಕೊಲೆಯ ಮುಖ್ಯ ಆರೋಪಿ ರುದ್ರೇಶನನ್ನು ಬಂಧಿಸುವುದಿರಲಿ... ನೈಸ್ ಖೇಣಿಯ ಹೆಸರನ್ನು ಕೂಡ ಎಫ್‌ಐಆರ್‌ನಲ್ಲಿ ಸೇರಿಸಲಾಗಲಿಲ್ಲ. ಬಹುಶಃ ಸೋಮಶೇಖರ್ ಗೆದ್ದು ಶಾಸಕರಾಗಿದ್ದ... ರೈತನಾಯಕ ಪಂಚಲಿಂಗಯ್ಯನಿಗೆ ಈ ಗತಿಯಾಗುತ್ತಿರಲಿಲ್ಲ, ಹೋರಾಟಗಾರನೊಬ್ಬನ ಹತ್ಯೆ ಕೂಡ ನಡೆಯುತ್ತಿರಲಿಲ್ಲ...

ಈ ತಪ್ಪನ್ನು ಅರಿತೇ ಈಗ ಪಂಚಲಿಂಗಯ್ಯ ಕಾಂಗ್ರೆಸ್ ಸೇರ್ಪಡೆಗೊಂಡು ಸೋಮಶೇಖರ್ ಬೆಂಬಲಕ್ಕೆ... ನಿಂತಿದ್ದಾರೆ. ತನಗೆ ಜೆಡಿಎಸ್ ಟಿಕೆಟ್ ತಪ್ಪಿಸಿದ ಜವರಾಯಿಗೌಡನ ವಿರುದ್ಧ ಪಂಚಲಿಂಗಯ್ಯಗೂ ಆಕ್ರೋಶವಿದೆ... ಕಳೆದ ಬಾರಿ ಪಡೆದ 35 ಸಾವಿರ ಮತಗಳ ಪೈಕಿ ಪಂಚಲಿಂಗಯ್ಯ ಅರ್ಧದಷ್ಟನ್ನು ಕಾಂಗ್ರೆಸ್ಸಿಗೆ ಹಾಕಿಸಿದರೂ... ಸೋಮಶೇಖರ್ ಗೆದ್ದುಬಿಡುತ್ತಾರೆ. ಇದೆಲ್ಲಕ್ಕೂ ಮಿಗಿಲಾಗಿ ಬಿಜೆಪಿ ವಿರುದ್ಧ ಮತದಾರರಲ್ಲೇ ಅಸಹ್ಯ ಹುಟ್ಟಿದೆ.

ನಿವೇಶನದಾರರ ಪೈಕಿ ಬಹುತೇಕರು ಒಕ್ಕಲಿಗರು ಮತ್ತು ಮುಸ್ಲಿಮರು ಸೇರಿದಂತೆ ಬೇರೆಲ್ಲಾ ಹಿಂದೂ ಜಾತಿಗಳವರೂ ಇದ್ದಾರೆ. 1990ರಲ್ಲಿ ಮೂಲ ಮಾಲಿಕರಿಂದ ಭೂಮಿ ಖರೀದಿಸಿ ಶುದ್ಧ ಕ್ರಯಕ್ಕೆ ಪಡೆದೇ ನಿವೇಶನವನ್ನು ಅನುಭವಿಸಿಕೊಂಡು ಬಂದಿರುವವರಿಗೆ 2004ರಲ್ಲಿ ಒಕ್ಕರಿಸಿದವನು ಜವರಾಯಿ ಗೌಡ.

ಏಕಾಏಕಿ ರೌಡಿ ಗ್ಯಾಂಗ್ ಕಟ್ಟಿಕೊಂಡು ಬುಲ್ಡೋಜರ್ ಸಮೇತ ನುಗ್ಗಿದ ಜವರಾಯಿ ಗೌಡ ಅಟ್ಟಹಾಸಕ್ಕೆ, ನಿವೇಶನದಾರರು ಕಟ್ಟಿಸಿದ್ದ ಕಾಂಪೌಂಡ್, ಶೆಡ್ಡು, ಮನೆಗಳೆಲ್ಲ ನೆಲಸಮಗೊಂಡವು. ಇದರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರೆ ನಯಾಪೈಸೆಯ ಪ್ರಯೋಜನವಾಗಲಿಲ್ಲ. ಕೊನೆಗೆ ಕೋರ್ಟ್ ಮೊರೆ ಹೊಕ್ಕ ನಿವೇಶನದಾರರ ಪರವಾಗಿ ಪರ್ಮನೆಂಟ್ ಇಂಜಕ್ಷನ್ ಆರ್ಡರ್ ಸಿಕ್ಕಿದೆ. ಇದರ ವಿರುದ್ಧ ಮೇಲ್ಮಟ್ಟದ ಕೋರ್ಟಿನಲ್ಲಿ ಕ್ಯಾತೆ ಅರ್ಜಿ ಹಾಕಿದ ಜವರಾಯಿ ಗೌಡನಿಗೆ ಕೋರ್ಟ್ ಛೀಮಾರಿ ಹಾಕಿ ದಂಡದ ಸಮೇತ ಆತನ ಅರ್ಜಿಯನ್ನು ವಜಾ ಮಾಡಿದೆ.


ಎಸ್.ಟಿ.ಸೋಮಶೇಖರ್


ಹಾಗಿದ್ದೂ ದುರಾಶೆ ಬಿಡದ ಜವರಾಯಿ ತನ್ನ ಭೂದರೋಡೆಯ ಬಲಗೈ ಬಂಟ ಚಂದ್ರು ಎಂಬಾತನನ್ನು ಮುಂದೆ ಬಿಟ್ಟು ತಾನು ನಕಲಿ ದಾಖಲೆಗಳನ್ನು ಬಳ... ವಕ್ಕರಿಸಿದ್ದ ಹೇರೋಹಳ್ಳಿಯ ಭೂಮಿಯನ್ನು ಚಂದ್ರು... ಮಾರಿದಂತೆ ಮತ್ತೊಂದು ದಾಖಲೆ ಸೃಷ್ಟಿಸಿದ್ದ... ನಿವೇಶನದಾರರ ವಿರುದ್ಧ ಚಂದ್ರು ನೇತೃತ್ವದ ರೌಡಿ ಪಡೆಯನ್ನು... ಛೂ ಬಿಟ್ಟ. ಕೋರ್ಟಿನ ಛೀಮಾರಿ ಹಾಕಿಯೂ... ಜವರಾಯಿಗೌಡನಿಗೆ ದಂಡ ಹಾಕಿ... ಮೇಲೂ ತನ್ನದಲ್ಲದ ಬೇರಾರದ್ದೋ... ಸೊತ್ತನ್ನು ತನ್ನ ಛೇಲನಿಗೆ ತಾನೇ... ಮಾರಿದಂತೆ ಮಾಡಿ ಆನಂತರ ಆತ... ಮೂಲಕ ರೌಡಿ ಪಡೆಯನ್ನು ಛೂಬಿಟ್ಟು... ಸೈಟುದಾರರ ಮೇಲೆ ಗೂಂಡಾಗಿರಿಗಿಳಿ... ಜವರಾಯಿ ಗೌಡನಿಗೆ ಕೋರ್ಟು... ಕಾನೂನು ಯಾವ ಲೆಕ್ಕ?

ಈಗ ಕೋರ್ಟ್ ಆದೇಶವನ್ನು... ಲೆಕ್ಕಿಸದೆ ಛೇಲಾ ಚಂದ್ರನ ಮೂಲಕ... ರೌಡಿಗಳನ್ನು ಛೂಬಿಟ್ಟು ಶ್ರೀನಿವಾಸನಗರ... ಹತ್ತಾರು ಮನೆಗಳಿಗೆ ಬುಲ್ಡೋಜರ್... ನುಗ್ಗಿಸಿದ್ದಾನೆ. ನಿವೇಶನದಾರರ... ಬಡಾವಣೆಗೆಂದು ನೆಟ್ಟಿದ್ದ ಫಲಕಕ್ಕೆ ಲಾರಿ ಹತ್ತಿ... ನೆಲಸಮಗೊಳಿಸಿದ್ದಾನೆ. ಮಾಗಡಿ ರಸ್ತೆ ಬಿಇಎಲ್ ಬಡಾವಣೆ... ಈಸ್ಟ್‌ವೆಸ್ಟ್ ಕಾಲೇಜಿನಿಂದ ವಿಶ್ವೇಶ್ವರಯ್ಯ ಲೇಔಟ್, 10... ಅಡಿ ರಸ್ತೆ ಮತ್ತು ಉಪಕಾರ್ ಬಡಾವಣೆಗೆ ಸಂಪರ್ಕ...

ಉದಯ ಗರುಡನ ಪಾಪದ ರೊಕ್ಕ: ಚಿಕ್ಕಪೇಟೆಗೆ 'ದೇವಿ'ಯೇ ದಿಕ್ಕಾ?

ಭೂಗಳ್ಳರು, ದಕಾಯಿತರು, ಗಣಿ ಕಳ್ಳರು, ಲಿಕ್ಕರ್ ದೊರೆಗಳೆಲ್ಲ ರಾಜಕಾರಣಿಗಳಾದರೆ ಏನಾಗುತ್ತದೆ ಎಂಬುದನ್ನು ಜೈಲು ಪಾಲಾದ ಕಟ್ಟಾನಾಯ್ಡು, ಕೃಷ್ಣಯ್ಯಶೆಟ್ಟಿ, ಗಾಲಿ ರೆಡ್ಡಿಯಂಥವರನ್ನು ನೋಡಿಯಾದರೂ ಬಿಜೆಪಿ ಪಾಠ ಕಲಿಯಬೇಕಿತ್ತು, ಕಲಿತಿದ್ದರೆ ಉದಯ್ ಗರುಡಾಚಾರ್‌ನಂಥ ಹುಟ್ಟಾ ನೆಲಗಳ್ಳನನ್ನು ಚಿಕ್ಕಪೇಟೆಯ ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡುವ ಹರಕತ್ತಾದರೂ ಏನಿತ್ತು?

ಸದ್ಯ ಚಿಕ್ಕಪೇಟೆಯಿಂದ ಬಿಜೆಪಿ ಶಾಸಕನಾಗಿದ್ದ ಹೇಮ ಚಂದ್ರ ಸಾಗರ್ ಗೆದ್ದು ಹೋದದ್ದೇ ಕೊನೆ. ಯಡ್ಡಿಯನ್ನು ಮುಂದಿಟ್ಟುಕೊಂಡು ಡೀನೋಟಿಫಿಕೇಶನ್ ಮೂಲಕ ಬೇಕಾಬಿಟ್ಟಿ ಬಿಡಿಎ ಜಮೀನನ್ನು ಕೊಳ್ಳೆ ಹೊಡೆದದ್ದು ಬಿಟ್ಟರೆ ಹೇಮಚಂದ್ರ ಸಾಗರ್ ಚಿಕ್ಕಪೇಟೆಯ ಮತದಾರರ ಕಣ್ಣಿಗೆ ಬಿದ್ದಿದ್ದೇ ಕಮ್ಮಿ. ಶಾಸಕರನ್ನು ಹುಡುಕಿಕೊಂಡು ದೂರದ ಜಯನಗರಕ್ಕೋ ಜೆ.ಪಿ.ನಗರಕ್ಕೋ ಬರಬೇಕು. ನೀರಿನ ಪ್ರಾಬ್ಲಮ್ಮಿಗೆ ಜಲಮಂಡಳಿಗೆ ಹೋಗು, ಮೋರಿ ಪ್ರಾಬ್ಲಮ್ಮಾದರೆ ಕಾರ್ಪೋರೇಷನ್ನಿಗೆ ಹೋಗು, ಕ್ಯಾತೆ ಜಗಳ ವಾದರೆ ಪೊಲೀಸ್ ಸ್ಟೇಷನ್ನಿಗೆ ಹೋಗು ಎಂಬ ಸಿದ್ಧ ಉತ್ತರ ರೆಡಿಮಾಡಿಕೊಂಡೇ ಮತದಾರರನ್ನು ಸಾಗಹಾಕುತ್ತಿದ್ದ ಹೇಮಚಂದ್ರ ಸಾಗರ್ ಗೆದ್ದು ಶಾಸಕನಾಗಿದ್ದು ಕೂಡ ಆಕಸ್ಮಿಕವಾಗೆ.


ಉದಯ್‌ಗರುಡಾಚಾರ್

ಆ ಹೊತ್ತಿಗೆ ಬಿಜೆಪಿ ಅಲೆ ಬೇರೆ ಇತ್ತು. ಕಾಂಗ್ರೆಸ್ಸಿನಿಂದ ಆರ್.ವಿ. ದೇವರಾಜ್ ಇನ್ನೇನು ಗೆದ್ದೇ ಬಿಟ್ಟರು ಎಂಬಂತಿತ್ತು. ಆದರೆ ಜೆಡಿಎಸ್‌ನಿಂದ ನಿಂತಿದ್ದ ಜಮೀರ್ ತಮ್ಮ ಮುಜಮ್ಮಿಲ್ ಖಾನ್ ಸರಿಸುಮಾರು 23 ಸಾವಿರದಷ್ಟು ಮುಸ್ಲಿಂ ಮತಗಳನ್ನು ಕಿತ್ತಿದ್ದರಿಂದಾಗಿ ತಾನೂ ಸೋತು ಕಾಂಗ್ರೆಸ್ಸಿನ ದೇವಿಯನ್ನೂ ಸೋಲಿಸಿ ಬಿಜೆಪಿಗೆ ಲಾಭ ತಂದು ಕೊಟ್ಟ. ಹೇಮಚಂದ್ರ ಸಾಗರ್‌ಗೆ 40 ಸಾವಿರದಷ್ಟು ಮತ ಬಂದರೆ ಆರ್.ವಿ. ದೇವರಾಜ್‌ಗೆ 32 ಸಾವಿರಕ್ಕೂ ಅಧಿಕ ಮತಗಳು ಬಂದವು. ಅಂದರೆ ಗೆಲುವಿನ ಅಂತರ ಕೇವಲ 8 ಸಾವಿರ!


ಆದರೆ ಗೆದ್ದ ಹೇಮಚಂದ್ರ ಸಾಗರ್‌ಗೆ ರಾಜಕೀಯ ಹೊಸದು. ಅದರಲ್ಲೂ 40 ಕ್ಕೂ ಅಧಿಕ ಸ್ಲಮ್ಮುಗಳಿರುವ ಚಿಕ್ಕಪೇಟೆಯಂತೂ ಶತಗತಾಯ ಒಗ್ಗದ್ದು. ಸ್ಲಮ್ಮಿನ ಜನಕ್ಕೆ ಎಮ್ಮೆಲ್ಲೆಗೂ ಕೌನ್ಸಿಲರ್‌ಗೂ ವ್ಯತ್ಯಾಸ ಗೊತ್ತಿರುವುದಿಲ್ಲ. ಸಣ್ಣ ಪುಟ್ಟದ್ದಕ್ಕೆಲ್ಲ ಶಾಸಕನ ಮನೆಬಾಗಿಲು ಬಡಿಯುತ್ತಾರೆ. ಜೊತೆಗೆ ರೌಡಿಗಳ ಉಪಟಳ ಬೇರೆ. ದಿನಕ್ಕೆ ವಿವಿಧ ಪೊಲೀಸ್‌ಠಾಣೆಗಳ ತಕರಾರೇ ಬೇಕಾಬಿಟ್ಟಿಯಿರುತ್ತದೆ. ಶಾಸಕನಾದವನು ಕೊಂಚ ಮಡಿವಂತನಾದರೂ ಜನ ಶಾಪ ಹಾಕುತ್ತಾರೆ. ಇದಕ್ಕೆ ಹೇಳಿ ಮಾಡಿಸಿದಂತಿದ್ದದ್ದು ಆರ್.ವಿ. ದೇವರಾಜ್ ಮಾತ್ರವೆ.

ಬರಂಬರುತ್ತ ಜನ ಶಾಸಕ ಹೇಮಚಂದ್ರ ಸಾಗರ್‌ರನ್ನೇ ಮರೆತುಬಿಟ್ಟರು. ಕಾಲಕ್ರಮೇಣ ನಡೆದ ಬಿಬಿಎಂಪಿಯ ಚುನಾವಣೆಯಲ್ಲಿ ಚಿಕ್ಕಪೇಟೆಯ ಏಳು ವಾರ್ಡುಗಳ ಪೈಕಿ ಕಾಂಗ್ರೆಸ್ ನಾಲ್ಕರಲ್ಲಿ ಗೆದ್ದರೆ ಅಧಿಕಾರಸ್ಥ ಬಿಜೆಪಿ ಬರೇ ಮೂರರಲ್ಲಿ ಗೆದ್ದಿತ್ತು. ಬಿಜೆಪಿಯ ಕೌನ್ಸಿಲರ್‌ಗಳು ಗೆದ್ದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ನೂರೋ, ಐವತ್ತೋ ಮತಗಳ ಅಂತರದಿಂದ ಸೋತಿದ್ದರೆ ಕಾಂಗ್ರೆಸ್ ಕೌನ್ಸಿಲರ್‌ಗಳು ಗೆದ್ದಲ್ಲಿ ಬಿಜೆಪಿಗೆ ಠೇವಣಿ ಕೂಡ ಗಿಟ್ಟಲಿಲ್ಲ. ತದನಂತರದ ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ಸಿನ ಕೃಷ್ಣ ಭೈರೇ ಗೌಡರಿಗೆ ಚಿಕ್ಕಪೇಟೆ ಒಂದರಲ್ಲೇ 10 ಸಾವಿರದಷ್ಟು ಲೀಡು ಬಂತು.

ಇದು ಬಿಜೆಪಿಯ ದುರಾಡಳಿತ ಮತ್ತು ಭ್ರಷ್ಟಾಚಾರದ ಸಣ್ಣ ಪರಿಣಾಮ ಮಾತ್ರವಾಗಿತ್ತು. ಈಗ ಈ ಅಂತರ ಮತ್ತಷ್ಟು ಆಳಕ್ಕಿಳಿದಿದೆ. ಏನೇ ಲಗಾಟ ಹೊಡೆದರೂ ಗೆಲ್ಲುವುದು ಕಷ್ಟ ಎಂದೇ ಬಿಜೆಪಿ ಬೆಂಗಳೂರು ಕಂಡ ಮಹಾನ್ ನೆಲಗಳ್ಳ ಮತ್ತು ಖತರ್‌ನಾಕ್ ಡೀಲ್ ಮಾಸ್ಟರ್ ಉದಯ ಗರುಡಾಚಾರ್‌ಗೆ ಟಿಕೆಟ್ ಕೊಟ್ಟಿದೆ. ಜೆಡಿಎಸ್ ನಿವೃತ್ತ ಪೊಲೀಸ್ ಅಧಿಕಾರಿ ನಾರಾಯಣ ಗೌಡರನ್ನು ಕಣಕ್ಕಿಳಿಸಿದೆ. ಕೆಜೆಪಿ ಖಮರ್ ತಾಜ್ ಎಂಬ ಅನಾಮಧೇಯನಿಗೆ ಟಿಕೆಟ್ ನೀಡಿದೆ.

ಎತ್ತಿಂದೆತ್ತ ಲೆಕ್ಕ ಹಾಕಿದರೂ ಮಾಜಿ ಶಾಸಕ ಆರ್.ವಿ. ದೇವಿಯ ಹೊರತಾಗಿ ಬೇರೆ ಯಾವ ಅಭ್ಯರ್ಥಿಗಳೂ ಸ್ಥಳೀಕರಲ್ಲ. ಚುನಾವಣೆಗೆಂದು ಪ್ಯಾಕೇಜ್ ಟೂರ್‌ಗೆ ಬಂದವರಂತೆ ನಿನ್ನೆಮೊನ್ನೆಯಷ್ಟೇ ಮುಖ ತೋರಿಸುತ್ತಿರುವ ಇಂಥ ವಲಸೆ ಕ್ಯಾಂಡಿಡೇಟುಗಳಿಗೆ ಚಿಕ್ಕಪೇಟೆಯ ಗಲ್ಲಿಗಳಿರಲಿ ಕ್ಷೇತ್ರದ ನಕ್ಷೆಯ ಪರಿಚಯವಾಗುವ ಹೊತ್ತಿಗೆ ಚುನಾವಣೆಯೇ ಮುಗಿದಿರುತ್ತದೆ!

ಹಾಗಂತ ಹಡಬೆ ದುಡ್ಡು ಬಿಡಬೇಕಲ್ಲ. ಪಾಲಿಕೆಯ ಆಟದ ಮೈದಾನವನ್ನೇ ಮುಂಡಾಮೋಚಿ ಗರುಡಾಮಾಲ್ ಎಬ್ಬಿಸಿ ರೊಕ್ಕ ಬಾಚುತ್ತಿರುವ ಉದಯ್ ಗರುಡಾಚಾರ್‌ಗೆ ರೊಕ್ಕ ಒಂದಿದ್ದರೆ ಏನು ಬೇಕಾದರೂ ಮಾಡಬಹುದೆಂಬ ಖದೀಮ ಬುದ್ಧಿ. ಟಿಕೆಟ್ಟಿಗೆಂದು ಸುರಿದ ಕೋಟಿ ಕಾಸಿನ ಜೊತೆಗೆ ಚಿಕ್ಕಪೇಟೆಯ ಸ್ಲಮ್ಮುಗಳ ಮತಗಳನ್ನು ಖರೀದಿಸುವುದಕ್ಕೂ ಹಲವು ಕೋಟಿಗಳನ್ನು ಹಿಡಿದೇ ಅಖಾಡಕ್ಕಿಳಿದಿದ್ದಾನೆ. ಕೇವಲ ದುಡ್ಡನ್ನಷ್ಟೇ ಚೆಲ್ಲುವುದಾಗಿದ್ದರೆ ಗರುಡಾ ಉದಯನಿಗೆ ತಲೆ ಬಿಸಿಯಿರಲಿಲ್ಲ. ಆದರೆ ಮಾಡಿದ ಪಾಪವಿದೆಯಲ್ಲ-


ಆರ್.ವಿ.ದೇವರಾಜ್

ಈಜೀಪುರ ಸ್ಲಮ್ಮಿನ ಬಡಬಗ್ಗರನ್ನೆಲ್ಲ ಬೀದಿಪಾಲು ಮಾಡಿ ಅವರ ಜೋಪಡಿಗಳ ಜಮೀನನ್ನು ದೋಚಲು ಯತ್ನಿಸುತ್ತಿರುವ ಉದಯನ ವಿರುದ್ಧ ಈಜೀಪುರ ಸ್ಲಮ್ ವಾಸಿಗಳೇ ಚಿಕ್ಕಪೇಟೆಗೆ ಬಂದು ಪ್ರಚಾರ ಆರಂಭಿಸಿದ್ದಾರೆ. 'ನಮ್ಮ ಸ್ಲಮ್ಮನ್ನೇ ನುಂಗಲು ಬಂದವನು ನಾಳೆ ನಿಮ್ಮನ್ನು ಬೀದಿಗೆ ಹಾಕದೇ ಇರುತ್ತಾನಾ' ಎಂದು ಈಜೀಪುರದ ಕೊಳಗೇರಿಯ ಮಂದಿ ಚಿಕ್ಕಪೇಟೆಯ ಸ್ಲಮ್ಮುಗಳವರನ್ನು ಪ್ರಶ್ನಿಸುತ್ತಿದ್ದಾರೆ. ಇದಕ್ಕೆ ಗರುಡಾ ಉದಯನ ಪ್ರತಿತಂತ್ರವೆಂದರೆ ಪ್ರತಿ ಮನೆಗೂ ಐದೈದು ಸಾವಿರದಂತೆ ದುಡ್ಡು ಹಂಚುವುದು ಮತ್ತು ಪ್ರತಿ ಗಲ್ಲಿಯ ಪುಡಿ ರೌಡಿಗೆ ತಲಾ ಎರಡು ಲಕ್ಷದಂತೆ ಕಾಸು ಕೊಟ್ಟು ಖರೀದಿಸುವುದು. ಹೀಗೆ ಕಾಸುಕೊಟ್ಟು ಜೊತೆ ಹಾಕಿಕೊಂಡ ಪುಡಿರೌಡಿಗಳನ್ನೆಲ್ಲ ಕಲೆಹಾಕಿ ಜೆಡಿಎಸ್ ಮತ್ತು ಕಾಂಗ್ರೆಸ್ಸಿನ ನೂರಾರು ಕಾರ್ಯಕರ್ತರು ಅವರ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಯಾದರೆಂಬ ಹಾಸ್ಯಾಸ್ಪದ ಆಟವನ್ನೂ ಗರುಡಾ ಉದಯ ಆಡಿಸುತ್ತಿದ್ದಾನೆ.

ತಮಾಷೆಯೆಂದರೆ ನಿವೃತ್ತ ಪೊಲೀಸ್ ಅಧಿಕಾರಿ ನಾರಾಯಣಗೌಡರು ವಿವಿಧ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳ ಮೂಲಕ ತಮಗೆ ಪರಿಚಯಸ್ಥ ಹಾಲಿ ರೌಡಿಗಳು, ನಿವೃತ್ತ ರೌಡಿಗಳನ್ನೆಲ್ಲ ಬೆದರಿಸಿ ತಮ್ಮ ಜೊತೆ ಹಾಕಿಕೊಂಡಿದ್ದಾರೆ. ಇನ್ನೆಲ್ಲಿ ಪೊಲೀಸರು ಎಳೆದೊಯ್ದು ಹಿಂಸೆ ಕೊಟ್ಟಾರೋ ಎಂದು ಭೀತಿಗೆ ಬಿದ್ದೇ ಅಳಿದುಳಿದ ರೌಡಿಗಳೆಲ್ಲ ನಾರಾಯಣಗೌಡರಿಗೆ ಶಾಪ ಹಾಕುತ್ತಲೇ ಪ್ರಚಾರಕ್ಕೆ ಬರುತ್ತಿದ್ದಾರೆ. ಒಂದೆಡೆ ಪೊಲೀಸ್ ಗತ್ತು ಮಿಕ್ಕಂತೆ ರೌಡಿಗಳೇ ಸುತ್ತ ಮುತ್ತು!

ನಾರಾಯಣ ಗೌಡರ ತಾಪತ್ರಯ ಮತ್ತು ಚುನಾವಣಾ ಖರ್ಚಿಗಾ... ಪಡುತ್ತಿರುವ ಫಜೀತಿ ಕಂಡ ಅವರ ಪ... ಮತ್ತು ಮಕ್ಕಳೆಲ್ಲ ಸೇರಿಕೊಂಡ... ದೇವೇಗೌಡರ ಮನೆಗೆ ನುಗ್ಗಿದ್ದೇ ಜಗಳ... ಬಿದ್ದರಂತೆ. ಎಲೆಕ್ಷನ್ ಹುಚ್ಚಿಗೆ ಬಿ... ನಾರಾಯಣಗೌಡರ ಫಜೀತಿ ಯಾರಿಗೂ ಬೇಡ!

ಸದ್ಯ ನೇರಾನೇರ ಹಣಾಹಣಿ ಕೂಡ... ಚಿಕ್ಕಪೇಟೆಯಲ್ಲಿ ಕಂಡುಬರುತ್ತಿಲ್ಲ... ಹಳೇರೌಡಿ ಮಲೆಯಾಳಿ ಪ್ರವೀಣನನ್ನು ಕಟ್ಟಿಕೊಂಡು ಕೆಜೆಪಿ ಅಭ್ಯರ್ಥಿ ಖಮರ್‌ತಾಜ್ ಸುತ್ತಾಡಿ ದ್ದೊಂದೇ ಲಾಭ. ಹೇಗೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಗ್ಯಾರಂಟಿ. ಅಂಥಾದ್ದರಲ್ಲಿ ಬಿಜೆಪಿಯ ಗರುಡನನ್ನೋ ಜೆಡಿಎಸ್‌ನ ಗಿಡುಗನನ್ನೋ ನಂಬಿ ಹಾಳಾಗುವುದಕ್ಕಿಂತ ಸ್ಥಳೀಕನಾದ, ಸಣ್ಣಪುಟ್ಟದ್ದಕ್ಕೆಲ್ಲ ನೆರವಿಗೆ ಬರುವ ಕಾಂಗ್ರೆಸ್ಸಿನ ದೇವಿಯನ್ನು ಬೆಂಬಲಿಸುವುದರಲ್ಲೇ ಲಾಭವಿದೆಯೆಂಬುದು ಇಲ್ಲಿನ ಸ್ಲಂವಾಸಿಗಳ ಲೆಕ್ಕಾಚಾರ.

ಹೊಂಬೇಗೌಡನಗರದ ಕೌನ್ಸಿಲರ್ ಚಂದ್ರಪ್ಪ ಮತ್ತು ಜಯನಗರದ ಪಾಲಿಕೆ ಸದಸ್ಯೆ ಗಂಗಾಂಬಿಕೆ ಮಲ್ಲಿಕಾರ್ಜುನ... ರಂಥ ಕಾಂಗ್ರೆಸ್ ಕೌನ್ಸಿಲರ್‌ಗಳಿಂದಾಗಿ ಸಾಕಷ್ಟು ಸುಶಿಕ್ಷಿತರ ಮತಗಳು ದೇವಿಗೆ ಬರಲಿವೆ. ಸಿದ್ದಾಪುರದ ಕೌನ್ಸಿಲರ್ ಉದಯ್‌ಶಂಕರ್ ಮತ್ತು ಸುಧಾಮನಗರದ ಕಾರ್ಪೋರೇಟರ್ ಅವಯ್ ಕೂಡ ದೇವಿಯ ಪರ ಅಖಾಡಕ್ಕಿಳಿದಿದ್ದಾರೆ. ದೇವಿ ಕೂಡ ಪಾಠ ಕಲಿತಂತಿದೆ. ಹಿಂದಿನಂತೆ ಧಾಂಡಿಗರನ್ನು ಕಟ್ಟಿಕೊಂಡು ಓಡಾಡುತ್ತಿಲ್ಲ. ಸುತ್ತಮುತ್ತ ಒರಟರ ಹಿಂಡು ಕಾಣಿಸುತ್ತಿಲ್ಲ. ತಿಂದ ಪೆಟ್ಟು, ಪಟ್ಟ ನೋವು ಏನೆಲ್ಲ ಪಾಠ ಕಲಿಸುತ್ತದೆ ಎಂಬುದಕ್ಕೆ ಮಾರ್ಕೆಟ್ ದೇವಿಯಲ್ಲಾದ ಪರಿವರ್ತನೆಗಿಂತ ಬೇಕೆ? ○



...ಣೇರೋಹಳ್ಳಿ ನಿವೇಶನದಾರರ ಭೂಮಿಯನ್ನು ನೆಲಸಮ ಮಾಡಿರುವುದು

...ಲ್ಪಿಸುತ್ತಿದ್ದ ಒಂದೇ ಒಂದು ರಸ್ತೆಯನ್ನು ಕೂಡ ಬಿಡದೆ ಆಳವಾದ ಹಳ್ಳತೋಡಿ ...ನ ಓಡಾಡುವುದಕ್ಕೂ ಆಗದಂತೆ ಮಾಡಿದ್ದಾನೆ.


ಇದು ಜವರಾಯಿಗೌಡನ ಭೂಡಕಾಯಿತಿ ಮತ್ತು ಗೂಂಡಾಗಿರಿಗೆ ಒಂದು ...ದಾಹರಣೆ ಮಾತ್ರ. ಇಂಥ ಹತ್ತಾರು ಆಸ್ತಿ ವಂಚನೆ ಪ್ರಕರಣಗಳಲ್ಲಿ ಇವತ್ತಿಗೂ ...ವರಾಯಿಗೌಡನ ರೌಡಿ ಪಡೆ ತೊಡಗಿಕೊಂಡೇ ಇದೆ. ಈ ಥರದ ಪ್ರತಿ ...ಸ್ತಿಯೂ ಕೋಟಿ ಕೋಟಿಯ ಲೂಟಿಗೆ ಕಾರಣವಾಗುವಂಥದ್ದೆ. ಕಂಡೋರ ...ಸ್ತಿ ದೋಚಲಿಕ್ಕಾದರೂ ಜವರಾಯಿಗೆ ಎಮ್ಮೆಲ್ಲೆಗಿರಿ ಬೇಕು. ಜೆಡಿಎಸ್ ...ಾಯಕರೊಬ್ಬರಿಗೆ ಟಿಕೆಟ್ಟಿಗೆಂದೇ ಮೂರು ಕೋಟಿ ಕೊಟ್ಟೆ ಎಂದು ...ಜಾರೋಷವಾಗಿ ಹೇಳಿಕೊಳ್ಳುವ ಜವರಾಯಿಗೌಡನಿಗೆ ಅನುಕೂಲವಾಗಲೆಂದೇ ...ಜೆಪಿ ನಾಯಕ ಅಶೋಕ್ ಹೊನ್ನಿಗನಟ್ಟಿ ಕೃಷ್ಣಪ್ಪ ಎಂಬ ಡಮ್ಮಿ ಅಭ್ಯರ್ಥಿಯನ್ನು ...ಾಕಿದ್ದಾರೆ.

ಆದರೆ ಜವರಾಯಿಗೌಡನಿಗೆ ಜನ ಓಟು ಕೊಡಬೇಕಲ್ಲ. ಆತನಿಂದ ಆಸ್ತಿ ...ಳಕೊಂಡು ಬೀದಿಪಾಲಾದ ನೂರಾರು ಮಂದಿ ನಿವೇಶನದಾರರು ಸದ್ಯ ತಮಗಾದ ...ಂಚನೆಯನ್ನು ಕರಪತ್ರದ ಮೂಲಕ ಮನೆ ಮನೆ ಸುತ್ತಿ ಪ್ರಚಾರಕ್ಕಿಳಿದಿದ್ದಾರೆ. ...ಶವಂತಪುರದ ಬಹುತೇಕ ಬಿಜೆಪಿ ಪದಾಧಿಕಾರಿಗಳೆಲ್ಲ ಸಾಮೂಹಿಕವಾಗಿ ...ಂಗ್ರೆಸ್‌ಗೆ ಸೇರ್ಪಡೆಗೊಂಡು ಸೋಮಶೇಖರ್ ಬೆಂಬಲಕ್ಕೆ ನಿಂತಿದ್ದು ಒಂದೆಡೆ ...ಾದರೆ ಜವರಾಯಿ ಕ್ಷೇತ್ರದುದ್ದಗಲಕ್ಕೂ ಹಣ ಹೆಂಡದ ಹೊಳೆ ಹರಿಸುತ್ತಿದ್ದಾನೆ. ...ರಿಯುವ ದುಡ್ಡು ಕೂಡ ಕಂಡೋರ ತಲೆ ಹೊಡೆದದ್ದೆ. ಈತನಿಂದ ಬೀದಿಪಾಲಾ...ದವರ್‍ಯಾರೂ ಹೊರದೇಶದವರೇನಲ್ಲ, ಇಲ್ಲಿನವರೇ, ಒಕ್ಕಲಿಗರು ಮತ್ತು ಕನ್ನಡಿಗರು.

ಕಂಡೋರ ಆಸ್ತಿ ದೋಚಿದ ಕಾಸಲ್ಲಿ ಎಮ್ಮೆಲ್ಲೆಯಾಗಲು ನಿಂತವನು ನಾಳೆ ...ದ್ದು ಶಾಸಕನಾದನೆಂದರೆ ಯಶವಂತಪುರದ ಯಾವ ಸಾರ್ವಜನಿಕ ಆಸ್ತಿ ತಾನೇ ...ಳಿಯಲು ಸಾಧ್ಯ? ಕೋರ್ಟ್ ಆದೇಶಕ್ಕೂ ಬೆಲೆಕೊಡದೆ ಕಟ್ಟಿಸಿದ ...ನೆಗಳಿಗೆ ಬುಲ್ಡೋಜರ್- ರೌಡಿ ಪಡೆ ನುಗ್ಗಿಸುವವನು ನಾಳೆ ಅಸಹಾಯಕ ...ತದಾರರ ಮನೆ ಮಠ ಬಿಡುವುದುಂಟಾ? ಯಶವಂತಪುರ ಕ್ಷೇತ್ರವನ್ನು ...ಪಾಡುವವರ್‍ಯಾರು?

ಬಿಟಿಎಂ ಲೇಔಟ್: ...ಾಮಲಿಂಗಾರೆಡ್ಡಿಗೆ ಎದುರಾಳಿ ದಿಕ್ಕಿಲ್ಲ

ಕಾಂಗ್ರೆಸ್ ಅಧಿಕಾರಕ್ಕೆ ಬರಲಿ ಬಿಡಲಿ ರಾಮಲಿಂಗಾರೆಡ್ಡಿ ಮಾತ್ರ ಎಂಥಾ ...ರೋಧಿ ಅಲೆಯನ್ನೂ ಲೆಕ್ಕಿಸದೆ ಗೆಲ್ಲುತ್ತಲೇ ಬಂದವರು. 1989 ರಿಂದ ...ತತ ಐದು ಬಾರಿ ಗೆದ್ದು ಮಂತ್ರಿಯೂ ಆದ ರಾ.ಲಿಂ. ರೆಡ್ಡಿಗೆ ತೀರ ...ಪೈಪೋಟಿ ಅಂತ ಎದುರಾಗಿದ್ದು ಕಳೆದ ಚುನಾವಣೆಯಲ್ಲಿ. ಪ್ರಸಾದ್ ರೆಡ್ಡಿ ...ಬ ರಿಯಲ್ ಎಸ್ಟೇಟ್ ದೊಕ್ಕಸ್ಥನನ್ನು ಕರೆತಂದು ಬಿಜೆಪಿ ಟಿಕೆಟ್ಟನಿಡಿ ರೆಡ್ಡಿ ...ರುದ್ಧ ಛೂ ಬಿಟ್ಟಿದ್ದ ಯಡ್ಡಿಯ ಹೊಡೆತದ ಫಲವಾಗಿ ರಾ.ಲಿಂ.ರೆಡ್ಡಿ ...ಯಾಸದಿಂದಲೇ ಗೆಲ್ಲಬೇಕಾಯ್ತು. ಬಿಜೆಪಿ ಅಲೆ ಬೇರೆ ಇತ್ತಾದ್ದರಿಂದ ಪ್ರಸಾದ್ ...ಡ್ಡಿಗೆ 44 ಸಾವಿರದಷ್ಟು ಮತ ಬಿದ್ದರೆ ರಾ.ಲಿಂ. ರೆಡ್ಡಿಗೆ ಬಂದದ್ದು 46 ...ವಿರ ಮತಗಳು.



ಅಂದರೆ ಗೆಲುವಿನ ಅಂತರ ಕೇವಲ ಎರಡು ಸಾವಿರವಷ್ಟೆ. ಹಿಂದಿದ್ದ ಜಯನಗರವನ್ನು ಒಡೆದು ಹೊಸ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ಎಂದು ರಚಿಸಿದ್ದ ಪರಿಣಾಮವಾಗಿ ಕಾಂಗ್ರೆಸ್ ನಾಯಕ ರೆಡ್ಡಿ ಈ ಪಾಟಿ ಹೆಣಗಾಡಬೇಕಾಯ್ತು. ಪ್ರಸಾದ್ ರೆಡ್ಡಿಯಂಥ ರಿಯಲ್ ಎಸ್ಟೇಟ್ ದೊಕ್ಕಸ್ಥನ ವಿರುದ್ಧ ಬಿಜೆಪಿಯ ಅಲೆಯಲ್ಲೇ ಈಜಿ ಬಂದ ರೆಡ್ಡಿಗೆ ಈಗ ಬಿಜೆಪಿಯ ವಿರೋಧಿ ಅಲೆಯೇ ಬೀಸುತ್ತಿರುವಾಗ ಗೆಲ್ಲಲು ಏನು ಕಷ್ಟ?


ಕಳೆದ ಪಾಲಿಕೆ ಚುನಾವಣೆಯಲ್ಲಿ ಬಿಟಿಎಂ ಲೇಔಟ್‌ನ ಎಂಟು ವಾರ್ಡುಗಳ ...ಕಿ ಬಿಜೆಪಿ ಮೂರರಲ್ಲಿ ಗೆದ್ದರೆ ಕಾಂಗ್ರೆಸ್ ನಾಲ್ಕು ವಾರ್ಡುಗಳನ್ನು ಹಿಡಿಯಿತು. ...ಪರ್‍ಯಾಸವೆಂದರೆ ಕಳೆದ ಬಾರಿ ರೆಡ್ಡಿ ವಿರುದ್ಧ ಅಂತಾ ಪೈಪೋಟಿ ಕೊಟ್ಟ ...ಸಾದ್ ರೆಡ್ಡಿಯೇ ಈಗ ಬಿಜೆಪಿ ವಿರುದ್ಧ ತಿರುಗಿ ಬಿದ್ದು ಕಾಂಗ್ರೆಸ್ ಕದ ...ಟ್ಟಿದ್ದು ರಾ.ಲಿಂ. ರೆಡ್ಡಿಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ಹಿಂದೆ ...ಲಿಂ. ರೆಡ್ಡಿ ಪ್ರತಿನಿಧಿಸುತ್ತಿದ್ದ ಜಯನಗರದ ಕಾಂಗ್ರೆಸ್ ಟಿಕೆಟ್ ಸಿಕ್ಕೇ ಸಿಗುತ್ತದೆ ...ಂದು ಲೆಕ್ಕ ಹಾಕಿಯೇ ಪ್ರಸಾದ್ ರೆಡ್ಡಿ ಕಾಂಗ್ರೆಸ್ ಸೇರ್ಪಡೆಯಾದರಾದರೂ ...ಕೆಟ್ ಹಂಚಿಕೆಯಲ್ಲಾದ ಯಡವಟ್ಟಿನ ಫಲವಾಗಿ ಕೈಗೆ ಸಿಲುಕಿದ್ದ ಜಯನಗರದ ...ಂಗ್ರೆಸ್ ಟಿಕೆಟ್ ಪ್ರಸಾದ್ ರೆಡ್ಡಿಯ ಬಾಯಿಗೆ ಬರದಂತಾಯ್ತು.

ಇದರಿಂದ ಪ್ರಸಾದ್ ರೆಡ್ಡಿಗೆ ಆಘಾತವಾಗಿದ್ದೇನೋ ಸರಿ. ಆದರೆ ರಾಮಲಿಂಗಾ ...ಡ್ಡಿಗೆ ಮಾತ್ರ ಎದುರಾಳಿಯೇ ಇಲ್ಲದಂತಾಗಿ ಬಿಜೆಪಿ ವಿರೋಧಿ ಅಲೆಯ ...ಂಪರ್ ಅದೃಷ್ಟವೂ ಒಲಿದಂತಾಯ್ತು!

ಸದ್ಯ ಇಡೀ ಬಿಟಿಎಂ ಲೇಔಟ್ ಉದ್ದಕ್ಕೂ ರಾಮಲಿಂಗಾ ರೆಡ್ಡಿಗೆ ಪೂರಕವಾದ ...ಳಿಯೇ ಬೀಸುತ್ತಿದೆ. ಜಕ್ಕಸಂದ್ರದ ಬಿಜೆಪಿ ಕೌನ್ಸಿಲರ್ ಸರಸ್ವತಮ್ಮನವರ ...ಗ ಎನ್. ಸುಧಾಕರ್ ರೆಡ್ಡಿಗೆ ಬಿಜೆಪಿ ಟಿಕೆಟ್ ಕೊಟ್ಟಿದೆ. ಜೆಡಿಎಸ್ ಕೋರ ...ಂಗಲದ ರಮೇಶ್ ರೆಡ್ಡಿ ಎಂಬ ಉದ್ದಿಮೆಪತಿಯನ್ನು ಕಣಕ್ಕಿಳಿಸಿದೆ. ಕೆಜೆಪಿಯಿಂದ ...ಚ್‌ಎಸ್‌ಆರ್ ಲೇಔಟಿನ ಶ್ರೀನಿವಾಸ್ ಪ್ರಚಾರಕ್ಕಿಳಿದಿದ್ದಾನೆ. ಹೆಚ್ಚೆಂದರೆ ಬಿಜೆಪಿಯ ...ಧಾಕರ್ ರೆಡ್ಡಿ ಅಷ್ಟಿಷ್ಟು ಪೈಪೋಟಿ ಕೊಡಬಹುದಾದರೂ ಅದು ಆತನ ...ಯಿ ಕೌನ್ಸಿಲರ್ ಆಗಿರುವ ಜಕ್ಕಸಂದ್ರದ ಸುತ್ತಮುತ್ತಲಿಗಷ್ಟೇ ಸೀಮಿತ. ...ಕಟವೆಂದರೆ ಬಿಜೆಪಿ, ಜೆಡಿಎಸ್, ಕೆಜೆಪಿ ಇತ್ಯಾದಿ ಯಾವ ಪಾರ್ಟಿಗಳಿಂದಲೂ ...ಂಗ್ರೆಸ್ ನಾಯಕ ರಾಮಲಿಂಗಾ ರೆಡ್ಡಿಗೊಬ್ಬ ಸರಿಸಾಟಿಯಾದ ಎದುರಾಳಿಯಿಲ್ಲ. ...ಕೆಂದರೆ ಪಕ್ಷಕ್ಕೆ ಅಧಿಕಾರವಿರಲಿ ಇಲ್ಲದಿರಲಿ ರಾ.ಲಿಂ. ರೆಡ್ಡಿ ಜನಸಾಮಾನ್ಯರಿಂದ ...ರಾದವರಲ್ಲ, ಜೊತೆಗೆ ಬಿಟಿಎಂ ಲೇಔಟ್ ಕ್ಷೇತ್ರವನ್ನು ಅವರೇ ನಿಂತು ...ನಪಟ್ಟಿಗೆ ಅಭಿವೃದ್ಧಿಪಡಿಸಿದ್ದು ಕೂಡ ಜನ ಮರೆತಿಲ್ಲ.

ಸದ್ದಿಲ್ಲದೆ ಸಿದ್ದು ಅಲೆ

ಚುನಾವಣೆ ಯಾವುದೇ ಇರಲಿ ಅದೃಶ್ಯ ಮತದಾರನಿಗೊಂದು ಕಾರಣ ಬೇಕೇ ಬೇಕು. ಅದು ಗೋಕಾಕ್ ವರದಿ ಚಳವಳಿಯಾಗಬಹುದು, ಹೆಗಡೆಯ ಮೌಲ್ಯಾಧಾರಿತ ಘೋಷಣೆಯಿರಬಹುದು, ರಾಜೀವ್ ಗಾಂಧಿ ಹತ್ಯೆಯ ಅನುಕಂಪವಿರಬಹುದು ಮತ್ತು ಯಡಿಯೂರಪ್ಪನ್ನು ಮುಖ್ಯಮಂತ್ರಿ ಮಾಡಬೇಕೆಂಬ ಒಂದು ವರ್ಗ ತುಡಿತವೇ ಇರಬಹುದು.



ಹೆಸರಿಗದು ಬಿಜೆಪಿ ಅಲೆಯಾದರೂ ಅದರ ಆಳದೊಳಗೆ ಯಡಿಯೂರಪ್ಪ ಹಾಕಿದ ಕಣ್ಣೀರಿರುತ್ತದೆ. ಗುಂಡೂರಾವ್ ದುರಾಡಳಿತ ಮತ್ತು ಕಾಂಗ್ರೆಸ್ ವಿರೋಧಿ ಅಲೆಯೆಂದರೂ ಅದರೊಳಗೆ ವರನಟ ರಾಜ್‌ಕುಮಾರ್ ಕೈಯೊಳಗಿದ್ದ ಕನ್ನಡ ಬಾವುಟ ಅಂತರ್ಗತವಾಗಿರುತ್ತದೆ. ಸದ್ಯದ ಚುನಾವಣೆಗೆ ಇಂಥ ಯಾವ ಅಂತರ್ ಧಾರೆಯಿದೆ?

ಅದು ಬಿಜೆಪಿ ದುರಾಚಾರದ ವಿರುದ್ಧ ರಾಜ್ಯದ ಜನಸಾಮಾನ್ಯನಿಗಿರುವ ಅಸಹ್ಯವಾ? ಅಂಥ ಅಸಹ್ಯವೇ ಕಾಂಗ್ರೆಸ್ ಅಲೆಯಾಗಿ ರೂಪ ತಾಳಿದೆಯಾ? ಅಥವಾ ಸಿದ್ದರಾಮಯ್ಯನೆಂಬ ನಾಯಕನ ವರ್ಚಸ್ಸು ಕೂಡ ಅಡಕವಾಗಿದೆಯಾ?

ಈ ಥರದ ಪ್ರಶ್ನೆಯೊಂದನ್ನು ಹುಟ್ಟಿಹಾಕಿದ್ದು ಕೂಡ ಬಿಜೆಪಿಯೆ. ನಾವು ಶೆಟ್ಟರ್‌ರನ್ನು ಮುಖ್ಯಮಂತ್ರಿ ಅಭ್ಯರ್ಥಿ ಅಂತ ಘೋಷಿಸಿದ ಹಾಗೆ ಕಾಂಗ್ರೆಸ್ಸಿಗೆ ಯಾರು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸುವ ತಾಕತ್ತಿದೆಯಾ? ಯಾರ ನಾಯಕತ್ವದಲ್ಲಿ ಕಾಂಗ್ರೆಸ್ ಚುನಾವಣೆಯನ್ನು ಎದುರಿಸುತ್ತಿದೆ? ಸದ್ಯ ಅದರ ಮುಖ್ಯಮಂತ್ರಿ ಅಭ್ಯರ್ಥಿ ಯಾರು?

ಇದು ಮೇಲುನೋಟಕ್ಕೆ ಕಾಂಗ್ರೆಸ್ ವಿರುದ್ಧ ಬಿಜೆಪಿ ಎತ್ತಿದ ತಕರಾರಾದರೂ ಇದರ ಆಳದಲ್ಲಿರುವುದು ದಲಿತ-ಹಿಂದುಳಿದವರ ಮಧ್ಯೆ ತಂದಿಕ್ಕುವುದು ಮತ್ತು ಕಾಂಗ್ರೆಸ್ ನಾಯಕರ ನಡುವೆ ಪರಸ್ಪರ ಅಪನಂಬಿಕೆ, ಅಸಹನೆಯನ್ನು ಹುಟ್ಟು ಹಾಕುವುದು. ಹಿಂದ್ಯಾವತ್ತೂ ಕಾಂಗ್ರೆಸ್ ಚುನಾವಣೆಗೂ ಮೊದಲೇ ಮುಖ್ಯಮಂತ್ರಿ ಅಭ್ಯರ್ಥಿಯೆಂದು ಯಾರನ್ನೂ ಘೋಷಿಸಿದ್ದಿಲ್ಲ, ಪಕ್ಷಕ್ಕಿಂತಲೂ ವ್ಯಕ್ತಿಗದು ಪ್ರಾಧಾನ್ಯತೆ ಕೊಡುವುದಿಲ್ಲ. ಅಷ್ಟಕ್ಕೂ ಶಾಸಕಾಂಗದ ನಾಯಕನನ್ನು ಗೆದ್ದುಬಂದ ಶಾಸಕರೇ ಆಯ್ಕೆ ಮಾಡುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಯೇ ನಡೆಯದೆ ಮುಖ್ಯಮಂತ್ರಿಯನ್ನು ಘೋಷಿಸುವುದೇ ಪಾಳೇಗಾರಿಕೆಯಾಗಿರುವಾಗ ಇದು ಗೊತ್ತಿದ್ದೂ ಬಿಜೆಪಿ ಏಕೆ ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿಗಾಗಿ ಹಠಕ್ಕೆ ಬೀಳುತ್ತದೆ?

ಇಲ್ಲಿನ ಸೂಕ್ಷ್ಮವೆಂದರೆ ಬಿಜೆಪಿಯ ಇಂಥ ಹುನ್ನಾರದ ಕೇಂದ್ರಬಿಂದುವಾಗಿರುವುದು ಸಿದ್ದರಾಮಯ್ಯ!

ಸದ್ಯ ಏನೇ ಕಾಂಗ್ರೆಸ್ ಅಲೆಯೆಂದರೂ ಅದು ಬಿಜೆಪಿ ವಿರೋಧ ಅಲೆಯೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ, ಅದು ನಿನ್ನೆಮೊನ್ನೆಯದೇನಲ್ಲ, ಇಲ್ಲಿಗೆ ಎರಡು ವರ್ಷದ ಹಿಂದೆಯೇ ಬಿಜೆಪಿ ವಿರುದ್ಧ ಸಾಮೂಹಿಕ ತಾತ್ಸಾರ ಭುಗಿಲೆದ್ದಿತ್ತು, ಹಾಗಂತ ಇದು ಕಾಂಗ್ರೆಸ್ ವರ್ಚಸ್ಸಿನಿಂದಾಗಲಿ, ಅದರ ಹೋರಾಟದಿಂದಾಗಲಿ ಬಂದಿದ್ದಲ್ಲ. 2004ರಿಂದಲೂ ಸ್ವಸಾಮರ್ಥ್ಯದಿಂದ ಅಧಿಕಾರಕ್ಕೆ ಬರುವಂತೆ ಅದು ಗೆದ್ದೆ ಇಲ್ಲ, ಸರಿಸುಮಾರು ಇಪ್ಪತ್ತು ಉಪ ಚುನಾವಣೆಗಳು ನಡೆದಿದ್ದರೂ ಚಿಕ್ಕಮಗಳೂರಿನಲ್ಲಿ ಜಯಪ್ರಕಾಶ್ ಹೆಗಡೆ ಗೆಲ್ಲುವ ತನಕ ಕಾಂಗ್ರೆಸ್ಸಿಗೆ ಗೆಲುವೆಂಬುದು ಕೈಗೆಟುಕುತ್ತಿರಲಿಲ್ಲ, ಚಿಕ್ಕಮಗಳೂರಿನಲ್ಲಿ ಗೆದ್ದಿದ್ದು ಕೂಡ ಯಡಿಯೂರಪ್ಪ ತಟಸ್ಥವಾಗಿದ್ದರಿಂದ ಸಿಕ್ಕ ಗೆಲುವಾಗಿತ್ತೇ ಹೊರತು ಕಾಂಗ್ರೆಸ್‌ಗೆ ನ್ಯಾಯಬದ್ಧವಾಗಿ ಸಿಕ್ಕಿದ್ದಾಗಿರಲಿಲ್ಲ.

ಇಂಥಾ ಸ್ಥಿತಿಯಲ್ಲಿ ತನ್ನಿಂತಾನೇ ಕುಸಿಯತೊಡಗಿದ ಬಿಜೆಪಿಯ ಒಡಲಿನೊಳಗೆ ಅದರ ವಿನಾಶದ ಬೀಜವೂ ಅಡಗಿತ್ತು. ಸಾಮಾನ್ಯವಾಗಿ ಮಧ್ಯಮ ವರ್ಗ ಯಾವತ್ತಿಗೂ ಸ್ಥಿರ ಸರ್ಕಾರವನ್ನು ಬಯಸುತ್ತದೆ. ಈ ಕಾರಣಕ್ಕೇ ಯಡ್ಡಿ ನೇತೃತ್ವದ ಬಿಜೆಪಿಗೆ ಜನ ಅಪಾಟಿ ಬಹುಮತ ನೀಡಿದ್ದು. ಆದರೆ ಯಡ್ಡಿ ಕೂಡ ಸ್ಥಿರ ಸರ್ಕಾರ ಸ್ಥಾಪಿಸಲಾಗಲಿಲ್ಲ. ಸಹಜವಾಗೇ ಭ್ರಮನಿರಸನಗೊಂಡ ಮಧ್ಯಮ ವರ್ಗದ ಸುಶಿಕ್ಷಿತ ಆರ್ಥಿಕ ಪ್ರಜ್ಞೆಯುಳ್ಳ ಸಮೂಹಕ್ಕೆ ಕಾಂಗ್ರೆಸ್ ಅನಿವಾರ್ಯ ಆಯ್ಕೆಯಾಗಿತ್ತು.

ಏಕೆಂದರೆ ಜೆಡಿಎಸ್‌ಗೆ ಹಳೇ ಮೈಸೂರು ಬಿಟ್ಟರೆ ಕಾಂಗ್ರೆಸ್‌ಗಿದ್ದ ವ್ಯಾಪಕತೆಯಿರಲಿಲ್ಲ.

ಇದು ಕಾಂಗ್ರೆಸ್ ಪಾಲಿಗೆ ಯಾವುದೇ ಶ್ರಮವಿಲ್ಲದೆ, ಹೋರಾಟವಿಲ್ಲದೆ ಅನಾಯಾಸವಾಗಿ ಸಿಕ್ಕ ಅವಕಾಶವಷ್ಟೆ. ಇಡೀ ಬಿಜೆಪಿ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ ನಡೆಸಿದ ಏಕೈಕ ಮತ್ತು ಅಭೂತಪೂರ್ವ ಜನ ಹೋರಾಟವೆಂದರೆ ಅದು ಗಣಿಲೂಟಿಯ ವಿರುದ್ಧ ಸಿದ್ದು ನೇತೃತ್ವದಲ್ಲಿ ಬಳ್ಳಾರಿಯ ತನಕ ನಡೆದ ಕಾಂಗ್ರೆಸ್ ಪಾದಯಾತ್ರೆಯೊಂದೇ. ಕಾಂಗ್ರೆಸ್ಸಿಗಿಂತಲೂ ವಿರೋಧ ಪಕ್ಷವಾಗಿ ಜೆಡಿಎಸ್ ಅಧಿಕ ಜವಾಬ್ದಾರಿಯಿಂದ ಮತ್ತು ಸಕ್ರಿಯವಾಗಿ ಇತ್ತಾದರೂ ಅದಕ್ಕಿದ್ದ ಮಿತಿಗಳಿಂದಾಗಿ ಕಾಂಗ್ರೆಸ್ಸಿಗಿದ್ದ ಅವಕಾಶಗಳಿರಲಿಲ್ಲ.

ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಗಾಳಿ ಬಿರುಸಾಗಲು ಇನ್ನೂ ಒಂದು ಕಾರಣ ಸೃಷ್ಟಿಯಾಗಿತ್ತು ಅದು ರಾಜ್ಯದ ಮೂರನೇ ಅತಿದೊಡ್ಡ ಜನ ಸಮೂಹವಾದ ಕುರುಬರ ರಾಜಕೀಯ ಆಶೋತ್ತರ. ಜೆಡಿಎಸ್ ಮತ್ತು ಕಾಂಗ್ರೆಸ್ ಸೇರಿಕೊಂಡು ಧರ್ಮಸಿಂಗ್ ನೇತೃತ್ವದ ಸರ್ಕಾರ ಸ್ಥಾಪಿಸಿದಾಗಲೇ ಅದು ಮೊಳಕೆಯೊಡೆದಿತ್ತು. ಉಪಮುಖ್ಯಮಂತ್ರಿ ಪದವಿಯಿಂದ ಸಿದ್ದರಾಮಯ್ಯನವರು ಉಚ್ಚಾಟಿಸಿದ್ದರಿಂದಾಗಿ ಅದು ಮತ್ತಷ್ಟು ಉಲ್ಬಣಿಸಿತ್ತು, ಸಿದ್ದು ಕಾಂಗ್ರೆಸ್ ಸೇರಿದ ಮೇಲಂತೂ ಕರ್ನಾಟಕದ ಚರಿತ್ರೆಯಲ್ಲಿ ಕುರುಬನೊಬ್ಬನನ್ನು ಮುಖ್ಯಮಂತ್ರಿಯಾಗಿ ಕಾಣುವ ದೂರದ ಸಾಧ್ಯತೆಯೊಂದು ಇನ್ನಷ್ಟು ನಿಚ್ಚಳಗೊಂಡಿತ್ತು. ಇದಕ್ಕೆ ಇಂಬುಕೊಟ್ಟಂತೆ ಕಾಂಗ್ರೆಸ್ ಹೈಕಮಾಂಡ್ ನೀರು ಗೊಬ್ಬರ ಹಾಕತೊಡಗಿತು. ಸಿದ್ದು ವಿರೋಧ ಪಕ್ಷದ ನಾಯಕರಾಗಿದ್ದು, ಬಿಜೆಪಿ ದುರಾಡಳಿತದ ವಿರುದ್ಧ ನಿಷ್ಠುರ ಪ್ರತಿಭಟನೆಗಿಳಿದದ್ದು, ಬಳ್ಳಾರಿ ಪಾದಯಾತ್ರೆ ಮತ್ತು ಆನಂತರ ದಾವಣಗೆರೆಯಲ್ಲಿ ನಡೆದ ರಾಜ್ಯ ಕುರುಬ ಸಂಘದ ಸಮಾವೇಶ; ಇವೆಲ್ಲ ಮೇಲುನೋಟಕ್ಕೆ ಬಿಜೆಪಿ ದುರಾಚಾರದ ವಿರುದ್ಧದ ಜನಾಕ್ರೋಶ ಮತ್ತು ಕುರುಬ ಸಮಾಜದ ಸಂಘಟಿತ ಕಾರ್ಯಾಚರಣೆಯಂತೆ ಕಂಡರೂ ಆಳದಲ್ಲಿ ಸಿದ್ದು ವರ್ಚಸ್ಸನ್ನು ವಿಸ್ತರಿಸತೊಡಗಿದ್ದವು.

ದಾವಣಗೆರೆಯ ಕುರುಬರ ರ್‍ಯಾಲಿಯಲ್ಲಿ ನಡೆದ ಇನ್ನೂ ಒಂದು ಗುಣಾತ್ಮಕ ಘಟನೆಯೆಂದರೆ ಉಳಿಕೆ ಹಿಂದುಳಿದ ಜಾತಿಗಳಾದ ದೇವಾಂಗ, ಗಾಣಿಗ, ಬೆಸ್ತ ಈಡಿಗ, ವಿಶ್ವಕರ್ಮ, ಕುಂಬಾರ, ಉಪ್ಪಾರ, ವಾಲ್ಮೀಕಿ; ಬೇಡ, ಬಲಿಜ ಇತ್ಯಾದಿ ಜನಾಂಗಗಳೆಲ್ಲರ ಮುಖ್ಯಸ್ಥರು ಮತ್ತು ಪೀಠಾಧಿಪತಿಗಳನ್ನು ಕರೆಸಿ ಸನ್ಮಾನಿಸಿದ್ದು!

ಮಾಧ್ಯಮಗಳ ದೃಷ್ಟಿಯಿಂದ ಇದೊಂದು ಮಾಮೂಲಿ ಕಾರ್ಯಕ್ರಮವಾಗಿತ್ತಾದರೂ ಅಹಿಂದ ವರ್ಗಗಳ ಮಟ್ಟಿಗದು ಸಂಚಲನವನ್ನೇ ಸೃಷ್ಟಿಸಿತ್ತು, ಅದೇ ಹೊತ್ತಿಗೆ ಯಡ್ಡಿ ಜೈಲುಪಾಲಾಗಿ ಮುಖ್ಯಮಂತ್ರಿಗಿರಿಯನ್ನೂ ಕಳಕೊಂಡು ಕೆಜೆಪಿ ಸ್ಥಾಪಿಸಿ ಇಡೀ ಲಿಂಗಾಯತ ಸಮೂಹವನ್ನೇ ಬಿಜೆಪಿಯಿಂದ ಕಿತ್ತೊಯ್ದದ್ದು ಕಾಂಗ್ರೆಸ್ಸಿಗೂ, ಅಹಿಂದ ವರ್ಗಗಳ ಹಿತಾಸಕ್ತಿಗೂ ಮತ್ತು ಸಿದ್ದು ನಾಯಕತ್ವಕ್ಕೂ ಪೂರಕವಾಗಿ ನಡೆದ ವಿದ್ಯಮಾನವಾಗಿತ್ತು, ಇದರಿಂದಾಗಿ ಬಿಜೆಪಿ ಕೇವಲ ಬ್ರಾಹ್ಮಣ, ಬನಿಯಾ, ಮಾರ್ವಾಡಿಗಳ ಪಕ್ಷವೆಂಬ ತನ್ನ ಮೂಲಸ್ವರೂಪಕ್ಕೆ ಹಿಂತಿರುಗಿತ್ತು.

ಇದು ಬಿಜೆಪಿಯ ಅಧಃಪತನ, ಕಾಂಗ್ರೆಸ್ ಅನಿವಾರ್ಯತೆ ಮತ್ತು ಸಿದ್ದು ವರ್ಚಸ್ಸಿಗೆ ಪರಸ್ಪರ ಪೂರಕವಾದ ಪ್ರಸಂಗಗಳು. ಇವತ್ತು ಪರಮೇಶ್ವರ್ ದಲಿತ ಮುಖ್ಯಮಂತ್ರಿಯೆಂದೂ ಖರ್ಗೆ ಕೂಡ ದಲಿತ ಸಿ.ಎಂ. ಐಟಮ್ಮೆಂದೂ ವ್ಯಾಖ್ಯಾನಿಸುವವರಿದ್ದಾರೆ ನಿಜ. ಆದರೆ ಪರಮೇಶ್ವರ್‌ರನ್ನು ದಲಿತ ನೇತಾರನೆಂದು ದಲಿತರೇ ಎದೆತಟ್ಟಿ ಹೇಳುವ ಸ್ಥಿತಿಯಿದೆಯೆ? ಖರ್ಗೆ ಕಾಂಗ್ರೆಸ್ಸಿನ ಮಟ್ಟಿಗೆ ಹಿರೀಕರಿರಬಹುದು. ಆದರೆ ದಲಿತರಲ್ಲೇ ಒಂದು ಗುಂಪು ಅವರನ್ನು ಒಪ್ಪುವ ಸ್ಥಿತಿಯಲ್ಲಿಲ್ಲ ಮತ್ತು ದಲಿತ ಮುಖ್ಯಮಂತ್ರಿಯ ಪ್ರಶ್ನೆ ಬಂದಾಗ ಕೆ.ಎಚ್. ಮುನಿಯಪ್ಪ ಕೂಡ ಕೈ ಎತ್ತುತ್ತಾರಾದ್ದರಿಂದ ಇಡೀ ದಲಿತ ಸಮೂಹ ಒಗ್ಗಟ್ಟಾಗಿ ಒಬ್ಬ ನಾಯಕನಿಗಾಗಿ ದನಿಯೆತ್ತುವ ಪರಿಸ್ಥಿತಿ ಕಾಂಗ್ರೆಸ್ಸಿನಲ್ಲಿಲ್ಲ.


ಇದರರ್ಥ ಯಾರೇ ಒಬ್ಬ ವರ್ಚಸ್ವೀ ದಲಿತ ಸಮೂಹವನ್ನು ಪ್ರತಿನಿಧಿಸುತ್ತಿಲ್ಲ ಮತ್ತು ಇಡೀ ದಲಿತ ಸಮೂಹ ಒಗ್ಗಟ್ಟಾಗಿ ಏಕನಾಯಕನೊಬ್ಬನ ಬೆನ್ನಿಗೆ ನಿಂತಿಲ್ಲ, ಜೊತೆಗೆ ಮಿಕ್ಕೆಲ್ಲಾ ಸಣ್ಣಪುಟ್ಟ ಜಾತಿಗಳನ್ನು ವಿಶ್ವಾಸಕ್ಕೆ ಪಡೆಯುವುದಾಗಲಿ, ಅವುಗಳ ಬೆಂಬಲ ಗಳಿಸುವುದಾಗಲಿ ಈ ನಾಯಕರಿಗೆ ಸಾಧ್ಯವಾಗಿಲ್ಲ. ಏಕೆಂದರೆ ಕರ್ನಾಟಕದ ಮಟ್ಟಿಗಾಗಲಿ, ಕಾಂಗ್ರೆಸ್‌ನ ಮಟ್ಟಿಗಾಗಲಿ ಇಂಥದೊಂದು ಸನ್ನಿವೇಶ

>>>18

ಪರಮೇಶ್ವರ್ ಸೋತರೆ ಖರ್ಗೆಗೇನು ಲಾಭ? ಸಿದ್ದು ಗೆದ್ದರೆ ಕೃಷ್ಣರಿಗೇನು ನಷ್ಟ?

ಅರಸು ಕಾಲದ ಜಾತಿ ಸಮೀಕರಣ ಮತ್ತು ಧ್ರುವೀಕರಣ ಸದ್ಯ ಸಿದ್ದರಾಮಯ್ಯನವರ ಮೂಲಕ ಪ್ರಕಟವಾಗುತ್ತಿದೆಯೆ?





ಅರಸು ಮಟ್ಟಕ್ಕಲ್ಲದಿದ್ದರೂ ಅರಸು ನೆನಪಿಸುವಷ್ಟಾದರೂ ಸಿದ್ದು ಸಾಧಿಸಿದ್ದಾರೆಂಬುದು ಒಂದು ಗುಂಪಿನ ವಾದ. ನಿಜಕ್ಕೂ ಖರ್ಗೆ, ಕೃಷ್ಣ ಡಿಕೆಯಂಥವರಿಗೆ ಸಿದ್ದು ಸೋಲಬೇಕೆಂಬ ಸುಪ್ತ ಬಯಕೆಯಿದೆಯೆಂಬುದೂ ಸ್ಪಷ್ಟವಿಲ್ಲ. ಹಾಗೇ ಪರಮೇಶ್ವರ್ ಸೋಲಲೆಂದು ಖರ್ಗೆ ಆದಿಯಾಗಿ ಕೆಲ ಕಾಂಗ್ರೆಸ್ ನಾಯಕರು ಬಯಸುತ್ತಿದ್ದಾರೆಂಬುದಕ್ಕೂ ಪುರಾವೆಯಿಲ್ಲ, ಆದರೆ ಈ ಥರದ ವದಂತಿಯಂತೂ ಇದ್ದೇ ಇದೆ. ಬಹುಶಃ ಇದು ದೇವೇಗೌಡರ ತಲೆಗಾರಿಕೆ ಇರಬಹುದಾ ಎಂಬ ಹಲವರ ಪ್ರಶ್ನೆ.

ದೇವೇಗೌಡರು ಮರುಗಾ ಕ್ಷೇತ್ರದ ದಲಿತರಿಗೆ ನಿಮ್ಮವನೊಬ್ಬ ಮುಖ್ಯಮಂತ್ರಿ ಆಗೋದು ಬೇಡವಾ? ಎಂದು ಹುಳಿ ಹಿಂಡಿದಂತೆ ಕೊರಟಗೆರೆಯ ಕುರುಬರಲ್ಲಿ ನಿಮಗೆಲ್ಲ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗೋದು ಇಷ್ಟ ಇಲ್ವಾ? ಎಂದೂ ಕಿವಿ ಕಚ್ಚಿದ್ದಾರಂತೆ. ಇದು ದಲಿತರು ಹಿಂದುಳಿದ ವರ್ಗಗಳ ಏಕತೆಯನ್ನು ಸಹಿಸದ ಮೇಲ್ಜಾತಿಗಳು ನಡೆಸುತ್ತಿರುವ ಮಸಲತ್ತಿನಂತೆ ಕಾಣಿಸುತ್ತದೆ.

ಇದೇ ಉದ್ದೇಶಕ್ಕಿರಬೇಕು ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಮಾಡೋದಾದ್ರೆ ನಾವೂ ಬೆಂಬಲಿಸ್ತೀವಿ. ಆದರೆ ಕಾಂಗ್ರೆಸ್ಸಿನವರು ಅವರನ್ನು ಮುಖ್ಯಮಂತ್ರಿ ಮಾಡುತ್ತಾರಾ? ಎಂದು ಮಣ್ಣಿನ ಮಕ್ಕಳಿಗೆ ಕಿಚಾಯಿಸುತ್ತಿರುವುದು!

ಇದನ್ನೆಲ್ಲ ಗಮನಿಸಿಯೇ ಅಹಿಂದ ಹಿತಾಸಕ್ತಿ ಗುಂಪು ದೇವೇಗೌಡ ವಿರುದ್ಧ ದಲಿತ ಮತ್ತು ಕುರುಬರ ಮಧ್ಯೆ ತಂದಿಕ್ಕುವ ಆರೋಪ ಮಾಡಿರಬೇಕು. ಇಂಥ ವದಂತಿ, ಕುಚೋದ್ಯಗಳ ಅಸಲಿಯತ್ತ ಏನೇ ಇರಲಿ.. ಅದು ಅರಸು ಕಾಲದ ಮೇಲ್ಜಾತಿಗಳ ಮನಸ್ಥಿತಿಯನ್ನೇ ಮತ್ತೆ ನೆನಪಿಸುವಂತಿದೆ. ಸದ್ಯ ಲಿಂಗಾಯತ ಸಮೂಹದ ಏಕಮೇವಾದ್ವಿತೀಯ ನಾಯಕನಂತಿರುವ ಯಡ್ಡಿ ಕೂಡ ಸಿದ್ದು ವಿರುದ್ಧ ತನ್ನ ಮನೆಗೆಲಸದವನನ್ನು ನಿಲ್ಲಿಸಿ ಸೋಲಿಸಲೆತ್ನಿಸುತ್ತಿರುವುದು ಕೂಡ ಇದೇ ಪ್ರವೃತ್ತಿಯನ್ನೇ ಮರುಳಿಸುತ್ತಿದೆ.

ಸಿದ್ದು ಮತ್ತೊಬ್ಬ ಅರಸರಾಗದಿರಬಹುದು. ಅಂಥಾ ವ್ಯಕ್ತಿತ್ವವೂ ಇಲ್ಲದಿರಬಹುದು. ಆದರೆ ಆ ಮಾರ್ಗದಲ್ಲಿ ನಡೆಯುತ್ತಿದ್ದಾರೆ ಮತ್ತು ಅಂಥಾ ಸನ್ನಿವೇಶದ ಸೃಷ್ಟಿಗಂತೂ ಕಾರಣರಾಗುತ್ತಿದ್ದಾರೆ.



ಸಿ.ಟಿ.ರವಿ

ಚೋರ ರವಿಯ ಲೂಟಿ ವೃತ್ತಾಂತ

ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ..

ಉನ್ನತ ಶಿಕ್ಷಣ ಸಚಿವ ಉರುಫ್ ಚಡ್ಡಿ ಟೀಮಿನ ಕೋಮು ಕ್ಯಾಂಡಿಡೇಟಾದ ಸಿ.ಟಿ.ರವಿಗೆ ಹೇಳಿಮಾಡಿಸಿದ ಗಾದೆ ಮಾತಿದು.

ಮಾತೆತ್ತಿದರೆ ದೇಶಭಕ್ತಿ ಹಿಂದೂಶಕ್ತಿ ಸ್ವಚ್ಛ ಉಕ್ತಿ ಅಂತೆಲ್ಲಾ ಬಡಬಡಾಯಿಸುವ ಈತನ ಒಂದೊಂದೆ ಅಕ್ರಮ ಗಳು ಹೊರಬೀಳುತ್ತಿದ್ದಂತೆ ಆತನ ನಿಜಬಣ್ಣ ಬಯಲಾ ಗುತ್ತಿದೆ. ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಸೈಟು ಲಪಟಾಯಿಸುವುದರಿಂದ ಹಿಡಿದು ಬಡಪಾಯಿಗಳನ್ನು ಬಡಿದು ಬಾಯಿಗಾಕಿಕೊಳ್ಳುವವರೆಗೆ ರವಿಯ ಸೀಟಿ ಬಜಾಯಿಸುತ್ತಲೇ ಸಾಗುತ್ತೆ ಇಲ್ಲಿಗೆ ಇಪ್ಪತ್ತು ವರ್ಷಗಳ ಹಿಂದೆ ಚಿಕ್ಕಮಗಳೂರಿನ ಗಾಂಧಿನಗರದ ಬ್ರಾಹ್ಮಣರ ಮನೆಯೊಂದರಲ್ಲಿ ಬಾಡಿಗೆ ಇದ್ದ ಯೋಗೀಶ ಅಲಿಯಾಸ್ ಸಿ.ಟಿ.ರವಿ ಇವತ್ತು ಚುನಾವಣಾ ಆಯೋಗಕ್ಕೆ ತನ್ನ ಆಸ್ತಿ ಮೂರು ಮುಕ್ಕಾಲು ಕೋಟಿ ಎಂದು ಅಫಿಡವಿಟ್ ಸಲ್ಲಿಸುತ್ತಾನೆಂದರೆ ಅವನೆಂತಹ ದೇಶಭಕ್ತ(!)ನಿರಬೇಡ. ಇನ್ನು ಚುನಾವಣಾ ಆಯೋಗ, ಲೋಕಾಯುಕ್ತದಂತಹ ಸಂಸ್ಥೆಗಳ ಮುಂದೆ ಹೇಳಿಕೊಳ್ಳುವ ಆಸ್ತಿ ಮೌಲ್ಯದ ಅಸಲಿಯತ್ತು ಎಂಥದ್ದೆಂದು ಎಲ್ಲರಿಗೂ ಗೊತ್ತು.

2008 ಮತ್ತು 2013ರಲ್ಲಿ ಚುನಾವಣೆ ಆಯೋಗಕ್ಕೆ ಸಿಟಿ ರವಿ ಸಲ್ಲಿಸಿರುವ ಅಫಿಡವಿಟ್‌ಗಳಲ್ಲಿನ ಗೊಂದಲಗಳೆ ಹತ್ತಾರು ಹಗರಣಗಳಿಗೆ ಸಾಕ್ಷಿಯಾಗಬಲ್ಲಷ್ಟು ಬಲಿಷ್ಠವಾಗಿವೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಈತ ಸೈಟುಗಳಿಗೆ ಅದ್ಯಾವ ಪರಿ ಮುಗಿಬಿದ್ದನೆಂದರೆ ಅತ್ತ ಚಿಕ್ಕಮಗಳೂರಿನಲ್ಲಿ ಹೆಂಡತಿ ಹೆಸರಲ್ಲಿ, ಉಸಿರೇ ಇಲ್ಲದ ಟ್ರಸ್ಟ್‌ನ ಹೆಸರಲ್ಲಿ ಸೈಟು ಗಿಟ್ಟಿಸಿಕೊಂಡಿದ್ದರೆ, ಇತ್ತ ಬೆಂಗಳೂರಿನಲ್ಲೂ ಎರಡೆರಡು ಬಿಡಿಎ ಸೈಟುಗಳನ್ನು ಅಕ್ರಮವಾಗಿ ಲಪಟಾಯಿಸಿದ್ದಾನೆ. 2007ರ ಅಫಿಡವಿಟ್‌ನಲ್ಲಿ ತನಗೆ ಬೆಂಗಳೂರಿನಲ್ಲಿ ಶಾಸಕರಿಗೆ ನೀಡುವ ಒಂದು ಬಿಡಿಎ ಸೈಟು ಇದೆಯೆಂದು ಘೋಷಿಸಿಕೊಳ್ಳುತ್ತಾನಾದರೂ ಅದರ ಸರ್ವೆ ನಂಬರನ್ನು ಬಹಿರಂಗಪಡಿಸಿಲ್ಲ, 40X60 ಅಳತೆಯ ಈ ಸೈಟು ಎಚ್.ಬಿ. ಬಡಾವಣೆಯಲ್ಲಿದ್ದು ಅದರ ಮಾರುಕಟ್ಟೆ ಮೌಲ್ಯ 12,00,000 ಎಂದಷ್ಟೇ ಮಾಹಿತಿ ನೀಡಿದ್ದಾನೆ. ಇನ್ನು ಮೊನ್ನೆ ನೀಡಿದ ಅಫಿಡವಿಟ್‌ನಲ್ಲೂ ಬಿಡಿಎ ಸೈಟಿನ ಉಲ್ಲೇಖವಿದೆಯಾದರೂ ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಅದು 2007ರಲ್ಲಿ ಮಾಹಿತಿ ನೀಡಿದ್ದ ಸೈಟಲ್ಲದೆ, ಪ್ರತ್ಯೇಕವಾದ ಮತ್ತೊಂದು ಎಂಬುದು ಬಯಲಾಗುತ್ತದೆ. ಗೊಂದಲ ಮೂಡಿಸುವ ದೃಷ್ಟಿಯಿಂದಲೇ ಈ ಬಾರಿ ಸೈಟು ಎಚ್.ಬಿ.ಆರ್ ಬಡಾವಣೆಯಲ್ಲಿದೆ ಎಂದು ತೋರಿಸಲಾಗಿದೆ. ನೋಡುವುದಕ್ಕೆ ಸಣ್ಣ ಸ್ಪೆಲ್ಲಿಂಗ್ ಮಿಸ್ಟೇಕ್‌ನಂತೆ ಕಂಡು, ಇದು ಮೊದಲನೇ ಸೈಟೇ ಎನ್ನುವ ಅನುಮಾನ ಮೂಡುವಂತೆ ಮಾಡಿದ್ದಾನೆ. ಅಲ್ಲದೆ ಬೇರೆಲ್ಲಾ ಆಸ್ತಿಗಳನ್ನು ಅಡಿ ಲೆಕ್ಕದಲ್ಲಿ ಹೇಳಿದ್ದರೂ ಈ ಸೈಟನ್ನು ಮಾತ್ರ ಮೀಟರ್ ಅಳತೆಯಲ್ಲಿ ನಮೂದಿಸಲಾಗಿದೆ. ಇದರ ಅಳತೆ 15 X 24 ಮೀಟರ್ ಎಂದಿದ್ದಾನೆ. ಅಲ್ಲಿಗೆ ಅಜಮಾಸು 50 X 80 ಅಡಿ ಸೈಟಾಯಿತು. ಆದರೆ 2007ರಲ್ಲಿ ನೀಡಿದ್ದ ಬಿಡಿಎ ಸೈಟಿನ ಅಳತೆ 40 X 60 ಅಡಿ. ಅಲ್ಲಿಗೆ ಇವೆರಡೂ ಬೇರೆ ಬೇರೆ ಸೈಟುಗಳೆನ್ನುವುದು ಖಾತ್ರಿಯಾಗುತ್ತದೆ. ಅಡಿ, ಮೀಟರ್‌ನ conversion ಸಮಸ್ಯೆಯನ್ನು ಸೃಷ್ಟಿಸಿ ಎರಡೂ ಒಂದೇ ಸೈಟೆಂದು ನಂಬಿಸುವ ಹುನ್ನಾರ ಹೇಗಿದೆ ನೋಡಿ. ಅಲ್ಲದೆ 2007ರಲ್ಲಿದ್ದ ಸೈಟಿನ ಮೌಲ್ಯ 12,00,000 ಆಗಿದ್ದರೆ, 2013ರ ಅಫಿಡವಿಟ್‌ನಲ್ಲಿರುವ ಸೈಟಿನ ಮೌಲ್ಯ ಒಂಬತ್ತು ಲಕ್ಷ ಎಂದು ಹೇಳಿದ್ದಾನೆ. ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಸೈಟುಗಳ ಬೆಲೆ ಏರುತ್ತದೆಯೇ ಹೊರತು ಇಳಿಯುವುದಿಲ್ಲ ಎನ್ನುವುದು ಕಾಮನ್‌ಸೆನ್ಸ್! ವರ್ಷದಿಂದ ವರ್ಷಕ್ಕೆ ಸೈಟುಗಳು ಬೆಳೆದು ದೊಡ್ಡವಾಗುವುದಿಲ್ಲ ಎನ್ನುವುದು ಜನರಲ್ ನಾಲೆಡ್ಜ್! ಹಾಗಿರುವಾಗ ಅವೆರಡೂ ಬೇರೆ ಬೇರೆ ಸೈಟುಗಳೆನ್ನುವುದಕ್ಕೆ ಮತ್ತೊಂದು ಪುರಾವೆ ಸಿಕ್ಕಂತಾಯಿತು. ಅಲ್ಲಿಗೆ ಒಂದು ಕುಟುಂಬಕ್ಕೆ ಒಂದೇ ಸೈಟೆನ್ನುವ ನಿಯಮವನ್ನೂ ಮೀರಿ ಸಿಟಿ ರವಿ ಎರಡು ಸೈಟುಗಳನ್ನು ಅಕ್ರಮವಾಗಿ ಗಿಟ್ಟಿಸಿಕೊಂಡಿದ್ದಾನೆನ್ನುವುದನ್ನು ಆತನ ಅಫಿಡವಿಟ್ಟುಗಳೇ ಹೇಳುತ್ತವೆ.

ಇದು ಬೆಂಗಳೂರಿನ ಕಥೆಯಾದರೆ, ಚಿಕ್ಕಮಗಳೂರಿನಲ್ಲಿ ಹೆಂಡತಿ, ಭಾವ, ಅತ್ತೆ, ಅತ್ತೆಯ ತಂಗಿ ಮೊದಲಾದವರ ಹೆಸರಲ್ಲಿ ಈ ಪುಣ್ಯಾತ್ಮ ಬೇಲಿ ಸುತ್ತಿರುವ ಜಮೀನಿಗೆ ಲೆಕ್ಕವೇ ಇಲ್ಲ, ಸ್ವತಃ ಲೋಕಾಯುಕ್ತ ತನಿಖೆಯೇ ರವಿಯ ಕುಟುಂಬಕ್ಕೆ ಛೀಮಾರಿ ಹಾಕಿದ್ದಿದೆ. ಖುದ್ದು ರವಿ 1997-98ರಲ್ಲಿ ಚಿಕ್ಕಮಗಳೂರು ನಗರಾಭಿವೃದ್ಧಿ ಮಂಡಳಿ ನೀಡುವ ಸೈಟನ್ನು ಪಡೆದಿದ್ದಾನೆ. ಅಂದರೆ ಆತನ ಕುಟುಂಬಕ್ಕೆ ಮತ್ತೊಂದು ಸೈಟು ಪಡೆಯುವ ಅರ್ಹತೆ ಇಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಆದರೆ ತನ್ನ ಅಧಿಕಾರ ದುರುಪಯೋಗಪಡಿಸಿಕೊಂಡು 2007ರಲ್ಲಿ ತನ್ನ ಹೆಂಡತಿ ಪಲ್ಲವಿಯವರ ಹೆಸರಿಗೆ ಹೌಸಿಂಗ್ ಬೋರ್ಡ್ ಕಾಲೊನಿಯ ಸರ್ವೆ ನಂಬರ್ 113 ಮತ್ತು 114ರ ಎರಡು ಸೈಟುಗಳನ್ನು ಮಂಜೂರು ಮಾಡಿಸಿದ್ದಾನೆ. ರವಿಯ ಈ ಅಕ್ರಮದ ವಿರುದ್ಧ ಲೋಕಾಯುಕ್ತ ಕೋರ್ಟ್‌ನಲ್ಲಿ ದೂರು ದಾಖಲಾಗಿ, ತನಿಖೆಯೂ ನಡೆಯಿತು. ಆಗ ರವಿಯ ಕುಟುಂಬ ನಕಲಿ ದಾಖಲೆ ಸೃಷ್ಟಿಸಿ ಗೃಹ ಮಂಡಳಿಯ ಸಿ.ಎ ನಿವೇಶನ ಪಡೆದಿರುವುದು ನಿಜವಾಗಿದ್ದು ಈ ಕೂಡಲೇ ವಾಪಸ್ ಪಡೆಯುವಂತೆ ಕೋರ್ಟ್ ಸಂಬಂಧಪಟ್ಟವರಿಗೆ ಸೂಚನೆಯನ್ನೂ ನೀಡಿತ್ತು, ಆದರೆ ಇದುವರೆವಿಗೆ ಅಂತಹದ್ದೊಂದು ದಿಟ್ಟ ಕ್ರಮಕ್ಕೆ ಯಾರೂ ಮುಂದಾಗಿಲ್ಲ. ಸ್ವಚ್ಛತೆ, ಪ್ರಾಮಾಣಿಕತೆಯ ಬಗ್ಗೆ ಬಿರುಸಿನ ಭಾಷಣ ಬಿಗಿಯುವ ರವಿ, ಅಕ್ರಮ ಸಾಬೀತಾದರೂ ಸೈಟುಗಳನ್ನು ಮರಳಿಸುವ ಮನಸ್ಸು ಮಾಡಿಲ್ಲ, ಬದಲಾಗಿ 2008ರ ಚುನಾವಣಾ ಅಫಿಡವಿಟ್‌ನಲ್ಲಿ ತನ್ನ ಹೆಂಡತಿ ಹೆಸರಿಗಿರುವ ಆಸ್ತಿ ತೋರಿಸುವಾಗ ಸರ್ವೆ ನಂಬರ್ 113ರ ಸೈಟನ್ನು ಮಾತ್ರ ನಮೂದಿಸಿ ಬೇಕಂಬೇಕಂತಲೆ 114ರ ಸೈಟನ್ನು ಮರೆಮಾಚಿದ್ದಾನೆ. ಆದರೆ 2013ರ ಅಫಿಡವಿಟ್‌ನಲ್ಲಿ ಭಂಡತನಕ್ಕೆ ಬಿದ್ದವನಂತೆ ಎರಡೂ ಸೈಟುಗಳ ಒಡೆತನವನ್ನು ಅನಾವರಣ ಮಾಡಿಕೊಂಡಿದ್ದಾನೆ. 2008ರಲ್ಲಿ ಒಂದು ಸೈಟನ್ನು ಮುಚ್ಚಿಟ್ಟಿದ್ದೇ ಅವು ಅಕ್ರಮದ ಸೈಟುಗಳೆನ್ನುವುದಕ್ಕೆ ಸಾಕ್ಷಿ. ಹಾಗೊಮ್ಮೆ ಈಗಿನ ಅಫಿಡವಿಟ್‌ನಲ್ಲಿ ಬೆಳಕಿಗೆ ಬಂದಿರುವ ಸರ್ವೆ ನಂಬರ್ 114ರ ಸಿ.ಎ ಸೈಟು ಇತ್ತೀಚೆಗೆ ಅಲಾಟ್ ಆದದ್ದು ಅಂದುಕೊಂಡರು, ಒಬ್ಬನೇ ವ್ಯಕ್ತಿ ಎರಡೆರಡು ಸಿ.ಎ ನಿವೇಶನ ಪಡೆದ ಆರೋಪಕ್ಕೂ ರವಿ ಸಾಹೇಬರೇ ಕಾರಣರಾಗುತ್ತಾರೆ.

ಅಲ್ಲದೆ ಈಗಿನ ಅಫಿಡವಿಟ್‌ನಲ್ಲಿ ಆಂಜನೇಯ ವಿದ್ಯಾ ಸಂಸ್ಥೆಗೆ ಒಂದು ಲಕ್ಷ ದೇಣಿಗೆ ನೀಡಿರುವುದಾಗಿ ಹೇಳಿಕೊಂಡು ಸಜ್ಜನನಾಗುವ ಪ್ರಯತ್ನ ಮಾಡಿದ್ದಾನೆ. ಆದರೆ ಆ ಸಂಸ್ಥೆಯ ಜನ್ಮ ಜಾಲಾಡಿದರೆ ರವಿಯ ಚಾಲಾಕಿತನ ಬಯಲಿಗೆ ಬರುತ್ತದೆ. ಪೇಪರ್ ದಾಖಲೆಗಳ ಮೇಲೆ ಬಿಟ್ಟರೆ ಅಂತಹದ್ದೊಂದು ಸಂಸ್ಥೆಯ ಅಸ್ತಿತ್ವವನ್ನು ಜನ ಕಂಡಿದ್ದೇ ಇಲ್ಲ, ಅದಕ್ಕೂ ಅಚ್ಚರಿಯೆಂದರೆ ಈ ಸಂಸ್ಥೆಗೆ ರವಿಯ ಹೆಂಡತಿ ಪಲ್ಲವಿಯವರೇ ಅಧ್ಯಕ್ಷೆ! 1989ರಲ್ಲಿ ಮತ್ತಿಕೆರೆ ಗ್ರಾಮಸ್ಥರು ಈ ಸಂಸ್ಥೆಯನ್ನು ಹುಟ್ಟುಹಾಕಿ, ನೋಂದಣಿಯನ್ನೂ ಮಾಡಿಸಿದ್ದರು. ಆದರೆ ಈ ವಿದ್ಯಾಸಂಸ್ಥೆ ಯಾವುದೇ ಚಟುವಟಿಕೆ ನಡೆಸದೆ ಸ್ತಬ್ಧವಾದ ಕಾರಣ ಅದರ ಪರವಾನಗಿಯೂ ರದ್ದಾಗಿಹೋಗಿತ್ತು, ಇಂತಿಂಥ ಟ್ರಸ್ಟ್‌ನ ಇತಿಹಾಸ ಹೀಗೀಗೆ ಎನ್ನುವ ವಾಸನೆ ರವಿಯ ಮೂಗಿಗೆ ಬಡಿಯುತ್ತಿದ್ದಂತೆ, ಸತತ ಹದಿನಾರು ವರ್ಷಗಳ ಕಾಲ ಉಸಿರೇ ಇಲ್ಲದೆ ಮೂಲೆ ಸೇರಿದ್ದ ಸಂಸ್ಥೆಗೆ ಮರುಜನ್ಮ ನೀಡಿ, ಹೆಂಡತಿಯನ್ನೆ ಅಧ್ಯಕ್ಷೆ ಮಾಡಿ ಬಂಧು-ಬಳಗದವರನ್ನೇ ಮೆಂಬರುಗಳನ್ನಾಗಿಸಿದ್ದ ಅಷ್ಟೇ ಅಲ್ಲ ಈ ಸಂಸ್ಥೆಗೆ ಶಾಲಾಕಟ್ಟಡ ನಿರ್ಮಾಣಕ್ಕೆಂದು ಹೌಸಿಂಗ್ ಬೋರ್ಡ್‌ನ ಐದು ಕೋಟಿ ಮೌಲ್ಯದ ಸೈಟೂ ದಕ್ಕುವಂತೆ ನೋಡಿಕೊಂಡಿದ್ದ ಆದರೆ ಮಂಜೂರಾಗಿ ಆರು ವರ್ಷಗಳಾದರು ಇದುವರೆಗೆ ಅಲ್ಲಿ ಶಾಲಾ ಕಟ್ಟಡದ ಸುಳಿವೇ ಇಲ್ಲ, ರವಿಯ ಅಕ್ರಮಕ್ಕೆ ಮೂಕಸಾಕ್ಷಿಯಂತೆ ಖಾಲಿ ಬಿದ್ದುಕೊಂಡಿದೆ. ಮಸ್ತ್ ವಿಷಯ ಅಂತೆಂದರೆ, 2008ರಲ್ಲಿ ರವಿ ಸಲ್ಲಿಸಿದ ಅಫಿಡವಿಟ್‌ನಲ್ಲಿ ಇದೇ ವಿದ್ಯಾಸಂಸ್ಥೆಗೆ ಮಂಜೂರಾಗಿದ್ದ ಸರ್ವೆ ನಂಬರ್ 6ಬ ಸೈಟು ತನ್ನ ಹೆಂಡತಿಯ ಸ್ಥಿರಾಸ್ತಿ ಎಂದು ಘೋಷಿಸಿಕೊಂಡಿದ್ದಾನೆ! ಇದೇನು ಸಚಿವರೇ ಹೀಗೆ, ಎಂದು ಕೇಳಿದರೆ ಕಣ್ತಪ್ಪಿನಿಂದಾದ ಮಿಸ್ಟೇಕು... ಅಂತ ತಿಪ್ಪೆ ಸಾರಿಸುತ್ತಾನೆ. ಚುನಾವಣೆ ಆಯೋಗಕ್ಕೆ ನೀಡುವ ಅಫಿಡವಿಟ್‌ನಲ್ಲಿ "ತಮ್ಮ ಆಸ್ತಿಗಳನ್ನು ಮುಚ್ಚಿಟ್ಟು ವರದಿ ಒಪ್ಪಿಸುತ್ತಾರೆಯೇ ಹೊರತು ತಮ್ಮದಲ್ಲದ ಆಸ್ತಿಯನ್ನು ಯಾರೂ ತಮ್ಮದೆಂದು 'ಮಿಸ್ಟೇಕು' ಮಾಡು ವುದಿಲ್ಲ, ತಮ್ಮ ಲೋಪಗಳೇನಾದರು ಲೀಕಾಗುತ್ತಿವೆಯೆ ಎಂದು ಹತ್ತಾರು ಬಾರಿ ಓದಿ ಸೊಂ ಹಾಕುವ ಅಫಿಡವಿಟ್ ನಲ್ಲಿ ಈ ಪ್ರಮಾಣದ 'ಕಣ್ತಪ್ಪು' ಸಂಭವಿಸಲು ಸಾಧ್ಯವೆ?

ಇನ್ನು ಆ ವಿದ್ಯಾಸಂಸ್ಥೆ ಎಲ್ಲಿದೆ, ಅದರ ವ್ಯವಹಾರಗಳು ಯಾವ ಬ್ಯಾಂಕ್‌ನಲ್ಲಿ ನಡೆಯುತ್ತವೆ, ಅಲ್ಲಿ ಓದುವ ವಿದ್ಯಾರ್ಥಿಗಳೆಷ್ಟು, ಅದೇನು ಹೈಸ್ಕೂಲೊ, ಕಾಲೇಜೊ, ಪಾಠ ಹೇಳುವ ಮೇಷ್ಟರುಗಳಾದರು ಯಾರು........ ಇವ್ಯಾವುದನ್ನೂ ಕಂಡವರಿಲ್ಲ, ಆದರೂ ಅದಕ್ಕೆ ದೇಣಿಗೆ ಸಂದಾಯವಾಗುತ್ತೆ ಸೈಟೂ ಗಿಟ್ಟುತ್ತೆ! ಎಲ್ಲಾ ರವೀ ಮಹಾತ್ಮೆ...



ತೇಜಸ್ವಿನಿ ಸುದರ್ಶನ್

ರವಿಯ ಅಫಿಡವಿಟ್ ಅವಾಂತರಗಳು ಇಷ್ಟಕ್ಕೇ ನಿಲ್ಲುವುದಿಲ್ಲ, 2006-07ರಲ್ಲಿ ಚಿಕ್ಕಮಗಳೂರಿನ ಬಸವನಹಳ್ಳಿಯಲ್ಲಿ 170 X 86 ಅಡಿ ಅಳತೆಯ ಭರ್ಜರಿ ಸೈಟೊಂದನ್ನು ಖರೀದಿಸಿದ್ದಾನೆ. ಇದಕ್ಕೆ ತಗುಲಿರುವುದು ಬರೋಬ್ಬರಿ ಐವತ್ತೆಂಟು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿ! ಇಷ್ಟೊಂದು ಹಣ ಈತನಿಗೆ ಎಲ್ಲಿಂದ ಬಂತು ಎನ್ನುವ ಅನುಮಾನ ಮೂಡದಿರಲೆಂದು 2007ರಲ್ಲಿ ಲೋಕಾಯುಕ್ತಕ್ಕೆ ಆಸ್ತಿ ವಿವರ ಸಲ್ಲಿಸುವಾಗ ಅರೆನೂರು ಗ್ರಾಮದಲ್ಲಿ ತನಗೆ ಸೇರಿದ್ದ ಸರ್ವೆ ನಂಬರ್ 101ರ ಐದು ಎಕರೆ ಕೃಷಿ ಜಮೀನನ್ನು ಮಾರಾಟ ಮಾಡಿ ಬಂದ ದುಡ್ಡಲ್ಲಿ ಈ ಸೈಟು ಖರೀದಿಸಿದ್ದಾಗಿ ಹೇಳಿಕೊಂಡಿದ್ದಾನೆ. ಅಷ್ಟರಮಟ್ಟಿಗೆ ರವಿ ಬುದ್ಧಿವಂತನೇ ಸರಿ. ಅಲ್ಲಿಗೆ ಅರೆನೂರು ಗ್ರಾಮದ ಜಮೀನು ರವಿ ಪಾಲಿಗೆ ಖಾಲಿಯಾಗಬೇಕು. ಆದರೆ 2013ರಲ್ಲಿ ಚುನಾವಣಾ ಆಯೋಗಕ್ಕೆ ಆಸ್ತಿ ವಿವರ ಸಲ್ಲಿಸುವಾಗ ತನಗೆ ಪಿತ್ರಾರ್ಜಿತವಾಗಿ ಬಂದ ಅದೇ ಅರೆನೂರಿನ ಅದೇ ಸರ್ವೆ ನಂಬರ್ 101ರ ಏಳು ಎಕರೆ ಕೃಷಿ ಜಮೀನಿದೆ ಎಂದು ಘೋಷಿಸಿಕೊಂಡಿದ್ದಾನೆ. ಅಲ್ಲಿಗೆ ಆ ಜಮೀನನ್ನು ಮಾರಾಟ ಮಾಡಿದ್ದೆ ಎನ್ನುವ ರವಿ ಹೇಳಿಕೆಯೇ ಶುದ್ಧ ಸುಳ್ಳು! ಹಾಗಾದರೆ ಆ ಸೈಟು ಕೊಂಡುಕೊಳ್ಳಲು ಐವತ್ತೆಂಟು ಲಕ್ಷ ಎಲ್ಲಿಂದ ಬಂತು? ವಿಚಿತ್ರ ಅಂದರೆ, ತಾನು ಮಾರಿ ಕೊಂಡಿದ್ದೆ ಎಂದು ಹೇಳುವ ಜಮೀನು ಐದು ಎಕರೆಯಿಂದ ಏಳು ಎಕರೆಗೆ ಬೆಳೆದುನಿಂತಿದೆ. ಇದು ಹೇಗೆ ಸಾಧ್ಯ? ಹೋಗಲಿ, ಮೊದಲು ಮಾರಾಟ ಮಾಡಿ ಆನಂತರ ಪುನಃ ಖರೀದಿಸಿರಬಹುದು ಎನ್ನುವ concession ನೀಡೋಣ ವೆಂದರೆ, 'ಅದು ಪಿತ್ರಾರ್ಜಿತ ಸ್ವತ್ತು, ನಾನದನ್ನು ಖರೀದಿಸಿದ ಆಸ್ತಿಯಲ್ಲ' ಅಂತಲೂ ಅದೇ ಅಫಿಡವಿಟ್‌ನಲ್ಲಿ ಡಂಗೂರ ಸಾರಿಕೊಂಡಿದ್ದಾನೆ. ಇನ್ನು ಆ ಸೈಟು ಖರೀದಿಗೆಂದು ಖರ್ಚು ಮಾಡಿದ್ದೆ ಎಂದು ಹೇಳಿಕೊಂಡಿರುವ ಐವತ್ತೆಂಟು ಲಕ್ಷದ ಮೊತ್ತ ಪತ್ರದಲ್ಲಿ ನಮೂದಾಗಿರುವ ನೇರ ಮಾರಾಟ ಬೆಲೆ ಮಾತ್ರ. ಅದಕ್ಕೆ ತಗುಲುವ ಕ್ರಯಪತ್ರದ ತೆರಿಗೆ ಐದು ಲಕ್ಷವನ್ನು 2008ರ ಅಫಿಡವಿಟ್‌ನಲ್ಲಿ ತೋರಿಸಿಯೇ ಇಲ್ಲ, ಈ ಕುರಿತು ಒಂದೆರಡು ಕ್ಯೆರಿಗಳು ಹೋದನಂತರ ಈಗ, ಅಂದರೆ 2013ರಲ್ಲಿ ಸೈಟು ಖರೀದಿಗೆ 63,98,152 ರೂಪಾಯಿ ನೀಡಿದ್ದೆ ಎಂದು ಹೇಳಿಕೊಂಡಿದ್ದಾನೆ.




ಶ್ರೀಮತಿ ಪಲ್ಲವಿ ರವಿ

ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿ ವಿವ... ಪರಿಪೂರ್ಣವಲ್ಲ ಎಂಬುದಕ್ಕೆ ಮತ್ತೊಂದು ಸಾಕ್ಷಿಯಿದೆ... 2007ರಲ್ಲಿ ಲೋಕಾಯುಕ್ತ ಸಂಸ್ಥೆಗೆ ತನ್ನ ಆಸ್ತಿ ಮೌಲ್ಯವನ್ನು ಘೋಷಿಸಿಕೊಳ್ಳುವಾಗ, ದೇವನಹಳ್ಳಿಯ ಸಿಂಡಿಕೇಟ್ ಬ್ಯಾಂಕ್‌ನಲ್ಲಿ 3922203730 ನಂಬರಿನ ಒಂದು ಅಕೌಂಟ್ ತನ್ನದೇ ಹೆಸರಲ್ಲಿರುವುದಾಗಿ ಹೇಳಿಕೊಂಡಿದ್ದ... ಜೊತೆಗೆ ಅದರಲ್ಲಿ 78,25,480 ರೂಪಾಯಿಯ ಭರ್ಜರಿ ಬ್ಯಾಲೆನ್ಸ್ ಇರುವುದಾಗಿಯೂ ಘೋಷಿಸಿ ಕೊಂಡಿದ್ದ, ಆದರೆ 2008ರಲ್ಲಾಗಲಿ, 2013ರಲ್ಲಾಗಲಿ ಚುನಾವಣಾ ಆಯೋಗಕ್ಕೆ ರವಿ ನೀಡಿರುವ ಅಫಿಡವಿಟ್ ಗಳನ್ನು ಒಂದಿಂಚೂ ಬಿಡದಂತೆ ತಡಕಾಡಿದರೂ ಈ ಅಕೌಂಟಿನ ಸುಳಿವೇ ಇಲ್ಲ! ಆ ಅಕೌಂಟು ಏನಾಯಿತು? ಅದರಲ್ಲಿದ್ದ ಸು... ಸುಮಾರು ಎಂಬತ್ತು ಲಕ್ಷದ ಗಂಟು ಎಲ್ಲಿಗೆ ಹೋಯ್ತು?... ಎಲ್ಲವೂ ರವೀ ರಹಸ್ಯ!

ಗಣಿಗಾರಿಕೆಗೆ ದಾಖಲೆಯೇ... ಬದಲಾದವು

ಇವಿಷ್ಟೂ ಅಫಿಡವಿಟ್‌ನಲ್ಲಿ ಬಯಲಾಗುವ ಸಿಟಿ ರವಿಯ... ಬಂಡವಾಳ. ಇನ್ನು ಶಾಸಕನಾಗಿ... ಸಚಿವನಾಗಿ ಅಧಿಕಾ... ದುರುಪಯೋಗಪಡಿಸಿಕೊಂಡು ಈ... ಬೇನಾಮಿಯಾಗಿ ಮಾಡಿರುವ ಆಸ್ತಿಗಂತೂ... ಲೆಕ್ಕವೇ ಇಲ್ಲ. ಮರ್ಲೆ ಗ್ರಾಮದಲ್ಲಿ ರ... ಹೆಂಡತಿಯ ಚಿಕ್ಕಮ್ಮನ ಹೆಸರ... ನಡೆಯುತ್ತಿರುವ ಕಲ್ಲು ಗಣಿಗಾರಿಕೆ, ಭಾ... ಸುದರ್ಶನನ ಉಮೇದುವಾರಿಕೆಯಲ್ಲಿ ಸಾಗುತ್ತಿರುವ ಕಾಂ... ಶೆಡ್ ಕನ್‌ಸ್ಟ್ರಕ್ಷನ್ ಕಂಪನಿಗಳಂತು ಯಾವ ನಿಟ್ಟಿನಿಂದಲೂ ಸಕ್ರಮವಾದವಲ್ಲ, ಅದರಲ್ಲೂ ಅರಣ್ಯದ ಪ್ರದೇಶವನ್ನು ಗಣಿಗಾರಿಕೆ ನಡೆಸಲು ಸುದರ್ಶನ್ ಹೆಸರಿಗೆ ಅಗ್ರಿಮೆಂಟ್ ಆಗಿರುವುದರ ಹಿಂದೆ ರವಿಯ ಅಧಿಕಾರದ ಕೈಗಳು ವಿಪರೀ... ಕೆಲಸ ಮಾಡಿರುವುದು ಬೆಳಕಿಗೆ ಬರುತ್ತದೆ.

ಅಂಬಳೆ ಹೋಬಳಿಯ ಮರ್ಲೆ ಗ್ರಾಮದ ಸುತ್ತಮುತ್ತಲಿ... ಸರ್ವೆ ನಂಬರ್ 185ರ ಒಂದಷ್ಟು ಜಾಗವನ್ನು ಸರ್ಕಾ...



ಮತ್ತು ಸ್ಥಿರ ...ಳು. ...ತ್ತು ವಿಳಾಸ ...ತ್ತ	1.ಚಿಕ್ಕಮಗಳೂರು ಸಿ.ಡಿ.ಎ. ನಿವೇಶನದ ಮೊತ್ತ 2,50,000(ಸಿ.ಟಿ.ರವಿ) 2. ಶಾಸಕರಿಗೆಕೊಟ್ಟಿರುವ ಬಿ.ಡಿ.ಎ.ನಿವೇಶನಕೆ.ಹೆಚ್.ಬಿ. ಬಡಾವಣೆ,ಬೆಂಗಳೂರು 50×80 ನಿವೇಶನ ಬೆಲೆ ರೂ.15,00,000-00 3. ಸಿ.ಟಿ. ರವಿ ಹೆಸರಿನಲ್ಲಿರುವ ಚಿಕ್ಕಮಗಳೂರು ನಗರದ ಬಸವನಹಳ್ಳಿ ಮುಖ್ಯ ರಸ್ತೆಯ ನಿವೇಶನ ಮೊತ್ತ 58,48,000-00 ರೂ (ಅರೆನೂರು ಗ್ರಾಮದ ಸರ್ವೆ ನಂ 101 ರ ಕೃಷಿ ಜಮೀನನ್ನು ಮಾರಾಟ ಮಾಡಿದ್ದು ಮತ್ತು ಕೃಷಿ ...ದಾಯದಿಂದ ಕೊಂ... ...ವೇಶನ)	ಚಿಕ್ಕಮಗಳೂರು ಹುಡ್ಕೋ ನಿವೇಶನ ಮೊತ್ತ 3,00,000 (ಪಲ್ಲವಿ ರವಿ)

2007ರ ಲೋಕಾಯುಕ್ತ ಅಫಿಡವಿಟ್‌ನಲ್ಲಿ ಅರೆನೂರಿನ ಜಮೀನು ಮಾರಿರುವುದಾಗಿ ಘೋಷಣೆ

ದೇಶಭಕ್ತನ ಗೂಂಡಾಗಿರಿ



ಸಣ್ಣಮಲ್ಲಪ್ಪ

ಸಿಟಿ ರವಿ ಅದೆಂತಹ ಗೋಮುಖ-ವ್ಯಾಘ್ರ ಎಂಬುದನ್ನು ಸಾಬೀತುಪಡಿಸಲು ಹಿರೇಮಗಳೂರಿನ ಬಡ ಕುಟುಂಬವೊಂದು ಬೀದಿಗೆ ಬಿದ್ದ ನಿದರ್ಶನವೇ ಸಾಕು. ಸಣ್ಣಮಲ್ಲಪ್ಪನಿಗೆ ಸರ್ವೆ ನಂಬರ್ 519ರ ಐದು ಎಕರೆ ಜಾಗದಲ್ಲಿ ತೆಂಗಿನತೋಟವಿತ್ತು, ತೋಟದಲ್ಲೇ ಇದ್ದ ಮನೆಯಲ್ಲಿ ಗಂಡಹೆಂಡತಿ ಮಾತ್ರ ವಾಸವಾಗಿದ್ದರು. ಆ ಜಾಗವನ್ನು ತನಗೆ ಮಾರಾಟ ಮಾಡುವಂತೆ ಸಿಟಿ ರವಿ ದುಂಬಾಲು ಬಿದ್ದಿದ್ದ; ಆದರೆ ತಮಗಿದ್ದ ಏಕಮಾತ್ರ ಆಸ್ತಿಯನ್ನು ಕಳೆದುಕೊಳ್ಳಲು ಇಷ್ಟಪಡದ ಅವರು ಮಾರಾಟ ಮಾಡಲು ಸುತರಾಂ ಒಪ್ಪಲಿಲ್ಲ, ಆನಂತರ ಶುರುವಾದದ್ದು ಅಪ್ಪಟ ಸಿನಿಮಾ ಶೈಲಿಯ ಉಪಟಳ. ಮೂಲತಃ ಲಿಂಗಾಯತರಾದ ಅವರ ಮನೆಯೊಳಕ್ಕೆ ಪುಂಡರನ್ನು ನುಗ್ಗಿಸಿ ಅಲ್ಲೇ ಮಾಂಸವನ್ನು ಬೇಯಿಸಿ ತಿನ್ನುವುದು, ಕುಡಿಯುವುದು ಮತ್ತೊಂದು ಮಗದೊಂದು ಎಲ್ಲವನ್ನೂ ಮಾಡಿಸಿದ್ದ, ವಿಷಯ ಕೋರ್ಟ್ ಮೆಟ್ಟಿಲನ್ನೂ ಏರಿತ್ತು, ಒಂದು ದಿನ ವೃದ್ಧ ಗಂಡ ಹೆಂಡತಿ ಇಬ್ಬರೂ ಇದೇ ಕೇಸಿನ ಸಲುವಾಗಿ ಕೋರ್ಟಿಗೆ ಹೋಗಿದ್ದಾಗ ಮನೆ ಬೀಗ ಹೊಡೆದು ಸಾಮಾನುಗಳನ್ನೆಲ್ಲ ಹೊರಗೆಸೆದು ಬುಲ್ಡೋಜರ್ ತಂದು ಮನೆಯನ್ನೇ ನೆಲಸಮ ಮಾಡಿ ಹಾಕಿದ್ದರು. ಸಂಜೆ ಮರಳಿ ಬಂದವರಿಗೆ ಇಲ್ಲಿ ಮನೆಯೇ ಇರಲಿಲ್ಲ, ಹೀಗೆಲ್ಲ ಪೀಡಿಸಿ ಕೊನೆಗೂ ಆ ಐದು ಎಕರೆಯನ್ನು ತನ್ನ ಭಾವ ಸುದರ್ಶನನ ಹೆಸರಿಗೆ ಬರೆಸಿಕೊಳ್ಳುವಲ್ಲಿ ಸಿಟಿ ರವಿ ಯಶಸ್ವಿಯಾಗಿದ್ದ! ಹೇಗಿದೆ ನೋಡಿ ದೇಶಭಕ್ತ, ಜನನಾಯಕನ ಹಿಸ್ಟರಿ....

ಅರಣ್ಯ' ಎಂದು ಬಹು ಹಿಂದೆಯೇ ಘೋಷಿಸಿತ್ತು. ಭಾವ ಸುದರ್ಶನನ ಕಣ್ಣು ಅದ್ಯಾವಾಗ ಅಲ್ಲಿದ್ದ ಬಂಡೆಗಳ ಮೇಲೆ ಬಿತ್ತೋ, ಆಗಿಂದ ಸರ್ಕಾರಿ ...ಲೆಗಳೆಲ್ಲ ದಿನ ಬೆಳಗಾಗುವುದರೊಳಗೆ ಬದಲಾಗಲು ...ವಾಗಿದ್ದವು. ಮೊದಲು ಈ ಅರಣ್ಯ ಪ್ರದೇಶವನ್ನು ...ಣ್ಯದಿಂದ ಗೋಮಾಳ' ಎಂದು ದಾಖಲೆ ...ರ್ತಿಸಲಾಗಿದೆ. ಒಂದಷ್ಟು ದಿನ ಬಿಟ್ಟು ದಾಖಲೆಯಲ್ಲಿದ್ದ ...ಣ್ಯವನ್ನು ಸಂಪೂರ್ಣವಾಗಿ ಕೈಬಿಟ್ಟು ಕೇವಲ ...ಮಾಳ' ಎಂಬುದಾಗಷ್ಟೆ ಉಳಿಸಿಕೊಳ್ಳಲಾಗಿದೆ. ಈ ...ಯಲ್ಲಿ ಮುಗಿದು ಎರಡೇ ತಿಂಗಳಿಗೆ ಅಷ್ಟೂ ...ಶವನ್ನು ಗಣಿಗಾರಿಕೆ ಮಾಡಲು ಸುದರ್ಶನ್ ಮತ್ತು ...ಮ ಅತ್ತೆ ಹೆಸರಿನ ಮೂಕಾಂಬಿಕಾ ಸ್ಟೋನ್ ಕ್ರಷರ್ ...ಾ ಕಾಂಕ್‌ಶೆಡ್ ಕಂಪನಿಗಳಿಗೆ ಬಿಟ್ಟುಕೊಡಲಾಗಿದೆ. ... ಸುಪ್ರೀಂಕೋರ್ಟ್‌ನ ಆದೇಶದ ಪ್ರಕಾರ ಸರ್ಕಾರದ ...ವುದೇ ದಾಖಲೆಯಲ್ಲಿ ಒಂದು ಪ್ರದೇಶವನ್ನು ಅರಣ್ಯ ...ವು ಗುರುತಿಸಿದ್ದರೆ ಅದನ್ನು ಮಾರ್ಪಾಟು ಮಾಡಲು ...ಾಶವೇ ಇಲ್ಲ. ಹಾಗೊಂದು ವೇಳೆ ಅನಿವಾರ್ಯವಾಗಿ ...ರ್ತಿಸಲೇಬೇಕಾದಾಗ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ... ಒಪ್ಪಿಗೆ ಪಡೆದುಕೊಳ್ಳಬೇಕು. ಆದರೆ ದಿಢೀರ್ ...ಾದ ಮರಳೆ ಅರಣ್ಯ ಪ್ರದೇಶದ ದಾಖಲೆಗಳು ...ವ್ಯ ಸರ್ಕಾರದ ಮಾತಿರಲಿ, ಜಿಲ್ಲಾಧಿಕಾರಿಯ ...ಯನ್ನೇ ಬಿಟ್ಟು ಹೊರಹೋಗಿಲ್ಲ, ಎಲ್ಲಾ ಬದಲಾವಣೆ ... ಲೋಕಲ್ ಲೆವೆಲ್‌ನಲ್ಲೆ ಜರುಗಿವೆ. ಹಾಗಿದ್ದ ಮೇಲೆ ... ಯಾರನ್ನು ಹೊಣೆಗಾರರನ್ನಾಗಿಸಬೇಕು? ಅಸಲಿಗೆ ...ಚೆಯಲ್ಲಿ ಮೊದಲು ಸ್ಟೋನ್ ಕ್ರಷರ್ ನಡೆಸುತ್ತಿದ್ದದ್ದು ...ಪ್ರೆಸ್ ಮುಖಂಡ ಶಾಂತೇಗೌಡ. ರವಿ ಗದ್ದುಗೆ ...ತ್ತಿದ್ದಂತೆಯೇ ಶಾಂತೇಗೌಡನ ಮೇಲೆ ಒತ್ತಡ ತಂದು ...ನ್ನು ಅವನ ಭಾವ ಸುದರ್ಶನ ...ಮ ಅತ್ತೆಯ ಹೆಸರಲ್ಲಿ ಖರೀದಿಸಿ ...ಸುತ್ತಿದ್ದಾನೆ. ಈ ಕ್ರಷಿಂಗ್ ...ಯೂ ಅಕ್ರಮವಾದದ್ದು, ಪರಿಸರಕ್ಕೆ ... ಕಾರಕ ಎಂದು ಮಾಲಿನ್ಯ ...ಂತ್ರಣ ಮಂಡಳಿ ನೋಟಿಸು ನೀಡಿ ...ಾಂಗೆ ವಿದ್ಯುತ್ ಪೂರೈಕೆ ...ಮಂತೆ ಶಿಫಾರಸ್ಸು ಮಾಡಿದ್ದರೂ ... ಕೀಳುವ ಲಾಭದಾಯಕ ದಂಧೆ ... ಅವ್ಯಾಹತವಾಗಿ ನಡೆಯುತ್ತಲೇ ... ಎಲ್ಲಕ್ಕೂ ರವಿಯದ್ದೇ ಕೃಪಾಕಟಾಕ್ಷ ...ವುದನ್ನು ಮತ್ತೊಮ್ಮೆ ಹೇಳ ...ಗಿಲ್ಲ.



ಭಾವ ಸುದರ್ಶನ್

ಕೋಟಿ ಕಿಕ್-ಬ್ಯಾಕ್ ಆರೋಪ


...ಾಫಿ ಕುಳಗಳೇ ತುಂಬಿಕೊಂಡಿರುವ ಚಿಕ್ಕಮಗಳೂರಿನಲ್ಲಿ ...ಕ್ ಲೇಔಟ್ ಒಂದನ್ನು ನಿರ್ಮಿಸಬೇಕೆನ್ನುವುದು ...ಮು ಲೆಕ್ಕಾಚಾರ. ಇದಕ್ಕಾಗಿ ಸರ್ಕಾರದ ಅನುಮೋದನೆ ...ಯೂ ಪಡೆದುಕೊಂಡಿದ್ದಾನೆ. ಆದರೆ ಅಲ್ಲಿಂದಾಚೆಗೆ ...ರುವ ಟೆಂಡರ್ ಪ್ರಕ್ರಿಯೆಯ ಅವ್ಯವಸ್ಥೆಯನ್ನು ...ನಿಸಿದ ಎಂತವರಿಗಾದರೂ ಅದರಲ್ಲಿ ಗೋಲ್‌ಮಾಲ್ ...ರುವುದು ತಿಳಿದು ಹೋಗುತ್ತೆ. ಜಿಲ್ಲಾ ಉಸ್ತುವಾರಿ ..., ಜಿಲ್ಲಾಧಿಕಾರಿ, ಸಬ್ ರೆಜಿಸ್ಟ್ರಾರ್, ತಹಶೀಲ್ದಾರ್ ...ವಲಾದವರಿದ್ದ ಸಮಿತಿಯೊಂದು ಇದಕ್ಕಾಗಿ ನೇಮಕ ...ತ್ತು. ಶಾಸಕ ಕಮ್ ಸಚಿವನಾಗಿರುವ ರವಿಯೇ ಈ ...ತಿಯ ಮುಖ್ಯ ಸೂತ್ರಧಾರಿ. ಮೊದಲು ಸಭೆ ಸೇರಿದ ಸಮಿತಿ ಹೈಟೆಕ್ ಲೇಔಟ್‌ನ ನಿರ್ಮಾಣಕ್ಕೆ ಉಪ್ಪಳ್ಳಿ ...ವಾರ ಗ್ರಾಮದ ಸರ್ವೇ ನಂಬರ್ 34, 41, 42, 44, ಇತ್ಯಾದಿಗಳ ಒಟ್ಟು 193.19 ಎಕರೆಯನ್ನು ...ಸ್ತ ಮಾಡಿ, ಸುಸಜ್ಜಿತ ನಿವೇಶನಗಳ ಅಭಿವೃದ್ಧಿಗೆ ...ಬಹುದಾದ ಲೆಕ್ಕಾಚಾರ ಹಾಕಿ ಒಟ್ಟು 80 ಕೋಟಿ ...ಗಲಿದೆ ಎನ್ನುವ ಎಸ್ಟಿಮೇಷನ್ ಕೂಡಾ ನೀಡಿತ್ತು. ...ಂತೆ ಒಂದು ಚದರಡಿಗೆ 350 ರೂಪಾಯಿಯಂತೆ ...ಗೆ ವಿತರಿಸಬೇಕೆನ್ನುವ ತೀರ್ಮಾನಕ್ಕೆ ಬಂದ ಸಮಿತಿ ... ನಿರ್ಣಯ ಲಿಖಿತ ರೂಪದಲ್ಲೂ ಅಂಗೀಕರಿಸಿತ್ತು. ...ಶದ ಅಭಿವೃದ್ಧಿಗೆಂದು ಯಾವುದಾದರು ಒಂದು ಕನ್‌ಸ್ಟ್ರಕ್ಷನ್ ಕಂಪನಿಗೆ ಟೆಂಡರ್ ಮೂಲಕ ನೀಡುವುದು ವಾಡಿಕೆ. ಅಂತಹ ಟೆಂಡರ್ರು ಇಲ್ಲಿ ಸಂಪೂರ್ಣ ಅಕ್ರಮವಾಗಿ ನಡೆದಿತ್ತು. ಮೊದಲ ಬಾರಿ ಟೆಂಡರ್ ಕರೆಯಲು ಸಮಿತಿ ಮುಂದಾದಾಗ ಅವ್ಯವಸ್ಥೆಯಿಂದ ಕೂಡಿದ್ದ ಟೆಂಡರ್ ಪ್ರಕ್ರಿಯೆ ಮತ್ತು ನಿಯಮಗಳ ವಿರುದ್ಧ ಸಾರ್ವಜನಿಕವಾಗಿ ಆಕ್ರೋಶ ಕಂಡುಬಂದ ಕಾರಣ ಅದನ್ನು ಸ್ಥಗಿತ ಮಾಡಲಾಗಿತ್ತು. ಆದರೆ ವಿಷಯ ತಣ್ಣಗಾಗುತ್ತಿದ್ದಂತೆಯೇ ತರಾತುರಿಯಲ್ಲಿ ಅದೇ ನಿಯಮಗಳಡಿಯಲ್ಲಿ ಟೆಂಡರ್ ಪೂರ್ಣಗೊಳಿಸಿ ಲೇಔಟ್ ಅಭಿವೃದ್ಧಿಗೆ ಬರೋಬ್ಬರಿ 160.89 ಕೋಟಿ ಎಸ್ಟಿಮೇಷನ್ ನೀಡಿದ್ದ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಗೆ ಉಸ್ತುವಾರಿ ವಹಿಸಲಾಗಿದೆ. ಇದೇ ನಿರ್ಮಾಣಕ್ಕೆ ಸಮಿತಿ ಅಂದಾಜಿಸಿದ್ದು 80 ಕೋಟಿ, ಆದರೆ ಕಂಪನಿ ಹೇಳಿರೋದು 160 ಕೋಟಿ. ಅಲ್ಲಿಗೆ ಸರ್ಕಾರದ ಬೊಕ್ಕಸಕ್ಕೆ 80 ಕೋಟಿ ಲುಕ್ಸಾನು. ಒಂದು ಖಾಸಗಿ ಕಂಪನಿಗೆ ಅನಾಮತ್ತು 80 ಕೋಟಿಯ ಲಾಭ ಮಾಡಿಕೊಡುವುದೆಂದರೆ ಸಣ್ಣ ಕೆಲಸವೇ? ಅದಕ್ಕೆ ತಕ್ಕನಾದ ಪ್ರತಿಫಲ ಇಡೀ ನಾಟಕದ ಸೂತ್ರಧಾರರಿಗೆ ಸಂದಾಯವಾಗಿಯೇ ಇರುತ್ತೆ. ಈ ಮಧ್ಯೆ ಸಮಿತಿಯ ಹಳೆ ನಿರ್ಣಯಗಳು ರಾತ್ರೋರಾತ್ರಿಯಲ್ಲಿ ಬದಲಾಗಿಹೋಗಿದ್ದವು. ಮೊದಲು ಚದರಡಿಗೆ 350 ರೂಪಾಯಿ ಎಂದು ಘೋಷಿಸಿದ್ದ ಸಮಿತಿಯೇ ಈಗ ಚದರಡಿಗೆ 750 ರೂಪಾಯಿ ಎನ್ನುತ್ತಿದೆ. ಹಾಗೆ ನೋಡಿದರೆ ಈ ಲೇಔಟ್ ನಿರ್ಮಿಸಲು ಉದ್ದೇಶಿಸಿರುವ ಜಾಗದ ಅಕ್ಕಪಕ್ಕದ ಜಮೀನುಗಳ ಹಾಲಿ ಸಬ್ ರೆಜಿಸ್ಟ್ರಾರ್ ಬೆಲೆ ಕೇವಲ 250 ರೂಪಾಯಿ ಮಾತ್ರ!

ಸಿಟಿ ರವಿಯ ಗೋಲ್‌ಮಾಲ್ ತುಘಾಕಿಗಳು ಇಷ್ಟಕ್ಕೇ ಕೊನೆಯಾಗುವುದಿಲ್ಲ. ಕಿಡಕಿದಂತೆ ಒಂದೊಂದಾಗಿ ಸಿಡಿಯುತ್ತಲೇ ಹೋಗುತ್ತವೆ. ವಾಟರ್‌ಪಾರ್ಕ್ ನಿರ್ಮಾಣದ ಹೆಸರಲ್ಲಿ ರೈತರಿಂದ ಎಂಟು ಎಕರೆ ಕೃಷಿ ಜಮೀನನ್ನು ಸುಲಿಗೆ ಮಾಡಿದ್ದೂ ಅದರಲ್ಲಿ ಒಂದು. ಹಿರೇಮಗಳೂರಿನ ಸರ್ವೇ ನಂಬರ್ 375/1, 375/2, 375/3, 375/4, 376/1, 376/2 ಇತ್ಯಾದಿಗಳಲ್ಲಿ ಹಂಚಿಹೋಗಿದ್ದ ಕೆರೆಯ ಮುಂಭಾಗದಲ್ಲೇ ಇದ್ದ ಫಲವತ್ತಾದ ಕೃಷಿ ಜಮೀನಿನ ಮೇಲೆ ರವಿಯ ಕಣ್ಣು ಬಿದ್ದದ್ದೇ ತಡ, ಖತರ್ನಾಕ್ ಐಡಿಯಾವೊಂದನ್ನು ಹುಟ್ಟು ಹಾಕಿದ್ದರು. ಅದಕ್ಕೆ ಅವರಿಟ್ಟ ಹೆಸರು ವಾಟರ್ ಪಾರ್ಕ್! ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಿಂದ ಈ ಜಾಗದಲ್ಲಿ ಸರ್ಕಾರ ವಾಟರ್ ಪಾರ್ಕ್ ನಿರ್ಮಾಣ ಮಾಡಲು ಉದ್ದೇಶಿಸಿದ್ದು ಸದ್ಯದಲ್ಲೇ ನೋಟಿಫೈ ಆಗುವ ಸಾಧ್ಯತೆ ಇರುವುದರಿಂದ ಬಿಟ್ಟುಕೊಡಲು ರೆಡಿಯಾಗಿ ಎಂಬರ್ಥದ ನೋಟಿಸ್ ಅಷ್ಟೂ ರೈತರ ಕೈ ತಲುಪಿತ್ತು. ಗಾಬರಿ ಬಿದ್ದ ಅವರೆಲ್ಲ ರವಿ ಬಳಿ ಬಂದು ಅವಲತ್ತುಕೊಂಡಿದ್ದರು. ಆದರೆ ರವಿ ತುಂಬಾ ವಿನಯಪೂರ್ವಕವಾಗಿ ಹೆಲ್ಪ್‌ಲೆಸ್ ಎಂದು ಘೋಷಿಸಿಬಿಟ್ಟಿದ್ದ. ಸರ್ಕಾರ ಭೂಮಿಯನ್ನು ವಶಪಡಿಸಿಕೊಂಡರೆ ಕೈಗೆ ಸಿಗುವುದು ಬಿಡಿಗಾಸು ಮಾತ್ರ ಎಂದರಿತಿದ್ದ ರೈತರ ಆತಂಕವನ್ನೇ ಬಂಡವಾಳ ಮಾಡಿಕೊಂಡ ರವಿ ಮತ್ತವನ ಭಾವ ಸುದರ್ಶನ್ ಪರೋಪಕಾರಿಗಳ ಸೋಗಿನಲ್ಲಿ ಅದೇ ರೈತರ ಮುಂದೆ ನಿಂತು 'ನೀವು ಸರ್ಕಾರಕ್ಕೆ ಜಮೀನು ಕೊಟ್ಟರೆ ಎರಡೊ, ಮೂರೊ ಲಕ್ಷ ಮಾತ್ರ ಸಿಗುತ್ತೆ ಬದಲಾಗಿ ನಮಗೇ ಮಾರಿಬಿಡಿ ಎಕರೆಗೆ ಹತ್ತು ಲಕ್ಷ ಕೊಡುತ್ತೇವೆ' ಎನ್ನುವ ಡೀಲ್ ಇಟ್ಟಿದ್ದರು. ಅದಾಗಲೇ ಜಮೀನು ಕಳೆದುಕೊಳ್ಳುವ ಗಾಬರಿಯಲ್ಲಿದ್ದ ಅವರು ಕೊಂಚ ಲಾಭದಾಯಕ ಎನಿಸುವಂತಿದ್ದ ಈ ಆಫರ್ ಅನ್ನು ದುಸರಾ ಮಾತಾಡದೆ ಒಪ್ಪಿಕೊಂಡಿದ್ದರು. ಕೊನೆಗೆ ಅದು ಬಿಕರಿಯೂ ಆಗಿತ್ತು.

ಸ್ವಲ್ಪ ದಿನದಲ್ಲೇ ಆ ಎಂಟೂ ಎಕರೆ ರವಿಯ ಭಾವ ಸುದರ್ಶನ್ ಮತ್ತವನ ಹೆಂಡತಿ ತೇಜಸ್ವಿನಿ ಸುದರ್ಶನ್ ಹೆಸರಿಗೆ ರೆಜಿಸ್ಟ್ರೇಷನ್ ಆಗಿಹೋಗಿದೆ. ಅಲ್ಲೀಗ ಯಾವ ಕೃಷಿಯೂ ನಡೆಯುತ್ತಿಲ್ಲ. ರವಿ-ಸುದರ್ಶನರ ಬೇಲಿ ಎದ್ದು ನಿಂತಿದೆಯಷ್ಟೆ. ಸುಮ್ಮನೇ ಹೋಗಿ ಆ ಜಾಗವನ್ನು ನಮಗೆ ಮಾರಿಬಿಡಿ ಎಂದಿದ್ದರೆ ಯಾವ ರೈತನೂ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ರವಿ ಹಾಕಿದ ವಾಟರ್ ಪಾರ್ಕ್ ಮಾಸ್ಟರ್ ಪ್ಲ್ಯಾನ್‌ಗೆ ಬೆದರಿದ ರೈತರು ಯಾವ ಪ್ರತಿರೋಧವೂ ಇಲ್ಲದೆ ಜಮೀನು ಬಿಟ್ಟುಕೊಟ್ಟಿದ್ದರು!

ಇವು ಸಿಟಿ ರವಿ ಅಕ್ರಮದ ಒಂದೆರಡು ಸ್ಯಾಂಪಲ್‌ಗಳು ಮಾತ್ರ. ಇಂತಹ ಅದೆಷ್ಟೋ ಅಗೋಚರ ಕರ್ಮಕಾಂಡಗಳು ನಡೆದಿವೆ. ಅದಕ್ಕೆ ಪೂರಕವೆಂಬಂತೆ ಈಗ್ಗೆ ಐದಾರು ತಿಂಗಳ ಹಿಂದೆ ರಾಮನಹಳ್ಳಿಯಲ್ಲಿರುವ ಈತನ ಫಾರ್ಮ್‌ಹೌಸ್ ಮೇಲೆ ಆದಾಯ ತೆರಿಗೆ ಇಲಾಖೆಯ ರೇಡ್ ಸಹ ನಡೆದಿತ್ತು, ಅಲ್ಲಿ ಅಪಾರ ಪ್ರಮಾಣದ 'ದಾಸ್ತಾನು', ಅಕ್ರಮಗಳ ಪುರಾವೆ ಸಿಕ್ಕ ಬಗ್ಗೆ ಕ್ಷೇತ್ರದಲ್ಲಿ ಗುಸುಗುಸು ಕೇಳಿಬರುತ್ತಿದೆ. ಆದರೆ ಸಿಟಿ ರವಿ ಮಾತ್ರ 'ನಾನು ಆ ಫಾರ್ಮ್ ಹೌಸ್ ಅನ್ನು ಸುದರ್ಶನ್ ಎನ್ನುವವರಿಗೆ ಬಾಡಿಗೆ ಕೊಟ್ಟಿದ್ದೇನೆ, ಅದಕ್ಕೂ ನನಗೂ ಸಂಬಂಧವೇ ಇಲ್ಲ' ಎನ್ನುತ್ತಾನೆ. ಯಾರೋ ಅಪರಿಚಿತನೆನ್ನುವಂತೆ ಹೇಳುತ್ತಿರುವ ಬಾಡಿಗೆದಾರ ಸುದರ್ಶನ್ ರವಿಗೆ ಏನಾಗಬೇಕೆನ್ನುವುದು ಇಡೀ ಜಗತ್ತಿಗೇ ಗೊತ್ತು.............

• ವರದಿಗಾರ



...2013 ಅಫಿಡವಿಟ್‌ನಲ್ಲಿ ಅರೆನೂರಿನ ಜಮೀನು ಈಗಲೂ ತನ್ನ ಹೆಸರಲ್ಲೇ ಇರುವುದಾಗಿ ಘೋಷಣೆ

ದಾವಣಗೆರೆ ದಕ್ಷಿಣ: ಸೌಹಾರ್ದತೆಗಾಗಿ ಶಾಮನೂರು ಆಯ್ಕೆ

ದಾವಣಗೆರೆ ದಕ್ಷಿಣ ವಿಧಾನಸಭಾ ಮತಕ್ಷೇತ್ರದ ಚುನಾವಣೆ ಕುತೂಹಲ ಹುಟ್ಟಿಸಿದೆ. ಕಾಂಗ್ರೆಸ್‌ನಿಂದ ಶಾಸಕ ಶಾಮನೂರು ಶಿವಶಂಕರಪ್ಪ ಮರು ಆಯ್ಕೆ ಬಯಸಿದ್ದರೆ, ಕಾಂಗ್ರೆಸ್ ಟಿಕೆಟ್ ತನಗೆ ಸಿಗದಿದ್ದಕ್ಕೆ ಮುನಿಸಿಕೊಂಡಿದ್ದ ಸೈಯದ್ ಸೈಫುಲ್ಲಾ ಮೊನ್ನೆ ಮೊನ್ನೆ ಜೆಡಿಎಸ್ ಸೇರಿಕೊಂಡು ಅದರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ದಾವಣಗೆರೆ ಉತ್ತರ ಕ್ಷೇತ್ರದಿಂದ ಪ್ರಾಯೋಗಿಕವಾಗಿ ದಕ್ಷಿಣಕ್ಕೆ ವಲಸೆ ಬಂದಿರುವ ಬಿ.ಲೋಕೇಶ್ ಎಂಬಾತನಿಗೆ ಬಿಜೆಪಿ ತನ್ನ ಟಿಕೆಟ್ ನೀಡಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಮತಕ್ಷೇತ್ರದ ವಿಶೇಷತೆ ಏನೆಂದರೆ ಇಲ್ಲಿ ಜಾತಿವಾರು ಲೆಕ್ಕಾಚಾರದ ಮತಗಣನೆಯೇ ಚುನಾವಣಾ ರಾಜಕಾರಣದಲ್ಲಿ ಅಪ್ರಸ್ತುತವಾಗುತ್ತದೆ. ಇಲ್ಲಿ ಏನಿದ್ದರೂ ಧರ್ಮಾಧಾರಿತ ಮತಗಳ ಲೆಕ್ಕಾಚಾರ ಶುರುವಾಗುತ್ತದೆ. ಈ ಮತಕ್ಷೇತ್ರ ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಕಣ್ಣಲ್ಲಿ ಅತೀ ಸೂಕ್ಷ್ಮವಾದ ಮತಕ್ಷೇತ್ರವೆಂಬ ಹಣೆಪಟ್ಟಿ ಕಟ್ಟಿಕೊಂಡಿದೆ. ಇಂಥ ಅಪಕೀರ್ತಿ ಈ ಕ್ಷೇತ್ರಕ್ಕೆ ಬಂದಿದ್ದು 90ರ ದಶಕದಲ್ಲಿ.



ಆ ದಶಕದಲ್ಲಿ ಚೆಡ್ಡಿ ನಾಯಕ ಎಲ್.ಕೆ. ಅಡ್ವಾನಿಯ ನೇತೃತ್ವದಲ್ಲಿ ನಡೆದ ರಾಮರಥ ಯಾತ್ರೆ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಕೋಮು ಗಲಭೆಗಳು ನಡೆದು ನಿಷ್ಪಾಪಿ ಯುವಕರ ಹೆಣಗಳುರುಳಿದ್ದವು. ಆ ಹೆಣಗಳ ಮೇಲೆಯೇ ಕೋಮುವಾದಿ ಬಿಜೆಪಿ ಚುನಾವಣೆಗಳಲ್ಲಿ ಗೆಲ್ಲಲು ಯತ್ನಿಸಿದ್ದರೂ ಇಲ್ಲಿನ ಸೌಹಾರ್ದ ಪ್ರಿಯ ಜನ ಅದಕ್ಕೆ ಇಲ್ಲಿಯವರೆಗೂ ಅವಕಾಶ ಮಾಡಿಕೊಟ್ಟಿಲ್ಲ.

ಈ ಹಿಂದೆ ಅಖಂಡವಾಗಿದ್ದ ದಾವಣಗೆರೆ ಮತಕ್ಷೇತ್ರವನ್ನು 2008 ರ ಚುನಾವಣೆಯ ಸಂದರ್ಭದಲ್ಲಿ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಾಗಿ ವಿಂಗಡಿಸಲಾಯಿತು. ಆಗ ದಾವಣಗೆರೆ ದಕ್ಷಿಣ ಕ್ಷೇತ್ರವು ಅತಿಹೆಚ್ಚು ಮುಸ್ಲಿಂ ಮತಗಳಿರುವ ಕ್ಷೇತ್ರವಾಯಿತು. ಈಗ ಈ ಕ್ಷೇತ್ರದಲ್ಲಿ ಶೇಕಡ 40 ರಷ್ಟು ಅಲ್ಪಸಂಖ್ಯಾತ ಮುಸಲ್ಮಾನರ ಮತಗಳಿದ್ದರೆ ಶೇಕಡ 60ರಷ್ಟು ಹಿಂದೂ ಮತಗಳಿವೆ. ಪ್ರತಿ ಚುನಾವಣೆಯಲ್ಲಿ ಶೇ. 70-75ರಷ್ಟು ಮತದಾನ ದಾಖಲಾಗುತ್ತದೆ. ಪರಿಸ್ಥಿತಿ ಹೀಗಿದ್ದರೂ ನಕಲಿ ದೇಶಭಕ್ತರ ಬಿಜೆಪಿಯಾಗಲಿ, ಮುಸ್ಲಿಮ್ ಅಭ್ಯರ್ಥಿಯಾಗಲಿ ಇಲ್ಲಿ ಚುನಾವಣೆಯಲ್ಲಿ ವಿಜಯ ಸಾಧಿಸಿಲ್ಲ ಎಂಬುದೂ ಈ ಕ್ಷೇತ್ರದ ಎಲ್ಲಾ ಕೋಮಿನ ಜನರ ಜಾತ್ಯತೀತ ನಿಲುವನ್ನು ತೋರುತ್ತದೆ.

ಹೋದ ಬಾರಿಯ ಚುನಾವಣೆ ಫಲಿತಾಂಶವನ್ನು ಮುಂಗಡವಾಗಿಯೇ ಧಾರ್ಮಿಕ ಆಧಾರದ ಮೇಲೆ ಘೋಷಿಸಿದ್ದ ರಾಜಕೀಯ ಪಂಡಿತರ ಲೆಕ್ಕಾಚಾರಗಳೆಲ್ಲವೂ ತಲೆಕೆಳಗಾಗಿ ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ ಗೆದ್ದುಬಂದಿದ್ದರು. ಈ ಬಾರಿಯೂ ಬಿಜೆಪಿ ಹಿಂದೂ ಮತ್ತು ಮುಸ್ಲಿಮರ ಮತಗಳನ್ನು ಲೆಕ್ಕ ಹಾಕಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರೂ ಮತ್ತೊಮ್ಮೆ ಅದರ ಧರ್ಮಾಧಾರಿತ ಲೆಕ್ಕಾಚಾರ ತಲೆಕೆಳಗಾಗಲಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಗರದ ಭಾಗವೂ ಸೇರಿದಂತೆ ಗ್ರಾಮೀಣ ಪ್ರದೇಶವೂ ಸೇರಿಕೊಂಡಿದೆ. ಇಲ್ಲಿನ ಮತದಾರರಲ್ಲಿ ಕೋಮುವಾದದ ರಾಜಕಾರಣದ ಗುಂಗಿಲ್ಲ. ಕ್ಷೇತ್ರದ ನೆಮ್ಮದಿ ಮತ್ತು ಅಭಿವೃದ್ಧಿಯ ಬಗೆಗಿನ ಕೆಲಸಗಾರನನ್ನು ಆಯ್ಕೆ ಮಾಡುವ ತವಕ ಜನರಲ್ಲಿ ಇದೆ. ಅಷ್ಟೇ ಅಲ್ಲ, ಇಲ್ಲಿರುವ ಅಲ್ಪಸಂಖ್ಯಾತರು ಕೋಮು ಸೌಹಾರ್ದತೆಯನ್ನು ಕಾಪಾಡಬಲ್ಲ ಅಭ್ಯರ್ಥಿಯನ್ನು ಬೆಂಬಲಿಸುತ್ತಾರೆ. ಈ ಕಾರಣಕ್ಕೆ ಹೋದ ಬಾರಿ ರಾಜ್ಯದಲ್ಲಿ ಬಿಜೆಪಿ ಪರ ಅಲೆ ಇದ್ದರೂ ಇಲ್ಲಿನ ಪ್ರಜ್ಞಾವಂತ ಮತದಾರರು ಶಾಮನೂರು ಶಿವಶಂಕರಪ್ಪನವರನ್ನು ಆಯ್ಕೆ ಮಾಡಿದ್ದರು.

ಶಾಮನೂರರ ಜಾತ್ಯತೀತ ನಿಲುವು ಮತ್ತು ಧರ್ಮನಿರಪೇಕ್ಷೆಯ ರಾಜಕಾರಣ ಕ್ಷೇತ್ರದಲ್ಲಿ ಕೋಮು ಭಾವನೆಗೆ ತಿಲಾಂಜಲಿ ನೀಡಿದೆ. ಇದಕ್ಕೆ ಉತ್ತಮ ಸಾಕ್ಷಿ 2008 ರಿಂದ 2013 ರ ನಡುವಿನಲ್ಲಿ ದಾವಣಗೆರೆ ದಕ್ಷಿಣದಲ್ಲಿ ಒಂದೇ ಒಂದು ಧಾರ್ಮಿಕ ಆಧಾರಿತ ಗದ್ದಲ ನಡೆಯದೇ ಇರುವುದು.

ಪ್ರಸ್ತುತ ಚುನಾವಣೆಯಲ್ಲಿ ಶಾಮನೂರು ಮತ್ತು ಸೈಫುಲ್ಲಾ ನಡುವಿನ ಸ್ಪರ್ಧೆ ಕುತೂಹಲ ಹುಟ್ಟಿಸಿದೆ. ಮೇಲುನೋಟಕ್ಕೆ ಸೈಫುಲ್ಲಾ ಅವರು ಶಾಮನೂರರಿಗೆ ಪ್ರಬಲ ಪೈಪೋಟಿ ಕೊಡುತ್ತಿರುವಂತೆ ಕಾಣಿಸುತ್ತಿದೆ. ಕೆಲವರಂತೂ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರ ಮತಗಳನ್ನು ಸೈಫುಲ್ಲಾ ಬಾಚಿಕೊಳ್ಳುವುದರಿಂದ ಅವರು ಗೆಲ್ಲುತ್ತಾರೆ ಎಂದು ಲೆಕ್ಕ ಹಾಕಲಾರಂಭಿಸಿದ್ದಾರೆ. ಆದರೆ ಅದು ಅಷ್ಟು ಸರಳವೂ ಅಲ್ಲ, ಸುಲಭವೂ ಅಲ್ಲ.

ಯಾಕೆಂದರೆ ಅಲ್ಪಸಂಖ್ಯಾತ ಸಮುದಾಯದ ಸೈಫುಲ್ಲಾ ಚುನಾವಣಾ ಕಣದಲ್ಲಿದ್ದರೂ ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳು ಅದಕ್ಕೆ ಬಂದೇ ಬರುತ್ತವೆ. ಹಾಗೆಯೇ ಕೋಮು ಸೌಹಾರ್ದತೆ ಬಯಸುವ ಜಾತ್ಯತೀತ ಹಿಂದೂ ಮತ್ತು ಮುಸಲ್ಮಾನರ ಮತಗಳು ಸಿಕ್ಕೇ ಸಿಗುತ್ತವೆ. ಹಾಗೆಯೇ ಬಿಜೆಪಿಯ ದುರಾಡಳಿತದಿಂದ ಬೇಸತ್ತಿರುವ ಜನ ಕೂಡ ಕಾಂಗ್ರೆಸ್‌ನ ಶಾಮನೂರರತ್ತ ವಾಲುತ್ತಾರೆ.

ಸೈಫುಲ್ಲಾ ಅವರ ಗೆಲುವಿಗೆ ಅಡಚಣೆ ಆಗುವುದು ಅವರ ರಾಜಕೀಯ ಧೋರಣೆ. ಒಮ್ಮೆ ಕಾಂಗ್ರೆಸ್, ಇನ್ನೊಮ್ಮೆ ಜೆಡಿಎಸ್, ಮತ್ತೊಮ್ಮೆ ಬಿಜೆಪಿ, ಮಗದೊಮ್ಮೆ ತಟಸ್ಥ ನಿಲುವು-ಹೀಗೆ ದ್ವಂದ್ವ ನಿಲುವುಗಳನ್ನು ತಾಳುತ್ತಾ ಬಂದಿರುವ ಸೈಫುಲ್ಲಾ ಅವರನ್ನು ಮುಸ್ಲಿಂ ಸಮುದಾಯದಲ್ಲಿ ಒಪ್ಪುವವರ ಸಂಖ್ಯೆ ಕಡಿಮೆಯೇ. ಮೂಲತಃ ಕಾಂಗ್ರೆಸ್ಸಿಗರಾದ ಸೈಫುಲ್ಲಾ ಈಗ ಜೆಡಿಎಸ್‌ಗೆ ಹಾರಿಹೋಗಿ ತಾವು ಅವಕಾಶವಾದಿ ಎಂಬುದನ್ನೂ ಮತದಾರರ ಮುಂದೆ ತೋರಿಸಿಕೊಟ್ಟಿದ್ದಾರೆ. ಅಕಸ್ಮಾತ್ ಚುನಾವಣೆ ಫಲಿತಾಂಶ ಅಸ್ಪಷ್ಟವಾದರೆ ಕೋಮುವಾದಿ ಬಿಜೆಪಿಯೊಂದಿಗೆ ಜೆಡಿಎಸ್ ಕೈಜೋಡಿಸಲಿದೆ ಎಂಬ ಮಾತು ಕೂಡ ಈಗ ಕೇಳಿ ಬರುತ್ತಿರುವುದರಿಂದ ಮುಸಲ್ಮಾನರು ಸೈಫುಲ್ಲಾರನ್ನು ಬೆಂಬಲಿಸುವುದಿಲ್ಲ. ಅದೂ ಕೂಡ ಶಾಮನೂರರಿಗೆ ಪ್ಲಸ್ ಪಾಯಿಂಟ್ ಆಗಲಿದೆ.

ಇನ್ನು ಬಿಜೆಪಿಯ ಲೋಕೇಶ್ ವೀಕ್ ಕ್ಯಾಂಡಿಡೇಟ್ ಅಂದರೆ ತಪ್ಪಾಗಲಾರದು. ಲೋಕೇಶ ಹೇಳಿಕೊಳ್ಳುವಂತಹ ರಾಜಕಾರಣಿಯಲ್ಲ. ಈತನ ವೈಟ್‌ಕಾಲರ್ ರಾಜಕೀಯ ಶೈಲಿ ಗ್ರಾಮೀಣರಿಗೆ ಸರಿಹೊಂದುವುದೂ ಇಲ್ಲ. ಇಲ್ಲಿಯತನಕ ಲೋಕೇಶ್ ನಗರದ ವಾರ್ಡ್ ಮಟ್ಟದಲ್ಲೇ ರಾಜಕಾರಣ ಮಾಡಿಕೊಂಡು ಬಂದವರು. ಈಗ ಇದ್ದಕ್ಕಿದ್ದಂತೆ ವಿಧಾನಸಭಾ ಕ್ಷೇತ್ರದ ಮಟ್ಟದ ರಾಜಕಾರಣಕ್ಕೆ ಧುಮುಕಿದ್ದಾರೆ. ಈತ ಮತದಾರರಿಗೆ ಪರಿಚಯ ಆಗುವ ಹೊತ್ತಿಗೆ ಮತ ಎಣಿಕೆ ಪ್ರಕ್ರಿಯೆಯೇ ಮುಗಿದುಹೋಗಿರುತ್ತದೆ. ರಾಜ್ಯದಲ್ಲಿ ಈಗಿನ ಬಿಜೆಪಿ ಮಾನ ಮರ್ಯಾದೆ ಕಳೆದುಕೊಂಡಿರುವುದರಿಂದ ಈತನಿಗೆ ಹೆಚ್ಚೆಂದರೆ ಕಟ್ಟರ್ ಹಿಂದೂತ್ವವಾದಿಗಳ ಮತಗಳು ಬೀಳಬಹುದು.

ಈ ಹಿಂದೆ ಇದೇ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 'ಸೋಲಿನ ಸರದಾರ' ಎಂಬ ಹಣೆಪಟ್ಟಿ ಪಡೆದಿದ್ದ ಯಶವಂತರಾವ್ ಜಾಧವ್ ಎಂಬುವವರಿಗೆ ಈ ಬಾರಿ ಬಿಜೆಪಿ ಟಿಕೆಟ್ ನೀಡಲಿಲ್ಲ. ಇದಕ್ಕೆ ಕಾರಣ ಬಿಜೆಪಿಯಲ್ಲಿ ನಡೆಯುತ್ತಿರುವ ಅಂತಃಕಲಹ. ದಾವಣಗೆರೆ ಜಿಲ್ಲೆ ಬಿಜೆಪಿಯಲ್ಲಿ ತರಕಾರಿ ಮಂತ್ರಿಯಾಗಿದ್ದ ರವೀಂದ್ರನಾಥ ಮತ್ತು ಸಂಸದ ಸಿದ್ದೇಶ್ವರ ನಡುವೆ ವಾಗ್ಯುದ್ಧ ನಡೆಯುತ್ತಿದೆ. ಸಂಸದ ಸಿದ್ದೇಶ್ವರ ಯಡ್ಡಿಯ ಕಟ್ಟಾ ಬೆಂಬಲಿಗ. ಹಾಗೆಯೇ ಯಶವಂತ ರಾವ್ ಜಾಧವ್ ಸಿದ್ದೇಶ್ವರರ ಕಟ್ಟಾ ಶಿಷ್ಯ. ಈ ಕಾರಣಕ್ಕೇ ರವೀಂದ್ರನಾಥ್ ಯಶವಂತ್‌ಗೆ ಬಿಜೆಪಿ ಟಿಕೆಟ್ ತಪ್ಪಿಸಿದ್ದು. ನಾಯಿ ಹಸಿದಿತ್ತು ಅನ್ನ ಹಳಸಿತ್ತು ಎಂಬಂತೆ ಬೇರೆ ಯಾರೂ ಕಾಣದೆ ಈ ಲೋಕೇಶ್ ಎಂಬಾತನಿಗೆ ಬಿಜೆಪಿ ಟಿಕೆಟ್ ಕೊಟ್ಟಿತು. ಈ ಲೋಕೇಶ್ ಗೆಲ್ಲುವುದಕ್ಕಿಂತ ಆತನಿಂದಾಗಿ ಶಾಮನೂರರಿಗೆ ಎಷ್ಟು ಅನುಕೂಲವಾಗುತ್ತದೆ ಎಂದು ಈಗ ಬಿಜೆಪಿಗರೇ ಲೆಕ್ಕಹಾಕುತ್ತಿರುವುದು ಮಜವಾಗಿದೆ.

ಶಾಮನೂರರ ರಾಜಕಾರಣದ ವರಸೆಯೇ ವಿಭಿನ್ನವಾದದ್ದು. ಪ್ರಬಲ ಲಿಂಗಾಯತ ಸಮುದಾಯದವರಾದ ಶಾಮನೂರರು ತಮ್ಮ 40 ವರ್ಷಗಳ ರಾಜಕಾರಣದಲ್ಲಿ ಎಂದೂ ಕೋಮು ರಾಜಕಾರಣ ಮಾಡಿದವರಲ್ಲ. ಅವರ ಈ ಜಾತ್ಯತೀತ ನಿಲುವು ಮತದಾರನ ಮೇಲೆ ಪ್ರಭಾವ ಬೀರುತ್ತದೆ. ಅದರ ಜೊತೆಗೆ ಅವರ ಸರಳತನ, ಸಾಮಾನ್ಯ ಜನರ ನಡುವೆ ಬೆರೆಯುವ ರೀತಿಯೂ ಮತದಾರನನ್ನು ಸೆಳೆಯುತ್ತದೆ.

2008 ರ ಚುನಾವಣೆಯಲ್ಲಿ ಶಾಮನೂರರು ಇದೇ ದಕ್ಷಿಣ ಮತಕ್ಷೇತ್ರದಿಂದ ಸ್ಪರ್ಧಿಸಿದಾಗಲೂ ಬಿಜೆಪಿ ಮತ್ತು ಮುಸ್ಲಿಂ ಕ್ಯಾಂಡಿಡೇಟುಗಳು ಕಣದಲ್ಲಿದ್ದರು. ಆದರೂ ಅಲ್ಪಸಂಖ್ಯಾತ ಮತದಾರರು ತಮ್ಮ ಸಮುದಾಯದ ಅಭ್ಯರ್ಥಿಯನ್ನು ಬದಿಗಿಟ್ಟು ಶಾಮನೂರರ ಕೈಹಿಡಿದಿದ್ದರು. ಈ ಬಾರಿ ಸೈಫುಲ್ಲಾರ ಸ್ಪರ್ಧೆ ಕೊಂಚಮಟ್ಟಿಗೆ ಸವಾಲು ಎನಿಸಿದರೂ ಮತದಾನಕ್ಕೆ ಎರಡು ದಿನವಿದ್ದಾಗ ಅಲ್ಪಸಂಖ್ಯಾತ ಸಮುದಾಯದ ಮತದಾರರು ಕೋಮು ಸೌಹಾರ್ದತೆಯ ಲೆಕ್ಕಾಚಾರ ಹಾಕುವುದು ಹಿಂದಿನ ಚುನಾವಣೆಗಳಿಂದಲೂ ನಡೆದುಬಂದ ತರ್ಕ.

ಹಿಂದೂ ಮತಗಳನ್ನು ನಂಬಿಯೇ ಕಣದಲ್ಲಿರುವ ಬಿಜೆಪಿ ಹಿಂದೂ ಮತಗಳನ್ನು ತನ್ನ ಅಭ್ಯರ್ಥಿಗೆ ಸೆಳೆಯುವ ವಿಕೃತ ಕುತಂತ್ರಕ್ಕೂ ಕೈಹಾಕುವ ಲಕ್ಷಣಗಳು ಗೋಚರಿಸುತ್ತಿವೆ. ಶಿವಮೊಗ್ಗ ಮತ್ತು ಭದ್ರಾವತಿ ಕಡೆಯ ಚೆಡ್ಡಿಗಳು ದೇವನಗರಿಯಲ್ಲಿ ಗಲಾಟೆ ಎಬ್ಬಿಸಲು ದಾವಣಗೆರೆಯ ಅಂಗಳದಲ್ಲಿ ಜಮಾವಣೆಗೊಂಡಿರುವ ಸುದ್ದಿಗಳು ಹರಡುತ್ತಿದೆ.

ದಾವಣಗೆರೆ ದಕ್ಷಿಣದಲ್ಲಿ ಜಾತ್ಯತೀತ ನಾಯಕನಿಗೆ ಮತ್ತು ಕೋಮು ಸೌಹಾರ್ದ ನೆಮ್ಮದಿಗೆ ಮೊದಲ ಆದ್ಯತೆ ಎಂಬ ವಾತಾವರಣವಿದೆ. ಇದರರ್ಥ ಮತದಾರರ ಸಹಜ ಆಯ್ಕೆ ಕಾಂಗ್ರೆಸ್ ಪಕ್ಷದ ಶಾಮನೂರು ಶಿವಶಂಕರಪ್ಪ ಎಂದೇ ಲೆಕ್ಕಹಾಕಬಹುದು.

• ಟಿ.ಎನ್.ಷಣ್ಮುಖ

ಬಿಜಾಪುರ: ಕಮರುತ್ತಿರುವ ಕಮಲ

ಗುಮ್ಮಟನಗರಿಯಲ್ಲಿ ಕಮಲ ಮುಗ್ಗರಿಸುವುದು ಗ್ಯಾರಂಟಿ ಅನಿಸುತ್ತಿದೆ. ಕಳೆದ ಬಾರಿ ಇಲ್ಲಿನ ಎಂಟು ಕ್ಷೇತ್ರಗಳಲ್ಲಿ ಐದು ಕ್ಷೇತ್ರಗಳನ್ನು ಗೆದ್ದಿದ್ದ ಬಿಜೆಪಿ ಈಗ ಆಂತರಿಕ ಕಲಹದಲ್ಲಿ ಕಮರುತ್ತಿದೆ.

ಬಿಜಾಪೂರ

ಈ ಬಾರಿ ಲಿಂಗಾಯತರ ಇಬ್ಬರು ಘಟಾನುಘಟಿಗಳು ಕಣದಲ್ಲಿದ್ದಾರೆ. ಅವರೇ ಜೆಡಿಎಸ್‌ನ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಬಿಜೆಪಿಯ ಶಾಸಕ ಅಪ್ಪು ಪಟ್ಟಣಶೆಟ್ಟಿ. ಎರಡು ಬಾರಿ ಶಾಸಕನಾದ ಅಪ್ಪು ಪಟ್ಟಣಶೆಟ್ಟಿ ಕ್ಷೇತ್ರದಲ್ಲಿ ಕಡಿದು ಕಟ್ಟೆ ಹಾಕಿರುವುದು ಅಷ್ಟರಲ್ಲೇ ಇದೆ. ಆದರೆ ಈತ ಮಾಡಿರುವ ಆಸ್ತಿ ಮಾತ್ರ ದೊಡ್ಡದು. ಜಾತಿಯಿಂದ ಬಣಜಿಗನಾದ ಈತನಿಗೆ ಸಹಜವಾಗಿ ಪ್ರತಿಯೊಂದು ವ್ಯಾಪಾರವೇ. ರಾಜಕೀಯವಾಗಿ ಈ ಬಾರಿ ಶೆಟ್ಟರು ಈತನಿಗೆ ಶಟರ್ ಎಳೆಯುವ ಲಕ್ಷಣಗಳಿವೆ.

ಕಾಂಗ್ರೆಸ್ ಮಕಬುಲ ಬಾಗವಾನ ಎಂಬ ಹೊಸಬನಿಗೆ ಟಿಕೆಟ್ ನೀಡಿದೆ. ಈತ ಮುಸ್ಲಿಮ್ ಅನ್ನೋದು ಬಿಟ್ಟರೆ ಈತನ ಬಗ್ಗೆ ಜನರಿಗೆ ಹೆಚ್ಚು ಗೊತ್ತಿಲ್ಲ. ದುಡ್ಡಿದೆ ಮತ್ತು ಮುಸ್ಲಿಮ್ ಜನಾಂಗದ ಬಲವಿದೆ ಅನ್ನೋದೆ ಈತನ ಪ್ಲಸ್ ಪಾಯಿಂಟ್.

ಜೆಡಿಎಸ್‌ನ ಯತ್ನಾಳ್ ಖಾತೆ ತೆರೆಯುವ ತರಾತುರಿಯಲ್ಲಿದ್ದಾರೆ. ಈತನ ಜನಾಂಗದ ಬಹುಸಂಖ್ಯಾತ ಮತಗಳ ಜೊತೆಗೆ ಹಿಂದುಳಿದ ವರ್ಗಗಳ ಮತಗಳು ಜೆಡಿಎಸ್‌ಗೆ ವಾಲಿದರೆ ಯತ್ನಾಳ್ ಸಲೀಸಾಗಿ ಗೆಲ್ಲಬಹುದು.

ನಾಗಠಾಣ

ಬಿಜೆಪಿ ಮಂತ್ರಿ ಗೋವಿಂದ ಕಾರಜೋಳ ಕಣ್ಣಿಟ್ಟಿದ್ದ ಕ್ಷೇತ್ರವಿದು. ಆದರೆ ಕಾರಜೋಳರ ಬದಲಾಗಿ ನಾಗೇಂದ್ರ ಮಾಯವಂಶಿ ಎಂಬ ರಮೇಶ್ ಜಿಗಜಿಣ್ಣಗಿ ಅಳಿಯನನ್ನು ಬಿಜೆಪಿ ನಿಲ್ಲಿಸಿದೆ. ಈ ಮೊದಲು ಶಾಸಕನಾಗಿದ್ದ ವಿಠ್ಠಲ ಕಟಕದೊಂಡ ಈ ಬಾರಿ ಕೆಜೆಪಿಯಿಂದ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನಿಂದ ರಾಜು ಅಲಗುರ ಮತ್ತು ಜೆಡಿಎಸ್‌ನಿಂದ ಲಂಬಾಣಿ ಜನಾಂಗದ ಜಿಲ್ಲಾ ಪಂಚಾಯತಿ ಸದಸ್ಯ ದೇವಾನಂದ ಚವ್ಹಾಣ್ ಸ್ಪರ್ಧಿಸುತ್ತಿದ್ದಾರೆ.

ನಾಗೇಂದ್ರ ಮಾಯವಂಶಿಯ ತಾಯಿ ಜಿಗಜಿಣಗಿ ಅವರ ಅಕ್ಕ. ಜಿಲ್ಲಾ ಪಂಚಾಯತಿ ಅಧ್ಯಕ್ಷರಾಗಿದ್ದ ಇವರ ತಾಯಿಯ ಅಕಾಲಿಕ ನಿಧನದ ನಂತರ ಅವರ ಮಗ ನಾಗೇಂದ್ರ ತನ್ನ ರಾಜಕೀಯ ಬಲ ಪ್ರದರ್ಶಿಸುತ್ತಿದ್ದಾನೆ. ಸಾಮಾಜಿಕ ಕಾರ್ಯಕರ್ತನಾಗಿ ಈತ ಜನರಿಗೆ ಚಿರಪರಿಚಿತ. ಸರಳ ಸ್ವಭಾವದ ಇವರ ಬಗ್ಗೆ ಜನರ ಅನುಕಂಪವಿದೆ.

ಈ ಹಿಂದೆ ಶಾಸಕರಾಗಿದ್ದ ಕಟಕದೊಂಡರಿಗೆ ಯಡಿಯೂರಪ್ಪನ ಕಾರಣಕ್ಕೆ ಲಿಂಗಾಯತರು ತನ್ನನ್ನು ಬೆಂಬಲಿಸುತ್ತಿದ್ದಾರೆ ಎಂಬ ಲೆಕ್ಕಾಚಾರ ಇದೆ.

ಕಾಂಗ್ರೆಸ್‌ನ ರಾಜು ಅಲಗೂರ ಈ ಹಿಂದೆ ಬಳ್ಳೊಳ್ಳಿ ಮೀಸಲು ಕ್ಷೇತ್ರದಿಂದ ಒಮ್ಮೆ ಶಾಸಕನಾದವರು. ಈಗ ಕ್ಷೇತ್ರ ಕೈಬಿಟ್ಟಿದೆ. ರಾಜು ಅಲಗೂರ ಈ ಬಾರಿ ಶತಾಯಗತಾಯ ಗೆಲ್ಲಲು ಪ್ರಯತ್ನಿಸುತ್ತಿದ್ದಾರಾದರೂ ಚಾನ್ಸ್ ಬಹುತೇಕ ಕಮ್ಮಿಯೆನ್ನಬಹುದು.

ಕಾಂಗ್ರೆಸ್‌ನ ಜಿಲ್ಲಾ ಪಂಚಾಯತಿಯ ಸದಸ್ಯನಾದ ದೇವೇಂದ್ರರಿಗೆ ಕೈಟಿಕೆಟ್ ನೀಡದಿದ್ದಕ್ಕೆ ಜೆಡಿಎಸ್‌ನಿಂದ ನಿಂತಿದ್ದಾರೆ. ಜೊತೆಗೆ ಇವರ ಸಹೋದರಿ ಕೂಡಾ ಜಿ.ಪಂ. ಸದಸ್ಯೆ. ಇವರ ಹಿಡಿತದಲ್ಲಿ ಎರಡು ಜಿ.ಪಂ.ಗಳಿವೆ. ಅಷ್ಟೇ ಅಲ್ಲದೆ, ಲಂಬಾಣಿಗಳು ಇವರ ಪರ ಇದ್ದಾರೆ.

ಇವರು ಲಿಂಗಾಯತರನ್ನು ತಮ್ಮತ್ತ ಸೆಳೆದುಕೊಂಡರೆ ಮಾರ್ಗ ಸುಲಭವಿದೆ.

ನಾಲ್ಕು ಜನ ಘಟಾನುಘಟಿಗಳಿರುವ ಈ ಕ್ಷೇತ್ರದಲ್ಲಿ ಗೆಲುವು ಯಾರದ್ದಾಗುತ್ತದೆಂದು ಹೇಳುವುದು ಕಷ್ಟ.

ಇಂಡಿ

ಜಾತಿರಾಜಕಾರಣ, ಗೂಂಡಾಗಿರಿ, ವಸೂಲಿ... ಹೀಗೆ ಭೀಮಾ ತೀರದಲ್ಲಿ ತನ್ನದೇ ಛಾಪು ಮೂಡಿಸಿದ್ದ ಸೋಲಾಪುರ ಮೂಲದ ರವಿಕಾಂತ ಪಾಟೀಲ್ ತನ್ನ ಪಂಚಮಸಾಲಿ ಸಮಾಜದವರ ಬೆಂಬಲದಿಂದ ಎರಡು ಬಾರಿ ಪಕ್ಷೇತರನಾಗಿ ಆಯ್ಕೆಯಾಗಿದ್ದ. ಆದರೆ ಮಹಾರಾಷ್ಟ್ರದ ಪೊಲೀಸರು ಈತನ ಹೆಡೆಮುರಿ ಮುರಿದದ್ದಕ್ಕೆ ಈ ಬಾರಿ ಯಡ್ಡಿ ಪಕ್ಷದಿಂದ ಸ್ಪರ್ಧೆ ಒಡ್ಡಿದ್ದಾನೆ.

ಇನ್ನು ಹಳೆ ಮನುಷ್ಯ ಎಂ.ಸಿ. ಮನಗುಳಿ ಜೆಡಿಎಸ್‌ನ ಅಭ್ಯರ್ಥಿ ಆಗಿದ್ದಾರೆ. ಈ ಹಿಂದೆ ಮಂತ್ರಿಯಾಗಿದ್ದ ಮನಗುಳಿ ಹತ್ತಾರು ವರ್ಷದಿಂದ ನಾಪತ್ತೆಯಾಗಿದ್ದರು. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಸ್ಪರ್ಧೆ ಇದೆ. ಜೆಡಿಎಸ್ ಸ್ಪರ್ಧೆ ಶೋಗೆ ಮಾತ್ರ.

ಬಬಲೇಶ್ವರ

ಜಿಲ್ಲೆಯಲ್ಲೆ ಬಹುದೊಡ್ಡ ಕಾಳಗ ನಡೆಯುತ್ತಿರುವುದು ಈ ಕ್ಷೇತ್ರದಲ್ಲಿ. ಹಾಲಿ ಕಾಂಗ್ರೆಸ್ ಶಾಸಕ ಎಂ.ಬಿ.ಪಾಟೀಲ್ ಈ ಬಾರಿಯೂ ಅಭ್ಯರ್ಥಿ. ಇವರದ್ದು ತಂದೆ ಕಾಲದಿಂದ ರಾಜಕೀಯದಲ್ಲಿರುವ ಕುಟುಂಬ. ಮೆಡಿಕಲ್, ಇಂಜಿನಿಯರಿಂಗ್ ಕಾಲೇಜ್, ಬಿಎಲ್‌ಡಿ ಸಂಸ್ಥೆಯ ಚೇರ್ಮನ್ ಕೂಡ ಆಗಿರುವ ಪಾಟೀಲ್ ಮಾಡಿದ ಕೆಲಸಕ್ಕಿಂತ ಪ್ರಚಾರ ಪಡೆದಿದ್ದೇ ಜಾಸ್ತಿ. ಎರಡು ಬಾರಿ ನಿರಂತರ ಶಾಸಕರಾಗಿದ್ದ ಪಾಟೀಲ್ ಕ್ಷೇತ್ರದಲ್ಲಿ ಅತಿಹೆಚ್ಚು ಲಂಬಾಣಿ ತಾಂಡಾಗಳಿವೆ. ಅವುಗಳ ಅಭಿವೃದ್ಧಿ ಮಾಡಿದ್ದೇನೆಂದು ಪಾಟೀಲ್ ಪ್ರಚಾರ ಪಡೆದರೇ ವಿನಃ ಒಂದೇ ಒಂದು ತಾಂಡಾದಲ್ಲಿ ಕನಿಷ್ಠ ಸೌಲಭ್ಯಗಳಿಲ್ಲ. ಶ್ರೀಮಂತಿಕೆಯ ಗತ್ತು, ಜೊತೆಗೆ ಗೌಡ ಎಂಬ ಒಣ ಪ್ರತಿಷ್ಠೆಯಿಂದಾಗಿ ಯಾರು ಈತನೊಂದಿಗೆ ಮಾತನಾಡುವ ಗೋಜಿಗೆ ಹೋಗುವುದಿಲ್ಲ. ಇವನಾಡಿದ್ದೇ ಆಟ, ಇಟ್ಟಿದ್ದೇ ಗೂಟ ಎಂಬಂತಾಗಿದೆ ಕ್ಷೇತ್ರದಲ್ಲಿ.

ಈ ಬಾರಿ ಜೆಡಿಎಸ್‌ನಿಂದ ವಿಜುಗೌಡ ಪಾಟೀಲ್ ಸ್ಪರ್ಧಿಸಿದ್ದಾರೆ. ಕಳೆದ ಬಾರಿ ಪರಾಭವಗೊಂಡ ವಿಜುಗೌಡ ಸತತ ಐದು ವರ್ಷದಿಂದ ಕ್ಷೇತ್ರದ ಜನರೊಂದಿಗಿದ್ದಾರೆ. ಕೃಷಿಕ ಯುವಕನಾದ ವಿಜುಗೌಡ ಪಾಟೀಲ್ ಜಾತಿಯಿಂದ ಪಂಚಮಸಾಲಿ ಆಗಿರುವುದರಿಂದ ರೆಡ್ಡಿ ಜನಾಂಗದ ಎಂ.ಬಿ. ಪಾಟೀಲ್‌ಗೆ ಕಸಿವಿಸಿ ಪ್ರಾರಂಭವಾಗಿದೆ.

ಇನ್ನು ಪಂಚಮಸಾಲಿಗರೇ ಆಗಿರುವ ಬಿಜೆಪಿಯ ರುದ್ರಗೌಡ ಮಲ್ಲಪ್ಪ ಒಂದು ರೀತಿಯಲ್ಲಿ ಜೋಕರ್ ಕಾರ್ಡ್ ಇದ್ದಂತೆ. "ನಮ್ಮ ಅಭ್ಯರ್ಥಿಗಳು ಪ್ರತಿಕ್ಷೇತ್ರದಲ್ಲೂ ಇದ್ದಾರೆ" ಎಂದು ಅಂಕಿಅಂಶ ತೋರಿಸಲಷ್ಟೆ ಬಿಜೆಪಿ ರುದ್ರಗೌಡರಿಗೆ ಟಿಕೆಟ್ ನೀಡಿದೆ.

ಇಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಮಾತ್ರ ಪೈಪೋಟಿ ಇದೆ.

ಬಸವನಬಾಗೇವಾಡಿ

ಹಾಲಿ ಬಿಜೆಪಿ ಶಾಸಕ ಎಸ್.ಕೆ.ಬೆಳ್ಳುಬ್ಬಿ ಎರಡು ಬಾರಿ ಆಯ್ಕೆಯಾಗಿ ಕಮಾಯಿ ಮಾಡಿಕೊಂಡ ಮನುಷ್ಯ. ಒಮ್ಮೆ ಬಳ್ಳಾರಿಯ ರೆಡ್ಡಿಗಳ ಜೊತೆ, ಮಗದೊಮ್ಮೆ ಯಡ್ಡಿ ಹಿಂದೆ, ನಂತರ ಜಗದೀಶ್ ಶೆಟ್ಟರ್ ಹಿಂದೆ ಓಡಾಡಿ ಜೇಬು ಭರ್ತಿ ಮಾಡಿಕೊಂಡಾತ ಬೆಳ್ಳುಬ್ಬಿ.

ಕಳೆದ ಬಾರಿ ಪರಾಭವಗೊಂಡ ಕಾಂಗ್ರೆಸ್‌ನ ಶಿವಾ… ಪಾಟೀಲ್ ಈ ಬಾರಿ ಮತ್ತೆ ನಿಂತಿದ್ದಾರೆ. ಕಾಂಗ್ರೆಸ್… ಜೊತೆಗೆ ಲಿಂಗಾಯತ ಪಂಚಮಸಾಲಿಗರು ಈ… ಶಿವಾನಂದನ ಬೆಂಬಲಕ್ಕೆ ನಿಂತಿರುವುದು ಅವರ ಗೆಲ… ನೆರವಾಗಲಿದೆ. ಅಷ್ಟೇ ಅಲ್ಲದೆ ಮುಸ್ಲಿಮರು, ದಲಿ… ಕುರುಬರು ಶಿವಾನಂದನ ಗೆಲುವಿಗೆ ಕೆಲಸ ಮಾಡುತ್ತಿ…


ಬೆಳ್ಳುಬ್ಬಿ ದುಡ್ಡು ಚೆಲ್ಲಿ ಮತ್ತೆ ಗೆಲ್ಲಬಹುದ… ಲೆಕ್ಕಾಚಾರದಲ್ಲಿ ಗರಿಗರಿ ಧೋತಿ, ಟೋಪಿ ಸರಿಪಡಿಸಿಕೊ… ಓಡಾಡುತ್ತಿದ್ದಾರೆ. ಬಸವನಬಾಗೇವಾಡಿ ಜನ ಈ… ವಯಸ್ಸಾದ ಬೆಳ್ಳುಬ್ಬಿಗೆ ವಿಶ್ರಾಂತಿ ತೆಗೆದುಕೊಳ್ಳಲು ಕಳಿಸ… ಅನಿಸುತ್ತಿದೆ. ಕೆಜೆಪಿಯ ಗಾಣಿಗ ಅಭ್ಯರ್ಥಿ ಸಂಗ… ದೇಸಾಯಿಯೇ ಬೆಳ್ಳುಬ್ಬಿಗೆ ಅಡ್ಡಗಾಲಾಗಿದ್ದಾರೆ. ಹ… ಯಡ್ಡಿ ಪ್ಲಾನ್?


ಎಸ್.ಕೆ. ಬೆಳ್ಳುಬ್ಬಿ


ಅಪ್ಪಾಸಾಹೇಬ್


ಎಂ.ಬಿ.ಪಾಟೀಲ್


ಸಿ.ಎಸ್.ನಾಡಗೌಡರ್


ಎ.ಎಸ್.ಪಾಟೀಲ್


ಎಸ್.ಆರ್.ಪಾಟೀ…

ಕಳೆದ ಬಾರಿಯ ಚುನಾವಣೆಯಲ್ಲಿ ಡಾ. ಸಾರ್ವಭೌಮ ಬಗಲಿ ಈ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆಯಾಗಿದ್ದರು. ಈ ಸಾರಿ ಬಗಲಿಗೆ ಬಿಜೆಪಿ ಟಿಕೆಟ್ ನೀಡಿಲ್ಲ, ಬದಲಾಗಿ ಶ್ರೀಶೈಲ ಬಿರಾದಾರ ಎಂಬ ಪಂಚಮಸಾಲಿಗೆ ಟಿಕೆಟ್ ನೀಡಿದೆ. ಈತ ಒಂದು ರೀತಿಯಲ್ಲಿ ಡೆಮ್ಮಿ ಕ್ಯಾಂಡಿಡೇಟ್. ಸಾರ್ವಭೌಮ ಬಗಲಿ ತಟಸ್ಥ ನಿಲುವು ತಾಳಿದರೆ ಬಿಜೆಪಿ ಸೋಲು ಕಾಣುತ್ತದೆ.

ಜೆಡಿಎಸ್‌ನಿಂದ ಅಣ್ಣಪ್ಪ ಶೈನೂರು ಸ್ಪರ್ಧಿಸಿದ್ದರೂ ಅವರು ಆಟಕ್ಕುಂಟು ಆದರೆ ಲೆಕ್ಕಕ್ಕಿಲ್ಲ.

ಕಾಂಗ್ರೆಸ್‌ನ ಅಭ್ಯರ್ಥಿ ಯಶವಂತಗೌಡ ಪಾಟೀಲ್ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದವನು. ಅಲ್ಲದೆ ಕಳೆದ ಬಾರಿ ಕೇವಲ ಐನೂರು ಮತಗಳಿಂದ ಪರಾಭವ ಗೊಂಡವರು.

ಇಲ್ಲಿ ಏನಿದ್ದರೂ ಕಾಂಗ್ರೆಸ್-ಕೆಜೆಪಿ ನಡುವೆ ಸ್ಪರ್ಧೆ ಇದೆ. ಕಳೆದ ಚುನಾವಣೆಯಲ್ಲಿ ಲಂಬಾಣಿಗರು ಮತ್ತು ಕುರುಬರು ಬಿಜೆಪಿಗೆ ಮತ ಚಲಾಯಿಸಿದ್ದರು. ಈ ಬಾರಿ ಇವರೆಲ್ಲ ಕಾಂಗ್ರೆಸ್ ಅನ್ನು ಬೆಂಬಲಿಸಿದರೆ, ಯಶವಂತರಾಯ್ ಪಾಟೀಲ್ ದಾರಿ ಸುಗಮವಾಗಬಹುದು.

ಸಿಂಧಗಿ

ಕಾಂಗ್ರೆಸ್‌ನ ಜಿಲ್ಲಾ ಅಧ್ಯಕ್ಷ ಶರಣಪ್ಪ ಸುಣಗಾರ ಇಲ್ಲಿ ಕ್ಯಾಂಡಿಡೇಟ್. ಹಿಂದೆ ಒಮ್ಮೆ ಶಾಸಕನಾಗಿ ಮಗದೊಮ್ಮೆ ಸೋತಿದ್ದ ಅನುಭವ ಇದೆ. ಹಾಲಿ ಶಾಸಕ ಬಿಜೆಪಿಯ ರಮೇಶ್ ಭೂಸನೂರ ಮತ್ತೆ ಕಣದಲ್ಲಿ ಇದ್ದಾರೆ. ಆದರೆ ಅವರಿಗೆ ಗೇಟ್‌ಪಾಸ್ ಗ್ಯಾರಂಟಿ ಎಂಬ ವಾತಾವರಣ ಕ್ಷೇತ್ರದಲ್ಲಿ ಕಂಡುಬರುತ್ತಿದೆ.

ದೇವರ ಹಿಪ್ಪರಗಿ

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯ… ಎ.ಎಸ್. ಪಾಟೀಲ್ ನಡಹಳ್ಳಿ ಈ ಬಾರಿ ತಮ್ಮ… ಉಳಿಸಿಕೊಳ್ಳಲು ತಿಣುಕಾಡುತ್ತಿದ್ದಾರೆ. ಕಳೆದ… ವರ್ಷಗಳಲ್ಲಿ ಒಂದೇ ಒಂದು ಜನಪರ ಕೆಲಸ ಮ… ನಡಹಳ್ಳಿ ಪಾಟೀಲ್ ಯಾರ ಕೈಗೂ ಸುಲಭವಾಗಿ ಸಿ… ಮನುಷ್ಯನಲ್ಲ. ಸೆಕ್ಯುರಿಟಿ ಗಾರ್ಡ್‌ಗಳನ್ನು ಗುಂಪು ಕಟ್ಟಿಕೊ… ಓಡಾಡುವ ಇವರು ಕೊನೆಪಕ್ಷ ಫೋನ್ ಕೂಡಾ ರಿ… ಮಾಡಿಕೊಳ್ಳುವುದಿಲ್ಲ. ಇವರ ವ್ಯವಹಾರ ಏನಿದ್ದರೂ … ಸಂಬಂಧಿಸಿದ್ದು ಮಾತ್ರ.

ಮಂಗಳಾದೇವಿ ಬಿರಾದಾರ ಕೆಜೆಪಿಯ ಟಿಕೆಟ್ ಆ… ಆಗಿದ್ದರು. ಆದರೆ ಕೊನೆಗಳಿಗೆಯಲ್ಲಿ ಯಡಿಯೂರಪ್ಪ… ಟಿಕೆಟ್ ನಿರಾಕರಿಸಿದರು. ಮಂಗಳಾದೇವಿ ಬಿರಾದಾರ್… ತುಂಡೆ ವಜೀರ್ ಕುಲಬಾಂಧವರು ಇಲ್ಲಿ ನಿರ್ಣಾ… ಪಾತ್ರ ವಹಿಸುವುದರಿಂದ ಆಕೆಯನ್ನು ನಡಹಳ್ಳಿ ಪಾ… ಕಾಂಗ್ರೆಸ್‌ಗೆ ಕರೆ ತಂದಿದ್ದಾರೆ. ಇದು ಕಾಂಗ್ರೆಸ್ ಗೆಲ… ನೆರವಾಗಲಿದೆ.

ಬಿಜೆಪಿಯ ಅಭ್ಯರ್ಥಿ ಸೋಮನಗೌಡ ಪಾ… ತನ್ನ ಪಕ್ಷದೊಂದಿಗೇ ಸರಿಯಾಗಿ ಗುರುತಿಸಿಕೊಂಡಿಲ… ಲಿಂಗಾಯತರ ಮತಗಳನ್ನೇ ನಂಬಿರುವ ಈತ … ಕ್ಯಾಂಡಿಡೇಟ್ ಎಂದೇ ಜನ ಆಡಿಕೊಳ್ಳುತ್ತಿದ್ದಾರೆ.

ಜೆಡಿಎಸ್‌ನಿಂದ ಸ್ಪರ್ಧಿಸಿರುವ ರೇಷ್ಮಾ ಪಡೆಕ… ತನ್ನ ಮುಸ್ಲಿಮ್ ಮತಗಳನ್ನೇ ನಂಬಿದ್ದಾರೆ. ಇವರು ಮೂ… ಬಿಜಾಪುರದ ನಿವಾಸಿ. ಈ ಹಿಂದೆ ಉತ್ತರ ಕರ್ನಾಟ… ಅತಿವೃಷ್ಟಿ ಆದಾಗ ಜೆಡಿಎಸ್‌ನ ನಾಯಕರು ಜ… ಹಂಚಲೆಂದು ಕಳುಹಿಸಿದ್ದ ಆಹಾರ ಧಾನ್ಯಗಳು … ಬಟ್ಟೆಬರೆಗಳನ್ನು ರೇಷ್ಮಾ ಕಾಳಸಂತೆಯಲ್ಲಿ ಮಾರಿಕೊ… ದ್ದಾರೆಂದು ಆರೋಪಿಸಿ ಅವರದೇ ಪಕ್ಷದ ಜನ … ರಂಪ ಮಾಡಿದ್ದರಲ್ಲದೆ ದೂರನ್ನೂ ದಾಖಲಿಸಿದ್ದರು.

ಈ ಕಾರಣಕ್ಕಾಗಿ ಮುಸ್ಲಿಮರು ಇವಳ ಕಿ… ಬರುವುದು ಅಷ್ಟಕಷ್ಟೆ. ಹೀಗಾಗಿ ದೇವರ ಹಿಪ್ಪರಗಿ… ಮತ್ತೆ ಕಾಂಗ್ರೆಸ್ ಖಾತೆ ತೆಗೆಯೋದು ನಿಸ್ಸಂಶಯ.

ಮುದ್ದೇಬಿಹಾಳ

ಹಾಲಿ ಶಾಸಕ, ಮಾಜಿ ಕಾರ್ಮಿಕ ಮಂತ್ರಿ, ಕಾಂಗ್… ಸಿ.ಎಸ್. ನಾಡಗೌಡ ದಾರಿ ಸುಗಮವಾಗುವ ಲ… ಗೋಚರವಾಗುತ್ತಿವೆ. ಇವರ ವಿರುದ್ಧ ಬಿಜೆಪಿಯ ಮಲಕ… ಪಾಟೀಲ್, ಜೆಡಿಎಸ್‌ನ ಪ್ರಭುಗೌಡ ಪಾಟೀಲ್ ನಿಂತಿ… ಆದರೆ ಇವರ್ಯಾರೂ ಇಲ್ಲಿ ವರ್ಕ್‌ಔಟ್ ಆಗುವ ಚ… ಇಲ್ಲ. ಈ ಹಿಂದೆ ನಾಡಗೌಡನ ಮನೆತ… ಪರಮವೈರಿಯಾಗಿದ್ದ ದೇಶಮುಖರ ಕುಟುಂ… ವಿಮಲಾಬಾಯಿ ಜೆಡಿಎಸ್‌ನ ಟಿಕೆಟ್ ಆಕಾಂಕ್ಷಿಯಾಗಿ… ಆದರೆ ಇವರಿಗೆ ಟಿಕೆಟ್ ಸಿಗಲಿಲ್ಲ. ಕೊನೆಗೆ ಮೊನ್ನೆ ನ… ರಾಜಿ ಪಂಚಾಯತಿಯಲ್ಲಿ ವಿಮಲಾಬಾಯಿ ಕಾಂ… ಸೇರಿದ್ದರಿಂದ ನಾಡಗೌಡರಿಗೆ ಟಾನಿಕ್ ಸಿಕ್ಕಿದೆ.


• ಮೇಘರಾ…

ಗೆಲ್ಲಲೇಬೇಕಾದ ಕಿಮ್ಮನೆ ರತ್ನಾಕರ್

ಕಿಮ್ಮನೆ ರತ್ನಾಕರ್ ಈ ಬಾರಿಯೂ ತೀರ್ಥಹಳ್ಳಿಯಿಂದ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದಾರೆ.

ಪ್ರತಿಯೊಂದು ಪದವನ್ನೂ ತೂಗಿ ಮಾತನಾಡುವ ಕಿಮ್ಮನೆ ರತ್ನಾಕರ್ ಈಗಿನ ಜಿಗುಪ್ಸೆ ತರಿಸುವ ರಾಜಕಾರಣಿಗಳ ಎಲ್ಲ ಚಹರೆಗಳನ್ನೂ ಕಳೆದುಕೊಂಡು ಭಿನ್ನವಾಗಿ ನಿಲ್ಲುತ್ತಾರೆ. ಯಾವುದೇ ಸಾಹಿತಿಗಿಂತಲೂ ಹೆಚ್ಚು ಗಂಭೀರವಾಗಿ ಕಿಮ್ಮನೆ ಅಧ್ಯಯನ ಮಾಡುತ್ತಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದ ಕಿಮ್ಮನೆ ವಿಧಾನಸಭಾ ಕಾರ್ಯಕಲಾಪಗಳಲ್ಲಿ ಅತಿಹೆಚ್ಚು ದಿನಗಳು ಭಾಗವಹಿಸಿದ್ದಾರೆ. ಪ್ರತಿಯೊಂದು ಚರ್ಚೆಗೂ ಮುನ್ನ ಚರ್ಚಿಸುವ ವಿಷಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿಕೊಂಡೇ ವಿಧಾನಸೌಧಕ್ಕೆ ಹೋಗುವುದು ಕಿಮ್ಮನೆಯ ವೈಖರಿ.

ಜನಸಾಮಾನ್ಯನೊಬ್ಬ ಮಧ್ಯವರ್ತಿ ಪುಢಾರಿಗಳ ಹಂಗಿಲ್ಲದೇ ಯಾವುದೇ ಸಮಸ್ಯೆಯನ್ನು ನೇರವಾಗಿ ಈ ಶಾಸಕರ ಬಳಿ ಹೇಳಿಕೊಳ್ಳುವ ವಾತಾವರಣವನ್ನು ಕಿಮ್ಮನೆ ನಿರ್ಮಿಸಿದ್ದಾರೆ ಮತ್ತು ಹೀಗೆ ಸಮಸ್ಯೆಯನ್ನಿಟ್ಟುಕೊಂಡು ಬಂದ ಜನ ಯಾವ ಪಕ್ಷದವರು ಎನ್ನುವುದನ್ನೂ ಎಣಿಸದೆ ಅದಕ್ಕೆ ಸ್ಪಂದಿಸುವುದು ಕಿಮ್ಮನೆಯ ಗುಣ.



ಇತ್ತೀಚೆಗೆ ಕಿಮ್ಮನೆ ರತ್ನಾಕರ್ ಚುನಾವಣಾ ಖರ್ಚಿಗೆ ಬಂಧುಗಳ ಮೊರೆ ಹೋದಾಗ ಅವರು ಕಳೆದ ಬಾರಿಯಂತೆ ಸಹಾಯ ಮಾಡಲು ಮುಂದಾಗಲಿಲ್ಲ. "ಕಳೆದ ಬಾರಿ ನೀನು ಚುನಾವಣೆಗೆ ನಿಂತಾಗ ಆಗ ನೀನೊಬ್ಬ ಅಭ್ಯರ್ಥಿಯಾಗಿದ್ದೆ. ಆದರೆ ನೀನೀಗ ಐದು ವರ್ಷ ಎಮ್ಮೆಲ್ಲೆಯಾಗಿ ಕೆಲಸ ಮಾಡಿದ್ದೀ. ಈಗಲೂ ಸಹಾಯ ಕೇಳಿದರೆ ಹೇಗೆ?" ಎಂದು ಅವರು ಬರಿಗೈಲಿ ಕಿಮ್ಮನೆಯನ್ನು ಹಿಂದಕ್ಕೆ ಕಳಿಸಿದರು. ಈ ಘಟನೆಯೇ ಶಾಸಕನಾಗಿ ಕಿಮ್ಮನೆಯ ಪ್ರಾಮಾಣಿಕತೆಯನ್ನು ಹೇಳುತ್ತದೆ.

ವಿಧಾನಸೌಧ ಭ್ರಷ್ಟರ, ಅತ್ಯಾಚಾರಿಗಳ, ಕೊಳಕರ ನೆಲೆಯಾಗುತ್ತಿರುವಾಗ ಕಿಮ್ಮನೆಯಂಥವರು ಮಾತ್ರ ವಿಧಾನಸೌಧದ ಘನತೆಯನ್ನು ರಕ್ಷಿಸಬಲ್ಲರು. ಒಂದು ವೇಳೆ ಕಿಮ್ಮನೆ ಸೋತರೆ ಅದು ತೀರ್ಥಹಳ್ಳಿ ಕ್ಷೇತ್ರಕ್ಕೆ ಮಾತ್ರ ಆಗುವ ನಷ್ಟವಲ್ಲ, ಇಡೀ ರಾಜ್ಯಕ್ಕೆ ಆಗುವ ನಷ್ಟ.

• ಸರ್ಜಾಶಂಕರ ಹರಳಿಮಠ

...ಾನಗಲ್: ತೆನೆಹೊತ್ತವಳ ಆರ್ಭಟಕ್ಕೆ ...ರಗುಟ್ಟಿದ ಉದಾಸಿ, ತಹಶೀಲ್ದಾರ್..

...ಳೆದ ಹತ್ತು ವರ್ಷಗಳಿಂದ ಹಾನಗಲ್ ಕ್ಷೇತ್ರವನ್ನು ...ಕೊಂಪೆಗೂ ಹೋಲಿಕೆ ಮಾಡದ ಹಾಗೆ ಹಾಳು ...ರುವ ಮಾಜಿ ಮಂತ್ರಿ ಸಿ.ಎಂ.ಉದಾಸಿಯ ...ಣಿಗೆಗೆ ಅಕ್ಷರಶಃ ಬ್ರೇಕ್ ಬೀಳಲಿದೆ. ಜೆಡಿಎಸ್ ...ಅಭ್ಯರ್ಥಿ ಬಿ.ಕೆ.ಮೋಹನಕುಮಾರ್ ಕ್ಷೇತ್ರದಲ್ಲಿ ...ಬಲರಾಗಿರುವ ಗಂಗಾಮತ ಸಮಾಜದ ರಾಜ್ಯ ...ಕ್ಷರಾಗಿದ್ದಾರಲ್ಲದೆ ತನ್ನನ್ನು ಗೆಲ್ಲಿಸುವ ತಾಖತ್ ...ಹಿದಿರುವ ಅಲ್ಪಸಂಖ್ಯಾತರ ಬೆಂಬಲದೊಂದಿಗೆ ...ಣಕ್ಕಿಳಿದಿದ್ದಾರೆ. ಈ ಕಾರಣಕ್ಕೆ ಮತದಾನಕ್ಕೂ ಮುನ್ನವೆ ...ಯ ಉದಾಸಿ ಮತ್ತು ಕಾಂಗ್ರೆಸ್‌ನ ಮನೋಹರ ...ಲ್ದಾರ ತರಗುಟ್ಟುತ್ತಿದ್ದಾರೆ.

...ಾಂಗ್ರೆಸ್‌ನ ಮನೋಹರ ತಹಶೀಲ್ದಾರ ಕಳೆದ 40 ...ಗಳಿಂದ ಉದಾಸಿಗೆ ಪಾರಂಪರಿಕ ಎದುರಾಳಿ ...ವರು. ಆದರೆ ಕಳೆದ ಎರಡು ಚುನಾವಣೆಗಳಲ್ಲಿ ...ಬ್ಬರ ಮಿಲಾಪಿ ಕುಸ್ತಿಯ ರಹಸ್ಯ ಕ್ಷೇತ್ರದ ಜನರ ...ದೆ ಬೆತ್ತಲಾಗಿತ್ತು. ಈ ಬಾರಿಯೂ ಉದಾಸಿಯ ...ಗಾಗಿಯೇ ಕಾಂಗ್ರೆಸ್‌ನ ಬಿ ಫಾರ್ಮ್ ತಂದಿರುವ ...ಲ್ದಾರನ ಹಿಂಬಾಲಕ ಪಡೆ ಈಗಾಗಲೇ ಉದಾಸಿಯ ...ಂಬಾಗಿಲಿನಿಂದ ಚುನಾವಣಾ ಪ್ರಚಾರ ಶುರುವಿಟ್ಟಿದೆ. ...ವರಿಬ್ಬರ ಈ ಡ್ರಾಮಾ ಅವರಿಬ್ಬರ ಕೊನೆಯ ...ವಣೆಯಾಗಲಿದೆ. ಅಷ್ಟರಮಟ್ಟಿಗೆ ರಾಜಕೀಯವಾಗಿ ...ಕೆಡಿಸಿಕೊಂಡಿರುವ ಈ ಸಂಗ್ಯಾ ಬಾಳ್ಯಾರನ್ನು ಮನೆಗೆ ...ಸಿ ಜೆಡಿಎಸ್‌ನ ಮೋಹನಕುಮಾರನ್ನು ಗೆಲ್ಲಿಸಲು ...ಸಜ್ಜಾಗಿದ್ದಾರೆ.

...ಳೆದ ಎಂಟು ವರ್ಷಗಳಿಂದ ರಾಜ್ಯ ಸರ್ಕಾರದಲ್ಲಿ ...ಖಾತೆಯ ಸಚಿವರಾಗಿದ್ದ ಉದಾಸಿ ಈ ಕ್ಷೇತ್ರಕ್ಕಾಗಿ ...ಗುಡ್ಡೆಹಾಕಿದ್ದೇನೂ ಇಲ್ಲ. ಉದಾಸಿ ಬರೋಬ್ಬರಿ ...ವರ್ಷ ಲೋಕೋಪಯೋಗಿ ಸಚಿವರಾಗಿದ್ದರೂ ...ಗಲ್ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಬಹುತೇಕ ...ರಾಜ್ಯ ಹೆದ್ದಾರಿಗಳು ಟಾರ್ ರಸ್ತೆಯೆಂದು ಗುರ್ತು ...ಡಲಾರದಂತಹ ಸ್ಥಿತಿಗೆ ತಲುಪಿವೆ.

...ರ್ಭಿಣಿ ಸ್ತ್ರೀಯರು ಹಾನಗಲ್‌ನಿಂದ ಹಾವೇರಿ ರಸ್ತೆಯಲ್ಲಿ ...ಕಿಮೀ ಪ್ರಯಾಣಿಸಿದರೆ ಸಾಕು, ವೈದ್ಯರಿಲ್ಲದೆ ಹೆರಿಗೆ ...ಅಂತಹ ಪರಿಸ್ಥಿತಿ ಇದೆ. ಅಧಿಕಾರ ಇದ್ದಾಗ ರಸ್ತೆಗಳಿಗೆ ...ಮಣ್ಣನ್ನೂ ಹಾಕಿಸದ ಉದಾಸಿ ಈಗ "ಅಭಿವೃದ್ಧಿಗಾಗಿ ...ಕೊಡಿ" ಎಂದು ಅಲೆಯುತ್ತಿರುವುದು ...ಸ್ಯದವಾಗಿದೆ. ಅಧಿಕಾರವಿದ್ದಾಗ ಜನಸಾಮಾನ್ಯರ ಕೈಗೂ ...ಹೈಟೆಕ್ ಆಗಿ ಮೆರೆದ ಉದಾಸಿಗೆ ಈಗ ...ವರೆಲ್ಲಾ ಬೈಗುಳಗಳೇ ಸ್ವಾಗತ ನೀಡುತ್ತಿವೆ.

...ಕ್ಷೇತ್ರದ ರಾಜಕೀಯ ಇತಿಹಾಸದಲ್ಲಿ ಎಂಟು ಬಾರಿ ...ಪಾರಂಪರಿಕ ಎದುರಾಳಿಗಳಾಗಿದ್ದ ಉದಾಸಿ ಹಾಗೂ ...ಲ್ದಾರ ಮಧ್ಯವೇ ಇಲ್ಲಿಯವರೆಗೆ ಚುನಾವಣೆಗಳು ಜರುಗಿವೆ. ಮೂರು ಬಾರಿ ತಹಶೀಲ್ದಾರ ಗೆದ್ದರೆ, ಇನ್ನುಳಿದ ಐದು ಬಾರಿ ಉದಾಸಿ ಗೆದ್ದು ಹಾನಗಲ್ ಸ್ಥಿತಿಯನ್ನು ಅಧೋಗತಿಗೆ ತಂದು ನಿಲ್ಲಿಸಿದ್ದಾರೆ. ಇವರಿಬ್ಬರ ಮಧ್ಯೆ ಮೂರನೆಯವರಿಗೆ ಇಲ್ಲಿ ಅವಕಾಶ ಸಿಗುವುದೇ ಮರೀಚಿಕೆಯಾಗಿತ್ತು.



ಸಿ.ಎಂ. ಉದಾಸಿ



ಮನೋಹರ ತಹಶೀಲ್ದಾರ



ಬಿ.ಕೆ. ಮೋಹನ್ ಕುಮಾರ್

ಆದರೆ ಎರಡು ವರ್ಷಗಳ ಹಿಂದೆ ರಾಜ್ಯ ಗಂಗಾಮತ ಸಮಾಜದ ಅಧ್ಯಕ್ಷ ಮೋಹನಕುಮಾರ್ ಇಲ್ಲಿ ಪ್ರಬಲರಾಗಿರುವ ತಮ್ಮ ಜನಾಂಗದ ಜನರ ಒತ್ತಾಯದ ಮೇರೆಗೆ ಕ್ಷೇತ್ರದ ರಾಜಕೀಯಕ್ಕೆ ಎಂಟ್ರಿ ಕೊಟ್ಟರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದ ಮೋಹನಕುಮಾರ ಅವರಿಗೆ ರಾಜ್ಯ ನಾಯಕರೊಂದಿಗೂ ಉತ್ತಮ ಸಂಬಂಧ ಇತ್ತು. ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ರವರ ಆಪ್ತ ವಲಯದಲ್ಲಿ ಒಬ್ಬರಾಗಿದ್ದ ಮೋಹನಕುಮಾರ್‌ಗೆ ಈ ಬಾರಿ ಹಾನಗಲ್ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಗ್ಯಾರಂಟಿ ಎಂಬ ಮಾತುಗಳು ದಟ್ಟವಾಗಿದ್ದವು. ಹಾನಗಲ್ ಕ್ಷೇತ್ರಕ್ಕೆ ಎಂಟ್ರಿ ಕೊಟ್ಟಾಗಿನಿಂದ ತಹಶೀಲ್ದಾರನಿಂದ ಹಾಳಾಗಿ ಜೀವಕಳೆದುಕೊಂಡಿದ್ದ ಇಲ್ಲಿಯ ಕಾರ್ಯಕರ್ತರಿಗೆ ಪುನರ್‌ಜೀವಕೊಟ್ಟು ಕಾಂಗ್ರೆಸ್ ಪಕ್ಷವನ್ನು ಮತ್ತೆ ಉಸಿರಾಡುವ ಹಂತಕ್ಕೆ ತಂದು ನಿಲ್ಲಿಸಿದರು. ಇತ್ತೀಚೆಗೆ ಜರುಗಿದ ಪುರಸಭೆಯ ಚುನಾವಣೆಯಲ್ಲೂ ಮೋಹನ ಕುಮಾರ್ ಬೆಂಬಲಿತ ಐದು ಜನ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ, ತಹಶೀಲ್ದಾರನ ಪರ ಕೇವಲ ಒಬ್ಬ ಅಭ್ಯರ್ಥಿ ಗೆದ್ದರು.

ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದ ಜನ ಪ್ರಬಲರು. ಅವರೆಲ್ಲ ಮೊದಲಿನಿಂದಲೂ ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸಿದ್ದವರು. ಆದರೆ ತಹಶೀಲ್ದಾರನ ನಿರ್ಲಕ್ಷ್ಯ ಮತ್ತು ಒಳಸಂಚಿನ ರಾಜಕಾರಣಕ್ಕೆ ಅವರೆಲ್ಲ ಬೇಸತ್ತು ಪಕ್ಷದಿಂದ ದೂರಾಗಿದ್ದರು. ಅಂತಹವರೆಲ್ಲ ಮೋಹನಕುಮಾರ್ ಮೂಲಕ ಮತ್ತೆ ಕಾಂಗ್ರೆಸ್ಸಿಗೆ ಕಾಲಿಟ್ಟು ಪಕ್ಷದ ವರ್ಚಸ್ಸು ಹೆಚ್ಚಿಸಿದ್ದರಲ್ಲದೆ, ಚುನಾವಣಾ ಪೂರ್ವದಲ್ಲೇ ಉದಾಸಿಗೂ ಚಳಿ ಬಿಡಿಸಿದ್ದರು.

ಪಕ್ಷಕ್ಕಾಗಿ ಅಷ್ಟೆಲ್ಲಾ ದುಡಿದಿದ್ದ ಮೋಹನಕುಮಾರ್‌ಗೆ ಕಾಂಗ್ರೆಸ್ ಹೈಕಮಾಂಡ್ ಕೊನೆವರೆಗೂ ಕಾಯಿಸಿ ನಾಮಪತ್ರ ಸಲ್ಲಿಸಲು ಇನ್ನೆರಡು ದಿನ ಬಾಕಿ ಇರುವಾಗ ಬಿ ಫಾರ್ಮ್ ನಿರಾಕರಿಸಿತು. ಅಷ್ಟೇ ಅಲ್ಲ, ಉದಾಸಿ ವಿರುದ್ಧ ಸತತ ಸೋಲು ಕಂಡಿರುವ ತಹಶೀಲ್ದಾರನಿಗೆ ಮತ್ತೊಮ್ಮೆ ಟಿಕೆಟ್ ನೀಡಿತು. ಆಗ ವಿಧಿ ಇಲ್ಲದೆ ಮೋಹನಕುಮಾರ್ ಕಾಂಗ್ರೆಸ್ ವಿರುದ್ಧ ಬಂಡಾಯವೇಳಬೇಕಾಯಿತು. ಜನರ ಒತ್ತಾಯದ ಮೇರೆಗೆ ಅವರೀಗ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಅದು ಈ ಕ್ಷೇತ್ರಕ್ಕೆ ಅನಿವಾರ್ಯ ಕೂಡಾ ಆಗಿತ್ತು.

ಮೋಹನಕುಮಾರ್ ಪಕ್ಷ ಬದಲಿಸಿ ಚುನಾವಣಾ ಕಣಕ್ಕೆ ಧುಮಕಿದ್ದರೂ ಅವರಿಗೆ ಮೊದಲು ಕಾಂಗ್ರೆಸ್‌ನಲ್ಲಿ ದೊರೆತಿದ್ದ ಬೆಂಬಲ ಈಗಲೂ ಮುಂದುವರೆದಿದೆ. ಅಲ್ಪಸಂಖ್ಯಾತ ಮುಖಂಡ ಹಾಗೂ ಪುರಸಭೆ ಸದಸ್ಯ ನಜೀರಸಾಬ ಸವಣೂರ ತಮ್ಮ ಸಾವಿರಾರು ಕಾರ್ಯಕರ್ತರೊಂದಿಗೆ ಮೋಹನಕುಮಾರ್ ಪರವಾಗಿ ಬಹಿರಂಗವಾಗಿ ಪ್ರಚಾರಕ್ಕೆ ಇಳಿದಿದ್ದಾರೆ. ದಿನದಿಂದ ದಿನಕ್ಕೆ ಕಾಂಗ್ರೆಸ್ ಹಾಗೂ ಕೆಜೆಪಿಯಿಂದ ಮುಖಂಡರು ಜೆಡಿಎಸ್‌ನತ್ತ ಸಾಗುತ್ತಿದ್ದಾರೆ. ರಾಜಕಾರಣಕ್ಕೆ ನಿವೃತ್ತಿ ಘೋಷಿಸಿ ಮನೆಯಲ್ಲಿರಬೇಕಾದ ವಯಸ್ಸಿನಲ್ಲಿರುವ ಉದಾಸಿ ಹಾಗೂ ತಹಶೀಲ್ದಾರರು ಕ್ಷೇತ್ರ ಸುತ್ತಲೂ ಹೆಣಗಾಡುತ್ತಿದ್ದಾರೆ. ಆದರೆ ಜೆಡಿಎಸ್‌ನ ಮೋಹನಕುಮಾರ್ ಉತ್ಸಾಹಿ ಯುವಕನಾಗಿರುವುದರಿಂದ ಗ್ರಾಮಗಳಷ್ಟೇ ಅಲ್ಲ ಪ್ರತಿಯೊಂದು ಮನೆಮನೆಗೂ ತೆರಳುತ್ತಿದ್ದಾರೆ.

ದಿನಬೆಳಗಾದರೆ ಉದಾಸಿಯನ್ನು ಬೈಯುತ್ತಲೇ ರಾಜಕಾರಣದ ಫೀಲ್ಡಿಗಿಳಿಯುವ ಜಿಪಂ ಸದಸ್ಯ ಬಸವರಾಜ ಹಾದಿಮನಿ ಬಿಜೆಪಿಯ ಅಭ್ಯರ್ಥಿ. ಇವರು ಉದಾಸಿಯ ಓಟ್ ಬ್ಯಾಂಕಿಗೆ ಕತ್ತರಿ ಹಾಕಲಿದ್ದಾರೆ. ಹಾಗೆಯೇ ಕಾಂಗ್ರೆಸ್‌ನಿಂದ ಸಿಡಿದೆದ್ದು ಬಂದಿರುವ ಮೋಹನಕುಮಾರ್ ಕಾಂಗ್ರೆಸ್‌ನ ಮುಕ್ಕಾಲು ಮತಗಳನ್ನು ತಮ್ಮತ್ತ ಸೆಳೆಯಲಿದ್ದಾರೆ. ಮೇಲುನೋಟಕ್ಕೆ ಇಲ್ಲಿ ತ್ರಿಕೋನ ಸ್ಪರ್ಧೆ ಎನಿಸಿದರೂ ಎರಡು ಹಳೇ ತಲೆಗಳು ಜೆಡಿಎಸ್‌ನ ಹೊಸ ಮುಖದ ಮುಂದೆ ಮಂಡಿಯೂರುವ ಸೂಚನೆಗಳು ಕಾಣಿಸುತ್ತಿವೆ.

• ವಿನಯ್

ಈ ಬಾರಿ ಅನುಕಂಪ ಗಿಟ್ಟಲ್ಲ

ಇಲ್ಲಿಯವರೆಗೆ ಎಂಟು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್‌ನ ಮನೋಹರ ತಹಶೀಲ್ದಾರ ಗೆದ್ದಿದ್ದು ಮಾತ್ರ ಕೇವಲ ಮೂರು ಬಾರಿ. ಆ ಗೆಲುವು ಕೂಡ ಅನುಕಂಪದ ಅಲೆಯ ಮೇಲೆ. ಒಂದು ಬಾರಿ ಇಂದಿರಾ ಗಾಂಧಿಯ ಸಾವಿನ ನಂತರ ಉಂಟಾದ ಅನುಕಂಪದ ಅಲೆ, ಆನಂತರ ರಾಜೀವ್ ಗಾಂಧಿಯ ಹತ್ಯೆಯ ನಂತರ ಎದ್ದ ಕಾಂಗ್ರೆಸ್ ಪರ ಗಾಳಿಯಲ್ಲಿ ತೂರಿಬಂದಿದ್ದರು.

ಮೂರನೆ ಬಾರಿ ಕ್ಷೇತ್ರದಲ್ಲಿ ಉದಾಸಿ ವಿರುದ್ಧ ಬಂಡೆದ್ದಿದ್ದ ಹಿಂದುಳಿದ ವರ್ಗದ ಜನ ಈತನ ನೆರವಿಗೆ ನಿಂತಿದ್ದರು. ಆ ಸಮಯದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕೈಗೊಂಡಿದ್ದ ಪಾಂಚಜನ್ಯ ಯಾತ್ರೆ ಹಾನಗಲ್‌ನಲ್ಲಿ ವರ್ಕ್‌ಔಟ್ ಆಗಿತ್ತು. ಆದರೆ ಈ ಬಾರಿ ಅಂತಹ ಯಾವ ಅಲೆ, ಗಾಳಿಯೂ ಕ್ಷೇತ್ರದಲ್ಲಿ ಇಲ್ಲವಾದ್ದರಿಂದ ತಹಶೀಲ್ದಾರ್ ಸೋಲುವುದು ಗ್ಯಾರಂಟಿ ಎನಿಸುತ್ತದೆ.

ಗಂಗಾಮತಸ್ಥರು ತೆನೆಹೊತ್ತವಳ ಹಿಂದೆ..?

2008 ರ ಚುನಾವಣೆಯಲ್ಲಿ ಗಂಗಾಮತ ಸಮಾಜದ ಜಿಪಂ ಸದಸ್ಯ ನಾರಾಯಣಗೌಡ ಪಾಟೀಲ ಪ್ರಬಲ-ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಪಕ್ಷದ ವರಿಷ್ಠರು ಆಗ ಅವರನ್ನೇ ಬಿಜೆಪಿಯ ಸಿ.ಎಂ.ಉದಾಸಿ ವಿರುದ್ಧ ಕಣಕ್ಕಿಳಿಸುವ ನಿರ್ಧಾರಕ್ಕೂ ಬಂದು, ಮಾಧ್ಯಮಗಳಿಗೆ ಅವರ ಹೆಸರನ್ನು ಬಿಡುಗಡೆ ಮಾಡಿದ್ದರು. ಪಕ್ಷದ ಈ ನಿರ್ಧಾರದಿಂದ ಇಡೀ ಗಂಗಾಮತ ಸಮಾಜ ಒಟ್ಟಾಗಿ ಉದಾಸಿ ವಿರುದ್ಧ ಒಪ್ಪನ್ನಾಗಿ ತೊಡೆ ಕೂಡ ತಟ್ಟಿತ್ತು.

ಆದರೆ ಕೊನೆಗಳಿಗೆಯಲ್ಲಿ ಟಿಕೆಟ್ ಕೈ ತಪ್ಪಿ ಮನೋಹರ ತಹಶೀಲ್ದಾರನಿಗೆ ಬಿ ಫಾರ್ಮ್ ನೀಡುವ ಮೂಲಕ ಕಾಂಗ್ರೆಸ್ ತನ್ನ ಸೋಲನ್ನು ನಿಶ್ಚಿತ ಮಾಡಿ ಕೊಂಡಿತ್ತು. ಈ ಬಾರಿಯೂ ಅದೇ ಸಮಾಜದ ರಾಜ್ಯಾಧ್ಯಕ್ಷರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದೆ. ಹೀಗಾಗಿ 30 ಸಾವಿರಕ್ಕೂ ಹೆಚ್ಚಿರುವ ಈ ಸಮಾಜದ ಜನ ತಮ್ಮವರೇ ಆದ ಮೋಹನಕುಮಾರ್‌ರನ್ನು ಬೆಂಬಲಿಸುವ ಸಾಧ್ಯತೆಗಳೇ ಹೆಚ್ಚು.

...ಾಕೆ ಸ್ವಾಮಿ ತಾವು ಪುನಃ ಮುಖ್ಯಮಂತ್ರಿಯಾಗಬೇಕು?

...ಾಡಿಗೆ ಬೆಂಕಿಬಿದ್ದಂತೆ ಚುನಾವಣೆ ಅಪ್ಪಳಿಸಿ ಇಡೀ ...ಟಕ ಹೊತ್ತಿ ಉರಿಯುತ್ತಿರುವಾಗಲೇ ಅತ್ತ ಬೆಲ್ಜಿಯಂ ...ೊಂಡಿರುವ ಬಾಲಗಂಗಾಧರನೆಂಬ ವಶಿಷ್ಟ ...ಯೊಂದು ಕರ್ನಾಟಕದ ವಚನೋದ್ಯಾನಕ್ಕೆ ...ರಿದೆಯಂತಲ್ಲಾ! ಆ ಕಲ್ಲುಗಳು ಒಬ್ಬೊಬ್ಬರಿಗೆ ...ಂದು ರೀತಿಯಲ್ಲಿ ತಾಗಿ ಎಂದಿನಂತೆ ಬತ್ತೀಸರಾಗದ ...ಾಶರನ್ನು ಗೊಂದಲಕ್ಕೆ ಕೆಡವಿ ಆನಂತರ ಉಳಿದ ...ಸರನ್ನೂ ಕೆರಳಿಸಿದೆಯಂತಲ್ಲಾ, ಮಾಯಾ ಯುದ್ಧ ...ನಿಪುಣನಂತೆ ಎಲ್ಲಿಂದಲೋ ಅರ್ಥೈಸಲಾಗದ ...ಸುದ ಬಾಣಗಳನ್ನು ಬಿಡುತ್ತಿರುವ ಟ್ರೈಲ್ ಗಂಗಾಧರನ ...ಯಿಂದ ಬೇಸತ್ತ ಬಂಡಾಯದವರು "ನೋಡ್ರೀ ...ವರು ಹೇಳಿದ ಸತ್ಯ ಇಂದಿಗೂ ನಿಜವಾಗಿ ...ದೆಯಲ್ರೀ. ಭಾರತದ ಮೇಲೆ ಪರಕೀಯರೆಲ್ಲಾ ದಾಳಿ ...ತ್ತಿದ್ದ ಸಮಯದಲ್ಲಿ ದೇಶದ ಪುರೋಹಿತಶಾಹಿಗಳೆಲ್ಲಾ ...ನದಲ್ಲಿ ಸೇರಿಕೊಂಡು ಭಜನೆ ಮಾಡುತ್ತಿದ್ದರಂತೆ. ...ತಿ ಈಗಲೂ ಕೂಡ ಮಳೆಯಿಲ್ಲ, ಬೆಳೆಯಿಲ್ಲ, ...ಗೆ ಹೋಗಲಿ ಮನುಷ್ಯರಿಗೇ ಕುಡಿಯಲು ನೀರಿಲ್ಲ, ...ಹೊತ್ತಿನಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯದ ಪುರೋಹಿತರು ...ಬಾಬನನ್ನು ಎಳೆತಂದು ನಮ್ಮ ಗೌರವಾನ್ವಿತ ...ರ ತಲೆ ಕೆಡಿಸುತ್ತಿದ್ದಾರಲ್ಲ. ಇವರು ಮರೆಯಾಗದ ...ಈ ನೆಲಕ್ಕೆ ನೆಮ್ಮದಿಯಿಲ್ಲ. ಥೂ ಇವರ ಸುಳಿ ...ಗ" ಎಂದರಂತಲ್ಲಾ, ಥೂತ್ತೇರಿ!

****

...ಕೃತಿ ಮತ್ತು ಸಾಹಿತ್ಯ ಲೋಕದಲ್ಲಿ ಇಂತಾದರೆ ...ರಾಜಕಾರಣದಲ್ಲಿನ ಸ್ಕ್ಯಾಂಡಲ್‌ಗಳೂ ಕ್ಯಾನೆ ...ಗಿವೆಯಲ್ಲಾ, ನಮ್ಮ ಮದ್ದೂರಿನ ಮುಲ್ಲಯ್ಯ ಕೃಷ್ಣರ ...ಮಾಗಸವನ್ನು, ಜರಿಗೆಸಿ. "ನಮ್ಮ ನಿವೃತ್ತಿಜೀವನ ...ಯಿಂದ ಸುಖಕರವಾಗಿರಲಿ" ಎಂದು ಊರಿಗೆ ಕಳುಹಿಸಿಕೊಟ್ಟಿದ್ದನ್ನು ಕೃಷ್ಣ ಮರೆತರಂತಲ್ಲಾ. ಆದ್ದರಿಂದ ತಮ್ಮ ಹಿಂಬಾಲಕರಿಗೆ ಟಿಕೆಟ್ ಕೊಡಿಸಲು ಹೋಗಿ ಅದರಲ್ಲಿ ವಿಫಲವಾಗಿ ಅಮೆರಿಕಕ್ಕೆ ಟಿಕೆಟ್ ತೆಗೆದುಕೊಂಡಿದ್ದರಂತಲ್ಲಾ. ಆಗ ಅವರ ಅಳಿಯ ಸಮಾಧಾನ ಹೇಳಿ "ನೀವು ಈ ರೀತಿ ನಿರ್ಗಮಿಸಿದರೆ ನಮ್ಮ ಕತೆಯೇನು?" ಎನ್ನಲಾಗಿ ಕೃಷ್ಣ ಕೂಡಲೇ ತಮ್ಮ ಆಡಳಿತದ ಅವಧಿಯನ್ನು ನೆನೆಸಿಕೊಂಡು "ನಾನು ಅಮೆರಿಕಕ್ಕೆ ಹೋಗಲು ಅರಳುಮರಳಿಗೆ ತುತ್ತಾಗಿಲ್ಲ, ಕಾಂಗ್ರೆಸ್ ನಾನು ಕಟ್ಟಿದ ಮನೆ. ಕಾಂಗ್ರೆಸ್‌ಗಾಗಿ ನಾನು ಬಿಸಿಲೆನ್ನದೆ, ಮಳೆ ಎನ್ನದೆ, ನೆತ್ತಿ ಕೂದಲು ಉದುರಿಹೋಗುವುದನ್ನೂ ಮರೆತು ದುಡಿದಿದ್ದೇನೆ. ನನ್ನ ತ್ಯಾಗವನ್ನು ಜನತೆಗೆ ತಿಳಿಸಿಕೊಡಲು ಮತ್ತೆ ತಿರುಗಲಿದ್ದೇನೆ. ಆದ್ದರಿಂದ ನನ್ನ ತ್ಯಾಗ ಮತ್ತು ನಿಸ್ವಾರ್ಥ ಸೇವೆಗೆ ತಕ್ಕ ಹಾಗೆ ಗೌರವ ಮರ್ಯಾದೆಗಳನ್ನು ನಿರೀಕ್ಷಿಸುತ್ತೇನೆ" ಎಂದು ವಿಗ್ ಮುಟ್ಟಿ ನೋಡಿಕೊಂಡರಂತಲ್ಲಾ, ಥೂತ್ತೇರಿ!

****

"ಕರ್ನಾಟಕದ ಆರು ಕೋಟಿ ಜನತೆ ಒಂದು ಕಡೆ ಸೇರಿ ತೆಗೆದುಕೊಂಡಿರತಕ್ಕಂತ ತೀರ್ಮಾನ ಏನಂದ್ರೆ ಮತ್ತು ಅವರ ಭಾವನೆಯಿಂದ ಪ್ರಕಟವಾಗಿರತಕ್ಕಂತ ಆಸೆ ಏನಂದ್ರೆ ನಾನು ಮತ್ತೊಮ್ಮೆ ಈ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಕಂಗೊಳಿಸಬೇಕು ಅನ್ನತಕ್ಕಂತ ಅವರ ಆಳವಾದ ಅಭಿಮಾನವನ್ನು ಉಳಿಸಿಕೊಳ್ಳತಕ್ಕಂತ ಪ್ರತಿಜ್ಞೆಯನ್ನು ಈ ಸಂದರ್ಭದಲ್ಲಿ ನಾನು ಮಾಡಬೇಕಾದಂತ ಅನಿವಾರ್ಯತೆ ಏನು ಸೃಷ್ಟಿಯಾಗಿದೆ...." ಈ ಮಾತು ಯಾರದ್ದೆಂದು ಬಿಡಿಸಿ ಹೇಳಬೇಕಾಗಿಲ್ಲವಲ್ಲಾ, ಕುಮಾರಣ್ಣನ ಇಂತಹ ಆಣಿಮುತ್ತನ್ನು ಕೇಳಿದ ಆಯನೂರ್ ಮಂಜುನಾಥ್ "ಯಾಕೆ ಸ್ವಾಮಿ ತಾವು ಪುನಃ ಮುಖ್ಯಮಂತ್ರಿಯಾಗಬೇಕು? ತಾವೂ ಕೂಡ ಡಿನೋಟಿಫಿಕೇಷನ್ ಸಾಧನೆಗೈದು ಬೇಲ್ ಪಡೆದಿದ್ದೀರಿ. ಎಡ್ಯೂರಪ್ಪ ಚೆಕ್ ಪಡೆದರೆ ತಾವು ಚೀಲಾಗಳ ಮುಖಾಂತರ ಪಡೆದಿದ್ದೀರಿ. ಮೈಸೂರಿನಿಂದ ಬೆಂಗಳೂರಿನವರೆಗೆ ಇರುವ ಯಾವ ಖಾಲಿ ಜಾಗ ಕೇಳಿದರೂ ಕುಮಾರಣ್ಣನ ಅಣ್ಣ ಬಾಲಣ್ಣನದ್ದು ಎನ್ನುತ್ತಾರೆ. ಅಷ್ಟೇ ಅಲ್ಲ ಗಣಿಧೂಳು ತಮ್ಮ ಅಣ್ಣತಮ್ಮಂದಿರ ಮನೆಯಮೇಲೂ ಕುಳಿತಿದೆ. ರಾಧಕ್ಕ ಸಿಕ್ಕ ಕೂಡಲೇ ಅನಿತಕ್ಕನಿಗೆ ಅನ್ಯಾಯವಾಗಬಾರದೆಂದು ಅವರನ್ನು ಶಾಸಕಿರನ್ನಾಗಿ ಮಾಡಿದಿರಿ. ನಿಮ್ಮನ್ನು ಮುಖ್ಯಮಂತ್ರಿ ಮಾಡಲೋಸ್ಕರ ಮಾನಮರ್ಯಾದೆಯನ್ನು ಹರಾಜಿಗಿಟ್ಟ ಸ್ಪೀಕರ್ ಕೃಷ್ಣರಿಗೆ ತಾವು ಟಿಕೆಟ್ ತಪ್ಪಿಸಿದ್ದರಿಂದ ಅವರು ಈಗ ಕೆ.ಆರ್. ಪೇಟೆ ಬಸ್ಟಾಂಡಿನಲ್ಲಿ ನಿಂತಿದ್ದಾರೆ. ಇನ್ನು ಚನ್ನರಾಯಪಟ್ಟಣದ ಪುಟ್ಟೇಗೌಡರಿಗೆ ನಿಮ್ಮ ಅಪ್ಪ ಮಕ್ಕಳ ಕೃತ್ಯ ಕಂಡು ಎಂತಹ ಆಘಾತವಾಗಿದೆಯೆಂದರೆ, ಇನ್ನು ಕೆಲವೇ ದಿನಗಳಲ್ಲಿ ಪುಟ್ಟೇಗೌಡರು ಶ್ರವಣಪ್ಪನ ಪಕ್ಕದಲ್ಲಿ ಪುಟ್ಟದಾಗಿ ನಿಂತುಕೊಳ್ಳುವ ಸೂಚನೆ ಕಂಡುಬಂದಿದೆ. ಚುನಾವಣೆ ಮುಗಿದಮೇಲೆ ಭವಾನಿ ಅತ್ತಿಗೆಯವರು ಎಮ್ಮೆಲ್ಸಿಯಾಗುವ ಸೂಚನೆಗಳೆಲ್ಲಾ ಇವೆ. ಜೆಡಿಎಸ್ ರಾಜಕಾರಣವೆಂದರೆ ಅಪ್ಪ ಮಕ್ಕಳು, ನಂಟರು, ಇಷ್ಟರು, ಬೀಗರು, ಬಿಜ್ಜರು, ಮತ್ತವರ ಬುಡಕಟ್ಟಿನವರ ಹಾವಳಿ ಎಂಬುದು ಸಾಬೀತಾಗಿ ಹೋಗಿರುವುದರಿಂದಲೇ ನಾನು ನಿಮ್ಮನ್ನು ಗೌರವಾನ್ವಿತ ದಂಡುಪಾಳ್ಯದವರೆಂದು ಕರೆದಿದ್ದು" ಎಂದು ಹೇಳಿ ಸಿಗರೇಟು ಹಚ್ಚಿದರಂತಲ್ಲಾ, ಥೂತ್ತೇರಿ!

****

ಗಣಿರೆಡ್ಡಿ ರಾಮುಲು ಭಾಗಕ್ಕೆ ಹಾಲು ಕೊಡುವುದನ್ನು ಪಹಾತ್ಸನೆ ನಿಲ್ಲಿಸಿದ ಹಸುವಿನಂತೆ ಕಾಣುವ ಸುಷ್ಮ ಸ್ವರಾಜ್ ಎಂಬ ನಾಯಕಿ ಕರ್ನಾಟಕದಲ್ಲಿ ಕಾಣಿಸಿಕೊಂಡು "ಈ ಚುನಾವಣೆ ಸಾಮಾನ್ಯ ಚುನಾವಣೆಯಲ್ಲ. ಈ ಚುನಾವಣೆಯಿಂದ ಭ್ರಷ್ಟರನ್ನು ದೂರವಿಡಿ. ಮಾತಿಗೆ

ಥೂತ್ತೇರಿ

ಯಾಹೂ

ತಪ್ಪಿದವರನ್ನು ದೂರವಿಡಿ. ನೀತಿನಿಯಮ ಬಿಟ್ಟವರನ್ನು ಸೋಲಿಸಿ" ಎಂದು ಗಂಟಲು ಹರಿಯುವಂತೆ ಕೂಗಿದಳಂತಲ್ಲಾ, ಅಮ್ಮನ ಭಾಷಣವನ್ನು ತನ್ನ ಗೂಢಾಚಾರ ಪಡೆಯಿಂದ ತರಿಸಿಕೊಂಡು ಕೇಳಿದ ರಾಮುಲು "ಅಮ್ಮ ತಮ್ಮ ಬಗ್ಗೆಯೇ ಇಷ್ಟು ನಿಷ್ಠೂರವಾಗಿ ಮಾತನಾಡುತ್ತಾರೆಂದು ನಾನು ತಿಳಿದಿರಲಿಲ್ಲ. ಅಂದಗನಾ ನಾವು ಅಮ್ಮನವರಿಗೆ ಕೊಟ್ಟಿದ್ದು ಲಂಚವಲ್ಲ, ಗೌರಿಹಬ್ಬದ ಭಾಗಿಣ" ಎಂದು ಗಡ್ಡ ಕೆರೆದುಕೊಂಡನಂತಲ್ಲಾ, ಥೂತ್ತೇರಿ!

****

ಇನ್ನು ಕಟ್ಟೆಪುರಾಣದ ಜುಮ್ಮಿಗೆ ಚಲುವರಾಯಸ್ವಾಮಿ ಕಡೆಯವರು ಕೊಡಲು ಬಂದ ಹತ್ತು ಸಾವಿರ ರೂಪಾಯಿ ಬೆಲೆಯ ರೇಷ್ಮೆ ಸೀರೆಯನ್ನು ಆಕೆ ನಿರಾಕರಿಸುತ್ತ "ನೋಡಪ್ಪ ತವರುಮನೇಲಿದ್ದಾಗ ನಮ್ಮಪ್ಪ ಸೀರೆ ತತ್ತಿದ್ದ, ಆಮ್ಯಾಲೆ ನಮ್ಮಣ್ಣ ತಂದು ಉಡಿಸ್ದ. ಮದಿವಾದ ಮ್ಯಾಲೆ ನನ್ನ ಗಂಡ ಯಂತಪ್ಪೊ ಚೀಟಿ ಸೀರೆ ತತ್ತಿದ್ದ ಅವ್ನನೆ ಉಟಗತಿದ್ದೆ ಏನೊ ಒಂಥರಾ ಸಂತೋಸಾಗದು. ಒಂದು ಸತಿ ನಮ್ಮ ಉಗ್ರಿ ಬಳಿ ಸೀರೆ ತಂದುಕೊಟ್ಟಿದ್ದ, ಮಿದ್ದಬಾಯಿ ತರ ಕಾಣ್ತನಿ ಅಂತ ಅದ ಉಟಗಳ್ಳೇಯಿಲ್ಲ, ಯಾವಾಗ್ಲು ಉಡೋ ಸೀರೆನ ತವರುಮನೆ, ಇಲ್ಲ ಗಂಡನ ಮನೆ, ಅಮ್ಯಾಲೆ ಜೀವಕೊಡೋ ಸೇಯಿಂತ್ರ ಕೊಡಸಬೇಕು. ಅದು ಬುಟ್ಟು ಕಳ್ಳುಸೂಳೆ ಮಕ್ಳು ಕೊಟ್ಟ ಕದ್ದು ಸೀರೆಯ ರಾತ್ರಿವೊತ್ತಲ್ಲಿ ಉಟಗಂಡು ನಾಕು ಜನರ ಬಾಯಿಗೆ ಸಿಕ್ಕೊ ಅಂತ ಕಾಲ ಇನ್ನು ಬಂದಿಲ್ಲ, ಬರೋದೂ ಬ್ಯಾಡ. ಈಗೋಗಿ" ಎಂದಳಂತಲ್ಲಾ, ಥೂ ಥೂ ಥೂತ್ತೇರಿ!!!

ಧಾರವಾಡ ಜಿಲ್ಲೆ: ಕೈ ಮುಂದೆ

ಟಿಕೆಟ್ ಹಂಚಿಕೆಯ ಗೊಂದಲ, ಬಂಡಾಯದ ಬಿಸಿ, ಸ್ವಪಕ್ಷೀಯರಿಂದಲೇ ಬೆನ್ನಿಗೆ ಚೂರಿ, ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಗೆಲ್ಲಲು ಹಣ, ಹೆಂಡದ ಹೊಳೆ ಹರಿಯುತ್ತಿರುವ ಇಂದಿನ ಸಂದರ್ಭದಲ್ಲಿ ಮತದಾರನ ಚಿತ್ತ ಜಿಲ್ಲೆಯಲ್ಲಿ ಯಾವ ಕಡೆಗೆ ಎಂಬ ಚಿತ್ರಣ ಇಲ್ಲಿದೆ.

ಹು-ಧಾ ಪೂರ್ವ

ಹುಬ್ಬಳ್ಳಿಯ ಪೂನಾ-ಬೆಂಗಳೂರು ಹೆದ್ದಾರಿಗೆ ಹೊಂದಿಕೊಂಡಿರುವ ಭೂಮಿಯನ್ನು ಮಾರಿ ಆರು ಕೋಟಿ ರೂಪಾಯಿ ಹಣದ ಥೈಲಿಯೊಂದಿಗೆ ಕಣದಲ್ಲಿರುವ ಕೆಜೆಪಿ ಅಭ್ಯರ್ಥಿ ಶಂಕ್ರಪ್ಪ ಬಿಜವಾಡ, ಕೆಪಿಸಿಸಿ ಅಧ್ಯಕ್ಷ ಡಾ.ಜಿ. ಪರಮೇಶ್ವರರ ಕೃಪೆಯಿಂದ ಟಿಕೆಟ್ ಪಡೆದ ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯ, ರಮೇಶ್ ಜಿಗಜಿಣಗಿ ಒತ್ತಾಯದ ಫಲವಾಗಿ ಬಿಜೆಪಿ ಟಿಕೆಟ್ ಗಿಟ್ಟಿಸಿರುವ ಹಾಲಿ ಶಾಸಕ ವೀರಭದ್ರಪ್ಪ ಹಾಲಹರವಿ ಪರಸ್ಪರ ಸ್ಪರ್ಧೆಗೆ ಇಳಿದು ಈ ಕ್ಷೇತ್ರವನ್ನು ದಿನದಿಂದ ದಿನಕ್ಕೆ ರಂಗೇರಿಸುತ್ತಿದ್ದಾರೆ. ಇಲ್ಲಿ ಜೆಡಿಎಸ್ ಲೆಕ್ಕಕ್ಕೆ ಇಲ್ಲದಾಗಿದೆ.

ಶಂಕ್ರಪ್ಪ ಬಿಜವಾಡನ ಸೋದರರಾದ ದುರ್ಗಪ್ಪ ರಜನಿ, ಕಿಟ್ಟು ಹಾಗೂ ಶೇಖರ್ ಬಿಜವಾಡ ಹಣದ ಥೈಲಿಯೊಂದಿಗೆ ಕ್ಷೇತ್ರದ ತುಂಬಾ ಸಂಚರಿಸುತ್ತಿದ್ದಾರೆ. ನೋಟು ಪಡೆದವರು ಓಟು ಹಾಕಲೇಬೇಕು ಎಂಬ ಫರ್ಮಾನ್ ಬೇರೆ ಹೊರಡಿಸಿದ್ದಾರೆ. ಕೆಜೆಪಿ ಶತ್ರು ಕಾಂಗ್ರೆಸ್ ಎಂದು ತಿಳಿದಿರುವ ಮಾಜಿ ಸಚಿವ ಜಬ್ಬಾರ ಖಾನ್ ಹೊನ್ನಳ್ಳಿ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಸಂಚರಿಸುತ್ತಾ ಮುಸ್ಲಿಂ ಮತ ಬೇಟೆಗೆ ಇಳಿದಿದ್ದಾರೆ. ತನ್ನ ಆಜನ್ಮ ವೈರಿಯೆಂದೇ ತಿಳಿದಿರುವ ಕಾಂಗ್ರೆಸ್‌ನ ಎ.ಎಂ.ಹಿಂಡಸಗೇರಿಗೆ ಮುಖಭಂಗಗೊಳಿಸುವುದೇ ಹೊನ್ನಳ್ಳಿಯ ಏಕೈಕ ಗುರಿಯಾಗಿದೆ.

ಇನ್ನು ಕಾಂಗ್ರೆಸ್ ಅಭ್ಯರ್ಥಿ ಪ್ರಸಾದ್ ಅಬ್ಬಯ್ಯ ಡಾ.ಜಿ.ಪರಮೇಶ್ವರರ ಕ್ಯಾಂಡಿಡೇಟ್ ಎಂಬ ಕಾರಣಕ್ಕೆ ಮಹಾನಗರಗಳ ಅಧ್ಯಕ್ಷ ಮತ್ತು ಮಾಜಿ ಸಚಿವ ಎ.ಎಂ.ಹಿಂಡಸಗೇರಿ ಯಾವುದೇ ಸಹಾಯ ಮಾಡುತ್ತಿಲ್ಲ, ಬದಲಾಗಿ ತನ್ನ ಗುರುಗಳಾದ ಎಚ್.ಕೆ.ಪಾಟೀಲರು ಸ್ಪರ್ಧಿಸಿರುವ ಗದಗದಲ್ಲಿ ತನ್ನ ಶಿಷ್ಯರಾದ ಎಫ್.ಎಚ್.ಜಕ್ಕಪ್ಪನವರ ಮತ್ತು ಮಹೇಂದ್ರ ಸಿಂಘಿ ಜೊತೆ ಠಿಕಾಣಿ ಹೂಡಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಸಾದ್ ಬೆನ್ನಿಗೆ ರಾಜ್ಯ ಕಾರ್ಯದರ್ಶಿಗಳಾದ ಮೆಣಸಿನಕಾಯಿ ಅನ್ವರ್, ಮುಧೋಳ್, ಸಂಯುಕ್ತ ಕರ್ನಾಟಕ ಪತ್ರಿಕೆಯ ಟ್ರಸ್ಟಿ ರಾಜಾ ದೇಸಾಯಿ, ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಸದಾನಂದ ಡಂಗನವರ, ದೊರೆರಾಜ್, ಮೋಹನ್ ಹಿರೇಮನಿ, ಮೋಹನ್ ಅಸುಂಡಿ, ಪ್ರಕಾಶ್ ಬುರಬುರೆ ತರಹದ ಯುವಕರ ಪಡೆ ನಿಂತಿದೆ.

ಬಿಜೆಪಿಯ ವೀರಭದ್ರಪ್ಪ ಹಾಲಹರವಿಗೆ ಜಿಲ್ಲಾಧ್ಯಕ್ಷ ತೆಂಗಿನಕಾಯಿ, ಪಾಲಿಕೆ ಸದಸ್ಯ ಜರತಾರಘರ, ನಾರಾಯಣ ಇಂತಹವರೇ ತೊಡರುಗಾಲು ಹಾಕುತ್ತಿದ್ದಾರೆ. ಇದ್ದುದರಲ್ಲೇ ರಂಗಾಬದ್ದಿ, ರಾಧಾಬಾಯಿ ಸಫಾರೆ, ರಂಗನಾಯಕನಂತವರು ಹಾಲಹರವಿ ಪರವಾಗಿ ತಿರುಗಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಇದ್ದ ರಂಗು ಈಗ ಬಿಜೆಪಿಯಲ್ಲಿ ಉಳಿದಿಲ್ಲ.

ಇಲ್ಲಿ ಕೆಜೆಪಿ ಹಾಗೂ ಕಾಂಗ್ರೆಸ್ ನಡುವೆ ನೇರ ಹಣಾಹಣಿ ನಡೆಯಲಿದೆ.

ಹುಬ್ಬಳ್ಳಿ-ಧಾರವಾಡ

ಮುಖ್ಯಮಂತ್ರಿ ಶೆಟ್ಟರ್ ಕ್ಷೇತ್ರವೆನ್ನುವ ಹೆಚ್ಚುಗಾರಿಕೆ ಈ ಕ್ಷೇತ್ರಕ್ಕಿದೆ. ಇತ್ತೀಚೆಗೆ ಇಲ್ಲಿಗೆ ನಟಿ ತಾರಾಳನ್ನು ಕರೆತಂದ ಶೆಟ್ಟರ್ ಪತ್ನಿ ಶಿಲ್ಪಾ ಆಕೆಯನ್ನು ಸಂತೆಯಲ್ಲೆಲ್ಲ ತಿರುಗಾಡಿಸಿದ್ದಾರೆ. ಜೊತೆಗೆ ಶೆಟ್ಟರ್ ಶಿಷ್ಯೆ ಸೀಮಾ ಮಸೂತಿ ಸ್ಪರ್ಧಿಸುತ್ತಿರುವ ಧಾರವಾಡ ಗ್ರಾಮೀಣ ಕ್ಷೇತ್ರದಲ್ಲೂ ತಾರಾಳನ್ನು ಸುತ್ತಾಡಿಸಿದ್ದಾರೆ. ಆದರೆ ಬಿಜೆಪಿಯ ವೀರಭದ್ರಪ್ಪ ಹಾಲಹರವಿ ಸ್ಪರ್ಧಿಸುತ್ತಿರುವ ಪಕ್ಕದ ಹುಬ್ಬಳ್ಳಿ-ಧಾರವಾಡ ಮೀಸಲು ಕ್ಷೇತ್ರಕ್ಕೆ ತಾರಾ ಕಾಲಿಡದಂತೆ ಶಿಲ್ಪಾ ಶೆಟ್ಟರ್ ನೋಡಿಕೊಂಡಿದ್ದಾರೆ. ಇದನ್ನು ಕಂಡು ಇಲ್ಲಿನ ಜನ "ಜಗದೀಶ್ ಶೆಟ್ಟರಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ಶಿಲ್ಪಾ ಶೆಟ್ಟರ್ ಅವರ ಪಾಲಿಟಿಕ್ಸ್ ಜೋರಾಗಿದೆ" ಎಂದು ತಮಾಷೆ ಮಾಡುತ್ತಿದ್ದಾರೆ.

ಕೊನೆಯ ಕ್ಷಣದವರೆಗೂ ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ ಎನ್ನುತ್ತಿದ್ದ ಮತ್ತು ಆ ಮೂಲಕ ಶೆಟ್ಟರ್ ಅವರಿಗೇ ಸೆಡ್ಡು ಹೊಡೆದಿದ್ದ ಶ್ರೀಪಾದ ಕುಲಕರ್ಣಿಗೆ ಹಿಂದೂತ್ವವಾದಿಗಳ ಜಗದ್ಗುರುಗಳಾದ ಪೇಜಾವರ ಶ್ರೀಗಳಿಂದಲೇ ಉಪದೇಶ ನೀಡಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಿದ್ದೇ ಶೆಟ್ಟರ್ ಸಾಧನೆಯಾಗಿದೆ.

ಅದೇರೀತಿ ಕಾಂಗ್ರೆಸ್‌ನಿಂದ ಟಿಕೆಟ್ ವಂಚನೆಗೊಳಗಾಗಿದ್ದ ಕಾರ್ಪೊರೇಟರ್ ಪ್ರಫುಲಚಂದ್ ರಾಯನಗೌಡ್ರಗೆ ಕೆಜೆಪಿ ಗಾಳ ಹಾಕಿದ್ದನ್ನು ಕಂಡು ಗಾಬರಿಯಾಗಿದ್ದ ಶೆಟ್ಟರ್ ಆತ ತನ್ನ ವಿರುದ್ಧ ಸ್ಪರ್ಧೆಗೆ ಇಳಿಯಬಾರದೆಂದು ದಯನೀಯವಾಗಿ ಬೇಡಿಕೊಂಡಿದ್ದು ಶೆಟ್ಟರ್‌ರ ದೌರ್ಬಲ್ಯಕ್ಕೆ ಸಾಕ್ಷಿಯಾಗಿದೆ.

ಡಾ.ನಾಲವಾಡ ಕಾಂಗ್ರೆಸ್ ಅಭ್ಯರ್ಥಿ ಅನ್ನುವುದಕ್ಕಿಂತ ಪೇಮೆಂಟ್ ಕ್ಯಾಂಡಿಡೇಟ್ ಎಂದರೆ ಹೆಚ್ಚು ಸೂಕ್ತವಾಗುತ್ತದೆ. ಕ್ಷೇತ್ರದಲ್ಲಿ ಹಣದ ಥೈಲಿಯೊಂದಿಗೆ ತಿರುಗಾಡಿದರೆ ಮತ ಗ್ಯಾರಂಟಿ ಎಂಬ ಡಾಕ್ಟರ್ ಲಾಜಿಕ್ ಎಷ್ಟು ಕೆಲಸ ಮಾಡಬಲ್ಲದು? ಇವರಿಗೆ ಟಿಕೆಟ್ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದ ಪ್ರಚಾರ ಸಮಿತಿಯ ಅಧ್ಯಕ್ಷ ವೀರಣ್ಣ ಮತ್ತಿಕಟ್ಟಿ ತನ್ನ ತವರುಜಿಲ್ಲೆಯಲ್ಲೇ ತಿರುಗಾಡದವರು. ಈತ ಡಾಕ್ಟರರನ್ನು ಗೆಲ್ಲಿಸಲು ಸಾಧ್ಯವೇ? ವೀರಣ್ಣ ಮತ್ತಿಕಟ್ಟಿಗೆ ಈ ಹಿಂದೆ ವಿಧಾನ ಪರಿಷತ್‌ನಲ್ಲಿ ಸ್ಥಾನ ದೊರೆಯಲು ಜಗದೀಶ ಶೆಟ್ಟರ ಸಹಾಯ ಮಾಡಿದ್ದರ ಋಣಭಾರವನ್ನು ತೀರಿಸಲು ಡಾಕ್ಟರ್‌ನನ್ನು ಬಲಿಪಶು ಮಾಡಲಾಗುತ್ತಿದೆ ಎನ್ನುವುದು ಕಾಂಗ್ರೆಸ್ ಒಳಾಂಗಣದಲ್ಲೇ ಕೇಳಿಬರುತ್ತಿರುವ ಮಾತು. ಟಿಕೆಟ್ ವಂಚಿತ ರಾಯನಗೌಡರ ತಟಸ್ಥ ಧೋರಣೆ ಕೂಡ ಕಾಂಗ್ರೆಗೆ ದೊಡ್ಡ ಹೊಡೆತವನ್ನೇ ನೀಡಲಿದೆ.

ನೀರು ಕೊಡದ, ರಸ್ತೆ-ಗಟಾರ ಮಾಡಿಸದ ಮುಖ್ಯಮಂತ್ರಿ ಶೆಟ್ಟರ್ ಒಳ ತಂತ್ರಗಳಿಂದಾಗಿ ಈ ಕ್ಷೇತ್ರದಲ್ಲಿ ಸಮಬಲದ ಸ್ಪರ್ಧೆ ಇಲ್ಲದಾಗಿದೆ. ಶೆಟ್ಟರ್‌ರನ್ನು ಸೋಲಿಸುವುದೇ ತನ್ನ ಗುರಿ ಎಂದಿದ್ದ ಯಡ್ಡಿ ಕೆಲಸಕ್ಕೆ ಬಾರದವರನ್ನು ಅಭ್ಯರ್ಥಿಯಾಗಿ ಇಳಿಸಿರುವುದು ಯಾವ ಪುರುಷಾರ್ಥಕ್ಕೆ ಎಂದು ಜನರಿಗೆ ಅರ್ಥವಾಗುತ್ತಿಲ್ಲ.

ಹು-ಧಾ ಪಶ್ಚಿಮ (ಧಾರವಾಡ ಶಹರ)

ನಾಯಿ ಹಸಿದಿತ್ತು ಅನ್ನ ಹಳಸಿತ್ತು ಅನ್ನುವ ಹಾಗೆ ಬೆಲ್ಲದ್ ಕುಟುಂಬಕ್ಕೆ ಮತ್ತೆ ತಲೆಬಾಗಿದ ಬಿಜೆಪಿ ಅರವಿಂದ ಬೆಲ್ಲದ್‌ಗೇ ಟಿಕೆಟ್ ಕೊಟ್ಟಿದೆ. ಅರವಿಂದನ ಸೋಲೇ ತನ್ನ ಗುರಿಯೆಂದು ಕಣಕ್ಕೆ ಇಳಿದಿರುವ ಗುರುರಾಜ ಹುಣಸಿಮರದ ಕಮಲಕ್ಕೆ ತೊಡರುಗಾಲನ್ನು ಹಾಕುತ್ತಲೇ ಸಾಗಿದ್ದಾರೆ. ಅರವಿಂದ ಬೆಲ್ಲದ್‌ನ ವ್ಯಾಪಾರಿ ಬುದ್ಧಿಗೆ ಜನ ಬೇಸತ್ತಿದ್ದಾರೆ.

ಮರಾಠಿ ಲಾಬಿ ನಡೆಸಿ ಟಿಕೆಟ್ ಪಡೆದಿರುವ ಕಾಂಗ್ರೆಸ್‌ನ ಮಾಜಿ ಸಚಿವ ಎಸ್.ಆರ್.ಮೋರೆಗೆ ಸಾಥ್ ಕೊಡಲು ಟಿಕೆಟ್‌ವಂಚಿತ ನಾಗರಾಜ ಛಬ್ಬಿ ಹಿಂದೇಟು ಹಾಕುತ್ತಿದ್ದಾರೆ. ಅಷ್ಟೇ ಅಲ್ಲ ಛಬ್ಬಿ ಮುನಿಸಿಕೊಂಡು ತಮ್ಮ ಹುಬ್ಬಳ್ಳಿಯ ಮನೆ ಸೇರಿದ್ದಾರೆ. ಈ ಹಿಂದೆ ಮೋರೆ ಜೊತೆ ಇದ್ದ ರಿಯಲ್ ಎಸ್ಟೇಟ್ ಕುಳಗಳು ಕಮ್ ಫೈನಾನ್ಸಿಯರ್ಸ್ ಆಗಿದ್ದ ರಿಯಾಜ್ ಧಾರವಾಡಕರ, ಸುಭಾಸ್ ಶಿಂಧೆ, ಸುಭಾಸ್ ದ್ಯಾಮಕ್ಕನವರ ಈಗ ಕೈಬಿಡುವ ನಿರ್ಧಾರ ಮಾಡಿದ್ದಾರೆ. ಈಗಾಗಲೇ ರಿಯಾಜ್ ಧಾರವಾಡಕರ ಜೆಡಿಎಸ್‌ನ ಇಸ್ಮಾಯಿಲ್ ತಮಾಟಗಾರನ ಬೆನ್ನಿಗೆ ನಿಂತಿದ್ದಾರೆ.

ಕೆಜೆಪಿಯ ಮೋಹನ ಲಿಂಬಿಕಾಯಿಯದು ಒಂಟಿ ಹೋರಾಟವಾಗಿದೆ. ಲಿಂಗಾಯತ ಜಾತಿ ಮಂತ್ರ ಪಠಿಸುತ್ತಿರುವ ಲಿಂಬಿಕಾಯಿ ಈ ಚುನಾವಣೆಗೆ ಹಾಕಿದ ಬಂಡವಾಳ ವಾಪಸ್ ಬರುವುದೇ ಖಾತ್ರಿ ಇಲ್ಲ.

ಧಾರವಾಡದ ಮುಸ್ಲಿಂ ಮತಗಳು ಕ್ರೋಢೀಕರಣಗೊಳ್ಳುತ್ತಾ ಸಾಗಿದೆ. ಯಾವುದೇ ಬಂಡಾಯದ ಬಿಸಿ ಇಲ್ಲದ ಜೆಡಿಎಸ್‌ನ ಇಸ್ಮಾಯಿಲ್ ತಮಾಟಗಾರ ಇತರರಿಗಿಂತ ಮುಂದಿದ್ದಾರೆ.

ಧಾರವಾಡ ಗ್ರಾಮೀಣ

ಕಮೀಷನ್ ಕಲೆಕ್ಷನ್ ಪ್ರಖ್ಯಾತಿಯ ಹಾಲಿ ಶಾಸಕಿ ಸೀಮಾ ಮಸೂತಿಯ ಭವಿಷ್ಯ ದಿನದಿಂದ ದಿನಕ್ಕೆ ಬಾಡುತ್ತಾ ಸಾಗಿದೆ. ಕಮೀಷನ್ ಹಣದಲ್ಲಿ ಸ್ವಲ್ಪ ಚೆಲ್ಲಿದರೂ ಸರಿಯಾದ ಬೆಳೆ ಬರುವ ಯಾವ ಲಕ್ಷಣಗಳೂ ಇಲ್ಲಿ ಕಾಣುತ್ತಿಲ್ಲ. ಅದಕ್ಕೆ ಶಿಲಾ ಶೆಟ್ಟರ್‌ಗೆ ಪೂಸಿ ಹೊಡೆದು ಹುಬ್ಬಳ್ಳಿಗೆ ಆಗಮಿಸಿದ್ದ ತಾರಾಳನ್ನು ತನ್ನ ಕ್ಷೇತ್ರಕ್ಕೆ ಕರೆ ತಂದು ತನ್ನ ತಾರಾ ವರ್ಚಸ್ಸು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅದೆಲ್ಲ ವರ್ಕ್‌ಔಟ್ ಆಗುವ ಸೂಚನೆಗಳಿಲ್ಲ.

ಇಲ್ಲಿ ಮತದಾರರು ಪದೇ ಪದೇ ತಮ್ಮ ಪ್ರತಿನಿಧಿಯನ್ನು ಬದಲಿಸುವುದರಿಂದ ಈ ಬಾರಿ ಕಾಂಗ್ರೆಸ್‌ನ ವಿನಯ ಕುಲಕರ್ಣಿಗೆ ಒಂದು ಛಾನ್ಸ್ ಕೊಟ್ಟು ಬಿಡೋದೇ ಒಳ್ಳೆಯದು ಅಂತಾ ನಿರ್ಧಾರಕ್ಕೆ ಬಂದಿದ್ದಾರೆ. ಕಾಂಗ್ರೆಸ್‌ನ ಪರ ಅಲೆಗಿಂತ ಕ್ಷೇತ್ರದಲ್ಲಿ ಬೀಸುತ್ತಿರುವ ಬದಲಾವಣೆ ಮುಖ್ಯವಾಗಿದೆ.

ಇನ್ನು ಜೆಡಿಎಸ್‌ನ ಅಮೃತ ದೇಸಾಯಿ, ಕೆಜೆಪಿಯ ತವನಪ್ಪ ಅಷ್ಟಗಿ ಇಬ್ಬರೂ ಸೇರಿ ಬಾಚಿಕೊಳ್ಳುವುದು ಕಮಲದ ಮತಗಳನ್ನೇ ಹೊರತು ಬೇರೇನೂ ಅಲ್ಲ, ಇಲ್ಲಿ ನೇರ ಸ್ಪರ್ಧೆ ಏರ್ಪಟ್ಟಿರುವದು ಕಾಂಗ್ರೆ ಹಾಗೂ ಬಿಜೆಪಿ ನಡುವೆ.

ಕಲಘಟಗಿ

'ಸಂತೋಷ್ ಲಾಡ್‌ಗೆ ಟಿಕೆಟ್ ತಪ್ಪಿತು, ನಾವು ಬಚಾವ್ ಆದೆವು' ಎಂದು ಜೆಡಿಎಸ್‌ನ ಪಿ.ಸಿ.ಸಿದ್ದನಗೌಡರ ಮತ್ತು ಕೆಜೆಪಿಯ ಸಿ.ಎಂ.ಲಿಂಬಣ್ಣವರ್ ಭಾವಿಸಿದ್ದರು. ಆದರೆ ಕೊನೆ ಕ್ಷಣದಲ್ಲಿ ಲಾಡ್‌ಗೆ ಟಿಕೆಟ್ ಸಿಕ್ಕಿರುವುದು ಇವರಿಬ್ಬರಿಗೂ ಈಗ ದೊಡ್ಡ ತಲೆನೋವಾಗಿದೆ.

ಕಳೆದ ಐದು ವರ್ಷಗಳಿಂದ ಈ ಕ್ಷೇತ್ರದಲ್ಲಿ ಲಾಡ್ ಮಾಡಿರುವ ಅಭಿವೃದ್ಧಿ ಕೆಲಸಗಳು ಮತ್ತು ತೆಗೆದುಕೊಂಡಿರುವ ಜನಪರ ನಿಲುವುಗಳ ಮುಂದೆ ಇತರರು ಸ್ಪರ್ಧಿಸುವ[...] ಕಷ್ಟವಾಗಿದೆ.


ಲಾಡ್ ಜನಪ್ರಿಯತೆಯನ್ನು ಕಂಡು ಈ ಕ್ಷೇತ್ರ[...] ಅವರ ವಿರುದ್ಧ ಯಾರಿಗೂ ಟಿಕೆಟ್ ನೀಡಲು ಹೆದ[...] ಬಿಜೆಪಿ ನಾಯಕರು ಕೊನೆಗೆ ದುರ್ಬಲ ಸರಿ[...] ಎನ್ನುವವನಿಗೆ ಟಿಕೆಟ್ ದಯಪಾಲಿಸಿದ್ದಾರೆ. ಇಲ್ಲಿ ಕೆಜೆಪಿ[...] ಸಿ.ಎಂ.ನಿಂಬಣ್ಣವರ ಹಾಗೂ ಕಾಂಗ್ರೆಸ್ ಲಾಡ್ ನ[...] ನೇರ ಹಣಾಹಣಿ ಏರ್ಪಟ್ಟಿದೆ. ಲಾಡ್ ಗೆಲ್ಲುವ ಸೂಚನೆ[...] ಕಾಣಿಸುತ್ತಿದೆ.



ಶಂಕರ್‌ಪಾಟೀಲ್



ಸೀಮಾ ಮಸೂತಿ



ಶಿವಳ್ಳಿ




ವೀರಭದ್ರಪ್ಪ ಹಾಲಹರವಿ



ವಿನಯ್‌ಕುಲಕರ್ಣಿ



ಅಬ್ಬಯ್ಯ




ಬಿಜ್ಜವಾಡ



ಕೆ.ಎನ್.ಗಡ್ಡಿ



ಮಲ್ಲಿಕಾರ್ಜುನ ಅಕ್ಕಿ



ಸಂತೋಷ್ ಲಾಡ್

ನವಲಗುಂದ

ನವಲಗುಂದ ಮತ ಕ್ಷೇತ್ರದಲ್ಲಿ ರೈತರು ಬಿಜೆಪಿ ವಿ[...] ಬಂಡಾಯವೆದ್ದಿದ್ದಾರೆ. ಇದೀ ಕ್ಷೇತ್ರದಲ್ಲಿ ರಂಗೇರಿದ್ದು ಕಾಂ[...] ನಾಯಕ ಸಿದ್ದರಾಮಯ್ಯನವರ ಆಗಮನದಿಂದ. ಕುರುಬ[...] ಹಾಗೂ ಅಹಿಂದ ಮತಗಳು ತನಗೆ ಎಂದು ಬೀಗುತ್ತಿ[...] ಕಾಂಗ್ರೆಸ್‌ನ ಕೆ.ಎನ್.ಗಡ್ಡಿ ಮನದಲ್ಲಿ ಶಾಸಕನಾಗುವ [...] ಚಿಗುರೊಡೆದಿದೆ.

ಪ್ರಾರಂಭದಲ್ಲಿ ರಣೋತ್ಸಾಹ ತೋರಿದ್ದ ಜೆಡಿ[...] ಎನ್.ಎಚ್.ಕೋನರೆಡ್ಡಿ ಅಣ್ಣಿಗೇರಿ ತಾಲ್ಲೂಕಿಗೆ ಮ[...] ಸೀಮಿತಗೊಂಡಿದ್ದಾರೆ. ರೆಡ್ಡಿ ಮತಗಳನ್ನು ಸೆಳೆಯು[...] ವಿಫಲನಾಗಿರುವ ಕೋನರೆಡ್ಡಿಗೆ ಸಾಥ್ ನೀಡಬೇಕಾದ [...] ಗುರು ಬಸವರಾಜ ಹೊರಟ್ಟಿ ರಾಜ್ಯ ಪ್ರವಾಸದಲ್ಲಿ ತೊ[...] ದ್ದಾರೆಯೇ ಹೊರತು ತನ್ನ ತವರು ಜಿಲ್ಲೆಯಲ್ಲಿ ಮ[...] ನಿರಾಸಕ್ತಿ ಹೊಂದಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಅಭ್ಯರ್ಥಿ[...] ವೈಯಕ್ತಿಕ ವರ್ಚಸ್ಸನ್ನು ಅವಲಂಬಿಸ ಬೇಕಿದೆಯೇ ಹೊ[...] ಪಕ್ಷದ ನಾಯಕರನ್ನಲ್ಲ ಎಂಬ ಸ್ಥಿತಿ ಇದೆ.

ಈ ಕ್ಷೇತ್ರದಲ್ಲಿ ಜಾತಿ ಲೆಕ್ಕಾಚಾರ ಪ್ರಾರಂಭವಾಗ[...] ಕೆ.ಎನ್.ಗಡ್ಡಿ ಕುರುಬರು ಹಾಗೂ ಕೆಲಮಟ್ಟಿಗೆ ಮ[...] ಜನಾಂಗದ ಮತಗಳಿಗೆ ಮಾತ್ರ ಸೀಮಿತವಾಗಿದ[...] ಕೋನರೆಡ್ಡಿ ರೆಡ್ಡಿ ಜನಾಂಗದ ಮತ ಬೇಟೆಗೆ ತಯಾರಾಗಿದ[...] ಈ ಮತ ವಿಭಜನೆಯಲ್ಲಿ ಹೆಚ್ಚಿನ ಮತದಾರರನ್ನು ಹೊಂ[...] ಲಿಂಗಾಯತ ಪಂಚಮಸಾಲಿ ಮತಗಳು ನಿರ್ಣಾಯಕ ಪ[...] ವಹಿಸಲಿದ್ದು ಅವುಗಳನ್ನು ಸೆಳೆಯುವಲ್ಲಿ ಹಾಲಿ ಬಿ[...] ಶಾಸಕ ಶಂಕರಪಾಟೀಲು ಮುನೇನಕೊಪ್ಪ ಯಶಸ್ವಿಯಾಗಿದ[...] ಶೆಟ್ಟರ್ ಅವರಿಗೂ ಮುನೇನಕೊಪ್ಪ ಗೆಲ್ಲುವು[...] ಮುಖ್ಯವಾಗಿದೆ. ಈ ಜಾತಿ ಸಮೀಕರಣದಲ್ಲಿ ಮುನೇನಕೊ[...] ಒಂದು ಹೆಜ್ಜೆ ಮುಂದೆ ಸಾಗಿದ್ದು ಇವನಿಗೆ ಪ್ರಬಲ ಎದು[...] ಕಾಂಗ್ರೆಸ್‌ನ ಗಡ್ಡಿ ಹೊರತು ಜೆಡಿಎಸ್‌ನ ಕೋನರೆಡ್ಡಿ ಅಲ್ಲ[...] ಅಲ್ಲ.

ಜಿಲ್ಲೆಯ ಒಟ್ಟು 7 ಮತ ಕ್ಷೇತ್ರಗಳಲ್ಲಿ ಕಾ[...] ಮುನ್ನಡೆಯಲ್ಲಿದ್ದರೆ ಬಿಜೆಪಿ ಎರಡನೇ ಸ್ಥಾನದಲ್ಲಿದ್ದು ಜೆಡಿ[...] ಈ ಬಾರಿ ಖಾತೆ ತೆರೆಯುವ ಎಲ್ಲಾ ಲಕ್ಷಣಗ[...] ಗೋಚರಿಸುತ್ತಿದೆ.


• ಹುಬ್ಬಳ್ಳಿಯಾ[...]

ಕುಂದಗೋಳ: ಜೆಡಿಎಸ್ ಅಕ್ಕಿ ಮುಂದೆ ಕೈ, ಕಮಲ, ತೆಂಗಿನಕಾಯಿ ಠುಸ್..

ಬಿಜೆಪಿಯಿಂದ ಎರಡು ಅವಧಿ ಶಾಸಕನಾಗಿ ಕುಂದಗೋಳ ಕ್ಷೇತ್ರವನ್ನು ತಿಂದು, ಕಾಮಗಾರಿಗಳನ್ನ ತಿಪ್ಪೆಸಾರಿಸಿದ ಮಾಜಿ ಶಾಸಕ ಹಾಲಿ ಕೆಜೆಪಿ ಅಭ್ಯರ್ಥಿ ...ರ್ಖ್ ಯಡ್ಡಿಯ ಬೀಗ ಎಸ್.ಐ.ಚಿಕ್ಕನಗೌಡರಿಗೆ ಈ ಬಾರಿ ಸೋಲು ನಿಶ್ಚಿತ. ಕಳೆದ ಬಾರಿ ಈತನ ಬೆನ್ನಿಗೆ ನಿಂತು ಗೆಲ್ಲಿಸಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಅಕ್ಕಿ ಈಗ ಜೆಡಿಎಸ್‌ನಿಂದ ಕಣಕ್ಕಿಳಿದು ಉಳಿದ ಅಭ್ಯರ್ಥಿಗಳಿಗೆ ...ವರು ಇಳಿಸುತ್ತಿದ್ದಾರೆ. ಹೀಗಾಗಿ ಇಲ್ಲಿ ತೆನೆಹೊತ್ತವಳು ಗೆಲುವಿಗೆ ಹತ್ತಿರವಾಗಿದ್ದಾಳೆ.

ಸ್ವತಂತ್ರವಾಗಿ ತಮ್ಮ ತಾಲೂಕಿನ ಜನರನ್ನೇ ಗೆಲ್ಲಿಸುತ್ತಾ ಬಂದಿದ್ದ ಕುಂದಗೋಳ ಕ್ಷೇತ್ರಕ್ಕೆ 2008 ರ ಚುನಾವಣೆಗೂ ಮುನ್ನ ನಡೆದ ಕ್ಷೇತ್ರ ಮರುವಿಂಗಡಣೆ ಇಲ್ಲಿಯ ಅಭ್ಯರ್ಥಿಗಳಿಗೆ ಭಾರೀ ಹೊಡೆತ ಕೊಟ್ಟಿತ್ತು. ಕಲಘಟಗಿ ತಾಲೂಕಿನ ಸುಮಾರು 32 ಗ್ರಾಮಗಳು ಈ ಕ್ಷೇತ್ರಕ್ಕೆ ಸೇರುವ ಮೂಲಕ ನೆರೆಯ ಕ್ಷೇತ್ರದ ರಾಜಕಾರಣಿಗಳನ್ನೂ ಇಲ್ಲಿಗೆ ಎಳೆದು ತಂದಿತ್ತು. ಆಗ ಕ್ಷೇತ್ರಕ್ಕೆ ಹೊಸಬರಾಗಿ ...ಲಿಟ್ಟ, ಅದಕ್ಕೂ ಮುನ್ನ ಕಲಘಟಗಿ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿದ್ದ ಚಿಕ್ಕನಗೌಡರ ಕುಂದಗೋಳ ಕ್ಷೇತ್ರದಿಂದ ಸ್ಪರ್ಧಿಸಿ ಮೂರನೇ ಬಾರಿಗೆ ಶಾಸಕರಾಗಿದ್ದರು. ಹೀಗಾಗಿ ಕುಂದಗೋಳ ತಾಲೂಕಿನ ಜನ ಯಾರನ್ನೇ ಬೆಂಬಲಿಸಿದರೂ ಕಲಘಟಗಿ ತಾಲೂಕಿನ 32 ಗ್ರಾಮಗಳ ಜನ ನಿರ್ಧರಿಸುವ ಅಭ್ಯರ್ಥಿಯೇ ಇಲ್ಲಿ ಶಾಸಕರಾಗಿ ಆಯ್ಕೆಯಾಗುವುದಂತೂ ನಿಶ್ಚಿತ.

"ನನ್ನ ತಾಲೂಕು" ಎಂದು ಹೇಳಿಕೊಂಡು ತಿರುಗಿದ್ದ ಚಿಕ್ಕನಗೌಡರ ಈ ತಾಲೂಕಿನ 32 ಗ್ರಾಮಗಳ ಸ್ಥಿತಿಯನ್ನು ದುರ್ಗತಿಗೆ ತಂದು ...ಲ್ಲಿಸಿದ್ದಾರೆ. ನಿರ್ಣಾಯಕವಾಗಿರುವ ಈ ಗ್ರಾಮಗಳಲ್ಲಿ ಸದ್ಯ ಚಿಕ್ಕನಗೌಡರ ಗಿರಕಿ ಹೊಡೆಯುತ್ತಿದ್ದಾರೆ. ಅಲ್ಲಿಯ ಜನ ಕೂಡ ನೆರೆಯ ಕುಂದಗೋಳ ತಾಲೂಕಿನ ಶಿರಗೊಪ್ಪ ಗ್ರಾಮದ ಜೆಡಿಎಸ್‌ನ ಅಕ್ಕಿಯನ್ನು ಒಪ್ಪಿಕೊಂಡಿದ್ದಾರೆ. ಕಣದಲ್ಲಿ ಉಳಿದಿರುವ 11 ಅಭ್ಯರ್ಥಿಗಳಲ್ಲಿ ಅಕ್ಕಿನೇ ಲೇಸು ಎಂಬ ವಾತಾವರಣ ಇಲ್ಲಿ ...ಟ್ಟವಾಗಿದೆ. ಜಾತಿ ಲೆಕ್ಕಾಚಾರ ಮತ್ತು ಅಭ್ಯರ್ಥಿಗಳ ರಾಜಕೀಯ ...ಡನಾಟವನ್ನು ಹೆಕ್ಕಿ ನೋಡಿದರೆ ಈ ಬಾರಿ ಕುಂದಗೋಳ ಕ್ಷೇತ್ರದಲ್ಲಿ ಅಕ್ಕಿನೇ ಲಕ್ಕಿ ಎಂಬಂತಾಗಿದೆ.



ಚಿಕ್ಕನಗೌಡ


ಚಿಕ್ಕನಗೌಡರ ಚೊಕ್ಕಾದ

ಅಕ್ರಮ ಕಲ್ಲುಗಣಿಗಾರಿಕೆಯಿಂದ ಗಳಿಸಿದ ಹಣದೊಂದಿಗೆ ರಾಜಕಾರಣಕ್ಕೆ ಎಂಟ್ರಿ ಕೊಟ್ಟಿದ್ದ ಚಿಕ್ಕನಗೌಡರ ಕಲಘಟಗಿ ಕ್ಷೇತ್ರದಲ್ಲಿ ಆತನ ...ಮಾವ ಮಾಜಿ ಸಚಿವ ಪಿ.ಸಿ.ಸಿದ್ದನಗೌಡರ ವಿರುದ್ಧ ಇದ್ದ ಅಲೆಯಿಂದಾಗಿ ವಿಧಾನ ಸಭೆಗೆ ಗೆದ್ದಿದ್ದರು.

ಮೊದಲ ಅವಧಿಗೆ ಶಾಸಕರಾದಾಗಲೇ 'ದುಂಡ'ಗಾದ ಈ ಎಲೆ ಅಡಿಕೆ ...ಡ ಹೇಳಿಕೊಳ್ಳುವಂತಹ ಒಂದೇ ಒಂದು ಕ್ಷೇತ್ರ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಕಾಂಗ್ರೆಸ್ಸಿನ ಸಂತೋಷ್ ಲಾಡ್ ಕಲಘಟಗಿಗೆ ಎಂಟ್ರಿಕೊಟ್ಟ ಜನರಿಗೆ ಹತ್ತಿರವಾಗುತ್ತಿದ್ದಂತೆ ತನಗೆ ಸೋಲು ಗ್ಯಾರಂಟಿ ಎಂದು ಅರಿತ ಚಿಕ್ಕನಗೌಡರಿಗೆ ಕ್ಷೇತ್ರ ಮರುವಿಂಗಡಣೆ ಮರುಜನ್ಮ ನೀಡಿತ್ತು. ಚಿಕ್ಕನಗೌಡರ ಬದಲಾವಣೆಯನ್ನು ತರಬಹುದು ಎಂದು ನಿರೀಕ್ಷೆಯಲ್ಲಿ ಗೆಲ್ಲಿಸಿದ್ದ ಕುಂದಗೋಳ ಕ್ಷೇತ್ರದ ಜನರಿಗೆ ಈ ಚಿಕ್ಕನಗೌಡರ ಭಾರೀ ನಿರಾಶೆ ಮಾಡಿದ್ದರು. ಅಭಿವೃದ್ಧಿ ಎಂಬುದು ಕ್ಷೇತ್ರಕ್ಕಲ್ಲಾ, ತನಗೆ ಎಂದೇ ನಂಬಿರುವ ಚಿಕ್ಕನಗೌಡರ ಕಳೆದ ಐದು ವರ್ಷಗಳ ಕಾಲ ಇಡೀ ಕ್ಷೇತ್ರವನ್ನು ಹುರಿದುಮುಕ್ಕಿದ್ದರು.

ಪರಸೆಂಟೇಜ್ ಫಿಕ್ಸ್ ಮಾಡಿಕೊಂಡು ಕಾಮಗಾರಿಗಳ ಗುತ್ತಿಗೆ ನೀಡುವ ಚಿಕ್ಕನಗೌಡರ ತಮ್ಮ ಪಾಲಿನ ಹಣ ಬಂದನಂತರವೇ ಕೆಲಸಕ್ಕೆ ಶಂಕುಸ್ಥಾಪನೆ ಮಾಡುವ ಸಿದ್ಧಾಂತವನ್ನು ಕಳೆದ ನಾಲ್ಕು ವರ್ಷಗಳಿಂದ ನಿಯತ್ತಾಗಿ ಪಾಲಿಸಿಕೊಂಡು ಬಂದಿದ್ದಾರೆ. ಇವರ ಅಧಿಕಾರದ ಅವಧಿಯಲ್ಲಿ ಅಧಿಕಾರಿಗಳ ವರ್ಗಾವಣೆ, ಪೊಲೀಸ್ ಹಫ್ತಾ ವಸೂಲಿ, ಜೂಜು ಮಾಂಸದಡ್ಡೆಗಳಿಂದ ಮಾಮೂಲಿ ಕ್ಷೇತ್ರದಲ್ಲಿ ಸಹಜವಾಗಿ ಹೋಯಿತು. ಸ್ವತಃ ಶಾಸಕ ಚಿಕ್ಕನಗೌಡರ ಸಹೋದರನ ಹೆಸರಲ್ಲಿ ಒಂದು ಎಕರೆಗೆ ಕಲ್ಲು ಗಣಿಗಾರಿಕೆ ಪರವಾನಗಿ ಇದ್ದರೂ ಅನಾಮತ್ತು ಐದು ಎಕರೆಯಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆಯನ್ನು ಬಿಂದಾಸಾಗಿ ನಡೆಸಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹತ್ತಾರು ಕೋಟಿ ನಷ್ಟವಾದರೂ ಸರ್ಕಾರದ ಯಾವೊಬ್ಬ ಅಧಿಕಾರಿ ಇತ್ತ ಗಮನಹರಿಸದಂತೆ ನೋಡಿಕೊಳ್ಳಲಾಗಿದೆ.

ಇತ್ತೀಚೆಗೆ ಕಮಲಕ್ಕೆ ಕೈಕೊಟ್ಟು ಬೀಗ ಯಡ್ಡಿಯ ಕೆಜೆಪಿ ಸೇರಿರುವ ಚಿಕ್ಕನಗೌಡರ ಕ್ಷೇತ್ರದ ದುಸ್ಥಿತಿಗೆ ಯಾರ ವಿರುದ್ಧ ಆರೋಪ ಮಾಡಬೇಕು ಎಂಬ ಗೊಂದಲಕ್ಕೆ ಬಿದ್ದಿದ್ದಾರೆ. ಅಷ್ಟೇ ಅಲ್ಲ, ಈತ ಹೋದಲ್ಲೆಲ್ಲಾ ಹಣ ಕೊಟ್ಟು ಓಟು ಖರೀದಿಸುವ ರಾಜಕಾರಣಕ್ಕೆ ನಾಂದಿ ಹಾಡಿದ್ದಾರೆ.



ಎಂ.ಎಸ್.ಅಕ್ಕಿ

ಶಿವಳ್ಳಿಯ ಡ್ರಾಮಾ ಠುಸ್..

1998 ರಲ್ಲಿ ಪಕ್ಷೇತರರಾಗಿ ವಿಧಾನಸಭೆಯ ಅಖಾಡಕ್ಕಿಳಿದಿದ್ದ ಮಾಜಿ ಶಾಸಕ ಸಿ.ಎಸ್.ಶಿವಳ್ಳಿ ಆಗ ಬರಗಾಲದ ಫಕೀರ. ಅಂದು ಬಗಲಿಗೊಂದು ಜೋಳಿಗೆ ಹಾಕಿಕೊಂಡು 'ಚುನಾವಣೆಗಾಗಿ ನೋಟು ಕೊಡಿ ನನಗೊಂದು ಓಟು ಕೊಡಿ' ಎಂಬ ಡೈಲಾಗ್‌ನೊಂದಿಗೆ ಕುಂದಗೋಳ ಕ್ಷೇತ್ರದ ಮತದಾರರ ಮನ ಕರಗಿಸಿ ಗೆದ್ದು ಬಂದಿದ್ದರು ಶಿವಳ್ಳಿ.

ಅವರನ್ನು ಅಂದು ಗೆಲ್ಲಿಸುವ ಮೂಲಕ ಈ ಕ್ಷೇತ್ರ ಹಿಂದುಳಿದ ವರ್ಗದ ಬಡಕುಟುಂಬದ ಯುವಕನಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದು ಐತಿಹಾಸಿಕವಾಗಿತ್ತು. ಆದರೆ ಗೆದ್ದು ಶಾಸಕರಾಗಿ ವಿಧಾನಸೌಧದ ಮೆಟ್ಟಿಲೇರಿದ ಮರುಕ್ಷಣವೇ ಶಿವಳ್ಳಿ ಸಾಹೇಬರು ಭರ್ತಿ ಐದು ವರ್ಷಗಳ ಕಾಲ ಸರ್ಕಾರದ ಒಂದು ಯೋಜನೆಗಳನ್ನೂ ಬಿಡದೆ ಹೆಕ್ಕಿ ಮುಕ್ಕಿದರು. ಬರಗಾಲ ಕಾಮಗಾರಿಯಂತೂ ಶಿವಳ್ಳಿಯ ಬರ ಹರಿಯಿತೆ ಹೊರತು ಕ್ಷೇತ್ರದ ಬಡ ಕೂಲಿ ಕಾರ್ಮಿಕರ ಮನೆಗೆ ಕೆ.ಜಿ. ಅಕ್ಕಿಯನ್ನೂ ನೀಡಲಿಲ್ಲ.

ಈ ಕಾರಣಕ್ಕೇ ಆನಂತರದಲ್ಲಿ ಶಿವಳ್ಳಿ ಕಾಂಗ್ರೆಸ್ಸಿನಿಂದ ಸತತವಾಗಿ ಸ್ಪರ್ಧಿಸಿದರೂ ಸೋಲುಂಡಿದ್ದರು. ತಾನು ಬಡವ ಎಂದು ಶಿವಳ್ಳಿ ಜನರ ಮತ ಕೇಳಲು ಸಾಧ್ಯವಿಲ್ಲ. ಶ್ರೀಮಂತ ಶಿವಳ್ಳಿಗೆ ಇಲ್ಲಿಯ ಜನ ಓಟು ಹಾಕಲು ಸಿದ್ಧರಿಲ್ಲ.

ಚಿಕ್ಕನಗೌಡರ ಪರಾರಿ ಆದನಂತರ ಖಾಲಿ ತಟ್ಟೆಯಾಗಿದ್ದ ಬಿಜೆಪಿ ಪರವಾಗಿ ಎಂ.ಆರ್.ಪಾಟೀಲ ಸ್ಪರ್ಧೆಗಿಳಿದಿದ್ದಾರೆ. ಆದರೆ ಬಹುತೇಕ ಜನ ಚಿಕ್ಕನಗೌಡರ ಹಿಂದೆ ಕಾಲ್ಕಿತ್ತಿದ್ದರಿಂದ ಸದ್ಯ ಕಮಲ ಪಾರ್ಟಿಯಲ್ಲಿ ಚಡ್ಡಿ ತೊಟ್ಟು ಕೆಲಸ ಮಾಡಲು ಯಾರೂ ಇಲ್ಲ. ಪಾಟೀಲರಿಗೆ ಅವರ ಜಾತಿಯ ಓಟುಗಳು ನೆರವಾಗಲಿವೆ ಎಂಬ ಧೈರ್ಯ ಇದೆಯಾದರೂ ಠೇವಣಿ ಉಳಿಸಿಕೊಳ್ಳುವುದೂ ಕಷ್ಟ.

ಇನ್ನು ಬಿಎಸ್‌ಆರ್ ಅಭ್ಯರ್ಥಿಯಾಗುವ ಭರಾಟೆಯಲ್ಲಿ ಕಳೆದಾರು ತಿಂಗಳಿಂದ ಹಾರಾಡಿದ್ದ ಗುಡಗೇರಿಯ ಶಿವಾನಂದ ಬೆಂತೂರಿಗೆ ಫ್ಯಾನಿನ ಗಾಳಿ ಆಗಿ ಬರಲಿಲ್ಲ. ಕೊನೆಗೆ ಬಿಎಸ್‌ಆರ್ ಟಿಕೆಟ್ ವಿರುಪಾಕ್ಷಪ್ಪ ಕಳ್ಳಿಮನಿ ಪಾಲಾದಾಗ ಆ ಪಕ್ಷವನ್ನು ತೊರೆದ ಬೆಂತೂರ ಈ ಹಿಂದೆ ತಾನೇ ಹಾದುಹಗಲೇ ಬೈದುಕೊಂಡು ತಿರುಗುತ್ತಿದ್ದ ಚಿಕ್ಕನಗೌಡರೊಂದಿಗೆ ಡೀಲ್ ಕುದುರಿಸಿಕೊಂಡು ಈಗ ಅವರ ಬಗಲಲ್ಲಿ ನಿಂತಿದ್ದಾನೆ.

ಶಾಸಕರಾಗಿದ್ದ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಹಾಗೂ ಜನರೊಂದಿಗಿದ್ದ ನಿಕಟಸಂಪರ್ಕ ಮಲ್ಲಿಕಾರ್ಜುನ ಅಕ್ಕಿಯನ್ನು ಕಳೆದಬಾರಿಯೂ ಯಾವ ಪಕ್ಷದಿಂದ ಸ್ಪರ್ಧಿಸಿದ್ದರೂ ಗೆಲ್ಲಿಸುತ್ತಿದ್ದವು. ಆದರೆ ಆಗ ಅವರು ಬಿಜೆಪಿ ಸೇರಿ, ಯಡ್ಡಿಯ ಮಾತು ನಂಬಿ ಚಿಕ್ಕನಗೌಡರಿಗೆ ಬೆಂಬಲವಾಗಿ ನಿಂತು ಗೆಲ್ಲಿಸಿದ್ದರು. ಆದರೆ ಈ ಬಾರಿ ಅಕ್ಕಿ ಅದೇ ಚಿಕ್ಕನಗೌಡರಿಗೆ ಪಕ್ಕಾ ಎದುರಾಳಿಯಾಗಿದ್ದಾರೆ.

ಇಲ್ಲಿ ತ್ರಿಕೋನ ಸ್ಪರ್ಧೆ ಏರ್ಪಡುವ ಲಕ್ಷಣಗಳಿದ್ದರೂ, ಅಂತಿಮವಾಗಿ ಭ್ರಷ್ಟ ಚಿಕ್ಕನಗೌಡರ ಹಾಗು ಅಕ್ಕಿಯ ಮಧ್ಯೆ ಏರ್ಪಡುವುದಂತೂ ನಿಶ್ಚಿತ. ಕೆಂಪಾದ ಮೆಣಸಿನಕಾಯಿಯನ್ನು ಬೆಳೆಯುವ ಇಲ್ಲಿಯ ರೈತರು ಅದೆಷ್ಟು ರಂಗಾಗಿ ಯಾರತ್ತ ವಾಲುತ್ತಾರೆ ಎಂದು ಹೇಳುವುದು ಕಷ್ಟವಾದರೂ ಸದ್ಯ ತೆನೆ ಹೊತ್ತ ಮಹಿಳೆ ಚುನಾವಣಾ ಕಣದಲ್ಲಿರುವ ಇತರರಿಗಿಂತ ಮುಂದೆ ಸಾಗುತ್ತಿದ್ದಾಳೆ ಎಂಬುದಂತೂ ಸ್ಪಷ್ಟ.

● ವಿನಯ್

ಗದಗ: ಎಚ್.ಕೆ.ಪಾಟೀಲ್ ವಿರುದ್ಧ ಮಕಾಡೆ ಮಲಗಲಿದ್ದಾನೆ ಶ್ರೀರಾಮುಲು ಶಿಷ್ಯ!


ಬಡಾಯಿ... ಬಡಾಯಿ... ಬಡಾಯಿ....! ಇದು ಶ್ರೀರಾಮುಲು ಕಟ್ಟಿದ 'ಬಡವರ ಶ್ರಮಿಕರ ರೈತರ ಕಾಂಗ್ರೆಸ್' ಎಂಬ ಪಕ್ಷದ ಒನ್‌ಲೈನ್ ಅಜೆಂಡಾ. ಹೌದು.. ಅದಕ್ಕೆ ತಕ್ಕಂತಹ ಓರ್ವ ಅಭ್ಯರ್ಥಿಯನ್ನು ಗದಗ ಕ್ಷೇತ್ರಕ್ಕೆ ನಿಲ್ಲಿಸಿ ಗಣಿಕಳ್ಳರ ಗ್ಯಾಂಗಿನ ಶ್ರೀರಾಮುಲು ಕೃತಾರ್ಥನಾಗಿದ್ದಾರೆ. ಕಾಂಗ್ರೆಸ್‌ನಿಂದ ಹೊರದಬ್ಬಿಸಿಕೊಂಡಿದ್ದ ಕುಂಟೆಬಿಲ್ಲೆ ಅನಿಲ ಮೆಣಸಿನಕಾಯಿಯ ಫ್ಯಾನು ತಿರುಗುವ ಮುನ್ನವೇ ತುಕ್ಕು ಹಿಡಿದಿದೆ. ಕ್ಷೇತ್ರದಲ್ಲಿ ಈತನಿಗೆ ಮತ ಹಾಕುವ ಜನರಿಗಿಂತ ಈತ ನೌಕರಿ ಕೊಡಿಸುವುದಾಗಿ ಹೇಳಿ ...ತ್ತಿರುವ ಹಣವನ್ನು ವಾಪಸ್ ಕೊಡು ಎಂದು ಈತನ ಬೆನ್ನು ಹತ್ತಿರುವ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ!



ಎಚ್.ಕೆ.ಪಾಟೀಲ್



ಎಸ್.ಬಿ.ಸಂಕಣ್ಣನವರ್



ಶ್ರೀಶೈಲಪ್ಪ ಬಿದರೂರು



ಅನಿಲ್ ಮೆಣಸಿನಕಾಯಿ

ಹೋದ ಸಾರಿಯ ಚುನಾವಣೆಯಲ್ಲಿ ಇಲ್ಲಿ ಶ್ರೀರಾಮುಲು ಹವಾ ಮತ್ತು ಬಿಜೆಪಿ ಪರ ಲಿಂಗಾಯತರು ...ದ್ದಿದ್ದರಿಂದ ಆಗ ಹೆಸರಿಗಿಲ್ಲದಿದ್ದ ಬಿಜೆಪಿಯ ಶ್ರೀಶೈಲಪ್ಪ ಬಿದರೂರ ಎಂಬ ಅಬ್ಬೆಪಾರಿಯನ್ನು ಇಲ್ಲಿನ ಜನ ಗೆಲ್ಲಿಸಿದ್ದರು. ...ಳೆದ ಐದು ವರ್ಷಗಳಲ್ಲಿ ಕ್ಷೇತ್ರದ ಅಭಿವೃದ್ಧಿಗಾಗಿ ಬಂದಿದ್ದ ...ನುದಾನದಲ್ಲಿ ಬಿದರೂರ ಮುಕ್ಕಾಲು ಭಾಗ ತಿಂದು ...ಗಿದ್ದಾರೆ. ಆದರೆ ಈ ಬಾರಿ ಆ ಯಾವ ಅಂಶಗಳೂ ...ರ್ಕೌಟ್ ಆಗಲ್ಲ, ಯಾಕೆಂದರೆ-ಈಗ ಬಿದರೂರ ಪರವಾಗಿ ಶ್ರೀರಾಮುಲುನೂ ಇಲ್ಲ, ಓಟು ಹಾಕುವ ಲಿಂಗಾಯತರೂ ಇಲ್ಲ.

ಮೆಣಸಿನಕಾಯಿಯ ಫ್ಯಾನು ತಿರಗಲ್ಲ

ಸದಾ ಒಂದಿಲ್ಲೊಂದು ಭಾನಗಡಿ ಮಾಡುತ್ತಾ ...ಚಾರದಲ್ಲಿರುತ್ತಿದ್ದ ಅನಿಲ ಮೆಣಸಿನಕಾಯಿಯ ಇತಿಹಾಸವೇ ವಿವಾದಗ್ರಸ್ತವಾದದ್ದು. ಈತ ತನ್ನೆಲ್ಲ ದಂಧೆಗಳ ರಕ್ಷಣೆಗಾಗಿ ರಾಜಕಾರಣವನ್ನು ಪ್ರವೇಶಿಸಿರುವವನು. ಜನರನ್ನ ಯಾಮಾರಿಸಿ ಹಣ ಗಳಿಸುವ ಬಗೆಯನ್ನ ಈತನಿಂದ ತಿಳಿದುಕೊಳ್ಳಬೇಕು. ...ಸ್ಪರ್ಧಮಟ್ಟಿಗೆ ಪಂಗನಾಮ ಹಾಕುವುದರಲ್ಲಿ ಈತ ಪ್ರವೀಣ.

ಕ್ಷೇತ್ರದ ತುಂಬ ಸುಳ್ಳಿನ ಸರಮಾಲೆಯನ್ನೇ ಹೇಳುತ್ತ ...ಗಿರುವ ಈ ಮೆಣಸಿನಕಾಯಿ ಗೆದ್ದರೆ ಈ ಕ್ಷೇತ್ರ ಅಭಿವೃದ್ಧಿ ಹೊಂದುವ ಬದಲಾಗಿ ಇಲ್ಲಿನ ಜನ ಮತ್ತದೇ ಕುಂಟೆಬಿಲ್ಲೆ, ಲಗೋರಿ, ಕ್ರಿಕೆಟ್ ಆಟಗಳ ಜೊತೆಗೆ ರಂಗೋಲಿ ಸ್ಪರ್ಧೆಗಳನ್ನು ನೋಡಬೇಕಾಗುತ್ತದೆ ಎಂಬ ಜೋಕ್ ಚಾಲ್ತಿಗೆ ಬಂದಿದೆ.

ಪ್ರಚಾರಕ್ಕಾಗಿ ಏನು ಬೇಕಾದರೂ ಮಾಡುವ ಮೆಣಸಿನಕಾಯಿ ಜೆಸಿಎಲ್ ಎಂಬ ದಿಕ್ಕುದೆಸೆ ಇಲ್ಲದ ಕ್ರಿಕೆಟ್ ಆಟವನ್ನು ಶುರು ಮಾಡಿ, ಅದಕ್ಕೆಂದು ಹಣ ಕೊಟ್ಟು ಸಿನಿಮಾ ರಂಗದವರನ್ನು ಗದಗಿಗೆ ಕರೆಸಿದ್ದ. ಈತ ಹೇಳಿಕೊಳ್ಳುವಂತಹ ಒಂದೇ ಒಂದು ಘನಂದಾರಿ ಕಾರ್ಯಗಳನ್ನು ಮಾಡಿಲ್ಲ. ಈ ಕಾರಣಕ್ಕೇ ಈತನ ಪರ ಪ್ರಚಾರಕ್ಕೆ ಬಂದಿದ್ದ ಶ್ರೀರಾಮುಲುವಿಗೂ ಇಲ್ಲಿ ಮೆಣಸಿನಕಾಯಿಯ ಗಾಳಿ ಬೀಸದ ಫ್ಯಾನ್ ಕಂಡು ಇಲ್ಲಿಂದ ಕಾಲ್ಕಿತ್ತಿದ್ದರು. ಹೀಗಾಗಿ ಹತಾಶನಾಗಿರುವ ಮೆಣಸಿನಕಾಯಿ ಗೆಲ್ಲುವ ಕುದುರೆ ಕಾಂಗ್ರೆಸ್‌ನ ಹೆಚ್.ಕೆ.ಪಾಟೀಲ್ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ, ಸುಳ್ಳು ಕೇಸು ದಾಖಲಿಸಿ ಅದೇ ತನ್ನ ಸಾಧನೆ ಎನ್ನುತ್ತಿದ್ದಾನೆ.

ಎಚ್.ಕೆ. ಪರ ಜನತೆ

ರಾಜ್ಯ ರಾಜಕಾರಣ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಹೆಸರು ಮಾಡಿರುವ ಎಚ್.ಕೆ.ಪಾಟೀಲರನ್ನು ಇಲ್ಲಿನ ಜನ ಕಳೆದ ಎರಡು ಬಾರಿ ಸೋಲಿಸಿದ್ದರು. ಆದರೆ ಈ ಸಲ ಆ ತಪ್ಪನ್ನು ಮಾಡಲು ಜನ ಸಿದ್ಧರಿಲ್ಲ.

ಜನ ತಮ್ಮನ್ನು ಸೋಲಿಸಿದ್ದರೂ ಪಾಟೀಲರು ಜನರಿಂದ ದೂರ ಆಗಲಿಲ್ಲ. ಬದಲಾಗಿ ಬಿಜೆಪಿ ಸರ್ಕಾರದಿಂದ ಜನಸಾಮಾನ್ಯರಿಗೆ ಅನ್ಯಾಯವಾದಾಗ ಪ್ರತಿಭಟಿಸಿದರು. ಸದಾ ಒಂದಿಲ್ಲೊಂದು ಹೋರಾಟದಲ್ಲಿ ತೊಡಗುವ ಮೂಲಕ ಜನರಿಗೆ ಹತ್ತಿರವಾದರು. ಎಲ್ಲಕ್ಕಿಂತ ಮುಖ್ಯವಾಗಿ ಸಹಕಾರಿ ತತ್ವದಡಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಗದಗ ಕ್ಷೇತ್ರದಲ್ಲಿ ಮಾತ್ರವಲ್ಲದೆ ಇಡೀ ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪಿಸುವ ಮೂಲಕ ತಮ್ಮ ಜನಪರ ಕಾಳಜಿಯನ್ನು ತೋರಿದರು.

ಈ ಭಾಗದಲ್ಲಿ ಸತತ ಸೋಲು ಕಂಡ ಕಾಂಗ್ರೆಸ್ ಮುಖಂಡರೆಲ್ಲ ಚುನಾವಣೆಯ ನಂತರ ಸೈಡಾಗಿದ್ದರೆ ಪಾಟೀಲರು ಎಂದೂ ಅಂತಹ ಕೆಲಸ ಮಾಡಿದವರಲ್ಲ. ಈ ಕಾರಣಕ್ಕಾಗಿಯೇ ಇತ್ತೀಚೆಗೆ ಜರುಗಿದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗದಗ ನಗರಸಭೆಯಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆಯಿತು. ಹಾಗೆ ಮಾಡುವ ಮೂಲಕ ಇಲ್ಲಿ ಮೆರೆಯುತ್ತಿದ್ದ ಬಿಎಸ್‌ಆರ್ ಪಕ್ಷದ ಶ್ರೀರಾಮುಲು ಮತ್ತವರ ಚೇಲಾಗಳಿಗೆ ಬಿಸಿ ತಾಗಿಸಿದ್ದರು.

ಇದು ಪಾಟೀಲರ ಮೊದಲ ಗೆಲುವಾದರೆ ಎರಡನೇ ಗೆಲುವು ಮೇ 8 ರಂದು ಘೋಷಣೆಯಾಗುವುದು ನಿಶ್ಚಿತ ಎಂಬ ವಾತಾವರಣ ಕ್ಷೇತ್ರದ ಎಲ್ಲೆಡೆ ಕಾಣಿಸುತ್ತಿದೆ.

ಬಿದರೂರ ಊರಿಗೆ

ಬಿದರೂರ ಶಾಸಕರಾಗಿ ಕ್ಷೇತ್ರಕ್ಕೆ ಕಡಿದು ಗುಡ್ಡೆಹಾಕಿದ್ದೇನೂ ಇಲ್ಲ. ಗದಗ ಅಭಿವೃದ್ಧಿಯಂತೂ ಯಾವುದೇ ಮೂಲೆಯಿಂದಲೂ ಆಗಲಿಲ್ಲ. ಶ್ರೀರಾಮುಲು ಕಟಾಕ್ಷ ಹಾಗೂ ಯಡಿಯೂರಪ್ಪನವರ ಗಾಳಿ ಇವರನ್ನು ಶಾಸಕರನ್ನಾಗಿಸಿತ್ತು. ಆದರೀಗ ಜನರ ಮನದಲ್ಲಿ ಈತ ಅಕ್ಷರಶಃ ಉಳಿದಿಲ್ಲ. ಅತ್ತ ಕೆಜೆಪಿಗೂ ಹೋಗದೆ ಇತ್ತ ಬಿಜೆಪಿಯಲ್ಲೂ ಇರದೆ ಹೊರಳಾಡುತ್ತಿದ್ದ ಬಿದರೂರ ತಾವು ಯಾವ ಪಕ್ಷದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಗೆಲ್ಲುತ್ತೇನೆ ಎಂಬುದಕ್ಕಿಂತ ಎಲ್ಲಿಂದ ನಿಂತರೆ ಠೇವಣಿ ಉಳಿಯುತ್ತೆ ಎಂಬ ಲೆಕ್ಕಾಚಾರ ಮಾಡಿದ್ದೇ ಹೆಚ್ಚು. ಹೀಗಾಗಿ ಜನ ಈತನನ್ನ ನಂಬುವುದಕ್ಕಿಂತ ಈತ ಸೋತ ನಂತರ ಮುಂದೆ ಯಾರನ್ನು ನಂಬಿ ಯಾವ ಪಕ್ಷಕ್ಕೆ ಹಾರಿಹೋಗುತ್ತಾರೆ ಎಂದೇ ಚರ್ಚೆ ಮಾಡುತ್ತಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಗದಗ ಕ್ಷೇತ್ರವನ್ನು ಆಳಿದ ಬಿಜೆಪಿಯ ಚಡ್ಡಿಗಳು ಇಲ್ಲಿ ಅಭಿವೃದ್ಧಿ ಮಾಡಿದ್ದಕ್ಕಿಂತ ಬಾಯಿ ಬಡಿದುಕೊಂಡಿದ್ದೇ ಜಾಸ್ತಿ. ಅದು ಈಗ ಮತದಾರರಿಗೆ ಅರ್ಥವಾಗಿದೆ. ಬಿಎಸ್‌ಆರ್‌ನ ಶ್ರೀರಾಮುಲು ಈಗ ಇಲ್ಲಿ ಡಮ್ಮಿ. ಆತನ ಕ್ಯಾಂಡಿಡೇಟು ಕೂಡ ದುಪ್ಪಟ್ಟು ಡಮ್ಮಿ.

ಕೆಸಿಸಿ ಬ್ಯಾಂಕನ್ನು ಒಂದೇ ಅವಧಿಯಲ್ಲಿ ನುಂಗಿ ನೀರು ಕುಡಿದಿದ್ದ ಕೆಜೆಪಿಯ ಎಸ್.ಪಿ.ಸಂಕಣ್ಣನವರ ಯಡ್ಡಿಯ ಕಾರಣಕ್ಕೆ ಗೆಲ್ಲುತ್ತೇನೆ ಎಂದು ಭಾವಿಸಿದ್ದರು. ಆದರೀಗ ಇಲ್ಲಿ ಯಡ್ಡಿಯ ಆಟ ನಡೆಯದಿದ್ದನ್ನು ಕಂಡು ಬಿಸಿಲಲ್ಲಿ ತಿರುಗಾಡದೆ ಗೂಡು ಸೇರಿದ್ದಾರೆ. ಜೆಡಿಎಸ್‌ನ ಅಂದಾನಯ್ಯ ಕುರ್ತುಕೋಟಿ ಸೇರಿದಂತೆ ಉಳಿದ ಅಭ್ಯರ್ಥಿಗಳು ಕಾಂಗ್ರೆಸ್‌ನ ಹೆಚ್.ಕೆ. ಪಾಟೀಲರ ಪ್ರಭಾವದ ಮುಂದೆ ಪವರ್‌ಲೆಸ್ ಆಗಿದ್ದಾರೆ.

● ಹುರಳಿಕುಪ್ಪಿ ವಿನಯ್



ಶಿಕ್ಷಣಕ್ಷೇತ್ರದಲ್ಲಿ ರಿಟೈರಿ ಅಧಿಕಾರಿಗಳ ಮೇಜುವಾನಿತನ!

ಮುದಿತನ ಮತ್ತು ಅಧಿಕಾರಶಾಹಿತನ ಮೇಳೈಸಿದಾಗ ಹೇಗಿರುತ್ತದೆ? ಈ ಅಧಿಕಾರಿಶಾಹಿಗಳನ್ನು ಸದ್ಯಕ್ಕೆ ಮೇಜುವಾನಿಗಳೆಂದು ಕರೆಯೋಣ. ಯಾಕೆಂದರೆ ಅಧಿಕಾರಿಶಾಹಿತನಕ್ಕೆ ಡೆಸ್ಕ್ ವರ್ಕ್ (ಮೇಜುಗೆಲಸ) ಮೇಲೆ ಅತಿಯಾದ ಮೋಹ. ಪ್ರಾಪರ್ ಚಾನೆಲ್ಲು, ಪೇಪರ್ ವರ್ಕು, ಪ್ರೊಸೀಜರು ಮುಂತಾದ ಪದಗಳು ಅವರ ನಿತ್ಯ ಮಂತ್ರ. ಈ ಮೇಜುವಾನಿತನದ ಹೃದಯಹೀನತೆಯ ಬಗ್ಗೆ ಜೋಸೆ ಸಾರಮಾಗೊ ಬರೆದ `Blindness' ಕೃತಿಯಲ್ಲಿ ಒಂದು ನಿದರ್ಶನವಿದೆ:

'ಆಫೀಸಿಗೆ ಸಂಬಂಧಪಟ್ಟ ಅಷ್ಟು ವಿಷಯಗಳನ್ನು ಹಾಗೆಲ್ಲಾ ಫೋನಿನಲ್ಲಿ ವಿವರಿಸಲಾಗುವುದಿಲ್ಲ, ನೀವಿಲ್ಲಿ ಬಂದು ನನ್ನನ್ನು ಕಾಣಿ, ಆಮೇಲೆ ನೋಡೋಣ.'

'ಇಲ್ಲ ಸಾರ್, ನನಗೆ ಮನೆ ಬಿಡಲಾಗುವುದಿಲ್ಲ.'

'ಅಂದರೆ, ನಿಮಗೇನು ಕಾಯಿಲೆಯೆ?'

ಸ್ವಲ್ಪ ಸಮಯದ ನಂತರ ಕುರುಡ ನಿಧಾನವಾಗಿ ಹೇಳಿದ, 'ಹೌದು ಸರ್, ನನ್ನದೊಂದು ರೀತಿಯ ಕಾಯಿಲೆಯೇ.'

'ಸರಿ, ಕಾಯಿಲೆಯಿದ್ದರೆ ವೈದ್ಯರನ್ನು ಕಾಣಿ, ಆಮೇಲೆ ನೋಡೋಣ,' ಮೇಜುವಾನಿ ತನ್ನ ಖಡಕ್ ಉತ್ತರಕ್ಕೆ ಬೇಗಿ ತಾನೇ ಬೆನ್ನು ತಟ್ಟಿಕೊಳ್ಳುವ ರೀತಿಯಲ್ಲಿ ಫೋನನ್ನು ಟಪ್ಪೆಂದು ಇಟ್ಟ.

ತುಂಬ ಹೊತ್ತಿನ ನಂತರ ಸುಧಾರಿಸಿಕೊಂಡ ಮೇಲೆ ಕುರುಡ ತನ್ನ ಹೆಂಡತಿಗೆ ಸತ್ಯ ಹೊಳೆದವನಂತೆ ಹೇಳಿದ:


'ಇದೇ ನೋಡು, ನಾವು ಮತ್ತು ನಮ್ಮ ವ್ಯವಸ್ಥೆ... ಅರ್ಧಭಾಗ ಅಸಡ್ಡೆ, ಇನ್ನರ್ಧ ಭಾಗ ಕೇಡಿಗಬುದ್ಧಿ!'

ಕಾರ್ಯಶೀಲತೆ ಮತ್ತು ಮೇಜುಗೆಲಸಗಳು ಉಲ್ಟಾ ಸಂಬಂಧಿಗಳು. ಮೇಜಿನ ಮೇಲೆ ಒಟ್ಟಿರುವ ಫೈಲುಗಳ ಹಿಂದೆ ಜಡ್ಡುಬಿದ್ದ ಮನಸ್ಸುಗಳು ಆಕಳಿಸುತ್ತಲೇ ಮುದಿತನಕ್ಕೆ ಜಾರುತ್ತಿರುತ್ತವೆ. ರಾಷ್ಟ್ರವನ್ನು ರೂಪಿಸುವ ಜವಾಬ್ದಾರಿ ಹೊತ್ತ ಶಿಕ್ಷಣಕ್ಷೇತ್ರದಲ್ಲಿ ಶಿಕ್ಷಕರನ್ನೇ ಅಧಿಕಾರಿಗಳಾಗಿ ಮಾಡಿದರೂ ಸಹ ಅವರು ಬರೀ ಮೇಜುವಾನಿಗಳಾಗಿ ಮೆರೆಯುತ್ತಾ ಅಧಿಕಾರದ ರುಚಿ ಉಂಡು ರಿಟೈರಾದ ಮೇಲೂ ಅನುಭವಸ್ಥಿಕೆಯನ್ನೇ ಬಂಡವಾಳವಾಗಿ ಮಾಡಿಕೊಂಡು ಖಾಸಗಿ ಕಾಲೇಜುಗಳಲ್ಲಿ ಮ್ಯಾನೇಜುಮೆಂಟುಗಳ ವಶೀಲಿಬಾಜಿತನದಿಂದ ಡೈರೆಕ್ಟರ್ ಇತ್ಯಾದಿ ಅವರಿಗೋಸ್ಕರವೇ ದಿಢೀರನೆ ರೂಪಿತವಾದ ಸ್ಥಾನಗಳಲ್ಲಿ ಕೂತು ತಮ್ಮ ಮೇಜನ್ನು ಗಟ್ಟಿಮಾಡಿಕೊಳ್ಳುವ ರಗಳೆಯಲ್ಲಿ ತಲ್ಲೀನರಾದರೆ ಏನು ಮಾಡಬೇಕು? ಮೈಲಾರಪ್ಪ-ಪ್ರಭುದೇವ ಜಟಾಪಟಿಯಲ್ಲಿ ಹೈರಾಣದ ಬೆಂಗಳೂರು ವಿವಿಗೆ ಇದೆಲ್ಲಾ ಹೊಸದಲ್ಲ ನಿಜ. ಅದೇ ಪ್ರಹಸನವೇ ಕಾಲೇಜು, ಸ್ಕೂಲುಗಳ ಮಟ್ಟದಲ್ಲಿ ನಡೆಯುವಾಗ ಸಮಸ್ಯೆ ದೂರದ ವಿವಿಯದು ಎಂದು ತಳ್ಳಿ ಹಾಕಲಾಗುವುದಿಲ್ಲ. ಖಾಸಗಿ ಮ್ಯಾನೇಜುಮೆಂಟುಗಳಿಗೆ ಪ್ರಿನ್ಸಿಪಾಲರ ಮೇಲೆ ಸಾಕಷ್ಟು ನಂಬಿಕೆಯಿಲ್ಲದಿದ್ದಾಗ ದಿನನಿತ್ಯದ ಮೇಜುಗೆಲಸದ ಮೈಲಿಗೆಯನ್ನು ತೂಗಿಸಿಕೊಂಡು ಹೋಗಲು ಒಬ್ಬ ಮೇಜುವಾನಿಯ ಅವಶ್ಯಕತೆಯಿರುತ್ತದೆ. ಶಿಕ್ಷಣ ಇಲಾಖೆಯಲ್ಲಿ ರಿಟೈರಾದ ಮೇಜುವಾನಿಗಳಿಗೆ ಮನೆಯಲ್ಲಿ ಕೂತು ಐಡೆಂಟಿಟಿ ಕ್ರೈಸಿಸ್, ಕಾಡುವ ಸಾವಿನ ಭಯ ಇತ್ಯಾದಿಗಳನ್ನು ಎದುರಿಸುವ ಬದಲು ಖಾಸಗಿ ಕಾಲೇಜುಗಳಲ್ಲಿ ಡೈರೆಕ್ಟರಾಗಿ ಮೇಜು ಹಿಡಿದು ಹೆದರುವ ಬೆದರುವ ಪಾಪದ ಶಿಕ್ಷಕರ ಮತ್ತು ಗುಮಾಸ್ತರ ಮೇಲೆ ಅಧಿಕಾರ ಚಲಾಯಿಸುವ ಲಡ್ಡೂ ಚಾನ್ಸ್ ಬೇಕಿರುತ್ತದೆ. ಒಟ್ಟಾರೆ ಹಿಟ್ಟು ಹಳಸಿರುತ್ತದೆ, ನಾಯಿ ಹಸಿದಿರುತ್ತದೆ! ಈ ವಿದ್ಯಮಾನಕ್ಕೆ ಒಂದು ಉದಾಹರಣೆಯನ್ನು ಗಮನಿಸಬಹುದು.

ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಮುದುಕಮ್ಮನ ದರ್ಬಾರು

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಜಂಟಿ ನಿರ್ದೇಶಕಿಯಾಗಿ, ನಂತರ ನಿರ್ದೇಶಕಿಯಾಗಿ ಕೆಲಸ ಮಾಡಿದ ಡಾ. ಎಂ.ಬಿ ಮುತ್ತಮ್ಮ ಅದಕ್ಕೂ ಮುಂಚೆ ಏನು ಮಾಡಿದರು ಎನ್ನುವುದು ಅಪ್ರಸ್ತುತ. ಯಾಕೆಂದರೆ ಆ ಕಾಲದಲ್ಲಿ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದರು ಎನ್ನುವುದು ಕಡತಗಳ ವಾಸ್ತವ ಅಷ್ಟೇ. ಬೆಂಗಳೂರಿನ ಆಸುಪಾಸಿಗೆ ವರ್ಗಾವಣೆಯಾದಾಗ ವಾರಕ್ಕೊಮ್ಮೆ ರೈಲಿನಲ್ಲಿ ಹೋಗಿ, ಅಟೆಂಡೆನ್ಸ್ ರಿಜಿಸ್ಟರ್ ರೈಲು ನಿಲ್ದಾಣಕ್ಕೇ ಬಂದು, ಇಡೀ ವಾರಕ್ಕೆ ಕ್ಷಣಮಾತ್ರದಲ್ಲಿ ಅಮ್ಮಾವರ ಸಹಿಯಾಗಿ, ಅಮ್ಮಾವರು ಅದೇ ರೈಲಿನಲ್ಲಿ ಬೆಂಗಳೂರಿಗೆ ವಾಪಸಾಗುತ್ತಿದ್ದರು ಎನ್ನುವುದು ದಂತಕತೆ. ಕಾಲೇಜು ಶಿಕ್ಷಣ ಇಲಾಖೆಯನ್ನು ಆಳಿ ಏಳು ವರುಷಗಳ ಹಿಂದೆ ರಿಟೈರಾದ ದಿನದಂದು ಸಿಬ್ಬಂದಿಯೆಲ್ಲವೂ ಅಚಾನಕ್ಕಾಗಿ ಸಾಮೂಹಿಕ ರಜೆ ಗುಜರಾಯಿಸಿ, ಹಾರಹಾಕಲು ಭಾಷಣ ಮಾಡಲು ಸಾಕಷ್ಟು ಮಂದಿಯೇ ಇಲ್ಲದೇ ಅಮ್ಮಾವರು ಬಿಕೋ ಎನ್ನುವ ಆಫೀಸಿಂದ ಹೊರಬಿದ್ದರು ಎನ್ನುವುದೂ ಇನ್ನೊಂದು ದಂತಕತೆ. ಇರಲಿ, ಹಾಗೆ ಹೊರಬಿದ್ದ ಅಮ್ಮಾವರು ಮನೆಯಲ್ಲಿ ಕೂರಬೇಕಾಗಿರಲಿಲ್ಲ, ಯಾಕೆಂದರೆ ನಗರದ ಬಿಎಂಎಸ್ ಮಹಿಳಾ ಕಾಲೇಜಿಗೆ ಚೇರ್ಮನ್ನರಾಗಿದ್ದ ಶ್ರೀಮಾನ್ ಬಿಸಿಲಯ್ಯ ಅವರ ಆಪ್ತೇಷ್ಟೆಂತೆ ಈಕೆ. ಹಾಗಾಗಿ ದಿಢೀರನೆ ಉತ್ಪನ್ನವಾದ ಡೈರೆಕ್ಟರ್ ಎಂಬ ಕುರ್ಚಿ ಈಕೆಗೆ ಕಾಯುತ್ತಾ ನಿಂತಿತ್ತು.

ಕಾಲೇಜಿಗೆ ಬಂದ ಮೊದಲನೆಯ ದಿನವೇ ಅಮ್ಮಾವರು ಠಾಕುಠೀಕಾಗಿ ಬಿಎಂಎಸ್‌ನ ಉದ್ದಗಲಕ್ಕೆ ಓಡಾಡಿ ಪರಿಚಿತರಿಂದ ನಮಸ್ಕಾರ ಸ್ವೀಕರಿಸಿದರು. ಶಿಕ್ಷಣ ಇಲಾಖೆಗೆ ಅಲೆಯುವ ಕರ್ಮಕ್ಕೆ ಸಿಕ್ಕದ ಕೆಲವು ಅದೃಷ್ಟವಂತ ಅಪರಿಚಿತ ಉಪನ್ಯಾಸಕರು ಎದುರಿಗೆ ಸಿಕ್ಕಾಗ 'ನೀವ್ಯಾರು?' ಎಂದು ಯಾವ ಎಗ್ಗೂ ಇಲ್ಲದೇ ಇಲ್ಯಾಕಿದೀರಿ? ಎನ್ನುವ ಧಾಟಿಯಲ್ಲಿ ಕೇಳಿದರು. ಆ ಅದೃಷ್ಟವಂತರಿಗೆ ಗಲಿಬಿಲಿಯಾದರೂ 'ನೀವ್ಯಾರ್ರೀ?' ಎಂದು ತಿರುಗಿ ಕೇಳಲಿಲ್ಲ. ಮಧ್ಯಮವರ್ಗದ ಬಸವನಗುಡಿಯ ಮಹಿಳಾ ಕಾಲೇಜಿನಲ್ಲಿ ಪಾಠ ಹೇಳುವ ತೊಂಬತ್ತು ಭಾಗ ಉಪನ್ಯಾಸಕರೆಲ್ಲಾ ಮಹಿಳೆಯರೇ. ಪಾಪ, ಆಂಕೆಶಂಕೆಯಲ್ಲಿ ಬೆಳೆದು, ಅಧಿಕಾರಿಗಳೆಂದರೆ ದೂರವಿರುವ, ಹತ್ತಿರ ಬಂದರೆ ಹಾಳಾಗಿ ಹೋಗಲಿ ಎಂದು ಡೊಗ್ಗು ಸಲಾಮು ಹೊಡೆದು ಮನೆಗೆ ಓಡುವ ಮರ್ಯಾದಸ್ಥ ಉಪನ್ಯಾಸಕಿಯರು ಇನ್ನೇನು ತಾನೇ ಮಾಡಬಲ್ಲರು? ಉಳಿದ ಹತ್ತು ಭಾಗ ಗಂಡಸರು ಅದಕ್ಕಿಂತ ಘೋರವಾದ ಮಾನವಂತರು. ಯುಜಿಸಿ ವೇತನ ಪಡೆಯುವರು ಮಾನ ಮರ್ಯಾದೆಗೆ ಅಂಜಿ ಸುಮ್ಮನಾದರೆ, ಮ್ಯಾನೇಜುಮೆಂಟು ವೇತನ ಪಡೆಯುವವರು ಕೆಲಸ, ವೇತನಗಳ ಅನಿರ್ದಿಷ್ಟತೆಗೆ ಅಂಜಿ ಸುಮ್ಮನಾದರು. ಅಮ್ಮಾವರು ನಿವೃತ್ತರಾದ ಪ್ರಿನ್ಸಿಪಾಲರುಗಳನ್ನೂ ಬಿಡಲಿಲ್ಲ, ಯಾವುದೋ ಆಡಿಟಿಂಗ್ ನೆಪ ಹೇಳಿ ಅವರೆಲ್ಲರಿಗೆ ಸಮನ್ಸ್ ಕಳುಹಿಸಿ, ತಮ್ಮ ಕೋಣೆಗೆ ಕರೆಸಿ ವಿಚಾರಣೆ ನಡೆಸಿದರು. ನಮ್ಮ ದೇಶದ ದುರ್ಗತಿಯೆಂದರೆ ಇದೇ ಇರಬೇಕು. ರೇಶ್ಮೆ, ಚಿನ್ನದ ಕಾಣಿಕೆಗಳನ್ನು ಬಾಯಿಬಿಟ್ಟು ಕೇಳಿ ಪಡೆದು, ಶಿಕ್ಷಣ ಇಲಾಖೆಯ ವರ್ಗಾವರ್ಗಿ ಸ್ಕೀಮುಗಳಲ್ಲಿ ಸಾಕಷ್ಟು ಶ್ರೀಮಂತರಾದವರು ಬಡಪಾಯಿ ಮೇಡಮ್ಮುಗಳ ವಿಚಾರಣೆ ನಡೆಸುತ್ತಾರೆ! ವೀಕ್ಷಿಸಿದ ಬೋಧಕರು, ಬೋಧಕೇತರೆಲ್ಲರೂ ಉಗುಳು ನುಂಗಿದರು. ಮಾತಾಡಲಿಲ್ಲ, ಇಷ್ಟೊತ್ತಿಗೆ ಅಮ್ಮಾವರಿಗೆ ಮನದಟ್ಟಾಗಿ ಹೋಗಿತ್ತು: ತನಗೆ ಬಿಎಂಎಸ್ ಮಹಿಳಾ ಕಾಲೇಜಿನಂತ ಸೂಕ್ತ ನೆಲೆ ಇನ್ನೊಂದಿಲ್ಲ! ಇನ್ನುಳಿದದ್ದು ಸೀಟು ಭದ್ರಮಾಡಿಕೊಳ್ಳುವ ಸಂಗತಿ ಮಾತ್ರ.



ಡಾ. ಎಂ.ಬಿ ಮುತ್ತಮ್ಮ

ಮುತ್ತಮ್ಮ ಆಡಳಿತದಲ್ಲಿ ಅದಕ್ಷೆಯೇನಲ್ಲ. ದಕ್ಷತೆಗಿಂತ ಹೆಚ್ಚಾಗಿ ಆಕೆಯಲ್ಲಿ ಎದ್ದು ಕಾಣಿಸುವುದು ಜಿದ್ದಿತನ. ತನಗೆ ಸಡ್ಡು ಹೊಡೆದವರನ್ನು ಕಡತಲೋಕದಲ್ಲಿಯಾದರೂ ಮುಗಿಸದೇ ವಿರಮಿಸುವುದಿಲ್ಲ ಎಂಬ ಛಲವೇ ಆಕೆಗೆ 'ಮೆಮೋ ರಾಣಿ ಮುತ್ತಮ್ಮ' ಎಂಬ ಅಡ್ಡಹೆಸರನ್ನು ದಯಪಾಲಿಸಿದೆ. ಆಗದವರ ವಿರುದ್ಧ ಮೆಮೋಗಳ ರಾಶಿಯೇ ಬಂದುಬೀಳುತ್ತದೆ. ಎಲ್ಲರಿಗೂ ಫೈಲ್ ಬಿಲ್ಡ್ ಅಪ್ ಮಾಡುತ್ತಾರೆ ಎಂಬ ಭಯ. ಆಕೆಯ ಅಧಿಕಾರಶಾಹಿತನ ಕೆಲವೊಮ್ಮೆ ಈಕೆ ಶಿಕ್ಷಕಿಯೆ? ಯಾವತ್ತಾದರೂ ಉಪನ್ಯಾಸ ನೀಡಿದ್ದಾರೆಯೆ? ನಿಜವಾಗಲೂ ಡಾಕ್ಟರೇಟು ಮಾಡಿದ್ದಾರೆಯೆ? ಎಂಬ ಅನುಮಾನವನ್ನೂ ಬಿಎಂಎಸ್ ಮಹಿಳಾಲೋಕದಲ್ಲಿ ಮೂಡಿಸಿದಂತಿದೆ. ಯಾಕೆಂದರೆ ಬಿಎಂಎಸ್‌ನಲ್ಲಿ ಹಿಂದೆ ಚೇರ್ಮನ್ನರಾಗಿದ್ದ ಎಚ್ಚೆನ್ನರಂತೆ, ಶ್ರೀ ಚಲುವರಾಜು ಅವರಂತೆ ಅಮ್ಮಾವರು ಯಾವತ್ತೂ ಯಾವ ಮೌಲಿಕ ಉಪನ್ಯಾಸವನ್ನೂ ನೀಡಿಲ್ಲ, ಸಾಮಾಜಿಕ ಕಳಕಳಿಯಿಂದ ಭಾಷಣವನ್ನೂ ಮಾಡಿಲ್ಲ, ಏನಿದ್ದರೂ ದರ್ಪದಿಂದ ನಡೆಸುವ ದರ್ಬಾರು ಮಾತ್ರ. ಯಾರಿಗಾದರೂ ಕರೆ ಹೋದರೆ ಅವರು ನಡುಗುವ ಕಾಲುಗಳನ್ನು ಹೊತ್ತೇ ಅಮ್ಮಾವರ ಕೋಣೆಯತ್ತ ಸಾಗಬೇಕು. ಅಲ್ಲಿ ನಡೆಯುವ ಇಂಟರಾಗೇಶನ್ನಿನಲ್ಲಿ ಕೆಲವೊಮ್ಮೆ ಉದುರುವ ಅಣಿಮುತ್ತುಗಳಿಗೆ ಬೆಚ್ಚಿಬಿದ್ದು ಮರ್ಯಾದಸ್ಥ ಮಹಿಳಾಮಣಿಗಳು ಕಣ್ಣೀರು ಒರೆಸಿಕೊಂಡು ಹೊರಬರುತ್ತಾರೋ? ಅದು ಅವರ ತಾಕತ್ತಿಗೇ ಬಿಟ್ಟದ್ದು.

ಮೇಜುವಾನಿಗಳು ತನ್ನ ಕೆಳಗಿನವರನ್ನು ಗೋಳು ಹುಯ್ದುಕೊಳ್ಳುವುದರ ಜೊತೆಗೇ ಮೇಲಿನವರಿಗೆ ಹಲ್ಲು ಕಿರಿಯುತ್ತಿರುತ್ತಾರೆ. ಮಾತೆತ್ತಿದರೆ ಅಮ್ಮಾವರ ಉವಾಚವೂ ಅದೇ: 'ನಾನಿರುವುದೇ ಮ್ಯಾನೇಜುಮೆಂಟಿಗೆ ಸಹಾಯ ಮಾಡಲು.' ತನ್ನ ಸಂಬಳವನ್ನು ಸಮರ್ಥಿಸಿಕೊಳ್ಳಲು ಅಮ್ಮಾವರು ತರಗತಿಗಳಿಗೆ ರೌಂಡ್ ಸಹ ಹೋಗುತ್ತಾರೆ. ವಿದ್ಯಾರ್ಥಿಗಳ ಎದುರಿಗೇ ಅಟೆಂಡೆನ್ಸ್ ರಿಜಿಸ್ಟರ್ ತೆಗೆದು ಉಪನ್ಯಾಸಕರಿಗೆ ಪ್ರಶ್ನೆಗಳನ್ನು ಕೇಳಿ, 'ಯಾಕೆ ಆರು ವಿದ್ಯಾರ್ಥಿಗಳು ಹಾಜರಿಲ್ಲ? ನಿಮಗೆ ಮೆಮೊ ಕೊಡಬೇಕಾಗುತ್ತದೆ' ಇತ್ಯಾದಿ ತರಹದ ಧಮಕಿಗಳನ್ನು ಹಾಕಿ ಮುಂದೆ ಸಾಗುತ್ತಾರೆ. ಇಷ್ಟಕ್ಕೂ ಯಾವ ದಾಖಲೆಗಳಲ್ಲಿಯೂ ಅಮ್ಮಾವರ ಸಹಿಯಿರುವುದಿಲ್ಲ. ಕೊಡಿಸುವುದು ಕೊಡುವುದಕ್ಕಿಂತಲೂ ದೊಡ್ಡ ಕೆಲಸ ತಾನೆ? ಪ್ರತಿಯೊಂದೂ ತನ್ನ ಮೂಲಕವೇ ಸಾಗುವಂತೆ ಮಾಡುವುದು ಮೇಜುವಾನಿಗಳ ಪ್ರಿಯವಾದ ಗೀಳು. ಯುಜಿಸಿ ಬೋಧಕರ ವಾರ್ಷಿಕ ಅಪ್ರೇಸಲ್ ಸಹ ಅಮ್ಮಾವರ ಕಣ್ಣಿಗೆ ಬಿದ್ದೇ ಮುಂದೆ ಹೋಗಬೇಕು. ಸಂಶೋಧನೆಯನ್ನು ಪ್ರೋತ್ಸಾಹಿಸಲು ಯುಜಿಸಿ ಕೋಟಿಗಟ್ಟಲೆ ಹಣವನ್ನು ನೀಡಿರಬಹುದು. ಆದರೆ ಡಾಕ್ಟರೇಟ್ ಮಾಡುತ್ತಿರುವ ಉಪನ್ಯಾಸಕರು ಆರು ತಿಂಗಳ ವಿಸ್ತರಣೆಗೆ ಅಮ್ಮಾವರ ಒಪ್ಪಿಗೆ ಪಡೆಯಲು ಆರು ತಿಂಗಳು ಅಲೆಯಬೇಕಾಗಬಹುದು. ನಂತರ ಯುಜಿಸಿ ಕಚೇರಿಯಿಂದ ಒಂದೇ ವಾರದಲ್ಲಿ ಒಪ್ಪಿಗೆ ಸಿಕ್ಕಿರುತ್ತದೆ. ಒಡೆದು ಆಳುವುದು ಅಧಿಕಾರಿಗಳ ಗೀಳು. ಹಾಗಾಗಿಯೇ ಈಗ ಬಿಎಂಎಸ್ ಮಹಿಳಾ ಕಾಲೇಜಿನ ಉದ್ಯೋಗಿಗಳು ಸ್ಟಾಫ್ ಅಸೋಸಿಯೇಶನ್ ಮೂಲಕ ಮೀಟಿಂಗ್ ಮಾಡುವಂತೆಯೇ ಇಲ್ಲ, ಅಮ್ಮಾವರು ಜನರಲ್ ಮೀಟಿಂಗ್ ಯಾವತ್ತೂ ನಡೆಸುವುದೂ ಇಲ್ಲ, ಅಡ್ಮಿನ್ ಉದ್ಯೋಗಿಗಳಿಗೆ ಒಂದು ಸಾವಿರ ಬಡ್ತಿ ನೀಡುವುದಕ್ಕೂ ನಕಾರ ಸೂಚಿಸಿ ಷರಾ ಬರೆಯುವ ಅಮ್ಮಾವರ ಒಟ್ಟು ಭತ್ಯೆ ಆರು ವರುಷದಲ್ಲಿ ಲಕ್ಷ ತಲುಪಿದೆ.

ಇದೆಲ್ಲಾ ಅಟ್ಟಹಾಸವನ್ನು ತಟ್ಟಿ ಕೂರಿಸುವ ತಾಕತ್ತಿದ್ದದ್ದು ನಿವೃತ್ತ ಐಎಎಸ್ ಅಧಿಕಾರಿ ಶ್ರೀ ವಿಜಯ್ ಗೋರೆಯವರಿಗೆ ಮಾತ್ರ. ಆತನಿಗೆ ಬಿಎಂಎಸ್ ಮ್ಯಾನೇಜುಮೆಂಟಿನಲ್ಲಿ ಎರಡನೇ ಟರ್ಮಿನಲ್ಲಿ ಮುಂದುವರೆಯಲು ಸಾಧ್ಯವಾಗಲೇ ಇಲ್ಲ, ಅಮ್ಮಾವರ ಚಿತಾವಣೆ ಎನ್ನುವುದು ಬಲ್ಲವರ ಅಂಬೋಣ. ಬಿಎಂ ಶ್ರೀನಿವಾಸಯ್ಯ ಅವರ ಮಗ ಬಿಎಸ್ ನಾರಾಯಣ್ ಅವರ ಹೆಂಡತಿ ರಾಗಿಣಿ ನಾರಾಯಣ್ ಮದುವೆಯಾದಾಗ ಕಚೇರಿ ಗುಮಾಸ್ತೆ ಆಕೆ ಬಿಎಂಎಸ್ ಟ್ರಸ್ಟಿನ ಹಾಲಿ ಅಧ್ಯಕ್ಷೆ. ಮೊನ್ನೆ ತಾನೇ ತುಮಕೂರು ವಿಶ್ವವಿದ್ಯಾಲಯದಿಂದ ಆಕೆಗೆ ಡಾಕ್ಟರೇಟ್ ನೀಡಲಾಯಿತು. ಯಾವ ಮಹಾನ್ ಕಾರ್ಯಕ್ಕೆ? ಕೇಳಬೇಡಿ ಅಂತಾರೆ ಬಿಎಂಎಸ್ಸಿಗರು. ಉನ್ನತ ಶಿಕ್ಷಣ ಸಮಿತಿಯ ಸದಸ್ಯರಾಗಿರುವ ಅಮ್ಮಾವರಿಗೆ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳಲು ಅಧ್ಯಕ್ಷೆಗೋಸ್ಕರ ಅಷ್ಟೂ ಮಾಡಲಾಗುವುದಿಲ್ಲವೆ? ಸಂಸ್ಥೆಯ ಯಾರು ರಾಗಿಣಿಯವರನ್ನು ಭೇಟಿ ಮಾಡುವುದಾದರೂ ಅಮ್ಮಾವರ ಸಮ್ಮುಖದಲ್ಲಿಯೇ. ಯಾವ ಫೈಲ್ ಬಂದರೂ ಅಮ್ಮಾವರ ಮುಖವನ್ನೇ ನೋಡುವ ರಾಗಿಣಿ ನಾರಾಯಣ್ ಪುಣ್ಯಕೋಟಿಯಂತೆ ಒಪ್ಪಿಕೊಳ್ಳುತ್ತಾರೆ - 'ನನಗೆ ರೂಲ್ಸೆಲ್ಲಾ ಗೊತ್ತಿಲ್ಲ, ಮೇಡಮ್ ಅದರಲ್ಲೆಲ್ಲಾ ಪಳಗಿದಾರೆ ನೋಡಿ...' ಮಾತುಮಾತಿಗೆ ರೂಲನ್ನು ಕೋಟ್ ಮಾಡುವ ಮೇಜುವಾನಿ ಅಮ್ಮಾವರಿಗೆ ಚೆನ್ನಾಗಿ ಬಲ್ಲ ಸತ್ಯವೊಂದಿದೆ: ರೂಲೆನ್ನುವುದು ಕೊನೆಗೆ ಭಾಷೆಯೇ, ಪದಗಳೇ! ಅದನ್ನು ಸೂಕ್ಷ್ಮವಾಗಿ ಅರ್ಥೈಸಿದರೆ ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಬೇಡದವರ ಮೇಲೆ ಪ್ರಹಾರ, ಬೇಕಾದವರಿಗೆ ರಕ್ಷಣೆ. ಅದನ್ನು ಮಾತ್ರ ವಿಚಕ್ಷಣ ದಕ್ಷತೆಯಿಂದ ಪಾಲಿಸುವ ಶಕ್ತಿ ಅಮ್ಮಾವರದ್ದು. ಬೇಡವಾದವರನ್ನು ಸದಾ ಕಾಯುವಂತೆ ಮಾಡಲು ಮೇಜುವಾನಿಗಳಿಗೆ ತುಂಬ ಪ್ರಿಯವಾದ ಆಯುಧವಂತೂ ಇದ್ದೇ ಇದೆ, 'ಹೆಡ್ ಆಫೀಸಿಗೆ ಬರೆದಿದ್ದೇವೆ, ನೋಡೋಣ...'

ಈ ಫ್ಯೂಡಲ್ ಮನೋಭಾವಕ್ಕೆ ಬಿಎಂಎಸ್ಸಿಗರ ಪ್ರತಿಕ್ರಿಯೆಯಾದರೂ ಏನು? ಗೊಣಗಾಟಕ್ಕೆ ಕೊನೆಯೇ ಇಲ್ಲ. ಬೇನಾಮೀ ಪತ್ರಗಳು ಮ್ಯಾನೇಜುಮೆಂಟಿಗೆ ಬೇಕಾದಷ್ಟು ಹೋಗಿವೆ. ಧೈರ್ಯವಾಗಿ ಹೇಳುವ ಸಂಘಟಿತ ಶಕ್ತಿಯಿಲ್ಲದೇ ಹೋದರೂ ಸಹ ಹೇಳಲೇಬೇಕಾದ್ದನ್ನು ಹೇಳುವ ತುರ್ತಿನಿಂದ ಹೊಮ್ಮಿದ SOS ಸಂದೇಶಗಳು ಅವು ಎನ್ನುವುದನ್ನು ಮ್ಯಾನೇಜುಮೆಂಟು ಪರಿಗಣಿಸಿದಂತಿಲ್ಲ ಅಥವಾ ಜಾಣಕಿವುಡೂ ಇರಬಹುದು.

ಹೈರಾಣಾದ ಅಪರ್ಣಾ!

ಇಷ್ಟಾದರೂ ಮಧ್ಯಮರ್ಗದ ಮರ್ಯಾದಸ್ಥ ಮಹಿಳಾಮಣಿಗಳ ನಡುವೆಯೂ ಕ್ರಾಂತಿಕಾರಿಣಿಯೊಬ್ಬಳು ಚಿಮ್ಮಬಹುದಲ್ಲ? ಮ್ಯಾಥ್ಸ್ ವಿಭಾಗದ ಮುಖ್ಯಸ್ಥರ ಸ್ಥಾನದೌಚಿತ್ಯವನ್ನು ಪ್ರಶ್ನಿಸಿದ್ದಕ್ಕೆ ಮ್ಯಾತ್ಸ್‌ನಲ್ಲಿ ಐಐಟಿಯಿಂದ ಸ್ನಾತಕೋತ್ತರ ಪದವಿ ಪಡೆದ ಅಪರ್ಣಾ ಎಂಬ ಪ್ರತಿಭಾವಂತ ಉಪನ್ಯಾಸಕಿಗೆ ಅಚಾನಕ್ಕಾಗಿ ವರ್ಕ್ ಲೋಡ್ ಇಲ್ಲ ಎಂಬ ನೆಪಹೇಳಿ ಕಾಲೇಜಿನಿಂದ ಹೊರಕಳುಹಿಸಲಾಯಿತು. ಅಪರ್ಣಾ ಧೃತಿಗೆಡದೆ ಕೋರ್ಟು ಮೆಟ್ಟಿಲು ಹತ್ತಿದಳು. ಕೇಸು ಆರು ವರ್ಷ ಎಳೆಯಿತು. ಪ್ರತಿಯೊಂದು ಹಿಯರಿಂಗಿನಲ್ಲಿ ಅಮ್ಮಾವರ ಚೇಲಾ ಯಾರಾದರೊಬ್ಬ ಇರುತ್ತಲೇ ಇದ್ದ. ತನ್ನ ವಕೀಲರೂ ಯಾಕೋ ಉಲ್ಟಾ ಹೊಡೆಯಲಾರಂಭಿಸಿದಾಗ ಅಪರ್ಣಾ ತಾನೇ ವಕಾಲತ್ತು ನಡೆಸಲಾರಂಭಿಸಿದಳು. ಆರ್‌ಟಿಐ ಬಲದಿಂದ ಸಂಬಂಧಪಟ್ಟ ದಾಖಲೆಗಳನ್ನು ಹೊರತೆಗೆಸಿದಳು. ವರ್ಕ್ ಲೋಡ್ ಖಂಡಿತಾ ಇತ್ತು, ಅಪರ್ಣಾಗೆ ಟಿಕೆಟ್ ಕೊಟ್ಟ ಮೇಲೆ ಅಮ್ಮಾವರ ನಿಕಟವರ್ತಿಯಾಗಿದ್ದ ರಿಟೈರಿಯೊಬ್ಬ (ಅಮ್ಮಾವರ ಮಕ್ಕಳಿಗೆ ಆ ಕಾಲದಲ್ಲಿ ಟ್ಯೂಶನ್ ಹೇಳಿಕೊಟ್ಟವ!) ಅಪರ್ಣಾಳ ಸ್ಥಾನವನ್ನು ತುಂಬಿದ್ದ. ಆರು ವರುಷದ ಹೋರಾಟದ ನಂತರ ಅಪರ್ಣಾ ಕೋರ್ಟಿನ ಬಲದಿಂದ ಮತ್ತೆ ಬಿಎಂಎಸ್ಸಿಗೆ ಹಿಂತಿರುಗಿದ್ದಾಳೆ. ಪದವಿ ಪಾಠಗಳನ್ನು ಆಕೆ ನಿಭಾಯಿಸಬೇಕು ಎಂದು ಕೋರ್ಟು ಆದೇಶ ನೀಡಿದ್ದರೂ ಸಹ, ಆಕೆಗೆ ಬಲವಂತವಾಗಿ ಪದವಿಪೂರ್ವ ತರಗತಿಗಳನ್ನೇ ನೀಡಲಾಗಿದೆ. ಅಷ್ಟೇ ಅಲ್ಲ, ಸುಮಾರು ದಿನಕ್ಕೊಂದರಂತೆ ಆಕೆಗೆ ಮೆಮೋಗಳನ್ನು ಕೊಡುವುದು ನಡೆದೇ ಇದೆ. ವೇತನವನ್ನು ಕೋರ್ಟ್ ನಿಗದಿಪಡಿಸಬೇಕು. ಅದರ ಹಿಯರಿಂಗ್ ಇದ್ದಾಗೆಲ್ಲಾ ಆಕೆಗೆ ವೈಯಕ್ತಿಕ ರಜೆ ಸಹ ಬಿಲ್‌ಕುಲ್ ಸಿಗುವುದಿಲ್ಲ, ಈ ಹೋರಾಟದ ನಡುವೆ ಮ್ಯಾತ್ಸ್ ಮುಖ್ಯಸ್ಥೆ ವರ್ಷಗಟ್ಟಲೆ ವಿದೇಶದಲ್ಲಿದ್ದಾಗ

ಬಿಎಂಎಸ್ ಮೂಲಕ ಸಂಬಳವನ್ನೂ ಪಡೆದುಕೊಂಡಿದ್ದಾಳೆ, ಹಾಜರಾತಿಯಲ್ಲಿ ಸಹಿಯನ್ನೂ ಮಾಡಿದ್ದಾಳೆ, ಅದು ನಡೆದಿದ್ದು ಅಮ್ಮಾವರ್ ಕಾಲೇಜ್ಗೆ ಶಿಕ್ಷಣದ ನಿರ್ದೇಶಕಿಯಾಗಿದ್ದಾಗ, ಅವರ ಕೃಪಾಕಟಾಕ್ಷದಿಂದಲೇ, ಅವರ ಸಹಿಯೂ ಇದೆ ಎಂಬ ಗುಮಾನಿಗಳು ಅಮ್ಮಾವರಿಗೇಕೆ ಅಪರ್ಣಾಳ ಮೇಲೆ ಇಷ್ಟು ಕೋಪ ಎಂಬ ಪ್ರಶ್ನೆಗಳಿಗೆ ಉತ್ತರ ನೀಡಹತ್ತಿವೆ. ಆದರೂ ಅಮ್ಮಾವರ ಕೋಪದ ಅರಿವಿರುವ ಬಿಎಂಎಸ್ ಮಹಿಳಾಮಣಿಗಳು ಯಾರೂ ಅಪರ್ಣಾಳನ್ನು ಮಾತನಾಡಿಸುವುದಿಲ್ಲ. ಸಹೋದ್ಯೋಗಿ ಗೌರವವನ್ನೂ ಮರೆತಂತೆ ತಕ್ಷಣ ತಲೆ ತಗ್ಗಿಸಿ ನಡೆದುಬಿಡುತ್ತಾರೆ. ಸಂತೆಯಲ್ಲಿ ಒಂಟಿಯಾಗಿಯೇ ನಿಭಾಯಿಸಬೇಕಾದ ವಿಷಾದದಲ್ಲಿ ಅಪರ್ಣಾ ಮುಂದೆ ಸಾಗುತ್ತಾಳೆ.

ಅಮ್ಮಾವರಿಗೆ ಆಪ್ತರಿಲ್ಲವೆಂದಲ್ಲ. ಮಹಿಳಾ ಕಾಲೇಜಿಗೆ ತಾನೇ ಪ್ರಿನ್ಸಿಪಾಲನಾಗಬೇಕೆಂದು ಶತಾಯಗತಾಯ ಪ್ರಯತ್ನಿಸುತ್ತಿರುವ ಇತಿಹಾಸದ ಪ್ರಾಧ್ಯಾಪಕನೊಬ್ಬ ಅವರ ಮಹಾನಿಕಟವರ್ತಿ. ಆತ ಕ್ಲಾಸ್‌ರೂಮಿಗಿಂತ ಹೆಚ್ಚಾಗಿ ಅಮ್ಮಾವರ ಚೇಂಬರಿನಲ್ಲೇ ಇರುತ್ತಾನೆ ಎನ್ನುವುದು ವರುಷಗಟ್ಟಲೆಯ ಗುಸುಗುಸು. ಯುಜಿಸಿ ವೇತನ ಪಡೆಯುತ್ತಿದ್ದರೂ ಪದವಿಪೂರ್ವ ಕಾಲೇಜಿಗೆ ಪ್ರಿನ್ಸಿಪಾಲನಾದದ್ದು, ಅಲ್ಲಿಯೇ ಉಳಿಯಲು ಹರಸಾಹಸ ಮಾಡಿದ್ದು, ಕಾರ್ಯಭಾರವಿಲ್ಲದಿದ್ದರೂ ಬಿಎಂಎಸ್ಸಿನಲ್ಲೇ ಉಳಿದದ್ದು ಯಾರ ಕೃಪೆಯೆನ್ನುವುದು ಈಗೇನೂ ಗುಟ್ಟಾಗಿ ಉಳಿದಿಲ್ಲ. ಯಾವ ಸಂದರ್ಶನವೂ ಇಲ್ಲದೇ ನೇರವಾಗಿ ಬಿಎಂಎಸ್ ಸೇರಿ, ತಳವೂರಿ, ಸೀನಿಯಾರಿಟಿಗೆ ಸಾಕಷ್ಟು ಶ್ರಮ (ಧನ) ವ್ಯಯಿಸಿದ, ಬರೆಯುವ ಇಂಗ್ಲಿಷಿನಲ್ಲಿ ಸಾಕಷ್ಟು ತಪ್ಪುಗಳು ಕಾಣಸಿಗುವ ಪ್ರತಿಭೆಯುಳ್ಳ ಶ್ರೀಮಂತ ಇಂಗ್ಲಿಷ್ ಪ್ರಾಧ್ಯಾಪಕಿ ಅವರ ಇನ್ನೊಬ್ಬ ನಿಕಟವರ್ತಿ. 'ಆತ ನನ್ನ ಮಗನಂತೆ, ಈಕೆ ನನ್ನ ಮಗಳಂತೆ, ಅವರ ಕ್ಷೇಮ ನನ್ನ ಆದ್ಯತೆಗಳಲ್ಲೊಂದು' ಎಂದು ನೇರವಾಗಿಯೇ ಅಮ್ಮಾವರು ಉಳಿದ ಅನುಯಾಯಿಗಳಲ್ಲಿ ಹೇಳಿಕೊಂಡಿದ್ದಾರೆ. ಅದೂ ನಿಜವೇ. ಮೀಡಿಯಾಕ್ರಿಟಿಯನ್ನು ಉಳಿಸಿ ಬೆಳೆಸುವುದು ಮೇಜುವಾನಿತನದ ಪ್ರಮುಖ ಲಕ್ಷಣವೇ ಅಲ್ಲವೆ?

ಹಾಗಾಗಿಯೇ ಐಐಟಿ ಪದವೀಧರೆ ಕೋರ್ಟಿನ ಹೋರಾಟದಲ್ಲಿ ಹೈರಾಣಾಗುತ್ತಾಳೆ. ಯುಜಿಸಿ ವೇತನ ಪಡೆಯುತ್ತಿದ್ದರೂ ಸೂಕ್ಷ್ಮಜ್ಞರೆನ್ನಿಸಿಕೊಂಡ ಕೆಲವು ಉಪನ್ಯಾಸಕಿಯರು ರೋಸಿಹೋಗಿ ಸ್ವಯಂ ನಿವೃತ್ತಿಯನ್ನು ಆಯ್ದುಕೊಳ್ಳುತ್ತಾರೆ. ಅಮ್ಮಾವರು ಬಂದ ಮೇಲೆ ಎಷ್ಟು ಅಂತಹ ನಿದರ್ಶನಗಳಿವೆ ಎನ್ನುವುದು ಬಗೆಯಬೇಕಾದ ಸತ್ಯವೇನೂ ಅಲ್ಲ. ಅಮ್ಮಾವರ 'ದತ್ತುಪುತ್ರಿ'ಗೆ ಸಹಾಯವಾಗಲೆಂದೇ ಹೊಸ ಕೋರ್ಸುಗಳನ್ನು ಪ್ರಾರಂಭಿಸಿದ್ದೂ ಇದೆ. ಆಕೆಯ ಸ್ಥಿತಿ ಭದ್ರವಾದ ಮೇಲೆ ಅದೇ ಮಾನವಿಕ ಸಬ್ಜೆಕ್ಟುಗಳನ್ನು ಅಮ್ಮಾವರು ಕೈಬಿಡಲು ನಿರ್ಧರಿಸಿದ್ದಾರೆ. ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಪತ್ರಿಕೋದ್ಯಮ, ಮನಶಾಸ್ತ್ರ ಸಾಹಿತ್ಯ ಅಧ್ಯಯನಗಳು ಈ ವರುಷ ಮಾಯವಾಗುವ ಸಾಧ್ಯತೆಗಳಿವೆ. ಶುದ್ಧ ವಿಜ್ಞಾನಗಳಿಗೆ ಚೋಕ್ ಕೊಡುವ ಪ್ರಯತ್ನ ಅಮ್ಮಾವರ ಸುಪರ್ದಿನಲ್ಲಿಯೇ ನಡೆದಿದ್ದಿದೆ. ಅಧ್ಯಾಪಕರ ಶತಪ್ರಯತ್ನದಿಂದ ಅದು ಸದ್ಯಕ್ಕಂತೂ ನಿಂತಿತ್ತು. ಕಾಲೇಜಿನ ಸಮಾರಂಭವೊಂದರಲ್ಲಿ ಅಮ್ಮಾವರೇ 'I have a dream! BMS Women's College for Commerce and Management!' ಎಂದು ಘೋಷಿಸಿದ್ದಾರೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಆಸ್ತಿಯನ್ನೂ ಅಡವಿಟ್ಟು ಮಹಿಳಾ ಕಾಲೇಜು ಪ್ರಾರಂಭಿಸಿದ ಬಿ.ಎಂ.ಶ್ರೀನಿವಾಸಯ್ಯ ಗೋರಿಯಲ್ಲೂ ಬೆಚ್ಚಿಬಿದ್ದರೆ ಆಶ್ಚರ್ಯವೇನಿಲ್ಲ!

ಉಳಿದು ಕಾಡುವ ಪ್ರಶ್ನೆಗಳು


ಅಧಿಕಾರಶಾಹಿ ಅಥವಾ ಮೇಜುವಾನಿ ಎಂದರೆ ಯಾರು? ಸೂಕ್ಷ್ಮ ದೃಷ್ಟಿ ಮತ್ತು ಸ್ವಂತ ವಿವೇಚನೆ ಇಲ್ಲದೆ, ಕೇವಲ ಸಂಪ್ರದಾಯ, ಪೂರ್ವನಿದರ್ಶನ ಹಾಗೂ ಬರಡು ನಿಯಮಗಳನ್ನು ಯಾಂತ್ರಿಕವಾಗಿ ಅನುಸರಿಸಿ ಕೆಲಸ ಮಾಡುವ ಅಧಿಕಾರಿ ಹಾಗೂ ಆಡಳಿತದ ಅಧಿಕಾರವನ್ನೆಲ್ಲ ತನ್ನ ಇಲಾಖೆಯಲ್ಲಿ ಕೇಂದ್ರೀಕರಿಸಲು ಹವಣಿಸುವ ಅಧಿಕಾರಿ ಎಂದು ಶಬ್ದಕೋಶ ಹೇಳುತ್ತದೆ. ಪ್ರಗತಿಪರ ಮತ್ತು ಅನುಭವಸ್ಥ ಶಿಕ್ಷಣ ತಜ್ಞರನ್ನು ನೇಮಿಸಿಕೊಳ್ಳುವುದರಲ್ಲಿ ಅರ್ಥವಿರುತ್ತದೆ, ಆದರೆ ಯಥಾಸ್ಥಿತಿವಾದಿಗಳಿಂದ ಮತ್ತು ಅಧಿಕಾರದಾಹದ ಮೇಜುವಾನಿಗಳಿಂದ ಯಾವ ಮೌಲಿಕ ಬದಲಾವಣೆಗಳು ಸಾಧ್ಯ? ಖಾಸಗಿ ಮ್ಯಾನೇಜುಮೆಂಟುಗಳು ಅಂತವರನ್ನು ಯಾಕೆ ನೇಮಿಸಿಕೊಳ್ಳುತ್ತವೆ? ಶಿಕ್ಷಣ ಕ್ಷೇತ್ರದಲ್ಲಿ ಬ್ಯೂರಾಕ್ರಸಿಯನ್ನು ಇನ್ನಷ್ಟು ಬಲಪಡಿಸುವ, ಮೇಜುವಾನಿತನದ ಪದರಗಳನ್ನು ಹೆಚ್ಚಿಸುವ ಇಂತಹ ಅಟೆಂಡಿಗಳು ನಿಜವಾಗಿಯೂ ಬೇಕೆ? ಮೇಜುವಾನಿತನಕ್ಕೆ ಕ್ರಿಯಾಶೀಲತೆ ಬೇಕಿಲ್ಲ, ಆದರೆ ಶಿಕ್ಷಣದ ಉದ್ದೇಶವೇ ಕ್ರಿಯಾಶೀಲತೆಯನ್ನು ಮೂಡಿಸುವುದು. ಪರಸ್ಪರ ವಿರುದ್ಧದ ಆಶಯಗಳನ್ನೂ ಒಟ್ಟಿಗೆ ಕಲೆಹಾಕಿ ಕೈತೊಳೆದುಕೊಳ್ಳುವ ಖಾಸಗಿ ಮ್ಯಾನೇಜುಮೆಂಟುಗಳ ಸಾಮಾಜಿಕ ಜವಾಬ್ದಾರಿಯಾದರೂ ಏನು? ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ.


• ವರದಿಗಾರ


ಬಾಗಲಕೋಟೆ: ಬಿಜೆಪಿಗೆ ಮೂರನೇ ಸ್ಥಾನ



ನಿರಾಣಿ


ಕಾರಜೋಳ



ವಿ.ಕಾಶಪ್ಪನವರ್


ಜೆ.ಟಿ.ಪಾಟೀಲ್



ಆರ್.ಬಿ.ತಿಮ್ಮಾಪೂರ್


ಎಂ.ಬಿ.ಸೌಧಾಗರ್



ಉಮಾಶ್ರೀ


ಹೆಚ್.ವೈ.ಮೇಟಿ


ಸಿದ್ದುನ್ಯಾಮೇಗೌಡ


ವೀರಣ್ಣ ಚರಂತಿಮಠ


ಸರನಾಡಗೌಡ


ಚಿಮ್ಮನಕಟ್ಟಿ

ಇಲ್ಲಿ ಬಿಜೆಪಿ ಶಾಸಕ ಮತ್ತು ಅಭ್ಯರ್ಥಿ ವೀರಣ್ಣ ಚರಂತಿಮಠ ದಿನದಿಂದ ದಿನಕ್ಕೆ ನಿದ್ದೆಗೆಟ್ಟು ಓಡಾಡುತ್ತಿದ್ದಾರೆ. ಕಾರಣ ಈ ಹಿಂದೆ ಆತನ ಹಿಂದಿದ್ದವರು ಈಗ ವೈರಿಗಳಾಗಿ ಪರಿವರ್ತನೆಗೊಂಡು ಕಾಂಗ್ರೆಸ್ ಪಾಳಯದಲ್ಲಿ ಒಂದಾಗುತ್ತಿದ್ದಾರೆ. ಕಳೆದ ಬಾರಿ ಮುಸ್ಲಿಮರ ಒಳ ಪಂಗಡವಾದ ಬಾಗವಾನರು ಚರಂತಿಮಠನಿಗೆ ಮತ ಹಾಕಿದ್ದರು. ಆದರೆ ಈ ಬಾರಿ ಅದೇ ಜನಾಂಗದವರು ತಮ್ಮ ಸಮುದಾಯದವರಾದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸೌದಾಗರ್‌ನ ಕೈ ಬಲಪಡಿಸಲು ಓಡಾಡುತ್ತಿದ್ದಾರೆ. ಅದರ ಜೊತೆಗೆ ತಪಶೆಟ್ಟಿ ಮತ್ತು ಮಾಜಿ ಶಾಸಕ ಪಿ.ಎಚ್.ಪೂಜಾರ್ ತರಹದ ನಾಯಕರ ದಂಡು ದಿನೇದಿನೇ ಕಾಂಗ್ರೆಸ್ ಪಕ್ಷದಲ್ಲಿ ಕಾಣಿಸುತ್ತಿರುವುದು ಚರಂತಿಮಠರನ್ನು ಚಿಂತಾಕ್ರಾಂತರಾಗಿಸಿದೆ. "ಎರಡು ಬಾರಿ ಶಾಸಕರಾಗಿದ್ದ ಚರಂತಿಮಠ ಕ್ಷೇತ್ರಕ್ಕೆ ಕಡಿದು ಕಟ್ಟಿ ಹಾಕಿದ್ದು ಏನು?" ಎಂಬ ಪ್ರಶ್ನೆಗೆ ಈ ಬಾರಿ ಉತ್ತರ ದೊರಕಲಿದೆ.

"ನನಗಿದು ಕೊನೆ ಚುನಾವಣೆ. ನನ್ನನ್ನು ಆಯ್ಕೆ ಮಾಡಿ. ಜನಸೇವೆಗೆ ಅವಕಾಶ ನೀಡಿ" ಎಂದು ಕಾಂಗ್ರೆಸ್ ಅಭ್ಯರ್ಥಿ ಹುಲ್ಲಪ್ಪ ಮೇಟಿ ಕೈ ಮುಗಿದು ಅಂಗಲಾಚುತ್ತಿದ್ದಾರೆ. ಜನ ಚರಂತಿಮಠರನ್ನು ಮನೆಗೆ ಮತ್ತು ಹುಲ್ಲಪ್ಪರನ್ನು ವಿಧಾನಸಭೆಗೆ ಕಳಿಸುವುದಕ್ಕೆ ಕಾತರರಾಗಿರುವುದು ಕಂಡುಬರುತ್ತಿದೆ.

ಹುನಗುಂದ

ಗ್ರಾನೈಟ್ ಉದ್ಯಮ ಬೃಹತ್ ಆಗಿರುವ ಕ್ಷೇತ್ರ ಇದು. ಇಲ್ಲಿಯ ಕೆಂಪು ಶಿಲೆಗೆ ದೇಶ-ವಿದೇಶದಲ್ಲಿ ಬಹು ಬೇಡಿಕೆ ಇದೆ. ಇಲ್ಲಿಂದ ಯಾರೇ ಆಯ್ಕೆಯಾದರೂ ಅವರೆಲ್ಲ ಕಲ್ಲಿನಿಂದ ಕಾಸು ಹೀಕುವವರೇ ಆಗಿರುತ್ತಾರೆ. ಇದೇ ಉದ್ಯಮದಲ್ಲಿರುವ ಕುಷ್ಠಗಿ ತಾಲ್ಲೂಕಿನ ದೊಡ್ಡನಗೌಡ ಪಾಟೀಲ್ ಎರಡು ಬಾರಿ ಶಾಸಕರಾಗಿ ತನ್ನ ಉದ್ಯಮವನ್ನು ವೃದ್ಧಿಸಿಕೊಂಡರು. "ಹುನಗುಂದ ಕ್ಷೇತ್ರದ ಅಭಿವೃದ್ಧಿಗಾಗಿ ಕೋಟಿ ಕೋಟಿ ತಂದೆ" ಎಂದು ಬೊಂಬಡಾ ಬಡಿದುಕೊಳ್ಳುವ ದೊಡ್ಡನಗೌಡ ಮಾಡಿದ ಕೆಲಸವಾದರೂ ಏನು? ಎಂದು ನೋಡಿದರೆ ಸಿಗೋದು ಮಗನ ಮದುವೆ. ಫಿಲ್ಟರ್ ಇಲ್ಲದ ನಾಲಿಗೆಯಿಂದ ಪ್ರತಿ ಅಧಿಕಾರಿಯನ್ನೂ ಬೆದರಿಸುವ ದೊಡ್ಡನಗೌಡರ ಮಗ ತಾನೆ ಶಾಸಕನಂತೆ ವರ್ತಿಸುವುದು ಹುನಗುಂದ ಕ್ಷೇತ್ರದ ದುರದೃಷ್ಟ.

ದೊಡ್ಡನಗೌಡರ ವಿರುದ್ಧ ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್ ಮತ್ತೆ ತನ್ನ ಅದೃಷ್ಟ ಪರೀಕ್ಷಿಸಲು ಹೆಣಗುತ್ತಿದ್ದಾರೆ. ಯುವಕರಾದ ವಿಜಯಾನಂದ ತನ್ನ ತಂದೆ ಶಿವಶಂಕ್ರಪ್ಪ ಕಾಶಪ್ಪನವರ ನಾಮಬಲವನ್ನು ಹೊಂದಿದ್ದಾರೆ. ಫೈಟಿಂಗ್ ಜೋರಾಗಿ ನಡೆದಿದೆ. ಆದರೆ ಪಂಚಮಸಾಲಿಗರಲ್ಲದೆ ಮುಸ್ಲಿಮರು ಮತ್ತು ಕುರುಬರು ವಿಜಯಾನಂದರನ್ನು ಬೆಂಬಲಿಸಲಿದ್ದಾರೆ. ಹಾಗಾಗಿ ವಿಜಯಾನಂದ ವಿಧಾನಸಭೆ ಮೆಟ್ಟಿಲೇರುವ ಸೂಚನೆಗಳು ದಟ್ಟವಾಗಿವೆ.

ಬೀಳಗಿ

ಬಿಜೆಪಿ ಸಚಿವ ಮುರುಗೇಶ್ ನಿರಾಣಿಯನ್ನು ಆಯ್ಕೆ ಮಾಡಿದ ನತದೃಷ್ಟ ಕ್ಷೇತ್ರವಿದು. ಅದೂ ಎರಡೆರಡು ಬಾರಿ ಮಾಡಿದ ಈ ಪಾಪಕ್ಕೆ ಇಲ್ಲಿನ ಜನ ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ಈತ ಭೂಗಳ್ಳನಷ್ಟೇ ಅಲ್ಲ, ಕೆಲಸ ಕೇಳಿಬರುವ ಹುಡುಗಿಯರ ಫೋನ್ ನಂಬರ್‌ಗೆ ಪೋಲಿ ಎಸ್‌ಎಂಎಸ್ ಕಳಿಸುವ ಭೂಪ ಈತ. ಈ ಹಿಂದೆ ಕಾರವಾರ ಮೂಲದ ಹುಡುಗಿಯೊಬ್ಬರು ಇವನ ಮಾಲೀಕತ್ವದಲ್ಲಿದ್ದ 'ಸಮಯ ಟಿವಿ'ಯಲ್ಲಿ ಕೆಲಸ ಕೇಳಿಕೊಂಡು ಬಂದರೆ ಆಕೆಯ ಮೊಬೈಲ್ ನಂಬರ್‌ಗೆ ಅಸಹ್ಯ ಮೆಸೇಜ್‌ಗಳನ್ನು ಕಳುಹಿಸಿ ವಿವಾದದಲ್ಲಿ ಸಿಲುಕಿಕೊಂಡಿದ್ದ.

ಒಮ್ಮೆ ಕೆಜೆಪಿ, ಮರುದಿನ ಬಿಜೆಪಿ, ಸಂಜೆ ಜಮಖಂಡಿ, ಬೆಳಗ್ಗೆ ಬೀಳಗಿ ಎಂದೆಲ್ಲ ದ್ವಂದ್ವದಲ್ಲಿದ್ದ ನಿರಾಣಿ ಜನರನ್ನು ಮೂರ್ಖರೆಂದು ತಿಳಿದಿರುವಂತಿದೆ. ಆದರೆ ನಿಜವಾಗಲೂ ಯಾರು ಮೂರ್ಖ ಎಂದು ತೋರಿಸಲು ಜನ ಸಿದ್ಧರಾಗಿದ್ದಾರೆ. ತನ್ನ ಸ್ವಜಾತಿ ಪಂಚಮಸಾಲಿಗರ ಬೆಂಬಲ ಇದೆಯಲ್ಲದೆ ಸಿಕ್ಕಾಪಟ್ಟೆ ಇರುವ ಹಣವನ್ನು ಚೆಲ್ಲಿ ಚುನಾವಣೆಯಲ್ಲಿ ಗೆಲ್ಲಬಹುದು ಎಂಬ ಸೊಕ್ಕಿನಲ್ಲಿರುವ ನಿರಾಣಿಗೆ ಜನ ತಕ್ಕ ಉತ್ತರ ನೀಡುವ ಸೂಚನೆಗಳಿವೆ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಜೆ.ಟಿ. ಪಾಟೀಲ್ ಲಿಂಗಾಯತ ರೆಡ್ಡಿ ಸಮುದಾಯದವರು. ಈ ಹಿಂದೆ ಎರಡು ಬಾರಿ ಶಾಸಕರಾಗಿದ್ದ ಜೆ.ಟಿ. ಮುಂದುವರೆದ ಜನಾಂಗದವರ ಹಿತದೃಷ್ಟಿ ಕಾಪಾಡಿದ್ದೇ ಹೆಚ್ಚು. ಹುಲಕೋಟಿಯ ಎಚ್.ಕೆ. ಪಾಟೀಲರ ಸಂಬಂಧಿ ಎಂಬ ಕಾರಣಕ್ಕೆ ಟಿಕೆಟ್ ಗಿಟ್ಟಿಸಿಕೊಂಡಿರುವ ಜೆ.ಟಿ. ತಮ್ಮ ಗೌಡಿಕಿ ಗತ್ತನ್ನು ತೊರೆದರೆ ಜನರ ಹತ್ತಿರವಾಗಬಹುದು. ಕೈ ನೀಟಾಗಿರುವ ಪಾಟೀಲರಿಗೆ ಕೆಟ್ಟ ಚಟಗಳಿಲ್ಲ ಎನ್ನುವುದೂ ಪ್ಲಸ್ ಪಾಯಿಂಟ್.

ನಿರಾಣಿಗೆ ಸೆಡ್ಡು ಹೊಡೆಯಲು ಲಿಂಗಾಯತ ಗಾಣಿಗ ಸಮಾಜದ ಜಿಲ್ಲಾ ಜೆಡಿಎಸ್‌ನ ಅಧ್ಯಕ್ಷ ಪ್ರಭುಗೌಡ ಸರನಾಡಗೌಡ ರೆಡಿ ಆಗಿದ್ದಾರೆ. ಸರನಾಡಗೌಡರದ್ದು ಆಗರ್ಭ ಶ್ರೀಮಂತ ಕುಟುಂಬ. ಅಷ್ಟೇ ಅಲ್ಲ, ಸೇವಾ ಮನೋಭಾವದ ಕುಟುಂಬ ಕೂಡ ಹೌದು. ಯುವಕರಾದ ಸರನಾಡಗೌಡರನ್ನು ಇಲ್ಲಿನ ಲಿಂಗಾಯತರಷ್ಟೇ ಅಲ್ಲ, ಕುರುಬರು, ವಾಲ್ಮೀಕಿಗಳು ಮತ್ತು ಮುಸ್ಲಿಮರು ಬೆಂಬಲಿಸುವ ಸೂಚನೆಗಳು ಕ್ಷೇತ್ರದಲ್ಲಿ ಕಂಡುಬರುತ್ತಿವೆ. ಸರನಾಡಗೌಡರನ್ನು ಆಯ್ಕೆ ಮಾಡುವುದು, ಜನರ ಹಿತದೃಷ್ಟಿಯಿಂದ ಒಳ್ಳೆಯದು.

ಮುಧೋಳ

ಗೋವಿಂದ ಕಾರಜೋಳರಿಗೆ ಈ ಬಾರಿ ಇಲ್ಲಿಂದ ಸ್ಪರ್ಧಿಸುವ ಮನಸ್ಸೇ ಇರಲಿಲ್ಲ. ಬದಲಾಗಿ ಬಿಜಾಪೂರದ ನಾಗಠಾಣಕ್ಕೆ ಹೋಗುವ ಯೋಚನೆ ಅವರಲ್ಲಿತ್ತು, ಕಾರಣ ಈ ಬಾರಿ ತನಗೆ ಇಲ್ಲಿ ಅನುಕೂಲವಾಗುವ ಸೂಚನೆ ಇಲ್ಲವೆಂದು. ಆದರೆ ಅವರ ಹಿಂಬಾಲಕರು ಒತ್ತಾಯಿಸಿದ್ದರಿಂದ ಚುನಾವಣಾ ಕಣಕ್ಕೆ ಇಳಿದಿದ್ದಾರೆ.

ಕಾರಜೋಳರು ಈ ಬಾರಿ ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪೂರರ ಎದುರು ಸೋಲುವ ಲಕ್ಷಣಗಳು ಕಂಡುಬರುತ್ತಿದೆ. ಇದರಿಂದ ಹತಾಶರಾದ ಕಾರಜೋಳ ಮೊನ್ನೆ ತನ್ನ ಚುನಾವಣೆ ಪ್ರಚಾರಕ್ಕೆ ಅಡ್ಡಿಪಡಿಸಿದ್ದಾರೆಂದು ತಿಮ್ಮಾಪೂರರ ಶಿಷ್ಯರ ವಿರುದ್ಧ ದೂರು ನೀಡಿ ಹದಿನಾಲ್ಕು ಜನರನ್ನು ಜೈಲಿಗೆ ಅಟ್ಟಿಸಿದ್ದರು.

ಕಾರಜೋಳರು ಈ ಬಾರಿ ಮುಧೋಳ ಕ್ಷೇತ್ರದಲ್ಲಿ 'ಗೋ...ವಿಂದಾ! ಗೋ...ವಿಂದಾ!!'

ಜಮಖಂಡಿ

ಚಿಡ್ಡಿ-ಲಾಡಿ ಪ್ರವೀಣ ಬಿಜೆಪಿ ಶಾಸಕ ಶ್ರೀಕಾಂತ ಕುಲಕರ್ಣಿ, ಕೆಜೆಪಿಯ ಮಹಾಬಲಶೆಟ್ಟಿ, ಕಾಂಗ್ರೆಸ್‌ನ ಸಿದ್ದು ನ್ಯಾಮಗೌಡ ಮಾತ್ರವಲ್ಲದೆ ಹತ್ತು ಜನ ಪಕ್ಷೇತರರು ಈ ಕ್ಷೇತ್ರವನ್ನು ಗೊಂದಲಗೊಳಿಸಿದ್ದಾರೆ.

ಹಾಲಿ ಶಾಸಕ ಕುಲಕರ್ಣಿ ಜನಪರವಾಗಿ ಮಾಡಿದ ಕೆಲಸ ಅಷ್ಟಕ್ಕಷ್ಟೇ. ಹಾಗೆಯೇ ಕಾಂಗ್ರೆಸ್‌ನ ನ್ಯಾಮಗೌಡ ಕೂಡ ಜನಸ್ಪಂದಿಸುವ ಕೆಲಸ ಮಾಡಿದ ಉದಾಹರಣೆ ಇಲ್ಲ. ಕಾಂಗ್ರೆಸ್ ಹೈಕಮಾಂಡ್‌ನೊಂದಿಗೆ ಇರುವ ಲಿಂಕ್ ಮೂಲಕ ಟಿಕೆಟ್ ಗಿಟ್ಟಿಸಿರುವ ಸಿದ್ದುಗೆ ಇಲ್ಲಿ ಯಾರ ಬೆಂಬಲವೂ ಇಲ್ಲ. ಕೊನೆಗೆ ಅವರ ಜನಾಂಗದ ಗಾಣಿಗರಾಗಲಿ, ಪಂಚಮಸಾಲಿಗರಾಗಲಿ ಸಿದ್ದು ಹಿಂದೆ ಇಲ್ಲ. ಹೀಗಾಗಿ ಇಲ್ಲಿ ಕಾಂಗ್ರೆಸ್‌ಗೆ ದಾರಿ ಸುಗಮ ಇಲ್ಲ. ಇದರ ಲಾಭ ಕೆಜೆಪಿಗೋ ಅಥವಾ ಬಿಜೆಪಿಗೋ ಎಂಬ ದ್ವಂದ್ವವಿದೆ.

ಕಾಂಗ್ರೆಸ್ ಇಲ್ಲಿ ಗೆಲ್ಲಬೇಕೆಂದರೆ ನ್ಯಾಮಗೌಡ ಕೂಡಲೇ ಭಿನ್ನಮತೀಯರ ಮನವೊಲಿಸುವ ಕೆಲಸ ಮಾಡಬೇಕು. ಜೊತೆಗೆ ತನ್ನ ಕುಲದವರ ಬೆಂಬಲ ಪಡೆಯುವುದೂ ಅಗತ್ಯವಾಗಿದೆ. ಇಲ್ಲವೆಂದರೆ ಇದು ತನ್ನ ಕೊನೆ ಚುನಾವಣೆ ಎಂದು ನ್ಯಾಮಗೌಡ ನಿರ್ಧರಿಸುವುದೇ ಸೂಕ್ತ.

ಬಾದಾಮಿ

ಇಲ್ಲಿನ ಬಿಜೆಪಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಗಂಟುಮೂಟೆ ಕಟ್ಕೋಕೆ ರೆಡಿ ಆಗಿದ್ದಾರೆ. ಅದೂ ತನ್ನ ಅಳಿಯ ಜೆಡಿಎಸ್‌ನ ಮಹಾಂತೇಶ್ ಮಮದಾಪೂರನ ಮುಂದೆ!

ಪಟ್ಟಣಶೆಟ್ಟಿ ತನ್ನ ಶಾಸಕ ಅವಧಿಯಲ್ಲಿ ಮಾಡಿದ ಕಾರುಬಾರು, ವಸೂಲಿ, ಉಪಟಳದಿಂದಾಗಿ ಜನ ರೋಸಿಹೋಗಿದ್ದಾರೆ. ಈ ಶೆಟ್ಟಿ ಪ್ರತಿ ಬಾರಿ ಬಿಜೆಪಿಯಲ್ಲಿ ಭಿನ್ನಮತ ಎದ್ದಾಗ ರೆಸಾರ್ಟ್‌ನಿಂದ ರೇಸಾರ್ಟ್‌ಗೆ ಹೋಗುತ್ತಾ ದುಡ್ಡು ಮಾಡಿದ್ದು ಈಗ ಗುಟ್ಟಾಗಿ ಉಳಿದಿಲ್ಲ. ಹೀಗಾಗಿ ಈ ಬಾರಿ ಶೆಟ್ಟಿಯ ದುಕಾನ್ ಬಂದ್ ಆಗುವುದು ಖಾತ್ರಿ.


ಇದನ್ನು ಅರಿತ ಲಿಂಗಾಯತರ ಮುಖಂಡರು ಸಭ್ಯ ಹುಡುಗ ಮಹಾಂತೇಶ್ ಮಮದಾಪೂರನಿಗೆ ಜೆಡಿಎಸ್ ಸೇರಲು ಸೂಚಿಸಿದ್ದರು. ಹಾಗೆ ಮಾಡಿದ ಮಮದಾಪೂರ ಕೆಲವೇ ದಿನಗಳಲ್ಲಿ ಸ್ಥಳೀಯ ಸಂಸ್ಥೆಯಲ್ಲಿ ತನ್ನ ಪವರ್ ತೋರಿಸಿದ್ದಾನೆ. ಈಗ ಮಮದಾಪೂರನಿಂದಾಗಿ ಜೆಡಿಎಸ್ ಬಾದಾಮಿಯಲ್ಲಿ ಗೆಲ್ಲುವ ಸೂಚನೆಗಳು ದಟ್ಟವಾಗಿವೆ.

ಇನ್ನು ಕಾಂಗ್ರೆಸ್‌ನ ಬಿ.ಬಿ.ಚಿಮ್ಮನಕಟ್ಟಿ ತಿಪ್ಪರಲಾಗ ಹಾಕಿ ಟಿಕೆಟ್ ಗಿಟ್ಟಿಸಿಕೊಂಡು ಬಂದಿದ್ದಾರೆ. ಕೆಜೆಪಿಯ ಹಳ್ಳೂರ್ ಸೇರಿದಂತೆ ಬಾದಾಮಿ ಮತಕ್ಷೇತ್ರದಲ್ಲಿ ಮೂರು ಜನ ಲಿಂಗಾಯತರು ಚುನಾವಣಾ ಕಣದಲ್ಲಿರುವುದರಿಂದ ತನ್ನದೇ ಕುರುಬ ಸಮುದಾಯದವರಲ್ಲದೆ ಮುಸ್ಲಿಮರೂ ತನಗೆ ಸಾಥ್ ನೀಡುವುದರಿಂದ ತಾನ್ನು ಗೆದ್ದು ಬರುತ್ತೇನೆ ಎಂಬ ಭ್ರಮೆಯಲ್ಲಿದ್ದಾರೆ ಚಿಮ್ಮನಕಟ್ಟಿ. ಆದರೆ ಅವರ ಈ ಲೆಕ್ಕಾಚಾರ ಕೈಕೊಡುವ ಸಾಧ್ಯತೆಗಳೇ ಹೆಚ್ಚು.

ಈ ಜಿಲ್ಲೆಯಲ್ಲಿ ತೀವ್ರ ಸ್ಪರ್ಧೆ ನಡೆಯುತ್ತಿರುವುದು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ. ಬಿಜೆಪಿ ಮೂರನೆ ಸ್ಥಾನಕ್ಕೆ ತಳ್ಳಲ್ಪಡುವುದರಲ್ಲಿ ಅನುಮಾನವೇ ಇಲ್ಲ. ಇನ್ನು ಇಲ್ಲಿ ಕೆಜೆಪಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ಹಾಗೆಯೇ ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಫ್ಯಾನ್ ತಿರುಗುವುದಕ್ಕೆ ಇಲ್ಲಿ ವಿದ್ಯುತ್ತೇ ಇಲ್ಲ!

• ಮೇಘರಾಜ್

ಖಳನಾಯಕನ ಚಿತ್ರ



ಗುಮ್ಮಾನ್ನನ ಬ್ಲಾಗ್ — 18 • ಕೆ.ಫಣಿರಾಜ್

ಎರಡು ಸಂಗತಿಗಳು ಒಟ್ಟಿಗೆ ಕಾಡುತ್ತಿವೆ. ಮೊದಲನೆಯದು, ದೆಹಲಿಯಲ್ಲಿ ಐದು ವರ್ಷದ ಹುಡುಗಿಯ ಮೇಲೆ ನಡೆದ ಕ್ರೂರ ಅತ್ಯಾಚಾರ. ಎರಡನೆಯದು, ದಕ್ಷಿಣ ಏಶಿಯಾದ ಚಿತ್ರರಂಗಕ್ಕೆ ನೂರು ವರ್ಷ ತುಂಬಿದ ಹೊತ್ತಲ್ಲಿ 'ಖಳನಾಯಕ' ಪಾತ್ರ ವಹಿಸಿ ರೀಲುರಂಗೀಲಾದಲ್ಲಿ ಖ್ಯಾತನಾದ ಪ್ರಾಣ್ ಸಿಕಂದ್‌ಗೆ ದಾದಾ ಸಾಹೇಬ್ ಪ್ರಶಸ್ತಿ ಲಭಿಸಿರುವುದು. ಎತ್ತಣಿಂದೆತ್ತ ಸಂಬಂಧ ಅಂತ ದಯವಿಟ್ಟು ಈ ಗಳಿಗೆ ಕೇಳಬೇಡಿ. ಯಾಕೆ ಎರಡೂ ಯೋಚನೆಗಳೂ ಒಟ್ಟಿಗೇ ಬರುತ್ತಿರುವ ನನ್ನ ಮನೋಸ್ಥಿತಿಯನ್ನು ನಾನೇ ಅರಿಯದಾಗಿ ಈ ಬರಹ ಬರೆಯುತ್ತಿರುವೆ. ಮೊದಲನೇ ಸಂಗತಿಯ ಬಗ್ಗೆ ಹೇಳುವುದಾದರೆ-ಬಿಹಾರದ ಇಬ್ಬರು ಗಂಡಸರು ಆ ಕೃತ್ಯ ಎಸಗಬಹುದಾದರೆ, ಸಭ್ಯಸ್ಥನಂತೆ ಕಾಣುವ ಗಂಡಸಾದ ನಾನೂ ಅವರ ಸ್ಥಿತಿಗೆ ತಲುಪಿದರೆ ಅಂತಹ ಕೃತ್ಯವನ್ನು ಎಸಗಲಾರೆ ಎಂಬ ಯಾವ ಗ್ಯಾರಂಟಿ ಇದೆ? ಎಂಬೊ ಆತಂಕ ಕಾಡುತ್ತಿದೆ. ಎರಡನೆಯ ಸಂಗತಿ, ರೀಲುರಂಗೀಲಾದಲ್ಲಿ 'ಖಳನಾಯಕ'ನ ಸ್ವರೂಪವನ್ನು ಸೃಷ್ಟಿಸಿದವರು ಯಾರು? ಬರಿ ರೀಲುರಂಗೀಲಾದ ನಿರ್ಮಾಪಕ ನಿರ್ದೇಶಕರೇ? ಅಥವಾ ಚಪ್ಪಾಳೆ ತಟ್ಟಿ ಆನಂದಿಸಿದ, ಈಗ ಪ್ರಶಸ್ತಿ ನೀಡಿ ಬೀಗುತ್ತಿರುವ (ನಾವೂ ಸೇರಿದಂತೆ) ಸಮಾಜದ ಮನೋಸ್ಥಿತಿಯ ಪಾಲು ಆದರಲ್ಲಿದೆಯೋ? ಅತ್ಯಾಚಾರ ಎಸಗಿದ ಆ ಇಬ್ಬರಿಗೂ ಕಾನೂನುರೀತ್ಯಾ ಶಿಕ್ಷೆಯಾಗಬೇಕು. ಪ್ರಾಣ್ ಸಿಕಂದನ 70 ವರ್ಷಗಳ ನಟನಾ ಕಲೆಗೆ ಸಲ್ಲುವ ಗೌರವ ಸಲ್ಲಬೇಕು-ಇದರ ಬಗ್ಗೆ ಎರಡು ಮಾತಿಲ್ಲ. ಆದರೆ, ಅದರಾಚೆಗೂ ಮಾತನಾಡಬೇಕಿದೆ. ಮೊದಲ ಸಂಗತಿಯ ಬಗ್ಗೆ ನನ್ನ ಬಾಯಿ ಕಟ್ಟಿಹೋಗಿದೆ. ಅರಿವನ್ನು ಅಂಗಲಾಚುತ್ತಿದ್ದೇನೆ. ಬಲ್ಲವರಿಂದ ಕಲಿತು, ಓದಿ ತಿಳಿದು, ನಿಮ್ಮ ಹತ್ತಿರ ಖಂಡಿತ ಆ ಸಂಗತಿ ಬಗ್ಗೆ ಮಾತನಾಡುತ್ತೇನೆ-ಮಾತನಾಡದೆ ಹೋದರೆ ಮಾತಿಗೂ ಅರ್ಥವಿಲ್ಲ. ಎರಡನೆಯ ಸಂಗತಿಯ ಬಗ್ಗೆ ಈ ಮೂರು ಕಾಸಿನ ಸಮಾಜ ವಿಜ್ಞಾನಿ ಆಡೋ ಮಾತನ್ನು ಸಹನೆಯಿಂದ ಕೇಳಿ ಎಂದು ವಿನಂತಿ.


1913ರಲ್ಲಿ ಧುಂಡಿರಾಜ ಗೋವಿಂದ ಸಾಹೇಬ್ ಫಾಲ್ಕೆ, ದಕ್ಷಿಣ ಏಶಿಯಾದ ಮೊದಲ ಸಿನಿಮಾ 'ರಾಜ ಹರಿಶ್ಚಂದ್ರ'ವನ್ನು ನಿರ್ಮಿಸಿದರು. ಸ್ವಂತದ ಜೀವನದಲ್ಲಿ ಅನೇಕ ಏಳುಬೀಳಿನ ಆಧುನಿಕ ವ್ಯವಹಾರದಲ್ಲಿ ತೊಡಗಿಕೊಂಡಿದ್ದ ಫಾಲ್ಕೆ ಕೊನೆಗೆ ರೀಲುರಂಗೀಲಾದಲ್ಲಿ ತೊಡಗಿಕೊಂಡು ತಮ್ಮ ಬಾಕಿ ಬದುಕು ಕಳೆದರು. ಇಂಥ ಮನುಷ್ಯ ಏಶಿಯಾದ ಆಧುನಿಕ ದೃಶ್ಯ ಮಾಧ್ಯಮವನ್ನು ಉದ್ಘಾಟಿಸಿದ್ದು ಸೋಜಿಗವಲ್ಲ. ಅವರು ತಮ್ಮ ಚಲನಚಿತ್ರಗಳಿಗೆ ಆಯ್ದುಕೊಂಡ ಕಥಾನಕಗಳು, ಆಗಾಗಲೇ ಜನಪ್ರಿಯವಾಗಿದ್ದ ವೃತ್ತಿರಂಗಭೂಮಿಯ ನಾಟಕಗಳ ಪೌರಾಣಿಕ ಕಥನಗಳು ಎಂಬುದು ಕೂಡ ಸೋಜಿಗವಲ್ಲ, ಸೋಜಿಗ ಇರುವುದು ಆ ಕಥನಗಳಲ್ಲಿ, ಅವುಗಳಲ್ಲಿ ಬಹುಪಾಲು ರಾಮಾಯಣ ಮತ್ತು ಮಹಾಭಾರತದ ಉಪಕತೆಗಳು. ಫಾಲ್ಕೆ ಐತಿಹಾಸಿಕವಾದ ತನ್ನ ಮೊದಲ ಸಿನಿಮಾಕ್ಕೆ ಆಯ್ದುಕೊಂಡದ್ದು ರಾಮಾಯಣದ ಒಂದು ಪುಟ್ಟ ಕತೆ 'ಹರಿಶ್ಚಂದ್ರ'. ಕೊಟ್ಟ ಭಾಷೆಯನ್ನು ಉಳಿಸಿಕೊಳ್ಳಲಿಕ್ಕೆ ಸರ್ವಸ್ವವನ್ನೂ ಕಳೆದುಕೊಂಡರೂ ಸತ್ಯಪರತೆಯನ್ನು ಬಿಡದ 'ಹರಿಶ್ಚಂದ್ರ', ಸ್ವಾತಂತ್ರ್ಯ ಚಳವಳಿ ಕಾವು ಪಡೆದುಕೊಳ್ಳುತ್ತಿದ್ದ ಕಾಲದಲ್ಲಿ 'ನಾಯಕ'ನಾಗಿ ಎದ್ದು ಬಂದದ್ದರ ಹಿಂದೆ, ಮುಂಬರುವ ಸ್ವತಂತ್ರ ದೇಶದ 'ಪ್ರಭು'ಗಳ ಸ್ವರೂಪ ಹೀಗಿರಬೇಕು ಎಂಬ ಲೋಕಾಭಿಲಾಷೆಯೂ ಇರಲಿಕ್ಕೆ ಸಾಕು. 'ಹರಿಶ್ಚಂದ್ರ' 'ಸತ್ಯ ಹರಿಶ್ಚಂದ್ರ'ನಾಗಿ ಜನರ ಬುದ್ಧಿಭಾವಗಳಲ್ಲಿ ಅಚ್ಚೊತ್ತಿಕೊಂಡದ್ದರಲ್ಲಿ ನಮ್ಮ ಚಲನಚಿತ್ರಗಳ ಪಾತ್ರ ಬಲು ದೊಡ್ಡದು. ಮುಂದೆ ಹಲವು ಭಾಷೆಯ ಚಲನಚಿತ್ರಗಳಲ್ಲಿ ನಾಯಕ ಹರಿಶ್ಚಂದ್ರ ಹೆಚ್ಚು ನಿಚ್ಚಳ ಗೆರೆಗಳ ಚಿತ್ರವಾಗುತ್ತಾ ಬೆಳೆದ. ಹರಿಶ್ಚಂದ್ರನ ಸತ್ಯಸಂಧತೆಯನ್ನು ಒತ್ತಿ ಹೇಳುವ ಸಲುವಾಗಿಯೇ ಅವನ ಸಂಕಲ್ಪವನ್ನು ಕ್ರೂರವಾಗಿ ಮುರಿಯಲು ಸತತವಾಗಿ ಖಳಕಾಯಕದಲ್ಲಿ ತೊಡಗುವ 'ಪ್ರತಿನಾಯಕ'ನನ್ನು ಒಡೆದು



ತೋರುವ ಹಾಗೆ ಕಪ್ಪು ಬಣ್ಣದಲ್ಲಿ ಚಿತ್ರಿಸುವ ಪರಿಪಾಠ ಶುರುವಾಯಿತು. ಹಾಗೇ ಭಾರತ ರೀಲುರಂಗೀಲಾದ ಪ್ರಥಮ ಖಳನಾಯಕ ವಿಶ್ವಾಮಿತ್ರನ ಸೃಷ್ಟಿಯಾಯಿತು. 1965ರಲ್ಲಿ ನಿರ್ಮಾಣವಾದ ಕನ್ನಡ ಮತ್ತು ತೆಲುಗು 'ಸತ್ಯ ಹರಿಶ್ಚಂದ್ರ'ಗಳು ಸಖತ್ ಓಡಿದವು-ರಾಜ್‌ಕುಮಾರ್, ಎನ್‌ಟಿಆರ್‌ಗಳು ಸೂಪರ್‌ಸ್ಟಾರುಗಳಾದರು; ನಾಯಕ ಪಾತ್ರ ಮಾಡುತ್ತಿದ್ದ ಉದಯ್‌ಕುಮಾರ್ ಖಳ ಪಾತ್ರಗಳಿಗೆ ಒಗ್ಗಿಕೊಳ್ಳತೊಡಗಿದರು. ಅಂದರೆ, 50 ವರ್ಷಗಳಲ್ಲಿ ನಾಯಕನ ಶುಭ್ರಶ್ವೇತ ವ್ಯಕ್ತಿತ್ವ ಮಿರುಮಿರುಗಿ ಕಾಣಿಸಲು, ಕಟುಕಪ್ಪು ವ್ಯಕ್ತಿತ್ವದ ಖಳನಾಯಕ ಅನಿವಾರ್ಯವಾಗಿ ಹೋದ.

ಈ ಐದು ದಶಕಗಳಲ್ಲಿ ಎಷ್ಟು ಬಗೆಯ ನಾಯಕರು ಹುಟ್ಟಿದರೋ ಅದಕ್ಕೆ ಸಮನಾಗಿ ಖಳರ ಚಿತ್ರಗಳನ್ನು ಬರೆಯಲಾಯಿತು. 'ಶ್ರೀಮಂತರು ವಿಶಾಲಹೃದಯಿಗಳಾಗಿದ್ದು, ಬಡವರ ಸಂಕಷ್ಟಗಳಿಗೆ ಸದಾ ಆಸರೆಯಾಗುವ ಮನೋಭಾವ ಉಳ್ಳವರಾಗಿರುತ್ತಾರೆ' ಅನ್ನೋ ವಿಚಾರವನ್ನು ನಾಯಕ ಮೂಲಕ ಪ್ರಕಟಿಸಬೇಕಿದ್ದರೆ, ಅವನಿಗೆ ಪ್ರತಿಯಾಗಿ ಶ್ರೀಮಂತನಾಗಿದ್ದು ಬಡವರ ಬಗ್ಗೆ ಕ್ರೂರಿಯಾಗಿರುವ/ಬಡವರ್ಗದಲ್ಲಿದ್ದು ನಾಯಕನ ಉದ್ದೇಶ ಸಾಚಾ ಅಲ್ಲ ಎಂದು, ಅವನ ಎಲ್ಲಾ ಉತ್ತಮ ಕೈಂಕರ್ಯಗಳಿಗೂ ಅಡ್ಡಗಾಲು ಹಾಕುವ ಖಳನಾಯಕನಿರುತ್ತಾನೆ. ಹೆಂಗಸರ ಬಗ್ಗೆ ಉದಾತ್ತ ಸಭ್ಯತೆಯಿಂದ ನಡೆದುಕೊಳ್ಳೋ ನಾಯಕ ಒಲಿದ ಹೆಣ್ಣಿಗೂ ಮುತ್ತು ಕೊಡುವಾಗ ಮರ, ಹೂ ಕ್ಯಾಮೆರಾಕ್ಕೆ ಅಡ್ಡಬರಲೇಬೇಕು; ಆದರೆ ಖಳನಾಯಕ ಅತಿ ಕಾಮುಕ, ಬೀದಿಯಲ್ಲೇ ಸೆರಗಿಗೆ ಕೈಹಾಕೋನು. ನಾಯಕ ಕಾರ್ಮಿಕರನ್ನು ಮಕ್ಕಳಂತೆ ನೋಡಿಕೊಳ್ಳುವ ಬಂಡವಾಳಶಾಹಿಯಾದರೆ, ಖಳನಾಯಕ ಅವನ ಮತ್ತು ಕಾರ್ಮಿಕರ ನಡುವಿನ ಸುಗಮ ಸಂಬಂಧದಲ್ಲಿ ಹುಳಿಹಿಂಡುವ ಕಾರ್ಮಿಕ ನಾಯಕ. ನಾಯಕ ಯಾವತ್ತೂ ಮನೆಯಲ್ಲಿ ಪಂಚೆ ಅಥವಾ ಪೈಜಾಮ ಧರಿಸಿ ಸ್ವಚ್ಛನಾಗಿ ಸಸ್ಯಾಹಾರ ತಿನ್ನೋನು, ಖಳನಾಯಕ ಎಲ್ಲೆಂದರಲ್ಲಿ ಮಾಂಸ-ಮದ್ಯಸೇವಿಸೋ ಕೇಡಿ.... ಅಚ್ಚುಕಟ್ಟಾದ ಚೌಕಟ್ಟಿನ ಇಂಥ ಸಾಲುಸಾಲು ಚಿತ್ರಗಳು ಸಾಕಷ್ಟಿವೆ. ದೇಶ ಸ್ವಾತಂತ್ರ್ಯ ಪಡೆದು ಮಿಶ್ರ ಆರ್ಥಿಕತೆಯ ಕಲ್ಯಾಣ ಪ್ರಭುತ್ವ ವ್ಯವಸ್ಥೆಯನ್ನು ಕುದುರಿಸುತ್ತಿದ್ದ ಆ 50 ವರ್ಷಗಳಲ್ಲಿ, ಆ ಕಾರ್ಯಕ್ಕೆ ಲೋಕಸಹಮತ ಉತ್ಪಾದಿಸುವ ಕೈಂಕರ್ಯದಲ್ಲಿ ನಮ್ಮ ಚಲನಚಿತ್ರಗಳು ತೊಡಗಿದ್ದವೇ? ಎಂದು ಸಕಾರಣವಾಗಿಯೇ ಯೋಚಿಸಬಹುದು.

70ರ ದಶಕದಲ್ಲಿ ನಾಯಕನ ಚಿತ್ರ ಬದಲಾಗತೊಡಗಿತ್ತು, ಆತ ಈಗ ಸಮಾಜದ ಬಗ್ಗೆ ಅಸಹನೆ ತುಂಬಿಕೊಂಡ ಕೃದ್ಧ ಆದರ್ಶವಂತ ಗಂಡಸಾಗತೊಡಗಿದ. ಹಳೆತಲೆಮಾರಿನ ಖಳನಾಯಕನ ಹಲವಾರು ಗುಣಗಳು ನಾಯಕನಲ್ಲಿ ಸೇರಿಕೊಳ್ಳತೊಡಗಿದವು. ಆತನೀಗ ಸಮಾಜದಲ್ಲಿ ಒಳ್ಳೆಯತನ (ಯಾವ್ಯಾವ ನಡವಳಿಕೆ ಒಳ್ಳೆತನ ಅನ್ನೋ ಪಟ್ಟಿಯಲ್ಲಿ ಏನೂ ಬದಲಾವಣೆಯಾಗಲಿಲ್ಲ ನೋಡಿ!) ಉಳಿಸಲು ಎಂಥಾ ಕೃತ್ಯಕ್ಕೂ ಹೇಸುವವನಲ್ಲ-ಅವನ ಕೇಡಿಗುಣಕ್ಕೆ ಸಮಾಜವೇ ಕಾರಣ. ಆತನೀಗ ಬೀದಿಯಲ್ಲೇ ಹೆಣ್ಣನ್ನು ಎದೆಗೆಳೆದುಕೊಳ್ಳಬಲ್ಲ, ಜಂಬದಕೋಳಿಯನ್ನು ಮಣಿಸಲು ಅವಳ ಶೀಲಕ್ಕೂ ಕೈಹಾಕುವ ಹಂತಕ್ಕೆ ಹೋಗಬಲ್ಲ-ಆದರೆ, ಆದು ಹೆಂಗಸನ್ನು ಸನ್ನಡತೆಯ ಚೌಕಟ್ಟಲ್ಲಿ ಮರಳಿ ತರಲು ಮಾತ್ರವೇ. ಹಾಗಂತ ಈಗ ಖಳನಾಯಕ ಮಾಯವಾಗಿ ಹೋದನೇ? ಹೇಗೆ ಮರೆಯಾದನು! ಆತನಿಗಿರುವುದು ನಾಯಕನ ಗುಣವನ್ನೂ, ಆದರ ಸದುದ್ದೇಶವನ್ನೂ ಎತ್ತಿ ತೋರುವ ಕೆಲಸವಲ್ಲವಾ? ಸಮಾಜಕ್ಕೆ ನಾಯಕ ಖಳ ಎಂದು ತೋರಿಸಲು ಸರ್ಕಸ್ ಮಾಡುವ ಕೋಡಂಗಿಗಳೂ, ಪೊಲೀಸ್ ಅಧಿಕಾರಿಗಳೂ, ರಾಜಕಾರಣಿಗಳೂ ಖಳನಾಯಕರಾಗತೊಡಗಿದರು. 70-90ರವರೆಗಿನ 20 ವರ್ಷಗಳಲ್ಲಿ ಈ ಚಿತ್ರಗಳು ಗಟ್ಟಿಯಾದವು. ದೇಶಾದ್ಯಂತ, ಸಮಾಜ ವೈವಿಧ್ಯವಿರುವ ಹಾಗೆಯೇ, ಆಯಾ ಭಾಷೆಯ ಚಲನಚಿತ್ರಗಳಲ್ಲಿ, ಭಿನ್ನ ಗತಿಯಲ್ಲಿ, ಭಿನ್ನ ಬಗೆಗಳಲ್ಲಿ ಈ ಬದಲಾವಣೆಯಾಯಿತು ಅನ್ನೋದು ನಿಜವೆ. ಆದು



ಹ್ಯಾಗೂ ಇರಲಿ, 80ರ ದಶಕದ ಹೊತ್ತಿಗೆ ತೆರೆಯಿಂದ ಮರೆಯಾಗತೊಡಗಿದ 70ರ ಪೂರ್ವದ ಖ್ಯಾತ ಖಳನಾಯಕ ಪ್ರಾಣ್ ಸಿಕಂದ್, ಖಳನಾಯಕನ ಚಿತ್ರ ಬದಲಾಗುತ್ತಿರೋದನ್ನು ವಿಷಾದದಿಂದ ನೋಡುತ್ತಿದ್ದ 'ದೇಶದ ಬಡತನ ಮತ್ತು ನಾಯಕನೇ ಖಳನಾಯಕನಾಗುತ್ತಿರುವುದು, ಎರಡನ್ನೂ ಕಂಡು ನಂಗೆ ತುಂಬಾ ನೋವಾಗ್ತಿದೆ' ಅಂತಾನೆ ಪ್ರಾಣ್. 90ರ ದಶಕದ 'ಪ್ರಕಾಶಮಾನ ಭಾರತಕ್ಕೆ' ತಳಪಾಯ ಹಾಕೋ ಕೆಲಸವನ್ನು ನಮ್ಮ ಪ್ರಭುತ್ವ ಈ 20 ವರ್ಷಗಳಲ್ಲಿ ನಡಿಸಿತಲ್ಲ, ಆದಕ್ಕೂ ಈ ನಾಯಕ-ಖಳನಾಯಕ ಚಿತ್ರ ಬದಲಾವಣೆಗೂ ಏನಾದ್ರೂ ಸಂಬಂಧ ಇದೆಯಾ? ಅಂತ ಕೇಳ್ಬೋದಲ್ಲಾ.

ಹಳೆ ಜಮಾನದಿಂದ ಬಂದ ನಂಗೆ 1990ರ ದಶಕದ ನಂತರದ ನಾಯಕನ ಗುಣಸ್ವಭಾವದಲ್ಲಿ ಆದ ಬದಲಾವಣೆ ಹೆಚ್ಚು ಕುತೂಹಲಕರವಾಗಿ ಕಾಣ್ತಿದೆ. ಈಗ ನಮ್ಮೆದುರು ಎರಡು ಬಗೆಯ ಒಡೆದು ಕಾಣುವ ನಾಯಕರಿದ್ದಾರೆ. ಸದ್ಯಕ್ಕೆ ಒಬ್ಬನನ್ನು ನೋಡೋಣ. ಈತ ಮಚ್ಚು ಹಿಡಿದು 'ನ್ಯಾಯ ಅಂತ ಅನಿಸಿದ್ರೆ' ಯಾರನ್ನೂ ಕೊಚ್ಚಿ ಕೊಲ್ಲುವ ಗಂಡು. ಈತನಿಗೆ ಯಾವ ಹೆಣ್ಣೂ ಒಂದು 'ಐಟಮ್'. 'ಐಟಮ್' ಜೊತೆ ಆತ ಯಾವ ರೀತಿ ನಡ್ಕೊಳ್ಳೋದಕ್ಕೂ ಅಡ್ಡಿ ಏನೂ ಅವನಿಗೆ ಕಾಣೋದಿಲ್ಲ, ಇಂಥ 'ಐಟಮ್'ಗಳಲ್ಲಿ ಯಾವುದಾದರೂ ಒಂದು ಹೆಣ್ಣು ಇವನ 'ಡವ್' ಆಗ್ತಾಳೆ. ಇವನ ಖತರ್‌ನಾಕ್ ಮಚ್ಚುಕೊಚ್ಚಿನ ಬಗ್ಗೆ ಆತಂಕಪಟ್ಟುಕೊಳ್ಳೋದು ಈ 'ಡವ್'ನ ಜವಾಬ್ದಾರಿ. ಸಮಾಜದ ಬದುಕೇ ಅವನನ್ನು ವಿಧಿಯಂತೆ ಈ ಸ್ಥಿತಿಗೆ ತಂದು ನಿಲ್ಲಿಸಿದೆ ಅಂತ ಮನವರಿಕೆ ಮಾಡೋಕೆ, ಖಳನಾಯಕ ಗ್ಯಾರಂಟಿ ಬೇಕು. ನಾಯಕನೇ ಇಷ್ಟು ಖತರ್‌ನಾಕ್ ಆಗಿರೋವಾಗ ಖಳನಾಯಕ ಹಿಂಸೆಯಲ್ಲಿ ನಾಯಕನಿಗಿಂತ ಒಂದು ಕೈ ಮೇಲಾಗಿ ವಿಕೃತನಾಗಿರಬೇಕು. ಎಲ್ಲಾ 'ಐಟಮ್'ಗಳ ಜೊತೆ ಆತ ನಾಯಕನಿಗಿಂತ ಒಂದು ಕೈ ಹೆಚ್ಚು ವಿಕಾರವಾಗಿ ವರ್ತಿಸಬೇಕು. ಅವನಿಗೆ 'ಡವ್' ಇರದ ಕಾರಣ ನಾಯಕನ 'ಡವ್' ಜೊತೆ ಅತಿವ್ಯಭಿಚಾರದಲ್ಲಿ ನಡ್ಕೋಬೇಕು. 'ಐಟಮ್'ಗಳಂತೂ ಸರಿಯೇ, 'ಡವ್'ಗಳೂ ಇಂಥದ್ದನ್ನೆಲ್ಲಾ ಉದ್ರೇಕಿಸುವ ಹಾಗಿರಬೇಕು. 'ಎಂಟಾಣೆ ಸೆಂಟು ಹಾಕ್ಕೊಂಡು ಒತ್ತಾರೆ ನಾನು.... (ರೇಪ್ ಮಾಡಕ್ಕೆ) ಬತ್ತೀನೇ...' ಅಂತ ಹಾಡನ್ನು ಈಗ ನಾಯಕ ಅಥವಾ ಖಳನಾಯಕ ಯಾರಾದ್ರೂ ಹಾಡ್ಬೋದು. ಪ್ರಾಣ್‌ಗೆ ಪ್ರಶಸ್ತಿ ನೀಡಿರುವ ನಮ್ಮ ಯಜಮಾನರು ಏನು ಹೇಳೋಕೆ ಇಷ್ಟಪಡ್ತಿದ್ದಾರೆ 'ಪ್ರಾಣ್ ಸಾಹೇಬ್ ಜಮಾನಾ ಬದಲ್ ಗಯಾ ಹೈಂ! ಅಬ್ ಅಪ್ ಜಿಂದಾ ಲಾಶ್ ಹೈಂ!'

9<<< ಸಿದ್ದು ಅಲೆ

ಇನ್ನೂ ಪಕ್ವಗೊಂಡಿಲ್ಲ,

ಆದರೆ ಸಿದ್ದು ವಿಷಯದಲ್ಲಿ ಹಾಗಿಲ್ಲ, ಕೇವಲ ಕುರುಬರಷ್ಟೇ ಅಲ್ಲದೆ ಮಿಕ್ಕೆಲ್ಲ ಅಹಿಂದ ವರ್ಗಗಳಿಗೂ ಸಿದ್ದು ಮುಖ್ಯಮಂತ್ರಿಯಾಗುವುದು ಅನಿವಾರ್ಯವೆನಿಸಿದೆ. ಒಕ್ಕಲಿಗರಲ್ಲಿ ಒಂದು ನಿರ್ದಿಷ್ಟ ಗುಂಪಿನ ಹೊರತಾಗಿ ಮಿಕ್ಕೆಲ್ಲರಿಗೂ ಸಿದ್ದು ನಾಯಕತ್ವ ಅನಿವಾರ್ಯವಲ್ಲದಿರಬಹುದು. ಆದರೆ ವಿರೋಧವಿಲ್ಲ, ಹೀಗೆ ಲಿಂಗಾಯತರೂ ಅಷ್ಟೇ ಸಿದ್ದು ಬಗ್ಗೆ ಆ ಮಟ್ಟದ ಅಕ್ಕರೆಯಿಲ್ಲದಿದ್ದರೂ ವಿರೋಧವಂತೂ ಇಲ್ಲ!

ಇನ್ನು ಮುಸ್ಲಿಂ, ಕ್ರಿಶ್ಚಿಯನ್, ಇತರೇ ಕೆಳಜಾತಿಗಳಿಗೆ ಸಿದ್ದು ಅನಿವಾರ್ಯ ಆಯ್ಕೆಯಲ್ಲದಿರಬಹುದು. ಆದರೆ ವಿರೋಧವಂತೂ ಖಂಡಿತ ಇಲ್ಲ, ಇವೆಲ್ಲದರ ಹೊರತಾಗಿಯೂ ಖರ್ಗೆ, ಮೊಯ್ಲಿ, ಕೃಷ್ಣ, ಮುನಿಯಪ್ಪ, ಪರಮೇಶ್ವರ್, ಆಸ್ಕರ್ ಇತ್ಯಾದಿ ಕಾಂಗ್ರೆಸ್ ನಾಯಕರಿಗಿಂತ ಸಿದ್ದು ಭಿನ್ನವಾಗಿ ಕಾಣಿಸಲು ಇನ್ನೂ ಒಂದು ಕಾರಣವಿದೆ. ಅದು ನಿಷ್ಕಳಂಕ ಹಿನ್ನೆಲೆ ಮತ್ತು ಶುದ್ಧ ಹಸ್ತ,


ಉಪಮುಖ್ಯಮಂತ್ರಿಯಾಗಿ, ಹಣಕಾಸು ಸಚಿವರಾಗಿ ಅನೇಕ ಬಜೆಟ್‌ಗಳನ್ನು ಮಂಡಿಸಿದ ನಂತರವೂ ಒಂದೇ ಒಂದು ಭ್ರಷ್ಟಾಚಾರದ ಆರೋಪಕ್ಕೆ ಸಿದ್ದು ಈಡಾಗಲಿಲ್ಲ, ಇದು ಸಿದ್ದು ಪಾಲಿನ ಅತೀ ದೊಡ್ಡ ಹಿರಿಮೆ ಮತ್ತು ಶಕ್ತಿಯೂ ಹೌದು. ಆದರೆ ಬೇರಾವ ಕಾಂಗ್ರೆಸ್ ನಾಯಕನಿಗೂ ಈ ಥರದ ಹಿನ್ನೆಲೆಯಿಲ್ಲವಲ್ಲ. ಬಹುಶಃ ಇದೇ ಕಾರಣಕ್ಕಿರಬೇಕು ಜಾತಿ, ಪ್ರಾಂತ್ಯ, ಅಂತಸ್ತುಗಳನ್ನು ಮೀರಿದ ಅದೃಶ್ಯ ಮತದಾರನ ಪಾಲಿಗೆ ಸಿದ್ದು ಕರ್ನಾಟಕದ ಬೇರೆಲ್ಲ ರಾಜಕಾರಣಿಗಳಿಗಿಂತಲೂ ಭಿನ್ನವಾಗಿ ಕಾಣಿಸುತ್ತಾರೆ ಮತ್ತು ಇಷ್ಟವಾಗುತ್ತಾರೆ.

ಬಂಗಾರಪ್ಪನವರಷ್ಟು ಆಕರ್ಷಕ ವ್ಯಕ್ತಿತ್ವ ಇಲ್ಲದಿರಬಹುದು. ಎಸ್ಸೆಂ ಕೃಷ್ಣರಂತೆ ಮುತ್ಸದ್ದಿ ಗತ್ತು ಕಾಣದಿರಬಹುದು. ಮೊಯ್ಲಿಯಂತೆ ವಿದ್ವತ್ತಾಗಲಿ, ವಾಕ್ಚಾತುರ್ಯವಾಗಲಿ, ಕುಮಾರಸ್ವಾಮಿಯಂತೆ ದಿಟ್ಟತನ, ದೇವೇಗೌಡರ ಛಲವಂತಿಕೆ ಮತ್ತು ಹೋರಾಟದ ಗುಣ ಸಿದ್ದುವಲ್ಲಿ ಕಾಣದಿರಲು ಅವರದೇ ಆದ ಮಿತಿ ಮತ್ತು ಜಾತಿಯ ಹಿನ್ನೆಲೆ ಕೂಡ ಕಾರಣವಿರಬಹುದು. ಆದರೆ ನಂಬಿದ ಸಿದ್ಧಾಂತದೆಡೆಗಿನ ಅಚಲ ನಿಷ್ಠೆ ಮತ್ತು ಭ್ರಷ್ಟರಾಗದ ಹಿನ್ನೆಲೆಯಿಂದಾಗಿ ಸದ್ಯ ಕಾಂಗ್ರೆಸ್ಸಿನ ಬೇರೆಲ್ಲ ನಾಯಕರಿಗಿಂತ ಸಿದ್ದು ವಿಶಿಷ್ಟವಾಗಿ ಕಾಣಿಸುತ್ತಾರೆ.

ಬಹುಶಃ ಇದೇ ಕಾರಣಕ್ಕಿರಬೇಕು. ಸದ್ಯ ಕಾಂಗ್ರೆಸ್ ಪಾಲಿಗೆ ಏಕೈಕ ಮಾಸ್ ಲೀಡರ್ ಅಂತಿದ್ದರೆ ಅದು ಸಿದ್ದು ಮಾತ್ರ. ಕಾಂಗ್ರೆಸ್ ಗಾಳಿ ಬೀಸುತ್ತಿರುವುದು ಎಷ್ಟು ನಿಜವೋ ಅದರೊಳಗೆ ಸದ್ದಿಲ್ಲದೆ ಸಿದ್ದು ಅಲೆ ಪ್ರವಹಿಸುತ್ತಿರುವುದೂ ಅಷ್ಟೇ ಸತ್ಯ.

• ರಾ. ಸೋಮನಾಥ್


ಕಿವಿ ಇಲ್ಲದವರು



ನಮ್ಮ ಅನೇಕರಿಗೆ ಮಾತಾಡುತ್ತಲೇ ಇರುವುದರ ಅಪಾಯ ಗೊತ್ತಿರುವುದಿಲ್ಲ. ಭಾಷಣ ಮಾಡುವುದಂತೂ ಆನಂದದಾಯಕ ವಿಷಯ ಎಂದು ತಿಳಿದಿರುತ್ತಾರೆ. ಭಾಷಣ ಮಾಡಿದರೆ ಮನುಷ್ಯನ ತಲೆಬುರುಡೆಯಲ್ಲಿ ಮಾತಾಡಿದ್ದು ಸುತ್ತುತ್ತಲೆ ಇರುತ್ತದೆ; ಒಂದು ಹೇಳಿಕೆಯ ವಿಚಿತ್ರ ಸಾಧ್ಯತೆಗಳು, ಇತರೆ ನಿರೂಪಣೆಗಳು ಬಾಧಿಸುತ್ತಲೇ ಇರುತ್ತವೆ. ಹೀಗಾಗಿ ಭಾಷಣದ ರೋಗಕ್ಕೆ ಬಿದ್ದವನು ಆಡಳಿತಗಾರನಾಗಿ ನಿಷ್ಪ್ರಯೋಜಕನಾಗಿರುತ್ತಾನೆ. ವಾಜಪೇಯಿಗೆ ಆಗಿರುವುದೇ ಅದು. ಭಾಷಣ, ಮಾತುಗಾರಿಕೆಯಿಂದ ಇದಕ್ಕಿಂತ ಹೆಚ್ಚು ಅಪಾಯವೆಂದರೆ, ಕೇಳುವ ಅಭ್ಯಾಸ ತಪ್ಪಿಹೋಗುವುದು. ಇನ್ನೊಬ್ಬರ ಮಾತುಗಳನ್ನು ಕೇಳಿಸಿಕೊಳ್ಳದಿರುವವನಿಗೆ ಸಮುದಾಯದ ಭಾಷೆ, ನುಡಿಕಟ್ಟು, ಗಾದೆ ಅರ್ಥವಾಗುವುದಿಲ್ಲ; ತನ್ನ ಹೊರಗಿರುವವನ ವೈಶಿಷ್ಟ್ಯ ತಿಳಿಯುವುದಿಲ್ಲ. ಮನುಷ್ಯರೆಲ್ಲ ಒಂದೇ ರೀತಿ ಅನ್ನಿಸಿದರೂ ಪ್ರತಿಯೊಬ್ಬ ಮನುಷ್ಯನೂ, ಆತನ ವ್ಯಸನವೂ, ನೆನಪೂ ವಿಶಿಷ್ಟ. ಆ ಭಿನ್ನತೆಯನ್ನು ತಿಳಿದವನು ಮಾತ್ರ ಸಾಹಿತಿಯಾಗುತ್ತಾನೆ.

ನಾನು ಬಲ್ಲಂತೆ, ಇನ್ನೊಬ್ಬರ ಮಾತು ಕೇಳಿಸಿಕೊಳ್ಳದಿರುವವನು ಮಹಾ ಪೆದ್ದನಾಗಿರುತ್ತಾನೆ; ಆತ ವ್ಯಕ್ತಿಯಾಗಿ ಬೆಳೆಯುವುದು ಕಷ್ಟ. ತಾನೇ ಮಾತಾಡಿದ್ದರ ಗುಂಗಿನಲ್ಲಿರುವ ವ್ಯಕ್ತಿ ತನ್ನ ಅನುಭವವನ್ನು ಮಾತ್ರ ನೆಚ್ಚಬೇಕಾಗುತ್ತದೆ. ಈ ಕಣಜ ಬರಿದಾಗುವುದಕ್ಕೆ ಹೆಚ್ಚು ಕಾಲ ಬೇಕಾಗುವುದಿಲ್ಲ ಮತ್ತು ಇನ್ನೊಬ್ಬರ ಮಾತು ಮತ್ತು ಮಾತಿನ ಸೂಕ್ಷ್ಮಗಳಿಂದ ತನ್ನನ್ನು ತಾನು ತಿದ್ದಿಕೊಳ್ಳಲಾರದವನಿಗೆ ಜನತಂತ್ರ ಕೂಡ ಅರ್ಥವಾಗುವುದಿಲ್ಲ.

ನಮ್ಮಲ್ಲಿ ಬಹುಪಾಲು ಜನ ತಮ್ಮ ಐವತ್ತು, ಅರವತ್ತು ವರ್ಷಕ್ಕೆ ಎಲ್ಲ ಅರ್ಥದಲ್ಲಿ ನಿವೃತ್ತರಾಗುವುದಕ್ಕೆ ಇದೂ ಒಂದು ಕಾರಣ. ಹೇಳಿದ್ದೇ ಹೇಳುತ್ತಿರುತ್ತಾರೆ; ಒಮ್ಮೆ ಹೇಳಿದ ಜೋಕ್, ಕತೆಯನ್ನೇ ಮತ್ತೆ ಮತ್ತೆ ಹೇಳಿ ಕೊರೆದುಹಾಕುತ್ತಾರೆ. ಯಾಕೆಂದರೆ ಹೊಸ ಥ್ರಿಲ್ ಅವರ ಕಿವಿಯನ್ನು ಮುಟ್ಟಿರುವುದಿಲ್ಲ, ಮನಸ್ಸನ್ನು ತೊಳೆದಿರುವುದಿಲ್ಲ.



• 18 ಮಾರ್ಚ್, 1998

...ಷರ್ಟ್ ಬಿಚ್ಚಲು ವಿಜಿ ರೆಡಿ

ದುನಿಯಾ ವಿಜಿ ತನ್ನ ಸಂಸಾರದ ತಾಪತ್ರಯಗಳಿಂದ ಹೊರಬಂದು ... ನಿರ್ಮಿಸುತ್ತಿರುವ 'ಜಯಮ್ಮನ ಮಗ' ಚಿತ್ರವನ್ನು ಜೂನ್ ತಿಂಗಳಲ್ಲಿ ...ಗಡೆ ಮಾಡುವ ಬಗ್ಗೆ ಚಿಂತಿಸುತ್ತಿದ್ದಾರೆ.

...ತ್ತೀಚೆಗೆ ಟಿ.ವಿ. ಚಾನಲ್‌ಗಳಲ್ಲಿ ತನ್ನ ಮತ್ತು ತನ್ನ ಸಂಸಾರದ ಬಗ್ಗೆ ... ಅಪಪ್ರಚಾರದ ವರದಿಗಳಿಂದ ನಿಧಾನವಾಗಿ ಚೇತರಿಸಿಕೊಂಡಿರುವ ... ಬರುವ ಮೇ 10 ರಂದು ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ...ನಲ್ಲಿ 'ಮಿಸ್ಟರ್ ದುನಿಯಾ ವಿಜಿ ದೇಹದಾರ್ಢ್ಯ ಕಪ್' ಪ್ರಶಸ್ತಿ ...ರ್ಯಕ್ರಮವನ್ನು ಏರ್ಪಡಿಸಿದ್ದಾರೆ.


ಈ ಟೂರ್ನಮೆಂಟ್‌ನಲ್ಲಿ ರಾಜ್ಯಾದ್ಯಂತ ಹರಡಿಕೊಂಡಿರುವ ಬಾಡಿ ಬಿಲ್ಡರ್ ...ಗಳಿಂದ 20ಕ್ಕೂ ಹೆಚ್ಚು ಅಭ್ಯರ್ಥಿಗಳು ಬಂದು ಭಾಗವಹಿಸುವ ...ಕ್ಷೆಯಿದೆಯಂತೆ. ಪ್ರಶಸ್ತಿ ವಿಜೇತರಿಗೆ ವಿಜಿ 50,000 ರೂಪಾಯಿ ಮತ್ತು ...ನ್ನು ನೀಡಲಿದ್ದಾರೆ.

"ನಾನು ಮೂಲತಃ ಬಾಡಿ ಬಿಲ್ಡರ್ ಮತ್ತು ಸ್ಟಂಟ್ ಮ್ಯಾನ್ ಆಗಿದ್ದವನು. ...ರಿಟ ಕೆಲಸ ಮಾಡುತ್ತಾ ಕೊನೆಗೆ ನಾಯಕ ನಟನಾದವನು. ನನಗೆ ಈ ... ದೇಹದಾರ್ಢ್ಯ ಸ್ಪರ್ಧೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಕಷ್ಟ ಸುಖ ...ಸ್ತಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅವರೆಲ್ಲರ ಬೆಂಬಲ ... ಹಾರೈಕೆಯಿಂದಲೇ ನಾನು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ. ಅದಕ್ಕಾಗಿ ... ಎಲ್ಲ ಗೆಳೆಯರಿಗೆ ಥ್ಯಾಂಕ್ಸ್ ಹೇಳುವ ಕಾರಣಕ್ಕೆ ಈ ಟೂರ್ನಮೆಂಟನ್ನು ...ಕೊಂಡಿದ್ದೇನೆ. ಅಷ್ಟೇ ಅಲ್ಲ, ಮುಂದಿನ ವರ್ಷದಿಂದ ಈ ...ರ್ನಮೆಂಟನ್ನು ಪ್ರತಿವರ್ಷ ನಡೆಸುತ್ತೇನೆ" ಎಂದು ... ಹೇಳಿದರು.

...ಅಂದಿನ ಕಾರ್ಯಕ್ರಮದಲ್ಲಿ 'ಜಯಮ್ಮನ ...' ಸಿನಿಮಾದ ಕ್ಯಾಸೆಟ್ ಬಿಡುಗಡೆ ಆಗಲಿದೆ.

ಅಲ್ಲ, ಅವತ್ತು ಮೊತ್ತಮೊದಲ ಬಾರಿಗೆ ವಿಜಿ ...ಶರ್ಟ್‌ನ್ನು ಬಿಚ್ಚಿ ಅಭಿಮಾನಿಗಳಿಗೆ ತನ್ನ ದೇಹದ ... ಶೇಪನ್ನು ಪ್ರದರ್ಶಿಸಲಿದ್ದಾರಂತೆ. "ನನ್ನ ಹೊಸ ...ಟ್ಟನ್ನು ನೋಡಲು ಅಭಿಮಾನಿಗಳು ...ಕಾರೆಯುತ್ತಿರು ವುದರಿಂದ ಈ ...ರ್ಯಕ್ರಮವನ್ನು ...ಕೊಂಡಿದ್ದೇನೆ" ಎಂದರು ... ನಿಜವಾಗಿಯೂ ...ಮಾನಿಗಳು ಹಾತೊರೆ...ದ್ದಾರೋ ಅಥವಾ ... ಅತ್ಯುತ್ಸಾಹದಲ್ಲಿ ... ಬಿಚ್ಚುತ್ತಿದ್ದಾರೋ ...ಬುದು ಅವರಿಗೇ ...ಸ್ತಿ.

...ಒಂದು ಮಾತಂತೂ ... ಕನ್ನಡ ಚಿತ್ರರಂಗದಲ್ಲಿ ...ತ್ತಮ ಮೈಕಟ್ಟನ್ನು ...ದಿರುವ ನಾಯಕ ನಟನೆಂದರೆ ... ವಿಜಿ. ಇದನ್ನು ಹೇಳಿದವರು ... ಯಾರೂ ಅಲ್ಲ, ಬದಲಾಗಿ ...ಸ್ಟಾರ್ ಪುನೀತ್ ರಾಜ್‌ಕುಮಾರ್!



ಪೋಲಿ ಪುಂಡರಿಗೆ 'ಪರಾರಿ'



ಖ್ಯಾತ ಲೇಖಕ ಮತ್ತು ವಿಮರ್ಶಕ ಮರುಳಸಿದ್ದಪ್ಪನವರ ಪುತ್ರ ಚೈತನ್ಯ 'ಆ ದಿನಗಳು' ಎಂಬ ಚಿತ್ರದ ಮುಖಾಂತರ ಚಿತ್ರರಂಗಕ್ಕೆ ಕಾಲಿಟ್ಟು ಒಳ್ಳೆಯ ಹೆಸರು ಪಡೆದಿದ್ದರು. ಆದರೆ ಅವರ ಎರಡನೇ ಚಿತ್ರ 'ಸೂರ್ಯಕಾಂತಿ' ಅತ್ಯಂತ ಶ್ರೀಮಂತವಾಗಿ ಮೂಡಿಬಂದಿದ್ದರೂ ಬಿಡುಗಡೆಗೊಂಡ ಮೊದಲ ವಾರವೇ ಮುಗ್ಗರಿಸಿತ್ತು. ಈಗ ಚೈತನ್ಯ ನಿರ್ದೇಶಿಸಿರುವ ಮೂರನೆ ಚಿತ್ರ 'ಪರಾರಿ' ಬಿಡುಗಡೆ ಆಗಿದೆ.

ದ್ವಿತೀಯ ಚುಂಬನದಲ್ಲಿ ದಂತ ಭಗ್ನಕ್ಕೆ ಒಳಗಾಗಿದ್ದ ಚೈತನ್ಯ ತನ್ನ ಮೂರನೆ ಯತ್ನದಲ್ಲಿ ಸಂಪೂರ್ಣ ಎಚ್ಚರಿಕೆ ವಹಿಸಿದಂತಿದೆ. ಯಾಕೆಂದರೆ ಅವರು ತನ್ನ ಎಲ್ಲ ಮಡಿವಂತಿಕೆಯನ್ನು ಬದಿಗಿಟ್ಟು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

'ಪರಾರಿ' ಚಿತ್ರ 16ರಿಂದ 22 ವಯಸ್ಸಿನ ಕಾಲಘಟ್ಟದಲ್ಲಿರುವ ಯುವಕ ಯುವತಿಯರಿಗಾಗಿ ಅವರು ನಿರ್ದೇಶಿಸಿದ್ದಾರಂತೆ. ಹೀಗಾಗಿ ಚಿತ್ರದಲ್ಲಿ ಪ್ರೀತಿ, ಪ್ರೇಮದ ಜೊತೆಗೆ ಲೋಡುಗಟ್ಟಲೆ ಅಶ್ಲೀಲ ಮತ್ತು ದ್ವಂದ್ವಾರ್ಥದ ಸಂಭಾಷಣೆಗಳನ್ನು ತುರುಕಿದ್ದಾರೆ. ಚಿತ್ರದ ಕಥಾವಸ್ತು ಅದನ್ನು ನಿರೀಕ್ಷಿಸುತ್ತದೆ ನಿಜ, ಆದರೂ ಕೆಲವು ಕಡೆ ಅದನ್ನು ಸ್ವಲ್ಪ ಹದ್ದುಬಸ್ತಿನಲ್ಲಿ ಇಟ್ಟಿದ್ದರೆ ಬಹುಶಃ ಚಿತ್ರವನ್ನು ಕುಟುಂಬ ಸದಸ್ಯರೆಲ್ಲರೂ ಒಟ್ಟಾಗಿ ಕುಳಿತು ಆನಂದಿಸಬಹುದಿತ್ತು, ಆದರೆ ಈಗ 'ಪರಾರಿ' ಏನಿದ್ದರೂ ಪಡ್ಡೆ ಹುಡುಗರಿಗೆ ಮಾತ್ರ ಎಂಬಂತಿದೆ.

ಅದೇನೇ ಇರಲಿ, ರಂಗಭೂಮಿ ಹಿನ್ನೆಲೆಯಿಂದ ಬಂದ ಚೈತನ್ಯ ಇಷ್ಟು ಬೇಗ ಗಾಂಧಿನಗರದ ಸೂತ್ರಗಳಿಗೆ ಅಡ್ಜಸ್ಟ್ ಆಗಿರುವುದು ನಿಜಕ್ಕೂ ವಿಶೇಷ. ಹೊಸಬರೆ ಹೆಚ್ಚಾಗಿ ತುಂಬಿರುವ ಈ ಚಿತ್ರದ ತಾರಾಗಣದಲ್ಲಿ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಮೊನ್ನೆಯಷ್ಟೆ ರಾಜ್ಯ ಪ್ರಶಸ್ತಿ ಪಡೆದ ಸಂಗೀತ ನಿರ್ದೇಶಕ ಅನೂಪ್ ಸಿಳೀನ್ ಒಳ್ಳೆಯ ಟ್ಯೂನ್‌ಗಳನ್ನು ನೀಡಿದ್ದಾರೆ.

ಇಷ್ಟೆಲ್ಲ ಇದ್ದರೂ 'ಪರಾರಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಈ ತನಕ ಅಂತಹ ಮ್ಯಾಜಿಕ್ ಮಾಡಿದಂತಿಲ್ಲ.

ಶ್ರೇಷ್ಠ ಸಂಗಮ

'ಮುಂಗಾರು ಮಳೆ' ಖ್ಯಾತಿಯ ಛಾಯಾಗ್ರಾಹಕ ಕೃಷ್ಣ ಈಗ 'ಗಜಕೇಸರಿ' ಎಂಬ ಚಿತ್ರದ ಮುಖಾಂತರ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಮೊದಲು ಈ ಚಿತ್ರದ ನಾಯಕನ ಪಾತ್ರಕ್ಕೆ ದುನಿಯಾ ವಿಜಿ ಆಯ್ಕೆಯಾಗಿದ್ದರು. ಆದರೆ ವಿಜಿ ಸಂಸಾರದಲ್ಲಿ ಎಡವಟ್ಟು ಮಾಡಿಕೊಂಡಿದ್ದರಿಂದ ವಿಜಿ ಬದಲಿಗೆ ಯಶ್ ಅವರನ್ನು ಕೃಷ್ಣ ಆಯ್ಕೆ ಮಾಡಿದ್ದಾರೆ.

ಸಾಧಾರಣವಾಗಿ ಛಾಯಾಗ್ರಾಹಕರೊಬ್ಬರು ನಿರ್ದೇಶಕರಾದಾಗ ಅವರೇ ಛಾಯಾಗ್ರಹಣದ ಕೆಲಸವನ್ನೂ ನಿರ್ವಹಿಸುತ್ತಾರೆ. ಆದರೆ ಕೃಷ್ಣ ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾದ ಛಾಯಾಗ್ರಹಣದ ಜವಾಬ್ದಾರಿ ಯನ್ನು ಗೆಳೆಯ ಸತ್ಯ ಹೆಗಡೆ ಅವರಿಗೆ ವಹಿಸಿದ್ದಾರೆ.

ಕೃಷ್ಣ ಮತ್ತು ಸತ್ಯ ಹೆಗಡೆ ಸದ್ಯಕ್ಕೆ ಕನ್ನಡ ಚಿತ್ರರಂಗದ ಮೊದಲ ಸಾಲಿನಲ್ಲಿರುವ ಶ್ರೇಷ್ಠ ಛಾಯಾಗ್ರಾಹಕರು. ಇವರಿಬ್ಬರ ಸಮಾಗಮದ 'ಗಜ ಕೇಸರಿ' ಚಿತ್ರದ ಬಗ್ಗೆ ಸಹಜವಾಗಿಯೇ ಅಪಾರ ಕುತೂಹಲವನ್ನು ಸೃಷ್ಟಿಸಿದೆ.

ಚುನಾವಣಾ ಸಿನಿಮಾ



ಈ ವಾರವೂ ಸಿನಿಮಾದವರು ಚುನಾವಣೆಯಲ್ಲಿ ಒಂದೆಷ್ಟು ಸದ್ದುಗದ್ದಲ ಮಾಡಿದ್ದಾರೆ.

ಸಿನಿಮಾ ನಿರ್ಮಾಪಕರೂ ಆದ ಕಾರ್ಪೊರೇಟರ್ ಮುನಿರತ್ನಂ ನಾಯ್ಡು ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿ ತಮ್ಮ ನಾಮಪತ್ರ ಸಲ್ಲಿಸುವಾಗ ಅಧಿಕಾರಿಯನ್ನು ಬೆದರಿಸಿದ್ದಕ್ಕೆ ಸಿನಿಮೀಯ ಮಾದರಿಯಲ್ಲಿ ಪೊಲೀಸರಿಂದ ಬಂಧಿತರಾಗಿ ಮತ್ತೆ ಬಿಡುಗಡೆಯಾಗಿದ್ದಾರೆ. ಇದೇ ಹೊತ್ತಿನಲ್ಲಿ ರಾಯಚೂರಿನಲ್ಲಿ 'ಮುಂಗಾರು ಮಳೆ'ಯ ಹುಡುಗಿ ಚುನಾವಣಾ ಆಯೋಗದ ಅನುಮತಿ ಇಲ್ಲದೆ ಸಭೆ ನಡೆಸಿದ್ದಕ್ಕೆ ಚುನಾವಣಾ ಅಧಿಕಾರಿಯಿಂದ ನೋಟಿಸ್ ಪಡೆದಿದ್ದಾರೆ. ಹಾಗೆಯೇ ಸಿನಿಮಾ ನಿರ್ಮಾಪಕರಾಗಿರುವ ಅಶೋಕ್ ಖೇಣಿ ನಾಮಪತ್ರ ಹಲವಾರು ಗೊಂದಲಗಳ ನಡುವೆ ಕೊನೆಗೂ ಚುನಾವಣಾ ಅಧಿಕಾರಿಯಿಂದ ಸ್ವೀಕೃತವಾಗಿದೆ. ಸಾಕಷ್ಟು ಅಶ್ಲೀಲ ಸಂಭಾಷಣೆಗಳಿಂದಲೆ ಕನ್ನಡ ಪ್ರೇಕ್ಷಕರ ಮನಸ್ಸನ್ನು ಗೆದ್ದಿರುವ ಜಗ್ಗೇಶ್ "ಸದನದಲ್ಲಿ ನೀಲಿಚಿತ್ರ ನೋಡಿದವರ ಪರ ನಾನು ಪ್ರಚಾರ ಮಾಡುವುದಿಲ್ಲ" ಎಂದು ಹೇಳುವ ಮೂಲಕ ತಾನು ತುಂಬಾ ಸಭ್ಯ ಮನುಷ್ಯ ಎಂಬಂತೆ ಪೋಸು ಕೊಡುತ್ತಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳಾದ ಉಮಾಶ್ರೀ, ಬಿ.ಸಿ.ಪಾಟೀಲ್ ಮತ್ತು ಕುಮಾರ್ ಬಂಗಾರಪ್ಪ ತರಹದ ಕಲಾವಿದರು ಚುನಾವಣಾ ಕಣದಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಿದ್ದರೆ ಬಿಜೆಪಿ ಪರವಾಗಿ ತಾರಾ, ಜಗ್ಗೇಶ್, ಶ್ರೀನಾಥ್, ಮುಖ್ಯಮಂತ್ರಿ ಚಂದ್ರು ಮೊದಲಾದವರು ಪ್ರಚಾರ ಕ್ರಿಯೆಯಲ್ಲಿದ್ದಾರೆ. ಈಗಷ್ಟೇ ಕಾಂಗ್ರೆ ಪರವಾಗಿ ಪ್ರಚಾರ ಮಾಡಲು ನಾಯಕಿ ರಮ್ಯಾ ಅಖಾಡಕ್ಕೆ ಇಳಿದಿದ್ದಾರೆ. ಬೆಂಗಳೂರು ನಗರದ ಹಲವಾರು ಕ್ಷೇತ್ರಗಳಲ್ಲಿ ಮಿಂಚಿನ ವೇಗದಲ್ಲಿ ಪ್ರಚಾರ ಕಾರ್ಯ ಆರಂಭಿಸಿರುವ ರಮ್ಯಾ ರಾಜ್ಯಾದ್ಯಂತ ಪ್ರಚಾರ ಮಾಡಲಿದ್ದಾರಂತೆ. ರಮ್ಯಾ ಅಷ್ಟೇ ಅಲ್ಲದೆ ಜಯಮಾಲಾ ಮತ್ತು ಭಾವನಾ ಕೂಡ ಕಾಂಗ್ರೆಸ್ ಬಾವುಟ ಹಿಡಿದು ಹೊರಟಿದ್ದಾರೆ.

• ಶೆಣೈ

...ವಾದಗಳೇ ಟಿಆರ್‌ಪಿ ಏರಿಸುವ ಸುಲಭದ ದಾರಿ

ಕನ್ನಡದ 'ಬಿಗ್ ಬಾಸ್ ರಿಯಾಲಿಟಿ ಶೋ'ನಲ್ಲಿ ...ಂಡ ನರೇಂದ್ರ ಶರ್ಮ ಮತ್ತು ಕಾಳಿಮಠದ ಸ್ವಾಮಿ ...ಮ ಮಾನ ಹರಾಜು ಹಾಕಿದ್ದಾರೆ ಎಂಬ ಆಪಾದನೆಗಳು ... ಆದರೆ ಇದಕ್ಕೆ ಕಾರಣ ರಿಯಾಲಿಟಿ ಶೋಗಳ ...ನ ಮರ್ಮ. ಇಂತಹ ಕಾರ್ಯಕ್ರಮಗಳಲ್ಲಿ ...ವಹಿಸುವ 12 ಜನರೂ ಒಂದು ವೇಳೆ ...ತರು-ಬುದ್ಧಿವಂತರು-ಸಂಭಾವಿತರು-ಎಲ್ಲರೊಟ್ಟಿಗೆ ...ದಿಕೊಂಡು ಹೋಗುವಂತಹವರಾಗಿದ್ದರೆ ಅಂತಹ ...ಗಳಲ್ಲಿ ಮನೋರಂಜನೆಯೇ ಇರುವುದಿಲ್ಲ. ನಮ್ಮ ...ವರಿಬ್ಬರ ಜಗಳದಲ್ಲಿ ನಮಗೆ ಸಿಗುವಷ್ಟು ಮನರಂಜನೆ ... ನೆರೆಯವರಿಬ್ಬರ ಸೌಹಾರ್ದತೆಯಲ್ಲಿ ಸಿಗುವುದಿಲ್ಲ. ... 'ಒಳ್ಳೆಯತನ' ಮಹಾ ಬೋರ್! (ಇದೇ ಕಾರಣಕ್ಕೆ ...ರುವವರು ಚುನಾವಣೆಗೆ ನಿಂತರೆ ಯಾರೂ ಓಟು ...ವುದಿಲ್ಲ ಎಂಬುದು ಬೇರೆ ಮಾತು).

...ಟಿವಿ ಚಾನೆಲ್‌ಗಳಿಗೆ ವಿವಾದಗಳೇ ಟಿಆರ್‌ಪಿ ಏರಿಸುವ ...ಭದ ದಾರಿ. ಅದಕ್ಕಾಗಿಯೇ ಕೃತ್ರಿಮ ಜಗಳದ ...ಳಿರುತ್ತವೆ. ಆ ಕಾರಣಕ್ಕೇ ಇಂತಹ ಶೋಗಳಲ್ಲಿ ...ಗಳನ್ನು ಆರಿಸುವಾಗ ಜಗಳಗಂಟರನ್ನು, ಒರಟರನ್ನು, ...ರ್ಬರರನ್ನು, ಹೆದ್ದರನ್ನು, ಕುತಂತ್ರಿಗಳನ್ನು, ...ಮಾರಿಗಳನ್ನು, ಮತ್ಸರಿಗಳನ್ನು, ದುರಭಿಮಾನಿಗಳನ್ನು, ...ಕೋರರನ್ನು, ಒಣಪ್ರತಿಷ್ಠೆಯುಳ್ಳವರನ್ನು, ...ಭೂತಿಗಳನ್ನು ಹುಡುಕಿ-ಹುಡುಕಿ ಆರಿಸಿ ತಂದು ...ರ್ಧೆಯಲ್ಲಿ ಸೇರಿಸಲಾಗುತ್ತದೆ. ಕಾರಣ ಇಂತಹವರಿಂದ ... ವೀಕ್ಷಕರಿಗೆ ಮಜಾ ಸಿಗಲು ಸಾಧ್ಯ. ನಾರ್ಮಲ್ ...ವರು ಇಂತಹ ಸ್ಪರ್ಧೆಗಳಿಗೆ ಅನರ್ಹರು! ...ನ್ನು ವಿವಾದಗಳನ್ನು ಮೈಗೆ ಸುತ್ತಿಕೊಂಡೇ ...ಡುವವರೂ ವೀಕ್ಷಕರನ್ನು ಹೆಚ್ಚು ಆಕರ್ಷಿಸುತ್ತಾರೆ. ... ಸುಸೂತ್ರವಾಗಿ ನಡೆಯುತ್ತಿರುವಲ್ಲಿ ಬೇಕೆಂದೇ ...ಗಳನ್ನು ಹುಟ್ಟು ಹಾಕುವವರೂ ಇಲ್ಲಿ ಸಲ್ಲುವವರು (ಮೂಲತಃ ಸಮಸ್ಯೆಗಳನ್ನು ಹುಟ್ಟುಹಾಕುವ ಪರಿಣಿತರು ರಾಜಕಾರಣಕ್ಕೆ ತುಂಬಾ ಫಿಟ್. ಆದರೆ ರಾಜಕಾರಣದಲ್ಲಿ ಕೈಲಾಗದ ಕೆಲವು ಸಮಸ್ಯೆಕರ್ತರು ರಿಯಾಲಿಟಿ ಶೋಗೆ ತುಂಬಾ ಫಿಟ್).

ಇನ್ನು ಬ್ರಹ್ಮಾಂಡ ಶರ್ಮ ಮತ್ತು ಕಾಳಿಸ್ವಾಮಿ ಬಗ್ಗೆ ಹೇಳಬೇಕೆಂದರೆ ಇವರಿಬ್ಬರೂ ಕನ್ನಡ ಸಿನಿಮಾದಲ್ಲಿ ತಮ್ಮ ಕೆರಿಯರ್ ಶುರು ಮಾಡಿದವರು. ಇಬ್ಬರೂ ಜೂನಿಯರ್ ಆರ್ಟಿಸ್ಟ್‌ಗಳಾಗಿದ್ದವರು. ಶರ್ಮನು ಹಲವು ಸಿನಿಮಾಗಳಲ್ಲಿ ರಸ್ತೆ ಬದಿಯ ಕವಡೆ-ಗಿಳಿ-ಜ್ಯೋತಿಷಿಯ ಪಾತ್ರ ಮಾಡಿದ್ದೇ ಹೆಚ್ಚು. ಒಮ್ಮೆ ಒಂದು ಕನ್ನಡ ಟಿವಿ ಚಾನೆಲ್‌ನಲ್ಲಿ ಅವರ ನಿಯಮಿತ ಜ್ಯೋತಿಷಿ ಅನಾರೋಗ್ಯದ ನಿಮಿತ್ತ ಬರಲಿಲ್ಲವೆಂದು ಒಂದು ವಾರದ ಮಟ್ಟಿಗೆ ಒಬ್ಬ ಸಿನಿಮಾದ ಎಕ್ಸ್ಟ್ರಾನನ್ನು ಅಲ್ಲಿ ಕೂಡಿಸಿ ಗ್ಯಾಪ್ ತುಂಬಲು ಈ ಕಾರ್ಯಕ್ರಮದ ಸಂಯೋಜಕರು ಯೋಚಿಸಿದಾಗ ಅವರಿಗೆ ತಕ್ಷಣ ಹೊಳೆದಿದ್ದು ಸಿನಿಮಾದಲ್ಲಿ ಜ್ಯೋತಿಷಿ ಪಾತ್ರ ಮಾಡುವ ಈ ಬ್ರಹ್ಮಾಂಡನಂತೆ. ಆದರೆ ಅವನ ವಿಕ್ಷಿಪ್ತತೆ ವೀಕ್ಷಕರನ್ನು ಆಕರ್ಷಿಸಿದ್ದರಿಂದ ಅವನನ್ನೇ ಆ ಟಿವಿ ಚಾನೆಲ್‌ನವರು ಮುಂದುವರಿಸಿ ಹಳೆಯ ನಿಜ ಜ್ಯೋತಿಷಿಯನ್ನು ತೆಗೆದು ಹಾಕಿದರಂತೆ. ಮೂಲತಃ ಈತ ಬ್ರಹ್ಮಾಂಡ ಜ್ಯೋತಿಷಿಯೂ ಅಲ್ಲ, ಆಧ್ಯಾತ್ಮಿಕ ವ್ಯಕ್ತಿಯೂ ಅಲ್ಲ.

ಇನ್ನು ಕಾಳಿಸ್ವಾಮಿ ಬಗ್ಗೆ ಹೇಳಬೇಕೆಂದರೆ 3-4 ಕನ್ನಡ ಸಿನಿಮಾಗಳಲ್ಲಿ ಸಣ್ಣ-ಪುಟ್ಟ ವಿಲನ್ ರೋಲ್ ಮಾಡಿ ಕೈಲಾಗದೆ ಮೈ ಪರಚಿಕೊಂಡವನು. ಸಿನಿಮಾ ಲೋಕದಲ್ಲಿದ್ದಾಗ ಕಲಿತ ಸ್ವಲ್ಪ ಡ್ಯಾನ್ಸಿನಿಂದ ಡ್ಯಾನ್ಸ್ ಕ್ಲಾಸ್ ನಡೆಸಲು ಪ್ರಯತ್ನಿಸಿ ಸೋತಿದ್ದವನು. ಕೊನೆಗೆ ವಿಧಿಇಲ್ಲದೆ ರಸ್ತೆ ಬದಿಯಲ್ಲಿ ಇಡ್ಲಿ-ತಿಂಡಿ ಅಂಗಡಿ ನಡೆಸುತ್ತಿದ್ದವನು. ಈಗ ಎಲ್ಲ ಕಡೆ ಸೋತವರಿಗೆ, ಕೈಲಾಗದವರಿಗೆ ಕೊನೆಗೆ ಖಾದಿ ಅಥವಾ ಕಾವಿಯೇ ಸಾಥ್ ಕೊಡುತ್ತದೆ. ಇದನ್ನು ಅರಿತ ಈ ಕಾಳಿಸ್ವಾಮಿ ರಾಜಕಾರಣ ಮತ್ತು ಸ್ವಾಮಿಗಿರಿ ಎರಡನ್ನೂ ಒಟ್ಟಿಗೆ ಮಾಡಲು ಹೋಗಿ ಜಾರಿ ಬಿದ್ದಾತ. (ಪೊಲಿಟಿಕ್ಸ್ ಅಂಡ್ ರಿಲೀಜಿಯನ್ ಆರ್ ದಿ ಲಾಸ್ಟ್ ರಿಸಾರ್ಟ್ ಆಫ್ ಸ್ಕೌಂಡ್ರೆಲ್ಸ್ ಎಂಬ ಗಾದೆಯೇ ಇದೆ ತಾನೆ).

ಹಲವಾರು ವರ್ಷಗಳಿಂದ ಇಡೀ ಜಗತ್ತಿನಲ್ಲೇ ಅತೀಹೆಚ್ಚು ವೀಕ್ಷಕರನ್ನು ಹೊಂದಿರುವಂತಹ ಅಮೆರಿಕಾದ ಡಬ್ಲ್ಯೂಡಬ್ಲ್ಯೂಎಫ್ (WWF) ಕುಸ್ತಿ ಶೋ ಸಹ ಶುದ್ಧ ನಾಟಕ ಎಂದು ಇತ್ತೀಚೆಗೆ ಅದೇ ದೇಶದ ಇನ್ನೊಂದು ಟಿವಿ ಚಾನೆಲ್ಲು ಸ್ಟೋ-ಮೋಷನ್ನಿನಲ್ಲಿ ಪುರಾವೆಸಹಿತ ಬಯಲಿಗೆಳೆದಿದೆ. ಇದನ್ನು ಕನ್ನಡದ 'ಪಬ್ಲಿಕ್ ಟಿವಿ' ಮೊನ್ನೆ ಮರುಪ್ರಸಾರ ಮಾಡಿದೆ. ಹಾಗಿರುವಾಗ ರಿಯಾಲಿಟಿ ಶೋಗಳಲ್ಲಿ ಯಾವುದು ನಿಜ ಯಾವುದು ಕೇವಲ ಪೂರ್ವ-ಲಿಖಿತ (ಪ್ರಿ-ಸ್ಕ್ರಿಪ್ಟೆಡ್) ಎಂದು ಅರಿಯದೇ ಪ್ರೇಕ್ಷಕ ಮಾತ್ರ ಮೂಢನಾಗುವುದು ದುರಂತ.

-ರಾಮಕೃಷ್ಣ ಎ. ಕೆ. ಮಂಗಳೂರು



ಹೊಗಳಿಕೆ ತೆಗಳಿಕೆ

'ಪುಟ್ಟಣ್ಣಯ್ಯನವರೇ ಗೆಲ್ಲಬೇಕು. . . ಆದರೆ?' ಎಂಬ ಡಾ. ವಾಸು ಅವರ ಲೇಖನ ಮೇಲುಕೋಟೆ ಕ್ಷೇತ್ರದ ವಾಸ್ತವದ ಕೈಗನ್ನಡಿಯಾಗಿದೆ. ಇಲ್ಲಿಯ ರಾಜಕಾರಣದಲ್ಲಿ ಪುಟ್ಟರಾಜು ಅವರಿಗಿಂತ ಪುಟ್ಟಣ್ಣಯ್ಯ ನೂರು ಪಾಲು ವಾಸಿ. ಆದರೂ ನನಗೆ ಪುಟ್ಟಣ್ಣಯ್ಯನವರು ಶಾಸಕರಾಗುವುದಕ್ಕಿಂತ ಹೋರಾಟಗಾರರಾಗಿ ಇರುವುದೇ ಒಳಿತು ಅನ್ನಿಸುತ್ತದೆ. ಗೆದ್ದರೆ ಅವರು ಯಾರುಯಾರೊಂದಿಗೆ ರಾಜಿ ಆಗುತ್ತಾರೋ ಎಂಬ ಭಯವೇ ಇದಕ್ಕೆ ಕಾರಣ.

ಆದರೂ ಈ ಬಾರಿ ಅವರು ಗೆಲ್ಲಲಿ, ಅವರಿಗೆ ಚುನಾವಣಾ ರಾಜಕೀಯದ ಭ್ರಷ್ಟತೆ ಅರ್ಥವಾಗಬಹುದು. ಒಂದು ವೇಳೆ ಅವರಿಗೆ ಅರ್ಥವಾಗದಿದ್ದರೆ ಅವರನ್ನು ಗೆಲ್ಲಿಸಬೇಕೆಂದು ಹಠ ಹಿಡಿದಿರುವ ಪ್ರಾಮಾಣಿಕ ಹೋರಾಟಗಾರರಿಗಾದರೂ ಅರ್ಥವಾಗಲಿ.

- ಮುತ್ತುರಾಜು. ಮಂಡ್ಯ

ಬಿ.ಚಂದ್ರೇಗೌಡರ 'ಕಟ್ಟೆ ಪುರಾಣ' ಅಂಕಣ ಇಲ್ಲದೆ ಪತ್ರಿಕೆ ಸಪ್ಪೆ ಆಗಿದೆ. ಯಾಕೆ ಅವರ ಅಂಕಣ ಪ್ರಕಟವಾಗುತ್ತಿಲ್ಲ? ಜಗಳಗಿಗಳ ಆಯಿತೋ ಏನು ಕಥೆ? ಹಾಗಾಗಿದ್ದರೆ ಎಲ್ಲವನ್ನು ಸರಿಮಾಡಿಕೊಂಡು ಅವರ ಅಂಕಣ ಮತ್ತೆ ಪ್ರಕಟವಾಗುವಂತೆ ಮಾಡಿ.

- ಶಿಮೊಗ, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 08-05-2013

ಶಿಷ್ಯನಿಗೆ ಒಲಿದ 'ಪವರ್'



ಇದನ್ನು ಅದೃಷ್ಟ ಎನ್ನಬೇಕೋ ಅಥವಾ ಪ್ರತಿಭೆ ಎನ್ನಬೇಕೋ ಎಂದು ನೀವೇ ನಿರ್ಧರಿಸಿ.

ನಿಮಗೆ ಗೊತ್ತಿರುವಂತೆ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಚಿತ್ರವನ್ನು ನಿರ್ದೇಶಿಸಬೇಕೆಂದು ಬಹುತೇಕ ನಿರ್ದೇಶಕರು ಆಶಿಸುತ್ತಾರೆ. ಆದರೆ ಅಂತಹ ಅವಕಾಶ ಕೆಲವರಿಗೆ ಮಾತ್ರ ಸಿಕ್ಕರೆ ಹಲವಾರು ಜನರ ಪಾಲಿಗೆ ಅದು ಮರೀಚಿಕೆಯಾಗಿಯೇ ಉಳಿಯುತ್ತದೆ. ಇಂತಹ ಸಂದರ್ಭದಲ್ಲಿ ಇಲ್ಲಿಯತನಕ ಒಂದೇಒಂದು ಚಿತ್ರ ಬಿಡುಗಡೆಯಾಗದಿದ್ದ ನಿರ್ದೇಶಕ ಗಿರಿರಾಜ್‌ಗೆ ಈಗ ಪುನೀತ್ ಚಿತ್ರ ನಿರ್ದೇಶಿಸುವ ಸುಯೋಗ ಬಂದಿದೆ.

ಈ ಗಿರಿರಾಜ್ ಎರಡು ವರ್ಷಗಳ ಹಿಂದೆ ಕೇವಲ 35 ಸಾವಿರ ರೂಪಾಯಿ ವೆಚ್ಚದಲ್ಲಿ 'ನವಿಲಾದವರು' ಎಂಬ ಚಿತ್ರವನ್ನು ನಿರ್ಮಿಸಿ-ನಿರ್ದೇಶಿಸುವ ಮೂಲಕ ಸುದ್ದಿ ಮಾಡಿ ಬೆಳಕಿಗೆ ಬಂದವರು. ಅದಾದನಂತರ ಅಜಯ್ ರಾವ್ ನಾಯಕನಾಗಿ ನಟಿಸಿದ 'ಅದ್ವೈತ' ಎಂಬ ಚಿತ್ರವನ್ನು ಇದೇ ಗಿರಿರಾಜ್ ನಿರ್ದೇಶಿಸಿದ್ದಾರೆ. ಅವರ ಮೂರನೇ ಚಿತ್ರದ ಹೆಸರು 'ಜಟ್ಟ'. ಇದರಲ್ಲಿ ಕಿಶೋರ್ ನಾಯಕ ನಟ.

ಹೀಗೆ ಗಿರಿಯಾರ್ ಮೂರು ಚಿತ್ರಗಳನ್ನು ನಿರ್ದೇಶಿಸಿದ ಅನುಭವವನ್ನು ಹೊಂದಿದ್ದರೂ ಅವರ ಯಾವ ಚಿತ್ರವೂ ಇಲ್ಲಿಯತನಕ ಬಿಡುಗಡೆಯಾಗಿಲ್ಲ, ಆದರೂ ಗಿರರಾಜ್‌ಗೆ ಈಗ ಪುನೀತ್ ರಾಜ್‌ಕುಮಾರ್ ಮತ್ತು ಮಲೆಯಾಳಂನ ಸೂಪರ್ ಸ್ಟಾರ್ ಮೋಹನ್ ಲಾಲ್ ಜೊತೆಯಾಗಿ ನಟಿಸಲಿರುವ ಚಿತ್ರವನ್ನು ನಿರ್ದೇಶಿಸುವ ಅವಕಾಶ ಸಿಕ್ಕಿರುವುದು ಗಾಂಧಿನಗರದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ.

ಹೊಸ ನಿರ್ದೇಶಕರು ಈಗ ಕನ್ನಡ ಚಿತ್ರರಂಗದಲ್ಲಿ ಒಂದು ರೀತಿಯ ಹವಾ ಎಬ್ಬಿಸುತ್ತಿದ್ದಾರೆ. ರಾಜೇಂದ್ರಸಿಂಗ್ ಬಾಬು, ಭಾರ್ಗವ, ಡಿ. ಬಾಬು, ಎಸ್.ನಾರಾಯಣ್, ಸಾಯಿಪ್ರಕಾಶ್ ಮೊದಲಾದವರೆಲ್ಲ ಮಧ್ಯವಯಸ್ಸನ್ನು ದಾಟಿ ನಿವೃತ್ತಿಯ ಅಂಚನ್ನು ತಲುಪುತ್ತಿರುವ ಈ ಸಂದರ್ಭದಲ್ಲಿ ಹೊಸ ತಲೆಮಾರಿನ ನಿರ್ದೇಶಕರು ಕನ್ನಡ ಚಿತ್ರರಂಗದ ದಿಗಂತದಲ್ಲಿ ಉದಯಿಸುತ್ತಿರುವುದು ಸಂತೋಷದ ವಿಷಯ.

ಗಿರಿರಾಜ್ ಅವರ ಹೊಸ ಚಿತ್ರ 'ಸ್ಲಂ ಡಾಗ್ ಮಿಲ್ಯನೇರ್' ಎಂಬ ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರದ ಮಾದರಿಯಲ್ಲಿ ಇದೆ ಎಂಬ ಮಾತು ಕೇಳಿಬರುತ್ತಿದೆ. ಈ ಚಿತ್ರ ಮೇ ಮೊದಲ ವಾರದಲ್ಲಿ ಸೆಟ್ಟೇರಲಿದೆಯಂತೆ. ಪುನೀತ್ ಅವರ ಹಳೆಯ ಚಿತ್ರಗಳಿಗೆ ಹೋಲಿಸಿದರೆ ಇದು ಬಹುಶಃ ಕಡಿಮೆ ವೆಚ್ಚದ, ಪ್ರಯೋಗಾತ್ಮಕ ಚಿತ್ರದಂತಿರುತ್ತದೆ ಎಂಬ ಭಾವನೆ ಹಲವರಲ್ಲಿ ಮೂಡುತ್ತಿದೆ.

ಅಂದಹಾಗೆ ಈ ಹಿಂದೆ ಗಿರಿರಾಜ್ ಅವರು ನಿರ್ದೇಶಕ ಶಶಾಂಕ್ ಜೊತೆ ಕೆಲಸ ಮಾಡಿದ್ದಾರೆ. ವಾಸ್ತವವಾಗಿ ಪುನೀತ್ ಚಿತ್ರವನ್ನು ನಿರ್ದೇಶಿಸಬೇಕೆಂದು ಶಶಾಂಕ್ ಭಾರಿ ಪ್ರಯತ್ನ ನಡೆಸಿದ್ದರು. ಆದರೆ "ಪವರ್" ಸಿಕ್ಕಿದ್ದು ಅವರ ಶಿಷ್ಯ ಗಿರಿರಾಜ್‌ಗೆ.

ಮನರಂಜಿಸುವ ಚಿತ್ರ ಛತ್ರಿಗಳು ಸಾರ್ ಛತ್ರಿಗಳು



ಎಸ್. ನಾರಾಯಣ್ ನಿವೃತ್ತಿ ಘೋಷಿಸಿದ ನಂತರ ನಿರ್ದೇಶಿಸಿದ ಮೊದಲ ಚಿತ್ರ 'ಛತ್ರಿಗಳು ... ಛತ್ರಿಗಳು' ಈಗ ಬಿಡುಗಡೆಯಾಗಿದೆ. ಇಲ್ಲೊಂದು ಸಣ್ಣ ಸ್ಪಷ್ಟೀಕರಣ: ನಿವೃತ್ತಿ ಘೋಷಿಸಿದ್ದೂ ಅ... ಆಮೇಲೆ ನಿವೃತ್ತಿಯಿಂದ ಹೊರಬಂದು ಮತ್ತೆ ಚಿತ್ರ ಮಾಡಿದ್ದೂ ಅವರೇ.

ನಾರಾಯಣ್ ತಮ್ಮ ಮಗ ಪಂಕಜ್‌ಗಾಗಿ ಮೂರ್‍ನಾಲ್ಕು ಚಿತ್ರಗಳನ್ನು ನಿರ್ಮಿಸಿ-ನಿರ್ದೇ... ನಂತರ ಆರ್ಥಿಕವಾಗಿ ಮುಗ್ಗರಿಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ.

ಒಂದು ಕಾಲದಲ್ಲಿ ಮುಹೂರ್ತದ ದಿನದಂದೇ ಚಿತ್ರ ಬಿಡುಗಡೆಯ ದಿನವನ್ನು ಘೋ... ಅದೇರೀತಿ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದ ಎಸ್.ನಾರಾಯಣ್ ಈಗ ಸೋತು ಸುಣ್ಣವಾಗಿರುವುದ... ಹಳೆಯ ಶಿಸ್ತು, ಸಮಯಪ್ರಜ್ಞೆ ಮತ್ತು ಧೀಮಂತಿಕೆ ಅವರಲ್ಲಿ ಕಾಣಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ... ರಮೇಶ್ ಅರವಿಂದ್, ಮೋಹನ್ ಮತ್ತು ಸ್ವತಃ ನಾರಾಯಣ್ ನಾಯಕರಾಗಿ ನಟಿಸಿರುವ 'ಛ... ಸಾರ್ ಛತ್ರಿಗಳು' ಚಿತ್ರ ಬಿಡುಗಡೆಯಾಗಿ, ಬೇಸಿಗೆ ಶಖೆಯಿಂದ ತತ್ತರಿಸುತ್ತಿರುವ ಕನ್ನಡಿಗರನ್ನು ರಂಜಿಸ... ಈ ಹಿಂದೆ 'ಕೋತಿಗಳು ಸಾರ್ ಕೋತಿಗಳು' ಚಿತ್ರ ಹೇಗೆ ಪ್ರೇಕ್ಷಕರನ್ನು ರಂಜಿಸಿತ್ತೋ ... ಮಾದರಿಯಲ್ಲಿ ಈಗ ಛತ್ರಿಗಳೂ ಜನರನ್ನು ನಗಿಸುತ್ತಿದ್ದಾರೆ.

ಇದರರ್ಥ 'ಛತ್ರಿಗಳು ಸಾರ್ ಛತ್ರಿಗಳು' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆದ್ದು ನಾರಾಯಣ್ ಅ... ಒಂದಿಷ್ಟು ಲಾಭವನ್ನು ತಂದುಕೊಡುವ ಸಾಧ್ಯತೆ ಇದೆ. ಜೊತೆಜೊತೆಗೆ ಸೋಲಿನ ಸರಪಳಿ... ಸಿಲುಕಿರುವ ನಾಯಕ ನಟ ರಮೇಶ್ ಅರವಿಂದ್ ಮತ್ತು ಮೋಹನ್ ಅವರುಗಳಿಗೂ ಈ ... ಯಶಸ್ಸು ಸ್ವಲ್ಪ ರಿಲೀಫ್ ನೀಡಲಿದೆ. ಒಟ್ಟಾರೆಯಾಗಿ ಬಹಳ ಸಮಯದ ನಂತರ ಗಾಂಧಿನಗ... ನಾರಾಯಣ್ ಮತ್ತೊಮ್ಮೆ ತನ್ನ ಮಂದಹಾಸವನ್ನು ಬೀರುವಂತೆ ಈ ಚಿತ್ರ ಮಾ...

ಇಬ್ಬರೂ ಬದಲಾದದ್ದು ಇದೇ ಮೊದಲ ಬಾರಿ

'ದಾಸವಾಳ' ಎಂಬ ಚಿತ್ರದ ತಂಡದಿಂದ ದಿನಕ್ಕೊಂದು ಸುದ್ದಿ ಕೇಳಿಬರುತ್ತಲೇ ಇದೆ.

ಆರಂಭದಲ್ಲಿ ನಿರ್ದೇಶಕ ಕಂ ನಟ ಪ್ರೇಮ್ ಈ ಚಿತ್ರದ ನಾಯಕನ ಪಾತ್ರಕ್ಕೆ ಆಯ್ಕೆಯಾಗಿದ್ದರು. ಚಿತ್ರದ ಹಾಡುಗಳ ಧ್ವನಿ ಸುರುಳಿಗೆ ಪತ್ರಕರ್ತರನ್ನು ಕರೆಸಿದ್ದ ನಿರ್ಮಾಪಕ ಅಣಜಿ ನಾಗರಾಜ್ ಅಂದು ಚಿತ್ರದ ತಂತ್ರಜ್ಞರು ಮತ್ತು ಪತ್ರಕರ್ತರ ಕಿವಿಯಲ್ಲಿ ದಾಸವಾಳ ಹೂವನ್ನು ಇಟ್ಟು ವಿಭಿನ್ನವಾಗಿ ಚಿತ್ರವನ್ನು ಆರಂಭಿಸಿದ್ದರು.

ಆದರೆ ಈಗ ನೋಡಿದರೆ ಸ್ವತಃ ಅಣಜಿ ನಾಗಾರಾಜ್ ತಮ್ಮ ಕಿವಿಯಲ್ಲಿ ತಾವೇ ದಾಸವಾಳ ಹೂ ಇಟ್ಟುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ವಿಷಯ ಇಷ್ಟೇ: "ನಾನು ಈ ಪ್ರೇಮ್ ಜೊತೆ ನಟಿಸುವುದಿಲ್ಲ, ಬೇಕಾದರೆ ನಾನು ನನ್ನ 'ಚಾರ್‌ಮಿನಾರ್' ಚಿತ್ರದ ಹೀರೋ ಪ್ರೇಮ್ ಜೊತೆ ನಟಿಸುತ್ತೇನೆ" ಎಂದು ನಾಯಕಿಯ ಪಾತ್ರಕ್ಕೆ ಆಯ್ಕೆಯಾಗಿದ್ದ ನಟಿ ಮೇಘನಾ ಗಾಂವಕರ್ ಬಾಂಬ್ ಸಿಡಿಸಿದಳು.

ಈ 'ಬಾಂಬ್ ಸ್ಫೋಟ'ದಿಂದ ನಿರ್ದೇಶಕ ಎಂ.ಎಸ್. ರಮೇಶ್ ಮತ್ತು ನಿರ್ಮಾಪಕ ಅಣಜಿ ನಾಗಾರಾಜ್ ಚೇತರಿಸಿಕೊಳ್ಳುವ ಮುನ್ನವೇ ಈಗ ಸ್ವತಃ ನಾಯಕ ನಟ ಪ್ರೇಂ "ಈಗ ನಾನು ಚುನಾವಣಾ ಕೆಲಸದಲ್ಲಿ ಬ್ಯುಸಿ ಇದ್ದೇನೆ. ಆದ್ದರಿಂದ ನಾನು ಚಿತ್ರದಲ್ಲಿ ನಟಿಸುವುದಿಲ್ಲ" ಎಂದು ಹೇಳಿ ಕೈಕೊಟ್ಟಿದ್ದಾರೆ.

ಹೀಗಾಗಿ ಈಗ ರಮೇಶ್ ಮತ್ತು ನಾಗರಾಜ್ ಹೊಸ ನಾಯಕ ಮತ್ತು ನಾಯಕಿಯ ಶೋಧದಲ್ಲಿ ತೊಡಗಿದ್ದಾರೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಒಂದು ಸಿನಿಮಾದ ನಾಯಕ ಮತ್ತು ನಾಯಕಿ ಇಬ್ಬರೂ ಬದಲಾದದ್ದು ಇದೇ ಮೊದಲ ಬಾರಿ ಎಂದೆನಿಸುತ್ತದೆ.



ಮಂಜಿನ ಹನಿ
ಹರಿಪ್ರಿಯಾ

ತೂಕದ ಜೋಡಿ

ಶಿವರಾಜ್‌ಕುಮಾರ್ ಮತ್ತು ರಮ್ಯಾ ಕೊನೆಗೂ ಮೊತ್ತಮೊದಲ ಬಾರಿಗೆ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಆ ಚಿತ್ರದ ಹೆಸರು 'ಆರ್ಯನ್'. ಹಿರಿಯ ನಿರ್ದೇಶಕ ಡಿ. ರಾಜೇಂದ್ರಬಾಬು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

ರಮ್ಯಾ ಚಿತ್ರರಂಗಕ್ಕೆ ಬಂದಿದ್ದೇ ರಾಜ್‌ಕುಮಾರ್ ಸಂಸ್ಥೆಯ ಆಶೀರ್ವಾದದೊಂದಿಗೆ. ಆಕೆ ಮೊದಲ ಬಾರಿಗೆ ನಟಿಸಿದ್ದೇ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಜೊತೆಗೆ. ಮೊದಲಿನಿಂದಲೂ ಆಕೆಗೆ ನಾಯಕ ನಟ ಶಿವರಾಜ್‌ಕುಮಾರ್ ಜೊತೆ ನಟಿಸಬೇಕೆಂಬ ಹಂಬಲವಿತ್ತು, ಇವರಿಬ್ಬರನ್ನು ಒಂದೇ ಚಿತ್ರದಲ್ಲಿ ಜೊತೆಯಾಗಿ ಕಾಣಿಸಲು ಅನೇಕ ನಿರ್ಮಾಪಕರು ಮತ್ತು ನಿರ್ದೇಶಕರು ಪ್ರಯತ್ನಿಸಿದ್ದೂ ಉಂಟು. ಅದರಲ್ಲೂ ಮುಖ್ಯವಾಗಿ ಹಂಸಲೇಖ ಅವರ 'ಭಾಗೀನ' ಚಿತ್ರದಲ್ಲಿ ಇವರಿಬ್ಬರೂ ಜೊತೆಯಾಗಿ ನಟಿಸುತ್ತಾರೆ ಎಂಬ ಜಾಹೀರಾತು ಕೂಡ ಪ್ರಕಟವಾಗಿತ್ತು, ಆದರೆ ಅದ್ಯಾಕೋ ಏನೋ, ಶಿವಣ್ಣ ಮತ್ತು ರಮ್ಯಾ ಜೊತೆಯಾಗಿ ನಟಿಸುವ ಅವಕಾಶ ಇಲ್ಲಿಯತನಕ ಕೂಡಿಬಂದಿಲ್ಲ.

ಬಾಕ್ಸ್ ಆಫೀಸ್ ದೃಷ್ಟಿಯಿಂದ ಶಿವರಾಜ್‌ಕುಮಾರ್ ಮತ್ತು ರಮ್ಯಾ ಜೊತೆಯಾಗಿ ನಟಿಸಿದರೆ ಆ ಚಿತ್ರಕ್ಕೆ ಒಂದು ರೀತಿಯ ತೂಕವಿರುತ್ತದೆ ಎಂಬುದು ಮಾತ್ರ ನಿಜ.

ಕ್ರೇಜಿ-ತ್ರಿ ಇನ್-ವನ್



ಮೊನ್ನೆ ಬೆಂಗಳೂರಿನ ಗರುಡಾಮಾಲ್‌ನಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ತನ್ನ 'ಕ್ರೇಜಿಸ್ಟಾರ್' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಂಡಿದ್ದರು. ಅದ್ದೂರಿಯಾಗಿ ನಡೆದ ಈ ಸಮಾರಂಭಕ್ಕೆ ಕನ್ನಡ ಚಿತ್ರರಂಗದ ಎಲ್ಲಾ ಅತಿರಥ ಮಹಾರಥರೂ ಬಂದಿದ್ದರು. ಆದರೆ 'A Journey With You' ಎಂದು ಹೆಸರಿಡಲಾಗಿದ್ದ ಈ ಕಾರ್ಯಕ್ರಮ ಬರೀ ಒಂದು ಸಿನಿಮಾದ ಕ್ಯಾಸೆಟ್ ಬಿಡುಗಡೆ ಸಮಾರಂಭವಾಗಿರಲಿಲ್ಲ, ಅದಕ್ಕೆ ಇನ್ನೂ ಹಲವಾರು ಆಯಾಮಗಳಿದ್ದವು. ಮೊದಲನೆಯದಾಗಿ ... ಸಮಾರಂಭ ನಡೆದದ್ದು ಏಪ್ರಿಲ್ 17ರಂದು. ಅದು ಅವರ ತಂದೆ ವೀರಾಸ್ವಾಮಿಯವರ ಹುಟ್ಟ... ದಿನ.ಎರಡನೆಯದಾಗಿ ಈ ಸಮಾರಂಭದಲ್ಲಿ ಕ್ಯಾಸೆಟ್‌ನ ಜೊತೆಗೆ 'ಕ್ರೇಜಿಸ್ಟಾರ್' ಚಿತ್ರದ ಹಾಡುಗ... ಸಾಹಿತ್ಯವಿರುವ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಆ ಪುಸ್ತಕದ ಅರ್ಧದಷ್ಟು 'ಕ್ರೇಜಿಸ್ಟಾರ... ವಿಷಯಗಳಿದ್ದರೆ ಇನ್ನು ಅರ್ಧದಷ್ಟು ಭಾಗದಲ್ಲಿ ರವಿಚಂದ್ರನ್ ಅವರ ಜೀವನದ ಮಹತ್ವಾಕಾಂಕ್ಷೆ... ಚಿತ್ರವಾದ 'ಮಂಜಿನ ಹನಿ' ಕುರಿತು ಮಾಹಿತಿ ಇದೆ. ಅಂದರೆ ಇದು 'ಮಂಜಿನ ಹ... ಚಿತ್ರಕ್ಕೆ ಪ್ರಚಾರ ಪಡೆಯುವ ಕಾರ್ಯಕ್ರಮವೂ ಆಗಿತ್ತು, ಮೂರನೆಯದಾಗಿ ಸಮಾರಂಭ... ಕೊನೆಯಲ್ಲಿ ತಮ್ಮ ಪುತ್ರರಾದ ಮನೋರಂಜನ್ ಮತ್ತು ವಿಕ್ರಮ್‌ರನ್ನು ವೇದಿಕೆಗೆ ಕರೆ... ರವಿಚಂದ್ರನ್, ಅವರಿಬ್ಬರ ಹೆಗಲ ಮೇಲೆ ಕೈ ಇಟ್ಟು "ನಾನು ಸಿನಿಮಾಕ್ಕೆ ಬಂದ... ರಿಯಲ್ ಎಸ್ಟೇಟ್ ಮಾಡಲಿಲ್ಲ, ಇವರಿಬ್ಬರೇ ನನ್ನ 'ರಿಯಲ್ ಆದ ಎಸ್ಟೇಟ್'. ಇನ... ಮುಂದೆ ನನ್ನ journey ನನ್ನ ಮಕ್ಕಳ ಜೊತೆ" ಎಂದು ಘೋಷಿಸುವ ಮೂಲ... ಅವರಿಬ್ಬರನ್ನೂ ಸದ್ಯದಲ್ಲೇ ಚಿತ್ರರಂಗಕ್ಕೆ ಪರಿಚಯಿಸುವ ತಮ್ಮ ಉದ್ದೇಶವನ್ನು ಹೊರಹಾಕಿದರು.

ಇಂತಹ 'ಥ್ರೀ ಇನ್ ಒನ್' ಕಾರ್ಯಕ್ರಮಕ್ಕೆ ಶಿವರಾಜ್‌ಕುಮಾರ್, ರಾಘವೇಂ... ರಾಜ್‌ಕುಮಾರ್, ರಮೇಶ್ ಅರವಿಂದ್, ಸುದೀಪ್, ಪ್ರೇಮ್, ಯಶ್, ಅಜಯ... ರಾವ್, ಚಿರಂಜೀವಿ ಸರ್ಜಾ, ದ್ರುವ ಸರ್ಜಾ, ಹಂಸಲೇಖ, ಗುರುಕಿರಣ್, ಜಯಮಾಲ... ಕೆ.ಎಸ್.ಎಲ್ ಸ್ವಾಮಿ (ರವೀ), ಸಿದ್ದಲಿಂಗಯ್ಯ, ಹರಿಕೃಷ್ಣ ಚೇಂಬರ್ ಅಧ್ಯಕ್ಷ ವಿಜಯ... ಕುಮಾರ್, ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಉದ್ಯಮದ ಅನೇಕ ದಿಗ್ಗಜರ... ಬಂದು ರವಿಚಂದ್ರನ್ ಅವರಿಗೆ ಶುಭ ಹಾರೈಸಿದರು. ಬಹುಶಃ ಇತ್ತೀಚಿನ ದಿನಗಳ... ಇಷ್ಟೊಂದು ಅಪಾರ ಸಂಖ್ಯೆಯಲ್ಲಿ ಉದ್ಯಮದವರು ಕ್ಯಾಸೆಟ್ ಬಿಡುಗಡೆ ಸಮಾರಂಭ... ಬಂದದ್ದು ಇದೇ ಮೊದಲ ಬಾರಿ ಎಂದೆನಿಸುತ್ತದೆ.

ಕೊನೆ ಮಾತು: 'ಕ್ರೇಜಿಸ್ಟಾರ್' ಚಿತ್ರದ ಹಾಡುಗಳನ್ನು ನೋಡಿದಾಗ ರವಿಚಂದ್ರನ್ ಮತ್ತು ಪ್ರಿಯಾಂಕ ಜೊತೆಯಾಗಿ ನಟಿಸಿದ್ದ 'ಮಲ್ಲ' ಸಿನಿಮಾ ನೆನಪಾಗುತ್ತದೆ. ಯಾಕೆಂದ... ಅವರಿಬ್ಬರೂ ಆ ಚಿತ್ರದಲ್ಲಿ ನಟಿಸಿದಷ್ಟೇ ತನ್ಮಯತೆಯಿಂದ ಈ ಚಿತ್ರದಲ್ಲೂ ನಟಿಸಿದ್ದಾರ... ಈ ಹಿಂದೆ ಹೇಗೆ 'ಮಲ್ಲ' ಸೂಪರ್ ಹಿಟ್ ಆಗುತ್ತೋ ಅದೇ ರೀತಿ 'ಕ್ರೇಜಿಸ್ಟಾರ್' ಸಿನಿಮಾ ಕೂಡ ಹಿಟ್ ಆಗುತ್ತದೆಯೋ ಎಂದು ಕಾದು ನೋಡಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com